ವಾರ್ಷಿಕ ವರದಿ
2019–2020

(ನ್ಯಾಕ್‌ನಿಂದ ಮಾನ್ಯತೆಯನ್ನು ಪಡೆದಿದೆ)





ಮಂಗಳೂರು ವಿಶ್ವವಿದ್ಯಾಲಯ

ಮಂಗಳಗಂಗೋತ್ರಿ – 574 199 ದಕ್ಷಿಣ ಕನ್ನಡ ಜಿಲ್ಲೆ, ಕರ್ನಾಟಕ ರಾಜ್ಯ, ಭಾರತ

ವಾರ್ಷಿಕ ವರದಿ

2019–20

ಮಂಗಳೂರು ವಿಶ್ವವಿದ್ಯಾನಿಲಯ

(ನ್ಯಾಕ್‌ನಿಂದ ಮಾನ್ಯತೆಯನ್ನು ಪಡೆದಿದೆ)

ಮಂಗಳೂರು ವಿಶ್ವವಿದ್ಯಾನಿಲಯ

ಮಂಗಳಗಂಗೋತ್ರಿ – 574199

ದಕ್ಷಿಣ ಕನ್ನಡ ಜಿಲ್ಲೆ, ಕರ್ನಾಟಕ ರಾಜ್ಯ, ಭಾರತ

ವೆಬ್‌ಸೈಟ್: https://www.mangaloreuniversity.ac.in

ವಾರ್ಷಿಕ ವರದಿ ಸಂಪಾದಕೀಯ ಮಂಡಳಿ

1.	**ಪ್ರೊ. ಬಿ. ಉದಯ** ಪ್ರಾಧ್ಯಾಪಕರು ಇತಿಹಾಸ ವಿಭಾಗ ಮಂಗಳೂರು ವಿಶ್ವವಿದ್ಯಾನಿಲಯ	ಅಧ್ಯಕ್ಷರು
2.	**ಪ್ರೊ. ಪರಿಣೆತಾ** ಪ್ರಾಧ್ಯಾಪಕರು ಆಂಗ್ಲ ವಿಭಾಗ ಮಂಗಳೂರು ವಿಶ್ವವಿದ್ಯಾನಿಲಯ	ಸದಸ್ಯರು
3.	**ಪ್ರೊ. ಸೋಮಣ್ಣ** ಪ್ರಾಧ್ಯಾಪಕರು ಕನ್ನಡ ವಿಭಾಗ ಮಂಗಳೂರು ವಿಶ್ವವಿದ್ಯಾನಿಲಯ	ಸದಸ್ಯರು
4.	**ಪ್ರೊ. ವೈ. ಸಂಗಪ್ಪ** ಪ್ರಾಧ್ಯಾಪಕರು ಭೌತಶಾಸ್ತ್ರ ವಿಭಾಗ ಮಂಗಳೂರು ವಿಶ್ವವಿದ್ಯಾನಿಲಯ	ಸದಸ್ಯರು
5.	**ಪ್ರೊ. ಮೋನಿಕಾ ಸದಾನಂದ** ಪ್ರಾಧ್ಯಾಪಕರು ಜೀವವಿಜ್ಞಾನ ವಿಭಾಗ ಮಂಗಳೂರು ವಿಶ್ವವಿದ್ಯಾನಿಲಯ	ಸದಸ್ಯರು
6.	**ಪ್ರೊ. ಕೆ. ಕೃಷ್ಣ ಶರ್ಮ** ಪ್ರಾಧ್ಯಾಪಕರು ಮಾನವ ಪ್ರಜ್ಞೆ ಮತ್ತು ಯೋಗವಿಜ್ಞಾನ ವಿಭಾಗ ಮಂಗಳೂರು ವಿಶ್ವವಿದ್ಯಾನಿಲಯ	ಸದಸ್ಯರು
7.	**ಪ್ರೊ. ಪ್ರಶಾಂತ ನ್ಯಾಕ್** ಪ್ರಾಧ್ಯಾಪಕರು ಜೀವವಿಜ್ಞಾನ ವಿಭಾಗ ಮಂಗಳೂರು ವಿಶ್ವವಿದ್ಯಾನಿಲಯ	ಸದಸ್ಯರು
8.	**ಸಹಾಯಕ ಕುಲಸಚಿವರು** ಸಾರ್ವತ್ರಿಕ ಕಛೇರಿ ಕುಲಸಚಿವರ ಕಛೇರಿ ಮಂಗಳೂರು ವಿಶ್ವವಿದ್ಯಾನಿಲಯ	ಸಂಚಾಲಕರು

ಅನುಕ್ರಮಣಿಕೆ

ಕ್ರ.ಸಂ.	ವಿಷಯ	ಪುಟ ಸಂಖ್ಯೆ
1	ಮುನ್ನುಡಿ	5
2	ಸಾಮಾನ್ಯ ಮಾಹಿತಿಗಳು	7
3	ವಿಶ್ವವಿದ್ಯಾನಿಲಯದ ಅಧಿಕಾರಿಗಳು	10
4	ಧ್ಯೇಯೋದ್ದೇಶ ಮತ್ತು ಕಾರ್ಯಯೋಜನೆ	24
5	ಸಂಸ್ಥೆ ಮತ್ತು ಆಡಳಿತ	25
6	ಯುಜಿಸಿ ಅಧಿಸೂಚನೆ 2010ರ ಪ್ರಕಾರ ಐಕ್ಯೂಎಸಿ ಸಂವಿಧಾನ ಮತ್ತು ಅದರ ಕಾರ್ಯ ವೈಖರಿ	26
7	ಕೆಎಸ್‌ಯು ಕಾಯ್ದೆ 2000ದ ಪ್ರಕಾರ ಕಾರ್ಯಕ್ರಮದ ಸಂವೀಕ್ಷಣೆ ಮತ್ತು ಮೌಲ್ಯಮಾಪನ ಮಂಡಳಿ (ಪಿಎಂಇಬಿ)ಯ ಸಂವಿಧಾನ ಮತ್ತು ಅದರ ಕಾರ್ಯವೈಖರಿ	32
8	ಕುಲಪತಿ/ಸರ್ಕಾರದ ನಿರ್ದೇಶನಗಳ ಅನುಸರಣೆ – ಸ್ಥಿತಿಗತಿ ವರದಿ	33
9	ಕೆಎಸ್‌ಎಚ್‌ಇಸಿ ಶಿಫಾರಸ್ಸಿನಂತೆ ಸರ್ಕಾರದ ಅಧಿಸೂಚನೆಗಳು – ಸ್ಥಿತಿಗತಿ ವರದಿ	33
10	ಸಾಮಾಜಿಕ ವ್ಯಾವರ್ಥಕ ಮತ್ತು ಅಂತರ್ಗತ ನೀತಿ ಅಧ್ಯಯನ ಕೇಂದ್ರ – ಸ್ಥಿತಿಗತಿ ವರದಿ	33
11	ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿಗಳನ್ನು ನಿರ್ವಹಿಸುವುದಕ್ಕಾಗಿ ಗಾಂಧಿ ಅಧ್ಯಯನ ಕೇಂದ್ರ ಮತ್ತು ಡಾ. ಬಿ. ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರಗಳ ಬಳಕೆ	36
12	ದಾಖಲಾತಿ ವಿಧಾನಗಳು	37
13	ವಿದ್ಯಾರ್ಥಿಗಳಿಗೆ ಬೆಂಬಲ	40
14	ವಿದ್ಯಾರ್ಥಿಗಳ ಭಾಗವಹಿಸುವಿಕೆ	54
15	ಹಳೆ ವಿದ್ಯಾರ್ಥಿಗಳು ಮತ್ತು ಹಳೆ ವಿದ್ಯಾರ್ಥಿ ಸಂಘ	57
16	ಸಂಯೋಜನೆ	58
17	ಕಾಲೇಜು ಅಭಿವೃದ್ಧಿ ಮಂಡಳಿ	59
18	ಪಠ್ಯಕ್ರಮದ ವಿನ್ಯಾಸ ಮತ್ತು ಅಭಿವೃದ್ಧಿ	60
19	ಪ್ರಸಾರಾಂಗ ಮತ್ತು ಮುದ್ರಣಾಲಯ	60
20	ಶುಲ್ಕದ ವಿವರಗಳು	62
21	ಅಧ್ಯಾಪಕರ ವ್ಯಕ್ತಿಚಿತ್ರ	92
22	ಸಹಾಯಕ ಸಿಬ್ಬಂದಿ	120
23	ಪರೀಕ್ಷೆ ಮತ್ತು ಮೌಲ್ಯಮಾಪನ	121
24	ಘಟಿಕೋತ್ಸವ	127
25	ಕೌಶಲ ಅಭಿವೃದ್ಧಿ ಮತ್ತು ಉದ್ಯೋಗ ಕೋಶ	132
26	ಸಂಶೋಧನಾ ನೀತಿ ಮತ್ತು ಪ್ರಸಕ್ತ	133
27	ವಿಶೇಷ ಶಿಕ್ಷಣ ತಜ್ಞರಿಂದ ಆಹ್ವಾನಿತ ಉಪನ್ಯಾಸಗಳು/ಭಾಷಣಗಳು	157
28	ವಿಶೇಷ ಆಯೋಜಿತ ಕಾರ್ಯಕ್ರಮಗಳು	162
29	ಸಂಶೋಧನಾ ಫಲಿತಾಂಶಗಳು	163
30	ವಿಶ್ವವಿದ್ಯಾನಿಲಯ, ಅಧ್ಯಾಪಕರು ಮತ್ತು ಇತರ ಉದ್ಯೋಗಿಗಳಿಗೆ ಪ್ರಶಸ್ತಿಗಳು	163
31	ಸಂಶೋಧನಾ ಹವ್ಯಾಸವನ್ನು ವೃದ್ಧಿಸುವುದು	164

32	ರಾಜ್ಯ ನೀತಿ ಅನುಷ್ಠಾನ ಮತ್ತು ಸಾಮಾಜಿಕ ಜವಾಬ್ದಾರಿಗಳ ಅರಿತುಕೊಳ್ಳುವಿಕೆಗೆ ಸಂಶೋಧನಾ ಕೊಡುಗೆಗಳು	174
33	ಸಂಶೋಧನಾ ನೀತಿಗಳು	174
34	ಸಾಂಸ್ಥಿಕ ಅಧ್ಯಯನ ಪೀಠಗಳು ಮತ್ತು ಅವುಗಳ ಕಾರ್ಯವೈಖರಿ	174
35	ಆಧುನಿಕ ಬೋಧನೆ–ಕಲಿಕೆ–ಸಂಶೋಧನಾ ಚಟುವಟಿಕೆಗಳ ಕೇಂದ್ರವಾಗಿ ಗ್ರಂಥಾಲಯ	222
36	ಭೌತಿಕ ಮೂಲಸೌಕರ್ಯ	228
37	ಐಸಿಟಿ ಮೂಲಸೌಲಭ್ಯಗಳು	241
38	ಯುಜಿಸಿ – ಸಿಬ್ಬಂದಿ ತರಬೇತಿ ಕಾಲೇಜು	246
39	ಹಣಕಾಸು	246
40	ಕ್ರೀಡೆ/ಎನ್ಎಸ್ಎಸ್/ಎನ್ಸಿಸಿ/ವೈಆರ್ಸಿ	249
41	ಮಹಿಳಾ ಸಬಲೀಕರಣ, ಪಜಾ/ಪಪಂ, ಒಬಿಸಿ, ಅಲ್ಪಸಂಖ್ಯಾತರು, ಲಿಂಗ ಸಮಾನತೆ ಮತ್ತು ಇತರ ಕೋಶಗಳ ಸಂವಿಧಾನ ಮತ್ತು ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಪ್ರತೀ ಕೋಶದ ಹಣಕಾಸು ಅನುದಾನ, ಖರ್ಚು ಮತ್ತು ಚಟುವಟಿಕೆಗಳ ವಿವರಣಾತ್ಮಕ ವರದಿ	261
42	ಅತ್ಯುತ್ತಮ ಅಭ್ಯಾಸಗಳು/ ಆಚರಣೆಗಳು	261
43	ನಾವೀನ್ಯತೆಗಳು	262
44	ದಾವೆಗಳು	262
45	ಲೋಕಾಯುಕ್ತ ಪ್ರಕರಣಗಳು, ಯಾವುದಾದರೂ ಇದ್ದರೆ	262
46	ಶಾಸಕಾಂಗ ಸಮಿತಿಯ ನಡಾವಳಿಗಳು	262
47	ದೂರ ಶಿಕ್ಷಣ	262
48	ಶೈಕ್ಷಣಿಕ ಸೇವೆಗಳ ಗುಣಮಟ್ಟವನ್ನು ಹೆಚ್ಚಿಸಲು ವಿಶ್ವವಿದ್ಯಾನಿಲಯವು ಪ್ರಸ್ತಾಪಿಸುವ ವಿಶೇಷ ಕ್ರಮಗಳು	265
49	ವಿಶ್ವವಿದ್ಯಾನಿಲಯದ ಸಾಧನೆಗಳನ್ನು ತೋರಿಸುವ ಇತರ ಮಾಹಿತಿಗಳು	265
50	ಉಪಕುಲಪತಿಗಳ ನಿಲುವುಗಳು	265

ಮುನ್ನುಡಿ

ಮಂಗಳೂರು ವಿಶ್ವವಿದ್ಯಾನಿಲಯದ 2019–20ನೇ ಸಾಲಿನ ವಾರ್ಷಿಕ ವರದಿಯನ್ನು ತಮ್ಮ ಮುಂದಿಡಲು ನಾನು ಸಂತಸಪಡುತ್ತೇನೆ. ಕಳೆದ 39 ವರ್ಷಗಳಿಂದೀಚೆಗೆ ಮಂಗಳೂರು ವಿಶ್ವವಿದ್ಯಾನಿಲಯವು ಅತ್ಯುನ್ನತ ಬೆಳವಣಿಗೆಯನ್ನು ಹೊಂದಿರುವುದರ ಜೊತೆಗೆ, ಇಂದು ನಮ್ಮ ರಾಷ್ಟ್ರದ ಅತ್ಯುತ್ತಮ ವಿಶ್ವವಿದ್ಯಾನಿಲಯಗಳಲ್ಲಿ ಒಂದು ಎಂಬುದಾಗಿಯೂ ಗುರುತಿಸಲ್ಪಟ್ಟಿದೆ.

ನಮ್ಮ ವಿಶ್ವವಿದ್ಯಾನಿಲಯವು ಅಧ್ಯಾಪನ, ಸಂಶೋಧನೆ, ಶೈಕ್ಷಣಿಕ ಕಾರ್ಯಕ್ರಮಗಳ ಆಯೋಜನೆ ಹಾಗೂ ಪರೀಕ್ಷೆಗಳನ್ನು ವ್ಯವಸ್ಥಿತವಾಗಿ ಸಕಾಲದಲ್ಲಿಯೇ ನಡೆಸಿಕೊಂಡು ಬರುತ್ತಿದೆ. ಶ್ರೇಯಾಂಕ ಆಧಾರಿತ ಚತುರ್ಮಾಸ ಪದ್ಧತಿಯು ಪದವಿ ಶಿಕ್ಷಣ ಮಟ್ಟದಲ್ಲಿ ಹಾಗೂ ಆಯ್ಕೆ ಆಧಾರಿತ ಮೌಲ್ಯಾಂಕನ ಪದ್ಧತಿಯನ್ನು ಎರಡು ವರ್ಷಗಳ ಸ್ನಾತಕೋತ್ತರ ಪದವಿ ಶಿಕ್ಷಣದಲ್ಲಿ ಅಳವಡಿಸಿಕೊಂಡು ಯಶಸ್ವಿಯಾಗಿ ಮುನ್ನಡೆಯುತ್ತಿದೆ. ಇತ್ತೀಚಿನ ವರ್ಷಗಳ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಪ್ರಯತ್ನದ ಫಲವಾಗಿ ಸಂಶೋಧನೆ ಮತ್ತು ಸ್ನಾತಕೋತ್ತರ ಅಧ್ಯಯನಗಳಿಗೆ ಬರುತ್ತಿರುವ ಸಂಶೋಧನಾ ವಿದ್ಯಾರ್ಥಿಗಳು ಮತ್ತು ವಿದೇಶಿ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಗಣನೀಯವಾಗಿ ಏರಿಕೆಯಾಗಿದೆ.

ನಮ್ಮ ಅಧ್ಯಾಪಕರು ತಮ್ಮ ಬೋಧನೆ ಮತ್ತು ಸಂಶೋಧನೆಗಳ ಬಗ್ಗೆ ವಿಶ್ವಾಸವಿಟ್ಟುಕೊಳ್ಳುವಷ್ಟು ಸಮರ್ಪಣಾ ಭಾವದಿಂದ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. 2013ರಲ್ಲಿ 32 ಇದ್ದ ವಿಶ್ವವಿದ್ಯಾನಿಲಯದ ಎಚ್ ಇಂಡೆಕ್ಸ್ 64ಕ್ಕೆ ಏರಿಕೆಯಾಗಿರುವುದು ವಿಶ್ವವಿದ್ಯಾನಿಲಯದ ಪ್ರಗತಿಯ ಸೂಚಕವಾಗಿದೆ. ಸಂಶೋಧನಾ ಕಾರ್ಯಗಳ ಹೆಚ್ಚಳ ಹಾಗೂ ಸಂವರ್ಧನೆಗಾಗಿ ಪ್ರತ್ಯೇಕ ವಿಭಾಗವೊಂದನ್ನು ತೆರೆದಿದ್ದು, ಎಲ್ಲ ಅಧ್ಯಾಪಕರಿಗೂ, ಪಜಾ/ಪಪಂ ವಿದ್ಯಾರ್ಥಿಗಳಿಗೂ ಉಚಿತ ಲ್ಯಾಪ್‌ಟಾಪ್ ಒದಗಿಸಲಾಗಿದೆ. ಇದರೊಂದಿಗೆ ಪಜಾ/ಪಪಂ ವಿದ್ಯಾರ್ಥಿಗಳಿಗೆ ಹಲವು ಕ್ಷೇಮಾಭಿವೃದ್ಧಿ ಕಾರ್ಯಕ್ರಮಗಳನ್ನು ಸರಕಾರದ ಅನುದಾನದ ಅಡಿಯಲ್ಲಿ ಒದಗಿಸಲಾಗುತ್ತಿದೆ. ಮೊದಲ ಬಾರಿಗೆ ವಿಶ್ವವಿದ್ಯಾನಿಲಯವು ಭಾರತ ಮತ್ತು ಅಂತರಾಷ್ಟ್ರೀಯ ಮಟ್ಟದ ವಿವಿಧ ಕ್ಷೇತ್ರಗಳ ತಜ್ಞ ವಿದ್ವಾಂಸರನ್ನು ಅಡ್ಜಂಟ್ ಪ್ರಾಧ್ಯಾಪಕರನ್ನಾಗಿ ನೇಮಿಸಿದೆ.

ಆಡಳಿತ ಸೌಧ, ನಿಕಾಯಗಳ ಸೌಧಗಳು, ಗ್ರಂಥಾಲಯ, ವಿದ್ಯಾರ್ಥಿ ವಸತಿನಿಲಯಗಳು, ಸಿಬ್ಬಂದಿ ವಸತಿನಿಲಯಗಳು, ಅತಿಥಿ ಗೃಹಗಳು, ಮಂಗಳಾ ಸಭಾಂಗಣ, ಸುಸಜ್ಜಿತವಾದ ಹೊರರೋಗಿಗಳ ಆರೋಗ್ಯ ಕೇಂದ್ರ, ಜಿಮ್ನಾಷಿಯಂ, ಒಳಾಂಗಣ ಕ್ರೀಡಾಂಗಣ ಮತ್ತು 400ಮೀ.ನ ಟ್ರ್ಯಾಕ್‌ನೊಂದಿಗೆ ಕ್ರೀಡಾಂಗಣ ಮೊದಲಾದ ಮೂಲಸೌಕರ್ಯಗಳನ್ನು ವಿಶ್ವವಿದ್ಯಾನಿಲಯದ ಆವರಣದಲ್ಲಿ ಒದಗಿಸಲಾಗಿದೆ. ವಿಶ್ವವಿದ್ಯಾನಿಲಯವು ಆವರಣದಲ್ಲಿ ತನ್ನದೇ ಆದ ನೀರು ಪೂರೈಕೆಯ ವ್ಯವಸ್ಥೆಯನ್ನೂ ಹೊಂದಿದೆ. 4 ಎಟಿಎಂಗಳೊಂದಿಗೆ ಬ್ಯಾಂಕ್‌ನ ಸೌಲಭ್ಯ, ಸೈಬರ್ ಕೆಫೆ, ಇನ್‌ಫ್ಲಿಬ್‌ನೆಟ್ ಮತ್ತು ಅಂಚೆ ಸೇವೆಯ ವ್ಯವಸ್ಥೆಯೂ ಆವರಣದಲ್ಲಿದೆ. ಸುರಕ್ಷತೆಯ ದೃಷ್ಟಿಯಿಂದ ವಿಶ್ವವಿದ್ಯಾನಿಲಯ ಮತ್ತು ಘಟಕ ಕಾಲೇಜುಗಳ ಆವರಣದೊಳಗೆ ಸಿಸಿಟಿವಿಗಳನ್ನೂ ಅಳವಡಿಸಲಾಗಿದೆ. ಆವರಣದೊಳಗಿನ ಬೀದಿ ದೀಪಗಳನ್ನು ಸೌರ ವಿದ್ಯುದ್ದೀಕರಣ–ಗೊಳಿಸಲಾಗಿದೆ.

ಮಂಗಳೂರು ವಿಶ್ವವಿದ್ಯಾನಿಲಯವು ತನ್ನ ಆವರಣದಲ್ಲಿ ವೈ–ಫೈ ಸಂಪರ್ಕವನ್ನೂ ಹೊಂದಿದೆ. ವಿಶ್ವವಿದ್ಯಾನಿಲಯದಲ್ಲಿ ವೆಬ್ ಪೋರ್ಟಲ್ ಮತ್ತು ಮಾಹಿತಿ ಪ್ರದರ್ಶಕಗಳನ್ನು ವ್ಯವಸ್ಥೆಗೊಳಿಸಲಾಗಿದೆ. ಗ್ರಂಥಾಲಯವು 25+ ಡೇಟಾ ಬೇಸ್ ಸಾಮರ್ಥ್ಯವನ್ನು ಹೊಂದಿದ್ದು, ಕೃತಿಚೌರ್ಯ ಪತ್ತೆ ಸಾಫ್ಟ್‌ವೇರ್ ಅನ್ನು ಶೋಧಗಂಗಾ ಯೋಜನೆಯಡಿಯಲ್ಲಿ ವ್ಯವಸ್ಥೆಗೊಳಿಸಲಾಗಿದೆ.

ವಿಶ್ವವಿದ್ಯಾನಿಲಯದಲ್ಲಿ ಉತ್ಕೃಷ್ಟ ವೈಜ್ಞಾನಿಕ ಸಂಶೋಧನಾ ಸೌಲಭ್ಯಗಳಾದ ಮೈಕ್ರೋಟ್ರಾನ್ ಕೇಂದ್ರ, ಸೆಂಟರ್ ಫಾರ್ ಅಪ್ಲಿಕೇಶನ್ ಆಫ್ ರೇಡಿಯೋ ಐಸೋಟೋಪ್ಸ್ ಆಂಡ್ ರೇಡಿಯೇಶನ್ ಟೆಕ್ನಾಲಜಿ (ಸಿಎಆರ್‌ಆರ್‌ಟಿ), ವಿಶ್ವವಿದ್ಯಾನಿಲಯ ಸಂಶೋಧನೆ ಮತ್ತು ವೈಜ್ಞಾನಿಕ ಉತ್ಕೃಷ್ಟತೆಯ ಉತ್ತೇಜನಕ್ಕಾಗಿ ಪ್ರಮೋಶನ್ ಆಫ್ ಯೂನಿವರ್ಸಿಟಿ ರಿಸರ್ಚ್ ಆಂಡ್ ಸೈಂಟಿಫಿಕ್ ಎಕ್ಸಲೆನ್ಸ್ – (ಪರ್ಸ್), ಸೆಂಟರ್ ಫಾರ್ ಅಡ್ವಾನ್ಸ್ಡ್ ರಿಸರ್ಚ್ ಇನ್ ಎನ್ವಿರಾನ್‌ಮೆಂಟ್ ರೇಡಿಯೋ ಆಕ್ಟಿವಿಟಿ (ಸಿಎಆರ್‌ಇಆರ್), ಒಎಎಸ್‌ಟಿಸಿ ಮೊದಲಾದವುಗಳು ಕಾರ್ಯನಿರ್ವಹಿಸುತ್ತಿವೆ.

ವಿಶ್ವವಿದ್ಯಾನಿಲಯ–ಕೈಗಾರಿಕಾ ಕಂಪನಿಗಳ ನಡುವಿನ ಸಂವಹನ, ವಿಸ್ತರಣಾ ಕಾರ್ಯಕ್ರಮಗಳಾದ ಪ್ರಸಾರಾಂಗ, ಎನ್‌ಎಸ್‌ಎಸ್ ಮತ್ತು ಇತರ ದತ್ತಿಪೀಠಗಳು ಮತ್ತು ಅಧ್ಯಯನ ಕೇಂದ್ರಗಳ ಮೂಲಕ ವಿಶ್ವವಿದ್ಯಾನಿಲಯವು ಕರಾವಳಿ ಮತ್ತು ಕೊಡಗು ಪ್ರಾಂತ್ಯದ ಸಾರ್ವಜನಿಕರೊಂದಿಗೆ ಉತ್ತಮ ಬಾಂಧವ್ಯವನ್ನೂ ಉಳಿಸಿಕೊಂಡಿದೆ.

ವಿಶ್ವವಿದ್ಯಾನಿಲಯವು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಶಿಷ್ಯವೇತನಗಳನ್ನೂ, ಜೊತೆಗೆ ಪ್ರತಿಭಾವಂತ ಬಡ ವಿದ್ಯಾರ್ಥಿಗಳಿಗೂ ದತ್ತಿ ಶಿಷ್ಯವೇತನಗಳನ್ನೂ ನೀಡುತ್ತಿದೆ. ಸಂಯೋಜಿತ ಕಾಲೇಜುಗಳ ಮೂಲಕ ಮಂಗಳೂರು ವಿಶ್ವವಿದ್ಯಾನಿಲಯವು ರಾಜ್ಯವು ಕ್ರೀಡೆಯಲ್ಲಿ ಬೆಳಗಲು ಕೊಡುಗೆಯನ್ನು ನೀಡಿದೆ. ಅಂತರ್‌ವಿಶ್ವವಿದ್ಯಾನಿಲಯದ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ತಯಾರಾದ ನಮ್ಮ ವಿಶ್ವವಿದ್ಯಾನಿಲಯದ 100ಕ್ಕೂ ಅಧಿಕ ಕ್ರೀಡಾಪಟುಗಳು ಅಂತಾರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಪದಕಗಳನ್ನು ಪಡೆದು ದೇಶಕ್ಕೆ ಕೀರ್ತಿಯನ್ನು ತಂದಿದ್ದಾರೆ. ಪ್ರತಿಭಾವಂತ

ಕ್ರೀಡಾಪಟುಗಳಿಗಾಗಿ ವಿಶ್ವವಿದ್ಯಾನಿಲಯವು ಕ್ರೀಡಾ ಶಿಷ್ಯವೇತನಗಳನ್ನು ಆರಂಭಿಸಿದೆ. ಅಂತರ್‌ವಿಶ್ವವಿದ್ಯಾನಿಲಯ ಮಟ್ಟದಲ್ಲಿ ಹೊಸ ದಾಖಲೆಗಳನ್ನು ನಿರ್ಮಿಸುವ ಮತ್ತು ಅಖಿಲ ಭಾರತ ಅಂತರ್‌ವಿಶ್ವವಿದ್ಯಾನಿಲಯ ಮಟ್ಟದಲ್ಲಿ ವೈಯಕ್ತಿಕ ಸಾಧನೆಗಳನ್ನು ಮಾಡಿ ಪದಕಗಳನ್ನು ಪಡೆಯುವ ಕ್ರೀಡಾಪಟುಗಳಿಗೆ ವಿಶ್ವವಿದ್ಯಾನಿಲಯವು ಉತ್ತೇಜನವನ್ನು ನೀಡುತ್ತಿದೆ.

ಕುಶಾಲನಗರದ ಚಿಕ್ಕಅಳುವಾರದಲ್ಲಿ ಆರಂಭಿಸಿರುವ ಸ್ನಾತಕೋತ್ತರ ಕೇಂದ್ರದ ಅಭಿವೃದ್ಧಿಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗಿದೆ. ಮಂಗಳಗಂಗೋತ್ರಿಯ ಸುತ್ತಮುತ್ತಲಿನ ಪ್ರದೇಶದ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣದ ಅವಕಾಶವನ್ನು ಕಲ್ಪಿಸಿಕೊಡುವ ಉದ್ದೇಶದಿಂದ ಪ್ರಥಮ ದರ್ಜೆ ಕಾಲೇಜನ್ನು ಆರಂಭಿಸಲಾಗಿದೆ. ಮಂಗಳೂರಿನ ವಿಶ್ವವಿದ್ಯಾನಿಲಯ ಕಾಲೇಜಿನಲ್ಲಿ ಸಂಧ್ಯಾ ಕಾಲೇಜನ್ನು ಆರಂಭಿಸುವ ಮೂಲಕ ಹಗಲು ದುಡಿದು ಸಂಜೆ ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಲು ಇಚ್ಛಿಸುವ ಬಡ ವಿದ್ಯಾರ್ಥಿಗಳ ಅವಶ್ಯಕತೆಯನ್ನು ಪೂರೈಸಲು ಪ್ರಯತ್ನಿಸಲಾಗಿದೆ. ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಾದ ಮಂಗಳೂರಿನ ವಿಶ್ವವಿದ್ಯಾನಿಲಯ ಕಾಲೇಜು, ಮಡಿಕೇರಿಯ ಫೀಲ್ಡ್ ಮಾರ್ಷಲ್ ಕೆ. ಎಂ. ಕಾರ್ಯಪ್ಪ ಕಾಲೇಜುಗಳು ಪೊಟೆನ್ಶಿಯಲ್ ಫಾರ್ ಎಕ್ಸಲೆನ್ಸ್ ಗೌರವವನ್ನು ಪಡೆದಿದ್ದು ಮುಂದಿನ ಐದು ವರ್ಷಗಳ ಅವಧಿಗೆ ವಿಶೇಷ ಅನುದಾನಕ್ಕೆ ಪಾತ್ರವಾಗಿವೆ. ಮಂಗಳೂರಿನ ವಿಶ್ವವಿದ್ಯಾನಿಲಯ ಕಾಲೇಜು ಯುಜಿಸಿಯಿಂದ ಪಾರಂಪರಿಕ ಕಟ್ಟಡ ಮಾನ್ಯತೆಯನ್ನು ಪಡೆದಿದ್ದು, ಇಲ್ಲಿನ ರವೀಂದ್ರ ಕಲಾಭವನದ ಅಭಿವೃದ್ಧಿಗೆ 183 ಲಕ್ಷ ರೂ. ಅನುದಾನವನ್ನೂ ಪಡೆದಿದೆ.

ವಿದ್ಯಾರ್ಥಿಗಳು, ಅಧ್ಯಾಪಕರು, ಆಡಳಿತ ಸಿಬ್ಬಂದಿಗಳು ಹಾಗೂ ವಿಶ್ವವಿದ್ಯಾನಿಲಯದ ಅಧಿಕಾರಿ ವರ್ಗದವರು ಕ್ರಿಯಾತ್ಮಕ ಬೆಂಬಲವನ್ನು ನೀಡುತ್ತಿರುವುದರಿಂದ ವಿಶ್ವವಿದ್ಯಾನಿಲಯವು ಕಲಿಕೆಗೆ ಬೇಕಾದ ಸುಭದ್ರ ಹಾಗೂ ಶಾಂತ ವಾತಾವರಣವನ್ನು ಕಲ್ಪಿಸಿಕೊಟ್ಟಿದೆ.

ಪ್ರೊ. ಪಿ. ಸುಬ್ರಹ್ಮಣ್ಯ ಯಡಪಡಿತ್ತಾಯ

ಕುಲಪತಿಗಳು

1. ಸಾಮಾನ್ಯ ಮಾಹಿತಿಗಳು:

ಎ. ವಿಶ್ವವಿದ್ಯಾನಿಲಯದ ಹೆಸರು : ಮಂಗಳೂರು ವಿಶ್ವವಿದ್ಯಾನಿಲಯ

ಬಿ. ಸ್ಥಾಪನೆಯಾದ ವರ್ಷ, ವೆಬ್‌ಸೈಟ್ ವಿಳಾಸ ಮತ್ತು ನ್ಯಾಕ್ ಗ್ರೇಡ್:

ಸ್ಥಾಪನೆಯಾದ ವರ್ಷ : 1980

ವೆಬ್‌ಸೈಟ್ ವಿಳಾಸ : www.mangaloreuniversity.ac.in

ನ್ಯಾಕ್ ಗ್ರೇಡ್: ನ್ಯಾಕ್‌ನಿಂದ ಮಾನ್ಯತೆಯನ್ನು ಪಡೆದಿದೆ.

ಸಿ. ನಿಯಂತ್ರಕರು ನೀಡುವ ವಿಶೇಷ ಸ್ಥಾನಮಾನ (ಯುಪಿಇ ಇತ್ಯಾದಿ)

ಮೈಕ್ರೋಟ್ರಾನ್– ಸೆಂಟರ್ ವಿತ್ ಪೊಟೆನ್ಶಿಯಲ್ ಫಾರ್ ಎಕ್ಸಲೆನ್ಸ್

ಯುಜಿಸಿ – ಸ್ಯಾಪ್ : ಕನ್ನಡ ವಿಭಾಗ
ಜೀವವಿಜ್ಞಾನ ವಿಭಾಗ
ಅನ್ವಯಿಕ ಪ್ರಾಣಿಶಾಸ್ತ್ರ ವಿಭಾಗ
ರಸಾಯನಶಾಸ್ತ್ರ ವಿಭಾಗ

ಡಿಎಸ್‌ಟಿ – ಎಫ್‌ಐಎಸ್‌ಟಿ : ಜೀವವಿಜ್ಞಾನ ವಿಭಾಗ
ಗಣಿತಶಾಸ್ತ್ರ ವಿಭಾಗ
ರಸಾಯನಶಾಸ್ತ್ರ ವಿಭಾಗ
ಭೌತಶಾಸ್ತ್ರ ವಿಭಾಗ

ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು – ಕಾಲೇಜ್ ವಿತ್ ಪೊಟೆನ್ಶಿಯಲ್ ಫಾರ್ ಎಕ್ಸಲೆನ್ಸ್

ಡಿ. ಕುಲಪತಿಗಳ ಹೆಸರು : ಡಾ. ಕಿಶೋರಿ ನಾಯಕ್ ಕೆ. (ಪ್ರಭಾರ ಕುಲಪತಿಗಳು)
(28.02.2019ರಿಂದ 03.06.2019ರವರೆಗೆ)
ಪ್ರೊ. ಪಿ. ಎಸ್. ಯಡಪಡಿತ್ತಾಯ – ಜೂನ್ 3, 2019ರಿಂದ ಇಂದಿನವರೆಗೆ

ಇ. ಕುಲಸಚಿವರು, ಪರೀಕ್ಷಾಂಗ ಕುಲಸಚಿವರು, ಹಣಕಾಸು ಅಧಿಕಾರಿಗಳ ಹೆಸರು:

ಕುಲಸಚಿವರ ಹೆಸರು : ಪ್ರೊ. ಎ. ಎಂ. ಖಾನ್ – 14.08.2018ರಿಂದ 27.04.2020ರವರೆಗೆ
ಶ್ರೀ ರಾಜು ಮೊಗವೀರ ಕೆ.ಎ.ಎಸ್. – 27.04.2020ರಿಂದ ಇಂದಿನವರೆಗೆ

ಪರೀಕ್ಷಾಂಗ ಕುಲಸಚಿವರ ಹೆಸರು : ಪ್ರೊ. ವಿ. ರವೀಂದ್ರಾಚಾರಿ – 14.08.2018ರಿಂದ 16.03.2020ರವರೆಗೆ
ಪ್ರೊ. ಪಿ. ಎಲ್. ಧರ್ಮ – 16.03.2020ರಿಂದ ಇಂದಿನವರೆಗೆ

ಹಣಕಾಸು ಅಧಿಕಾರಿಗಳ ಹೆಸರು:
ಡಾ. ದಯಾನಂದ ನ್ಯಾಕ್ – 09.08.2017ರಿಂದ 29.06.2019ರವರೆಗೆ
ಪ್ರೊ. ಪಿ. ಶ್ರೀಪತಿ ಕಲ್ಲೂರಾಯ – 01.07.2019ರಿಂದ 31.03.2020ರವರೆಗೆ
ಡಾ. ಬಿ. ನಾರಾಯಣ – 31.03.2020ರಿಂದ ಇಂದಿನವರೆಗೆ

ಎಫ್. ವಿಶ್ವವಿದ್ಯಾನಿಲಯದ ವ್ಯಾಪ್ತಿ: ದಕ್ಷಿಣ ಕನ್ನಡ, ಉಡುಪಿ ಮತ್ತು ಕೊಡಗು ಜಿಲ್ಲೆಗಳು

ಜಿ. ಕ್ಯಾಂಪಸ್‌ಗಳು/ಸ್ನಾತಕೋತ್ತರ ಕೇಂದ್ರಗಳ ಸಂಖ್ಯೆ ಭೂಮಿ, ಕಟ್ಟಡ ಮತ್ತು ಆಡಳಿತಾತ್ಮಕ ವ್ಯವಸ್ಥೆಗಳು:

- ಮಂಗಳೂರು ವಿಶ್ವವಿದ್ಯಾನಿಲಯ ಆವರಣ, ಮಂಗಳಗಂಗೋತ್ರಿ
- ಒಟ್ಟು ಪ್ರದೇಶ: 352.12 ಎಕರೆ: ಆಡಳಿತ ಕಟ್ಟಡ, ಮಾನವಿಕ ವಿಭಾಗ, ವಿಜ್ಞಾನ ವಿಭಾಗ, ವ್ಯವಹಾರ ವಿಭಾಗ, ಜೀವವಿಜ್ಞಾನ ವಿಭಾಗ, ಗ್ರಂಥಾಲಯ, ಕನ್ನಡ ವಿಭಾಗ, ದೈಹಿಕ ಶಿಕ್ಷಣ ವಿಭಾಗ, ಕೇಂದ್ರ ಸೌಲಭ್ಯಗಳು, ವಸತಿ ನಿಲಯಗಳು, ಆರೋಗ್ಯ ಕೇಂದ್ರ, ಅತಿಥಿ ಗೃಹಗಳು, ಸಿಬ್ಬಂದಿ ಮತ್ತು ಕಛೇರಿ ವಸತಿಗೃಹಗಳು, ಅಡಿಟೋರಿಯಂ, ಉಪನ್ಯಾಸ ಸಂಕೀರ್ಣ, ಬ್ಯಾಂಕುಗಳು, ವಾಣಿಜ್ಯ ಸಂಕೀರ್ಣ, ದೂರ ಶಿಕ್ಷಣ ಕೇಂದ್ರ, ಕ್ಯಾಂಟೀನ್, ಯೋಗ ವಿಭಾಗ ಇತ್ಯಾದಿ
- ಸ್ನಾತಕೋತ್ತರ ಕೇಂದ್ರ: ಜ್ಞಾನಕಾವೇರಿ ಸ್ನಾತಕೋತ್ತರ ಕೇಂದ್ರ, ಚಿಕ್ಕ ಅಳುವಾರ, ಕುಶಾಲನಗರ ತಾಲೂಕು.
- ಒಟ್ಟು ಪ್ರದೇಶ: 70.47 ಎಕರೆ: ವಿಜ್ಞಾನ ವಿಭಾಗ, ವಾಣಿಜ್ಯ ವಿಭಾಗ, ಸಿಬ್ಬಂದಿ ವಸತಿಗೃಹಗಳು, ವಸತಿನಿಲಯಗಳು, ಕ್ಯಾಂಟೀನ್
- ಉನ್ನತ ಸಂಶೋಧನಾ ಕೇಂದ್ರ, ಬೆಳಮ – 20 ಎಕರೆ: ಅಭಿವೃದ್ಧಿಯ ಹಂತದಲ್ಲಿದೆ

ಎಚ್. ಅಧ್ಯಾಪಕರು/ಶಾಲೆಗಳ ಸಂಖ್ಯೆ: ನಾಲ್ಕು

ಕಲಾ ಅಧ್ಯಾಪಕರು

ವಿಜ್ಞಾನ ಮತ್ತು ತಂತ್ರಜ್ಞಾನ ಅಧ್ಯಾಪಕರು

ವಾಣಿಜ್ಯ ಅಧ್ಯಾಪಕರು

ಶಿಕ್ಷಣ ಅಧ್ಯಾಪಕರು

ಐ. ವಿಭಾಗಗಳ ಶಂಖ್ಯೆ: 27 ಸ್ನಾತಕೋತ್ತರ ವಿಭಾಗಗಳು

ಜೆ. ಒಟ್ಟು ಕಾಲೇಜುಗಳ ಸಂಖ್ಯೆ (ಘಟಕ/ವಿಶ್ವವಿದ್ಯಾನಿಲಯ/ಸ್ವಾಯತ್ತ/ಸಂಯೋಜಿತ): ಸ್ನಾತಕೋತ್ತರ ಕೋರ್ಸುಗಳುಳ್ಳ ಕಾಲೇಜುಗಳು ಮತ್ತು/ ಅಥವಾ ಸಂಶೋಧನಾ ಕೇಂದ್ರಗಳು:

ಘಟಕ ಕಾಲೇಜುಗಳು : 02

ಸ್ವಾಯತ್ತ ಕಾಲೇಜುಗಳು : 05

ಸರ್ಕಾರಿ ಕಾಲೇಜುಗಳು : 38

ಅನುದಾನಿತ ಕಾಲೇಜುಗಳು : 31

ಖಾಸಗಿ ಕಾಲೇಜುಗಳು : 132

ಸ್ನಾತಕೋತ್ತರ ಕೋರ್ಸುಗಳುಳ್ಳ ಕಾಲೇಜುಗಳು ಮತ್ತು/ ಅಥವಾ ಸಂಶೋಧನಾ ಕೇಂದ್ರಗಳು:

ಸ್ನಾತಕೋತ್ತರ ಕೋರ್ಸುಗಳುಳ್ಳ ಕಾಲೇಜುಗಳು : 56

ಸಂಶೋಧನಾ ಕೇಂದ್ರಗಳು : 5

ಪಿಹೆಚ್.ಡಿ ಕಾರ್ಯಕ್ರಮವನ್ನು ಹೊಂದಿರುವ ಸಂಯೋಜಿತ ಕಾಲೇಜುಗಳು: 4

ಸಂಯೋಜಿತ ಕಾಲೇಜುಗಳು: 207

ಕೆ. ಒಟ್ಟು ಕೋರ್ಸುಗಳ ಸಂಖ್ಯೆ:

ಎ. ಪದವಿ ಕೋರ್ಸುಗಳ: ಸಂಖ್ಯೆ: 24

ಬಿ. ಸ್ನಾತಕೋತ್ತರ ಕೋರ್ಸುಗಳ ಸಂಖ್ಯೆ: 65

ಸಿ. ಒಂದು ವರ್ಷದ ಸ್ನಾತಕೋತ್ತರ ಡಿಪ್ಲೊಮಾ/ಡಿಪ್ಲೊಮಾ ಕೋರ್ಸುಗಳು: 18

ಡಿ. ಸರ್ಟಿಫಿಕೇಟು ಕೋರ್ಸುಗಳು: 12

ಎಲ್. ಒಟ್ಟು ವಿದ್ಯಾರ್ಥಿಗಳ ಸಂಖ್ಯೆ : ಪದವಿ/ಸ್ನಾತಕೋತ್ತರ ಪದವಿ/ಎಂ.ಫಿಲ್/ಪಿಹೆಚ್.ಡಿ/ದೂರಶಿಕ್ಷಣ (ಹೆಣ್ಣು/ಗಂಡು ಪಜಾ/ಪಪಂ – ಸಮುದಾಯವಾರು)

ಒಟ್ಟು ವಿದ್ಯಾರ್ಥಿಗಳ ಸಂಖ್ಯೆ – ಸ್ನಾತಕೋತ್ತರ ಪದವಿ

ಕ್ರ. ಸಂ	ಹೆಸರು	ಗಂಡು	ಹೆಣ್ಣು	ಪಜಾ		ಪಪಂ		ಒಬಿಸಿ		ಸಾಮಾನ್ಯ ಅಭ್ಯರ್ಥಿ		ಒಟ್ಟು
				ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	
1.	ಆವರಣ/ ಕ್ಯಾಂಪಸ್	655	1,559	82	118	37	70	180	606	318	746	2,214 (57 ವಿದೇಶಿ ವಿದ್ಯಾರ್ಥಿಗಳು)
2.	ಚಿಕ್ಕ ಅಳುವಾರ	110	231	28	50	8	2	62	148	12	31	341
3.	ಎಫ್ಎಂಕೆಎಂಸಿ ಕಾಲೇಜು, ಮಡಿಕೇರಿ	54	129	5	26	6	4	38	92	5	7	183
4.	ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು	58	333	7	38	6	17	24	211	21	67	391
5.	ವಿಶ್ವವಿದ್ಯಾನಿಲಯ ಸಂಧ್ಯಾ ಕಾಲೇಜು, ಮಂಗಳೂರು	139	106	7	6	2	1	98	73	32	26	245
6.	ಸಂಯೋಜಿತ ಕಾಲೇಜುಗಳು	1,688	5,185	94	191	58	182	1,178	3,673	356	1,139	6,873 (2 ವಿದೇಶಿ ವಿದ್ಯಾರ್ಥಿಗಳು)
ಒಟ್ಟು												10,247

ಒಟ್ಟು ವಿದ್ಯಾರ್ಥಿಗಳ ಸಂಖ್ಯೆ – ಪದವಿ

ಕ್ರ. ಸಂ	ಹೆಸರು	ಗಂಡು	ಹೆಣ್ಣು	ಪಜಾ		ಪಪಂ		ಒಬಿಸಿ		ಸಾಮಾನ್ಯ ಅಭ್ಯರ್ಥಿ		ಒಟ್ಟು
				ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	
1	ಆವರಣ/ ಕ್ಯಾಂಪಸ್	44	17	14	3	4	0	12	2	14	12	61
2	ಎಫ್ಎಂಕೆಎಂಸಿ ಕಾಲೇಜು, ಮಡಿಕೇರಿ	696	951	127	168	15	34	538	719	16	30	1,647
3	ವಿಶ್ವವಿದ್ಯಾನಿಲಯ ಕಾಲೇಜು, ನೆಲ್ಯಾಡಿ	18	58	2	5	2	5	14	47	0	1	76
4	ವಿಶ್ವವಿದ್ಯಾನಿಲಯ ಪ್ರಥಮ ದರ್ಜೆ ಕಾಲೇಜು, ಮಂಗಳಗಂಗೋತ್ರಿ	90	169	1	9	2	4	67	137	3	7	268 (38 ವಿದೇಶಿ ವಿದ್ಯಾರ್ಥಿಗಳು)
5	ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು	502	1,049	117	124	23	48	308	771	54	106	1,551
6	ವಿಶ್ವವಿದ್ಯಾನಿಲಯ ಸಂಧ್ಯಾ ಕಾಲೇಜು, ಮಂಗಳೂರು	94	28	10	3	4	1	73	21	7	3	122
7	ಸಂಯೋಜಿತ ಕಾಲೇಜುಗಳು	32,725	47,782	1,858	3,039	1,069	1,973	23,957	36,381	5,820	6,364	80,507 (46 ವಿದೇಶಿ ವಿದ್ಯಾರ್ಥಿಗಳು)
ಒಟ್ಟು												84,232

ಒಟ್ಟು ದೂರ ಶಿಕ್ಷಣ ವಿದ್ಯಾರ್ಥಿಗಳ ಸಂಖ್ಯೆ (ಪದವಿ)

ಕ್ರ. ಸಂ	ಹೆಸರು	ಗಂಡು	ಹೆಣ್ಣು	ಪಜಾ		ಪಪಂ		ಒಬಿಸಿ		ಸಾಮಾನ್ಯ ಅಭ್ಯರ್ಥಿ		ಒಟ್ಟು
				ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	
1	ಆವರಣ/ ಕ್ಯಾಂಪಸ್	455	482	19	34	9	26	160	158	267	264	937
2	ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು	343	607	22	48	9	30	222	429	90	100	950
3	ಎಫ್‌ಎಂಕೆಎಂಸಿ ಕಾಲೇಜು, ಮಡಿಕೇರಿ	199	205	32	27	7	13	148	144	12	21	404
4	ಸಂಯೋಜಿತ ಕಾಲೇಜುಗಳು	192	233	21	24	20	10	113	162	38	37	425
ಒಟ್ಟು												2,716

ಒಟ್ಟು ದೂರ ಶಿಕ್ಷಣ ವಿದ್ಯಾರ್ಥಿಗಳ ಸಂಖ್ಯೆ (ಸ್ನಾತಕೋತ್ತರ ಪದವಿ)

ಕ್ರ. ಸಂ	ಹೆಸರು	ಗಂಡು	ಹೆಣ್ಣು	ಪಜಾ		ಪಪಂ		ಒಬಿಸಿ		ಸಾಮಾನ್ಯ ಅಭ್ಯರ್ಥಿ		ಒಟ್ಟು
				ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	
1	ಆವರಣ/ ಕ್ಯಾಂಪಸ್	628	1,257	86	119	26	53	254	518	262	567	1,885
2	ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು	211	710	9	21	8	18	123	498	71	173	921
3	ಎಫ್‌ಎಂಕೆಎಂಸಿ ಕಾಲೇಜು, ಮಡಿಕೇರಿ	57	136	3	18	2	2	46	101	6	15	193
4	ಸಂಯೋಜಿತ ಕಾಲೇಜುಗಳು	116	396	4	15	4	9	82	311	26	61	512
ಒಟ್ಟು												3,511

2. ವಿಶ್ವವಿದ್ಯಾನಿಲಯದ ಅಧಿಕಾರಿಗಳು:

ಎ. ಸಾಮರ್ಥ್ಯಗಳು, ದೌರ್ಬಲ್ಯಗಳು, ಅವಕಾಶಗಳು ಮತ್ತು ಸವಾಲುಗಳು (ಎಸ್‌ಡಬ್ಲ್ಯೂಒಸಿ) ವಿಶ್ಲೇಷಣೆಗಳು ಮತ್ತು ಕೈಗೊಂಡ ಕ್ರಮಗಳು:

ಸಾಮರ್ಥ್ಯಗಳು:

- ವಿಶ್ವವಿದ್ಯಾನಿಲಯವು ನ್ಯಾಕ್‌ನಿಂದ ಮಾನ್ಯತೆಯನ್ನು ಪಡೆದಿದೆ.
- DST-PURSE, DST-FIST, UGC-SAP, DAE-BRNS, BRIT, DOD ಮುಂತಾದ ಸರಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳಿಂದ ಪಡೆದ ಸಹಾಯಧನ ಮತ್ತು ಅನುದಾನಗಳಿಂದ ಸಂಶೋಧನಾ ಸೌಲಭ್ಯಗಳನ್ನು ಅತ್ಯುತ್ತಮವಾಗಿ ಅಭಿವೃದ್ಧಿಪಡಿಸಲಾಗಿದೆ.
- ಹಲವು ಅಂತರಾಷ್ಟ್ರೀಯ ಶಿಷ್ಯವೇತನಗಳು ಮತ್ತು ಎಂ.ಓ.ಯುಗಳನ್ನು ಅರ್ಹತೆ ಹೊಂದಿದ ಬೋಧಕರು ಪಡೆಯುವ ಮೂಲಕ ಅಂತರಾಷ್ಟ್ರೀಯ ಮಟ್ಟದ ಪ್ರಯೋಗಾಲಯಗಳಿಗೆ ಮತ್ತು ಸಂಶೋಧನಾ ಕೇಂದ್ರಗಳಿಗೆ ಅಧ್ಯಯನಕ್ಕಾಗಿ ತೆರಳುವ ಅವಕಾಶವನ್ನು ಪಡೆದಿದ್ದಾರೆ.
- ಮಿಂಚಂಚೆ, ಜಾಲತಾಣ ಮತ್ತು ವಿವಿಧ ವಿದ್ಯಾರ್ಥಿ ಉಪಯೋಗಿ ಅಪ್ಲಿಕೇಶನ್‌ಗಳನ್ನು ಒಳಗೊಂಡ ಅಂತರ್ಜಾಲ ಸಂಪರ್ಕವುಳ್ಳ ಗಣಕಯಂತ್ರ ಪ್ರಯೋಗಾಲಯ, ಐಟಿಸಿ, ಇ–ಸಂಪನ್ಮೂಲಗಳು ಇತ್ಯಾದಿ ಸೌಲಭ್ಯಗಳನ್ನು ಒಳಗೊಂಡ ವಿಶಾಲ ಗ್ರಂಥಾಲಯವಿದೆ.
- ಜಿಮ್ನಾಶಿಯಮ್, ಒಳಾಂಗಣ ಕ್ರೀಡಾಂಗಣ, 400 ಮೀಟರ್ ಟ್ರ್ಯಾಕ್ ಹೊಂದಿದ ವಿಶಾಲ ಹೊರಾಂಗಣ ಆಟದ ಮೈದಾನ, ಮುಂತಾದ ಪಠ್ಯೇತರ ಕ್ರೀಡಾ ಸೌಲಭ್ಯಗಳು ಇಲ್ಲಿ ಲಭ್ಯವಿವೆ.
- ವಿಶ್ವವಿದ್ಯಾನಿಲಯದ ದೂರ ಶಿಕ್ಷಣ ನಿರ್ದೇಶನಾಲಯವು ಅಗತ್ಯವಿರುವ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣವನ್ನು ನೀಡುತ್ತಿದೆ.
- ಯುಜಿಸಿ/ಸಿಎಸ್‌ಐಆರ್/ಐಎಎಸ್/ಐಪಿಎಸ್/ಐಸಿಎಎಸ್ ಮುಂತಾದ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಪ.ಜಾ/ಪ.ಪಂ/ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ತರಬೇತಿ ಕಾರ್ಯಾಗಾರವನ್ನು ನಡೆಸಲಾಗುತ್ತದೆ.

- ಸಮಾಜದಲ್ಲಿನ ಮಹಿಳೆಯರು ಮತ್ತು ದುರ್ಬಲ ವರ್ಗದವರನ್ನು ಕಾಡುವ ಸಮಸ್ಯೆಗಳು ಮತ್ತು ವಿಷಯಗಳ ಕುರಿತು ವಿಶ್ವವಿದ್ಯಾನಿಲಯದ ಪ್ರಸಾರಾಂಗ, ಅಧ್ಯಯನ ಕೇಂದ್ರಗಳು ಮತ್ತು ಪೀಠಗಳು ಜನರನ್ನು ಜ್ಞಾನ ಪ್ರಸಾರದ ಮೂಲಕ ಜಾಗೃತಗೊಳಿಸುವ ಕಾರ್ಯ ಮಾಡುತ್ತಿವೆ.
- ವಿಶ್ವವಿದ್ಯಾನಿಲಯ ಸಂದರ್ಶನ ಸೇವೆಗಳ ವಿಸ್ತರಣೆ
- ಆಡಳಿತ ಸೇವೆಗಳಲ್ಲಿ ಪ್ರಾಮಾಣಿಕತೆ ಮತ್ತು ಪಾರದರ್ಶಕತೆ.

ಮಿತಿಗಳು:

- ಮಾನವ ಸಂಪನ್ಮೂಲ ಮತ್ತು ಶೈಕ್ಷಣಿಕ ಹಾಗೂ ಭೌತಿಕ ಮೂಲಭೂತ ಸೌಲಭ್ಯಗಳ ಕೊರತೆ.
- ವಿಶ್ವವಿದ್ಯಾನಿಲಯವು ಮಂಗಳೂರು ನಗರದಿಂದ ಹೊರಗೆ ಗ್ರಾಮೀಣ ಪ್ರದೇಶದಲ್ಲಿದೆ.
- ಧನಸಹಾಯದ ಮಿತಿಯು ಸಂಶೋಧನೆಯ ವ್ಯಾಪ್ತಿಯನ್ನು ಕುಂಠಿತಗೊಳಿಸುತ್ತಿದೆ.
- ಬಹುಶಿಸ್ತೀಯ ಮತ್ತು ಅಂತರ್‌ಶಿಸ್ತೀಯ ಅಧ್ಯಯನಗಳಿಗೆ ಅವಕಾಶ ಕಡಿಮೆಯಿದೆ.
- ಮಹತ್ವಾಕಾಂಕ್ಷೆಯ ಜ್ಞಾನ ಪ್ರಸಾರದ ಕಾರ್ಯಕ್ರಮಗಳನ್ನು ನಡೆಸಲು ಮೂಲಭೂತ ಸೌಲಭ್ಯಗಳ ಕೊರತೆಯಿದೆ.

ಅವಕಾಶಗಳು:

- ಶೈಕ್ಷಣಿಕ ಪಠ್ಯಕ್ರಮದ ಅಂಗವಾಗಿ ವಿಶ್ವವಿದ್ಯಾನಿಲಯವು ಕೈಗಾರಿಕಾ ಅಂತಃಕ್ರಿಯೆಯನ್ನು ಪರಿಚಯಿಸಿದ್ದು ವಿದ್ಯಾರ್ಥಿಗಳು ಮುಂದೆ ಕೈಗಾರಿಕೆಗಳಲ್ಲಿ ಉದ್ಯೋಗ ಗಳಿಸುವಲ್ಲಿ ಈ ವಿಷಯ ಸಹಾಯಕವಾಗಿದೆ.
- ಹಲವು ಕೋರ್ಸುಗಳ ಪಠ್ಯಕ್ರಮವು ಕೈಗಾರಿಕೆಗಳ ಸಂದರ್ಶನವನ್ನು ಒಳಗೊಂಡಿದ್ದು ಮುಂದೆ ವಿದ್ಯಾರ್ಥಿಗಳಿಗೆ ಕೈಗಾರಿಕೆಗಳಲ್ಲಿರುವ ಉದ್ಯೋಗಾವಕಾಶಗಳ ಕುರಿತಾಗಿ ಅರಿಯಲು ಸಹಾಯಕವಾಗಿದೆ.
- ವಿಶ್ವವಿದ್ಯಾನಿಲಯವು ಕೆಲವು ರಾಷ್ಟ್ರಮಟ್ಟದ ಸಂಶೋಧನಾ ಸೌಲಭ್ಯಗಳನ್ನು ಹೊಂದಿದ್ದು ಇದನ್ನು ಉಳಿದ ವಿಶ್ವವಿದ್ಯಾನಿಲಯಗಳು ಮತ್ತು ಸಂಸ್ಥೆಗಳಿಗೆ ಹಣಕಾಸು ಪಡೆದು ವಿಸ್ತರಿಸಲಾಗಿದೆ.
- ಭೌದ್ಧಿಕ ಸಂಪನ್ಮೂಲಗಳನ್ನು ಹಂಚಿಕೊಳ್ಳಲು ಮತ್ತು ಉನ್ನತ ಸಂಶೋಧನಾ ಚಟುವಟಿಕೆಗಳ ವಿಸ್ತರಣೆಗಾಗಿ ವಿಶ್ವವಿದ್ಯಾನಿಲಯವು ಅನೇಕ ವಿದೇಶೀ ಸಂಸ್ಥೆಗಳೊಂದಿಗೆ ಸಹಯೋಗಗಳನ್ನೂ, ಶೈಕ್ಷಣಿಕ ವಿನಿಮಯಗಳನ್ನೂ, ಬೋಧಕ ವಿನಿಮಯ ಕಾರ್ಯಕ್ರಮಗಳನ್ನೂ ಹಮ್ಮಿಕೊಂಡಿದೆ.
- ಸಂಶೋಧನಾ ಸಾಮರ್ಥ್ಯವನ್ನು ಶಕ್ತಿಮೀರಿ ಬಳಸಿಕೊಂಡು ಸರಿಯಾದ ಫಲಿತಾಂಶ ಪಡೆಯುವ ಪ್ರಯತ್ನ ಮಾಡಲಾಗುತ್ತದೆ.
- ದೂರ ಶಿಕ್ಷಣ ವಿಭಾಗವನ್ನು ಮಾಹಿತಿ ಮತ್ತು ಸಂವಹನ ತಂತ್ರಜ್ಞಾನಗಳನ್ನು ಬಳಸಿಕೊಂಡು ಶಕ್ತಿಯುತವಾಗಿಸುವ ಮೂಲಕ ದಾಖಲಾತಿಯನ್ನು ಹೆಚ್ಚಿಸಲಾಗಿದೆ.
- ಪಶ್ಚಿಮ ಘಟ್ಟದ ತಪ್ಪಲಿನ ಕರಾವಳಿ ಭಾಗದಲ್ಲಿ ವಿಶ್ವವಿದ್ಯಾನಿಲಯವು ಇರುವುದರಿಂದ ಇಲ್ಲಿಯ ಜೀವವೈವಿಧ್ಯ ಮತ್ತು ಅದರ ಸಂರಕ್ಷಣೆಯ ಕುರಿತಾಗಿ ಅಧ್ಯಯನ ಮಾಡುವ ಮಹತ್ವದ ಅವಕಾಶ ದೊರಕಿದೆ.
- ಸಂದರ್ಶನ ಸೇವೆಗಳ ವಿಸ್ತರಣೆ ಮಾನ್ಯತೆ ಪಡೆದಿದೆ.
- ಬೋಧಕರು ಅಂತರಾಷ್ಟ್ರೀಯ ಮಟ್ಟದ ಪ್ರಯೋಗಾಲಯಗಳು ಮತ್ತು ಸಂಸ್ಥೆಗಳಿಗೆ ಭೇಟಿ ನೀಡುವುದರಿಂದ ಸಂಶೋಧನೆ ಕುರಿತ ಉನ್ನತಮಟ್ಟದ ವಿಶಾಲ ದೃಷ್ಟಿಕೋನ ಮತ್ತು ಬೋಧನೆಗೆ ಅವಕಾಶ ದೊರೆಯುತ್ತದೆ.
- ಈಕ್ವಿಟಿ ಉಪಕ್ರಮಗಳನ್ನು ವರ್ಧಿಸುವ ಕಾರ್ಯ ನಡೆಸುವುದು.

ಸವಾಲುಗಳು:

- ವಿಶ್ವವಿದ್ಯಾನಿಲಯದ ಪರಿಸರದ ಸುತ್ತಮುತ್ತಲಿರುವ ಖಾಸಗಿ ವಿಶ್ವವಿದ್ಯಾನಿಲಯಗಳು ಮತ್ತು ಇತರ ಶಿಕ್ಷಣ ಸಂಸ್ಥೆಗಳಿಂದಾಗಿ ಸ್ಪರ್ಧೆ ಹೆಚ್ಚುತ್ತಿದೆ.

- ರಾಜ್ಯದಿಂದ ದೊರೆಯುತ್ತಿರುವ ಧನಸಹಾಯ ಮಿತಿಯನ್ನು ಹೊಂದಿದೆ.
- ಉನ್ನತ ಶಿಕ್ಷಣದಲ್ಲಿ ಖಾಸಗೀಕರಣ ಹೆಚ್ಚಿದೆ.
- ಅಂಚಿನಲ್ಲಿರುವ ಸಮುದಾಯಗಳ ದಾಖಲಾತಿಯನ್ನು ಹೆಚ್ಚಿಸಲು ಹೆಚ್ಚುವರಿ ಸೌಲಭ್ಯಗಳ ಅಗತ್ಯವಿದೆ.
- ವಿದೇಶಿ ವಿಶ್ವವಿದ್ಯಾನಿಲಯಗಳು ಉನ್ನತ ಶಿಕ್ಷಣಕ್ಕಾಗಿ ಪ್ರವೇಶ ನೀಡುತ್ತಿವೆ.

ಬಿ. ಅಲ್ಪಕಾಲ ಮತ್ತು ದೀರ್ಘಕಾಲೀನ ದೃಷ್ಟಿಕೋನಗಳು, ಆಡಳಿತ ಕ್ರಮಗಳು, ಬೋಧಕೇತರ ಸಿಬ್ಬಂದಿಗಳಿಗೆ ತರಬೇತಿ ಕಾರ್ಯಕ್ರಮಗಳು:

- ವಿಶ್ವವಿದ್ಯಾನಿಲಯವು ವಿಶ್ವಮಟ್ಟದಲ್ಲಿ ಬೌದ್ಧಿಕ ಔನ್ನತ್ಯ ಹೊಂದಿದ ಹೆಸರಾಂತ ಸಂಸ್ಥೆಗಳೊಂದಿಗೆ ಸ್ಪರ್ಧಿಸಲು ಬೇಕಾದ ಸಾಮರ್ಥ್ಯವನ್ನು ಗುರುತಿಸಿಕೊಳ್ಳುವುದು.
- ಬೋಧನೆ ಮತ್ತು ಕಲಿಕಾ ವಿಧಾನದಲ್ಲಿ ಗುಣಮಟ್ಟವನ್ನು ಕಾಪಾಡುವುದು.
- ಆರ್ಥಿಕವಾಗಿ ಹಿಂದುಳಿದ ಪಜಾ/ಪಪಂ/ಒಬಿಸಿ ಸಮುದಾಯಗಳ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣದಲ್ಲಿ ಹೆಚ್ಚಿನ ಅವಕಾಶ ನೀಡುವುದು.
- ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ದಾಖಲಾತಿ ಅನುಪಾತವನ್ನು ಹೆಚ್ಚಿಸುವುದು.
- ವಿಶ್ವವಿದ್ಯಾನಿಲಯದ ಸಂಶೋಧನಾ ವಿದ್ಯಾರ್ಥಿಗಳ ಸಾಮರ್ಥ್ಯವನ್ನು ಹೆಚ್ಚಿಸಲು ತಂತ್ರಜ್ಞಾನ ಆಧಾರಿತ ಕೌಶಲ್ಯಗಳನ್ನು ಪರಿಚಯಿಸುವುದು.
- ಮೌಲ್ಯಾಧಾರಿತ ಶಿಕ್ಷಣದ ಮೂಲಕ ವಿದ್ಯಾರ್ಥಿಗಳನ್ನು ಉತ್ತಮ ಉದ್ಯೋಗಿಯಾಗಿ ಮಾಡುವುದು.
- ದಾಖಲಾತಿಯನ್ನು ಹೆಚ್ಚಿಸಲು ಈಗಿರುವ ಶೈಕ್ಷಣಿಕ, ಭೌತಿಕ ಮತ್ತು ಸಂಶೋಧನಾ ಮೂಲಸೌಕರ್ಯಗಳನ್ನು ಹೆಚ್ಚಿಸುವುದು.
- ವಿಶ್ವವಿದ್ಯಾನಿಲಯ ಸಂದರ್ಶನ ಕಾರ್ಯಕ್ರಮವನ್ನು ಉತ್ತೇಜಿಸುವ ಮೂಲಕ ಆದಾಯ ಗಳಿಸುವುದು.

ಸಿ. ಆಡಳಿತಾತ್ಮಕ ಮತ್ತು ಶೈಕ್ಷಣಿಕ ಸುಧಾರಣೆಗಳನ್ನು ನ್ಯಾಕ್ ಪೀರ್ ತಂಡದ ಶಿಫಾರಸ್ಸುಗಳು ಮತ್ತು ಆಡಳಿತಾತ್ಮಕ ಮತ್ತು ಶೈಕ್ಷಣಿಕಾತ್ಮಕ ಲೆಕ್ಕ ಪರಿಶೋಧನಾ ಸಮಿತಿಯು ನೀಡಿದ ವರದಿಗಳ ಆಧಾರದ ಮೇಲೆ ಕೊಡಲಾಗಿದೆ (ಶಿಫಾರಸುಗಳು/ವರದಿಗಳನ್ನು ನೀಡಲಾಗಿದೆ.):

ನ್ಯಾಕ್ ಸಮಿತಿಯ ವರದಿ ಮತ್ತು ಎಎಎ ವರದಿ:

- ಶೈಕ್ಷಣಿಕ ಸ್ವಾಯತ್ತತೆಯನ್ನು ಒದಗಿಸುವ ಸಲುವಾಗಿ ಪ್ರಯತ್ನಗಳು ನಡೆಯುತ್ತಿವೆ ಮತ್ತು ಅಧ್ಯಾಪಕ ಸದಸ್ಯರನ್ನು ಸಮ್ಮೇಳನ ಸಂಘಟನೆ, ಭಾಗವಹಿಸುವಿಕೆ ಮತ್ತು ರಾಷ್ಟ್ರೀಯ ಪ್ರಾಮುಖ್ಯತೆಯ ಆರ್&ಡಿ ಯೋಜನೆಗಳನ್ನು ಕಾರ್ಯಗತಗೊಳಿಸಲು ಶೈಕ್ಷಣಿಕ ಚಟುವಟಿಕೆಗಳಲ್ಲಿ ಸಕ್ರೀಯವಾಗಿ ಭಾಗವಹಿಸಲು ಪ್ರೋತ್ಸಾಹಿಸಲಾಗುತ್ತದೆ.
- ತೀವ್ರ ಕೊರತೆ ಇರುವಲ್ಲಿ ಅರ್ಹ ಅಧ್ಯಾಪಕರನ್ನು ನೇಮಿಸಲು ವಿಶ್ವವಿದ್ಯಾಲಯವು ತ್ವರಿತ ಪ್ರಯತ್ನಗಳನ್ನು ಮಾಡುತ್ತಿದೆ. ಕೈಗಾರಿಕೆ/ವಿದೇಶಗಳಲ್ಲಿ/ರಾಷ್ಟ್ರೀಯ ಪ್ರಾಮುಖ್ಯತೆಯ ಸಂಸ್ಥೆಗಳಲ್ಲಿ ಕೆಲಸ ಮಾಡುವ ಪ್ರಖ್ಯಾತ ವಿದ್ವಾಂಸರಿಗೆ ಸಹಾಯಕ ಪ್ರಾಧ್ಯಾಪಕರಾಗಿ ಕೆಲಸ ಮಾಡಲು ಆಹ್ವಾನವನ್ನು ನೀಡಲಾಗುತ್ತದೆ ಮತ್ತು ಆ ಮೂಲಕ ವಿದ್ಯಾರ್ಥಿ ಸಮುದಾಯದ ಶೈಕ್ಷಣಿಕ ಬೆಳವಣಿಗೆಗೆ ಅನುಕೂಲಕರ ವಾತಾವರಣವನ್ನು ಸೃಷ್ಟಿಸುತ್ತದೆ.
- ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳಿಗೆ ಐಟಿ ಸಂಬಂಧಿತ ಪರಿಕಲ್ಪನೆಗಳ ಬಗ್ಗೆ ತರಬೇತಿ ನೀಡಲಾಯಿತು. ಇದರಿಂದ ವಿಶ್ವವಿದ್ಯಾನಿಲಯದ ಆಡಳಿತದಲ್ಲಿ ಇ–ಆಡಳಿತವನ್ನು ಅಳವಡಿಸಿಕೊಳ್ಳುವುದು ಉಪಯುಕ್ತವಾಗಿದೆ.
- ವಸ್ತುಗಳ ಹೆಚ್ಚುವರಿ ಉತ್ಪಾದನೆಯನ್ನು ಕಡಿಮೆ ಮಾಡಲು ಪ್ರಯತ್ನಿಸಲಾಗುತ್ತಿದೆ.
- ಕೇಂದ್ರ ಸೌಲಭ್ಯಗಳಲ್ಲಿ ಲಭ್ಯವಿರುವ ಸಲಕರಣೆಗಳ ಬಳಕೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ಸಂಶೋಧನಾ ನೀತಿಯನ್ನು ಅಭಿವೃದ್ಧಿಪಡಿಸಲಾಗಿದೆ.
- ಆಡಳಿತದಲ್ಲಿ ಇ–ಆಡಳಿತವನ್ನು ಅಳವಡಿಸಿಕೊಳ್ಳುವುದು ಶೀಘ್ರವಾಗಿ ನಡೆಯುತ್ತಿದೆ.
- ಕಾರ್ಯಕ್ರಮಗಳನ್ನು ಆಯೋಜಿಸಲು ಮತ್ತು ಸಂಶೋಧನಾ ಕಾರ್ಯಗಳನ್ನು ನಿರ್ವಹಿಸಲು ವಿಶ್ವವಿದ್ಯಾನಿಲಯದಿಂದ ಹಣಕಾಸಿನ ನೆರವು ನೀಡುವ ಮೂಲಕ ಪೀಠಗಳನ್ನು ಸಕ್ರೀಯಗೊಳಿಸಲಾಗುತ್ತದೆ.

- ಹಸಿರು ಲೆಕ್ಕ ಪರಿಶೋಧನೆಗೆ ಪ್ರಯತ್ನಗಳು ನಡೆಯುತ್ತಿವೆ ಮತ್ತು ವಿಶ್ವವಿದ್ಯಾನಿಲಯವು 2018–19ರ ಅವಧಿಯಲ್ಲಿ ಅಖಿಲ ಭಾರತ ಮಟ್ಟದಲ್ಲಿ 3ನೇ ಸ್ಥಾನವನ್ನು ಮತ್ತು 2019–20ರ ಅವಧಿಯಲ್ಲಿ 2ನೇ ಸ್ಥಾನವನ್ನು ಪಡೆದಿದೆ.
- ಐಬಿಎಂ, ಬೆಂಗಳೂರಿನ ಬೆಂಬಲದೊಂದಿಗೆ ಇನ್‌ಕ್ಯುಬೇಶನ್ ಕೇಂದ್ರವನ್ನು ಸ್ಥಾಪಿಸಲಾಗಿದೆ ಮತ್ತು ಇತ್ತೀಚಿನ ಕ್ಷೇತ್ರಗಳಾದ ಇಂಟರ್ನೆಟ್ ಆಫ್ ಥಿಂಗ್ಸ್, ಆರ್ಟಿಫಿಶಿಯಲ್ ಇಂಟೆಲಿಜೆನ್ಸ್, ಮೆಷಿನ್ ಲರ್ನಿಂಗ್, ಬಿಸಿನೆಸ್ ಇಂಟೆಲಿಜೆನ್ಸ್ ಮುಂತಾದವುಗಳಲ್ಲಿ ಜ್ಞಾನವನ್ನು ಒದಗಿಸುವ ಪ್ರಯತ್ನಗಳು ನಡೆಯುತ್ತಿವೆ.

ಡಿ. ವಿಶ್ವವಿದ್ಯಾನಿಲಯದ ಪರಿಸರದಲ್ಲಿರುವ ಕೋರ್ಸ್‌ಗಳೊಂದಿಗೆ ವಿಶ್ವವಿದ್ಯಾನಿಲಯದ ಹೊರಗಿರುವ ಸ್ನಾತಕೋತ್ತರ ಅಧ್ಯಯನ ಕೇಂದ್ರಗಳನ್ನು ಅಭಿವೃದ್ಧಿಪಡಿಸುವ ಕುರಿತು ಕೈಗೊಂಡ ಆಡಳಿತಾತ್ಮಕ ಕ್ರಮಗಳು

- ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲೂಕಿನ ಚಿಕ್ಕ ಅಳುವಾರದಲ್ಲಿ ಜ್ಞಾನ ಕಾವೇರಿ ಸ್ನಾತಕೋತ್ತರ ಅಧ್ಯಯನ ಕೇಂದ್ರವನ್ನು ಪ್ರಾರಂಭಿಸಲಾಗಿದ್ದು ಮಂಗಳೂರು ವಿಶ್ವವಿದ್ಯಾನಿಲಯದೊಂದಿಗೆ ಸಂವಹನ ನಡೆಸಲು ಅಲ್ಲಿಗೆ ಒಬ್ಬರು ನಿರ್ದೇಶಕರನ್ನು ನೇಮಿಸಲಾಗಿದೆ.
- 2014ರ ಜನವರಿಯಲ್ಲಿ ಎಂ.ಎಸ್ಸಿ ಜೈವಿಕ ರಸಾಯನಶಾಸ್ತ್ರ ಮತ್ತು ಎಂ.ಎಸ್ಸಿ ಸೂಕ್ಷ್ಮಜೀವಶಾಸ್ತ್ರವನ್ನು ಮಡಿಕೇರಿಯ ಎಫ್ ಎಂ ಕೆ ಎಂ ಕಾರ್ಯಪ್ಪ ಕಾಲೇಜಿನಿಂದ ಚಿಕ್ಕ ಅಳುವಾರಕ್ಕೆ ಸ್ಥಳಾಂತರಿಸಲಾಗಿದೆ.
- ಅಗಸ್ಟ್ 2014ರಲ್ಲಿ ಎಂ. ಕಾಂ. ಮತ್ತು ಎಂಎಸ್‌ಡಬ್ಲ್ಯೂ ಕೋರ್ಸ್‌ಗಳನ್ನು ಅನುಕ್ರಮವಾಗಿ 30 ಮತ್ತು 12 ವಿದ್ಯಾರ್ಥಿಗಳೊಂದಿಗೆ ಆರಂಭಿಸಲಾಯಿತು.
- ಅಗಸ್ಟ್ 2015ರಲ್ಲಿ ಕನ್ನಡ, ಇತಿಹಾಸ ಮತ್ತು ರಾಜ್ಯಶಾಸ್ತ್ರಗಳಲ್ಲಿ ಸ್ನಾತಕೋತ್ತರ ಪದವಿಗಳನ್ನು ಆರಂಭಿಸಲಾಯಿತು.
- ಅಗಸ್ಟ್ 2017ರಲ್ಲಿ ಸಸ್ಯಶಾಸ್ತ್ರ, ರಸಾಯನಶಾಸ್ತ್ರ ಮತ್ತು ಗಣಕವಿಜ್ಞಾನ ವಿಭಾಗಗಳಲ್ಲಿ ಅನುಕ್ರಮವಾಗಿ 07, 16 ಮತ್ತು 05 ವಿದ್ಯಾರ್ಥಿಗಳೊಡನೆ ಸ್ನಾತಕೋತ್ತರ ಪದವಿಯನ್ನು ಆರಂಭಿಸಲಾಯಿತು.
- ಪರಿಸರ ವಿಜ್ಞಾನ ಮತ್ತು ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗಗಳು ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದವು.
- ಒಟ್ಟು 12 ಸ್ನಾತಕೋತ್ತರ ಪದವಿಗಳು ಪ್ರಸ್ತುತ ಇಲ್ಲಿವೆ.
- ಇಲ್ಲಿಯ ಚಟುವಟಿಕೆಗಳನ್ನು ವೀಕ್ಷಿಸಲು ಮತ್ತು ಅಭಿವೃದ್ಧಿಯ ಕುರಿತಾಗಿ ಸಲಹೆ ನೀಡಲು ವೀಡಿಯೋ ಕಾನ್ಫರೆನ್ಸ್ ವ್ಯವಸ್ಥೆಯೂ ಇಲ್ಲಿದೆ.
- ಸಿಂಡಿಕೇಟ್ ಸಮಿತಿಯ ಸಭೆಗಳು ಕಾಲಕಾಲಕ್ಕೆ ಸರಿಯಾಗಿ ಜ್ಞಾನ ಕಾವೇರಿ ಪರಿಸರದಲ್ಲಿ ನಡೆಯುತ್ತವೆ.

ಇ. ಸಾಮಾಜಿಕ ಪ್ರಚಲಿತ ವಿಷಯಗಳ ಕುರಿತು ಫಲಪ್ರದವಾದ ಸಂಶೋಧನಾ (ಪಿಹೆಚ್.ಡಿ. ಸಂಶೋಧನಾ ವಿಷಯ, ಸರ್ಕಾರೇತರ ಸಂಸ್ಥೆಗಳಿಂದ ಧನಸಹಾಯ ಪಡೆದು ನಿರ್ವಹಿಸುವ ಸಂಶೋಧನಾ ಯೋಜನೆಗಳು, ಸಂಶೋಧನಾ ಲೇಖನಗಳ ಪ್ರಕಟಣೆ, ಅಂತರ್‌ಶಿಸ್ತೀಯ ಸಂಶೋಧನೆ ಮತ್ತು ವಿಸ್ತರಣೆ) ಚಟುವಟಿಕೆಗಳು:

ವಿವಿಧ ಬೋಧಕ ವರ್ಗದವರ ಮೂಲಕ ನಮ್ಮ ವಿಶ್ವವಿದ್ಯಾನಿಲಯವು ಮಂಗಳೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಸಾಮಾಜಿಕವಾಗಿ ಪ್ರಸ್ತುತವಾದ ಈ ಕೆಳಗಿನ ಸಂಶೋಧನಾ ಕ್ಷೇತ್ರಗಳ ಮೇಲೆ ಗಮನವನ್ನು ಕೇಂದ್ರೀಕರಿಸಿದೆ ಮತ್ತು ಅಂತರ್‌ಶಿಸ್ತೀಯ ಸಂಶೋಧನಾ ಕಾರ್ಯಗಳನ್ನು ಉತ್ತೇಜಿಸುತ್ತದೆ. ಈ ಪ್ರದೇಶದ ಹಿತದೃಷ್ಟಿಯಿಂದ ಭೌಗೋಳಿಕ ಮತ್ತು ಸಾಮಾಜಿಕ ಅಗತ್ಯಗಳನ್ನು ನಿರ್ದಿಷ್ಟವಾಗಿ ಪರಿಗಣಿಸಿ ಮತ್ತು ರಾಜ್ಯ ಹಾಗೂ ರಾಷ್ಟ್ರವನ್ನು ವಿಶಾಲವಾಗಿ ದೃಷ್ಟಿಯಲ್ಲಿಟ್ಟುಕೊಂಡು ಕೆಳಗೆ ತಿಳಿಸಲಾದ ಗಡಿನಾಡು ಪ್ರದೇಶಗಳ ಬಗ್ಗೆ ಅಂತಾರಾಷ್ಟ್ರೀಯ ಗುಣಮಟ್ಟದ ಸಂಶೋಧನೆಗಳನ್ನು ನಡೆಸಲು ಸಂಶೋಧನಾ ಕಾರ್ಯಗಳನ್ನು ರೂಪಿಸಲಾಗಿದೆ. ಕೆಳಗಿನ ವಿಷಯಗಳು ಸಂಶೋಧನಾ ಕ್ಷೇತ್ರದ ಪ್ರಮುಖ ವಿಷಯಗಳನ್ನು ಒಳಗೊಂಡಿವೆ.

ಅವುಗಳೆಂದರೆ –

- ಅಭಿವೃದ್ಧಿ ಹೊಂದುತ್ತಿರುವ ಸಾಗರ ಆರ್ಥಿಕತೆ ಮತ್ತು ಪರಿಸರ ವ್ಯವಸ್ಥೆ: ವಿಶ್ವವಿದ್ಯಾನಿಲಯವು ನೆಲೆಗೊಂಡಿರುವ ಕರಾವಳಿ ಪ್ರದೇಶವು ರಾಜ್ಯದ ಏಕೈಕ ಪ್ರಮುಖ ಬಂದರಿಗೆ ಸಮೀಪವಾಗಿದ್ದು, ಅಭಿವೃದ್ಧಿ ಹೊಂದುತ್ತಿರುವ ಸಮುದ್ರ ಆರ್ಥಿಕತೆಯನ್ನು ಹೊಂದಿದೆ. ಸಮುದ್ರ ಸಂಪನ್ಮೂಲಗಳು ಪ್ರದೇಶದ ಆದಾಯ ಮತ್ತು ಉದ್ಯೋಗದ ನೆಲೆಯ ಪ್ರಮುಖ ಭಾಗವಾಗಿದೆ. ಈ ಪ್ರದೇಶದಲ್ಲಿ ಸಮುದ್ರದದ ಮಹತ್ವವನ್ನು ಪರಿಗಣಿಸಿ ಮಂಗಳೂರು ವಿಶ್ವವಿದ್ಯಾನಿಲಯವು ಬಹಳ ಹಿಂದೆಯೇ ಸಮುದ್ರ ಭೂವಿಜ್ಞಾನ ವಿಭಾಗವನ್ನು

ಸ್ಥಾಪಿಸಿದೆ. ಈಗ ಭೂಗೋಳಶಾಸ್ತ್ರ ಮತ್ತು ಭೂ ಮಾಹಿತಿಶಾಸ್ತ್ರ ವಿಭಾಗಗಳನ್ನು ಸೇರಿಸಿದೆ. ಕರಾವಳಿ ನಿಯಂತ್ರಣ ಕಾಯ್ದೆ, ಕರಾವಳಿ ಸವೆತ ಮತ್ತು ಅದರ ಪರಿಣಾಮ, ಸಮುದ್ರ ಮತ್ತು ಕರಾವಳಿಯಲ್ಲಿನ ಮಾಲಿನ್ಯ, ಗುಣಮಟ್ಟ ಮತ್ತು ಸಮುದ್ರಕ್ಕೆ ನೀರಿನ ಹರಿವಿನ ಸಂಬಂಧಿತ ಸಮಸ್ಯೆಗಳು ವಿಶ್ವವಿದ್ಯಾನಿಲಯದ ಸಂಶೋಧನೆಯ ಕೆಲವು ಕ್ಷೇತ್ರಗಳಾಗಿವೆ. ಅದು ಈಗ ಜಾಗತಿಕ ಜ್ಞಾನ ಸಂಪರ್ಕಗಳಿಗೆ ಆಧಾರವಾಗಿದೆ.

- ಹಿಂದೂ ಮಹಾಸಾಗರ ಅಧ್ಯಯನಗಳು: ಮಂಗಳೂರು ವಿಶ್ವವಿದ್ಯಾನಿಲಯವು ಭಾರತದ ದಕ್ಷಿಣದ ತುದಿಯಲ್ಲಿರುವುದರಿಂದ ಹಿಂದೂ ಮಹಾಸಾಗರದ ಅಧ್ಯಯನವನ್ನು ನಡೆಸಲು ಸಹಕಾರಿಯಾಗಿದೆ. ಹಿಂದೂ ಮಹಾಸಾಗರದ ವಾಣಿಜ್ಯ ಮತ್ತು ಸುರಕ್ಷತೆಯ ಮಹತ್ವದಿಂದಾಗಿ ಹಾಗೂ ವಿದೇಶೀ ಶಕ್ತಿಗಳ ಹಿನ್ನಲೆಯಲ್ಲಿ ಇದರ ಅಧ್ಯಯನವು ಮಹತ್ವವನ್ನು ಪಡೆದುಕೊಂಡಿದೆ. ಹೆಚ್ಚಿದ ಕಡಲ್ಗಳ್ಳತನ, ದೊಡ್ಡ ಸರಕು ಮತ್ತು ತೈಲ ಚಲನೆಗಳು, ಮಾಲಿನ್ಯ ಸಂಬಂಧಿತ ಸಮಸ್ಯೆಗಳು, ಹಿಂದೂ ಮಹಾಸಾಗರದ ಸುತ್ತಲಿನ ದೇಶಗಳಲ್ಲಿ ಸಹಕಾರಿ ರಚನೆಗಳು, ಭಾರತ ಸರಕಾರದ ಸಾಗರ್ ಕವಚ ಉಪಕ್ರಮಗಳು, ಭಾರತೀಯ ಸಾಗರದ ದ್ವೀಪ ಪ್ರದೇಶಗಳಲ್ಲಿ ಅಸ್ಥಿರತೆ ಮತ್ತು ಪ್ರಕ್ಷುಬ್ಧತೆ, ವಿದೇಶೀ ಮಿಲಿಟರಿ ನೆಲೆಗಳು ಈ ಸಾಗರಕ್ಕೆ ಮಹತ್ವವನ್ನೊದಗಿಸಿ ಜಾಗತಿಕವಾಗಿಯೂ ಗಮನವನ್ನು ಸೆಳೆದಿದೆ. ಕರಾವಳಿಯ ಭದ್ರತೆಗೆ ಹೆಚ್ಚಿನ ಒತ್ತನ್ನು ನೀಡಿ ಹಿಂದೂ ಮಹಾಸಾಗರದ ಕುರಿತು ಇಂತಹ ಜಾಗತಿಕ ಅಧ್ಯಯನಗಳಿಗೆ ಕೇಂದ್ರವಾಗುವ ಉದ್ದೇಶವನ್ನು ಮಂಗಳೂರು ವಿಶ್ವವಿದ್ಯಾನಿಲಯವು ಹೊಂದಿದೆ.
- ಸ್ಥಳಿಯ ಸಂಸ್ಕೃತಿ, ಜಾನಪದ ಮತ್ತು ಅಭಿವ್ಯಕ್ತಿಶೀಲ ರೂಪಗಳು : ಈ ಪ್ರದೇಶವು ಅನೇಕ ಧರ್ಮಗಳ ನಡುವೆ ಸಾಮರಸ್ಯವನ್ನು ಹೊಂದಿದೆ. ಜನರು ಬೇರೆ ಬೇರೆ ಭಾಷೆಗಳನ್ನು ಮಾತನಾಡುತ್ತಾರೆ. ಅದರಲ್ಲೂ ಪ್ರಮುಖವಾಗಿ ಕನ್ನಡ ಮತ್ತು ಅದರ ಇತರ ಉಪಭಾಷೆಗಳಾದ (ಅರೆಗನ್ನಡ, ಕುಂದಾಪುರ ಕನ್ನಡ ಇತ್ಯಾದಿ), ಜೊತೆಗೆ ತುಳು, ಕೊಂಕಣಿ, ಬ್ಯಾರಿ ಭಾಷೆಗಳನ್ನು ಮಾತನಾಡುತ್ತಾರೆ. ತುಳು ಬಹುಸಂಖ್ಯಾತರು ಮಾತನಾಡುವ ಮತ್ತು ಅರ್ಥಮಾಡಿಕೊಳ್ಳುವ ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿರುವ ಅತ್ಯಂತ ಹಳೆಯ ದ್ರಾವಿಡ ಭಾಷೆಯಾಗಿದೆ. ಸ್ಥಳೀಯ ಸಂಸ್ಕೃತಿ ಮತ್ತು ಜಾನಪದ ಅಭಿವ್ಯಕ್ತಿ ರೂಪಗಳಾದ ಯಕ್ಷಗಾನ, ಕಂಬಳ, ನಾಗಾರಾಧನೆ, ಭೂತಾರಾಧನೆ, ಪಾಡ್ದನ ಇತ್ಯಾದಿಗಳು ಈ ಪ್ರದೇಶಕ್ಕೆ ವೈಶಿಷ್ಟ್ಯತೆಯನ್ನು ಒದಗಿಸುವುದರೊಂದಿಗೆ ವಿಶ್ವವಿದ್ಯಾನಿಲಯವನ್ನು ಈ ಅಪೂರ್ವ ಸಂಸ್ಕೃತಿಗಳ ಅಧ್ಯಯನ ಕೇಂದ್ರವನ್ನಾಗಿಸಿದೆ. ಈ ವೈಶಿಷ್ಟ್ಯಗಳ ಬಗ್ಗೆ ಅರಿವನ್ನು ಹೊಂದಿರುವ ವಿಶ್ವವಿದ್ಯಾನಿಲಯವು ಕನ್ನಡ, ಸಮಾಜಶಾಸ್ತ್ರ, ಇತಿಹಾಸ ವಿಭಾಗಗಳಲ್ಲದೆ ಸ್ಥಳೀಯ ಸಂಸ್ಕೃತಿಯ ಬಗೆಗಿನ ಸಂಶೋಧನೆಯನ್ನು ಉತ್ತೇಜಿಸಲು ಯಕ್ಷಗಾನ ಸಂಶೋಧನಾ ಕೇಂದ್ರ, ರತ್ನಾಕರವರ್ಣಿ ಜೈನ ಅಧ್ಯಯನ ಕೇಂದ್ರ, ತುಳು ಅಧ್ಯಯನ ಪೀಠ, ಶಿವರಾಮ ಕಾರಂತ ಅಧ್ಯಯನ ಪೀಠಗಳನ್ನು ಸ್ಥಾಪಿಸುವ ಮೂಲಕ ವಿದೇಶೀ ಸಂಸ್ಥೆಗಳನ್ನು ಆಕರ್ಷಿಸುತ್ತಿದೆ. ಜಪಾನ್, ಜರ್ಮನಿ, ಫಿನ್ಲೆಂಡ್ ಮುಂತಾದ ಅನೇಕ ದೇಶಗಳಿಂದ ಆಗಮಿಸಿದ ಅನೇಕ ಸಂಶೋಧಕರು ಮಂಗಳೂರು ವಿಶ್ವವಿದ್ಯಾನಿಲಯದ ಸಹಯೋಗದೊಂದಿಗೆ ಸ್ಥಳಿಯ ಸಂಸ್ಕೃತಿಗಳ ಬಗ್ಗೆ ಸಾಕಷ್ಟು ಸಂಶೋಧನಾ ಕಾರ್ಯಗಳನ್ನು ಮಾಡಿದ್ದಾರೆ. ಸಿರಿ ಮಹಾಕಾವ್ಯ ಸಂಗ್ರಹವು ಮೌಖಿಕ ಸಂಪ್ರದಾಯದ ಸಂಗ್ರಹ ಹಾಗೂ ಅಧ್ಯಯನವಾಗಿದೆ. ಉದಾಹರಣೆಗೆ ಮಂಗಳೂರು ವಿಶ್ವವಿದ್ಯಾನಿಲಯ ಮತ್ತು ಫಿನ್ಲೆಂಡಿನ ತುರ್ಕು ವಿಶ್ವವಿದ್ಯಾನಿಲಯಗಳ ಸಹಯೋಗದೊಂದಿಗೆ ಇಂತಹ ಕೆಲಸಗಳು ನಡೆದಿವೆ.
- ಸಮುದಾಯ ಆಧಾರಿತ ಸಂಸ್ಥೆಗಳು ಮತ್ತು ಖಾಸಗಿ ತೊಡಗುವಿಕೆಗಳು : ಈ ಪ್ರದೇಶವು ಖಾಸಗಿ ತೊಡಗಿಕೊಳ್ಳುವಿಕೆಗೆ ಹೆಸರುವಾಸಿಯಾಗಿದೆ (ಸರಕಾರದ ಮೇಲೆ ಅವಲಂಬನೆ ಕಡಿಮೆ); ಅಂದರೆ ಧರ್ಮ, ಸಮುದಾಯ ಮತ್ತು ವೃತ್ತಿಯನ್ನು ಆಧರಿಸಿದ ಅನೇಕ ಸಮುದಾಯ, ಸಂಸ್ಥೆಗಳು ಸಾಮಾಜಿಕ ಸೇವೆಗಳನ್ನು ನೀಡುತ್ತಿವೆ. ಆಸಕ್ತಿದಾಯಕ ವಿಷಯವೆಂದರೆ ಈ ಸಮುದಾಯಗಳಾಚೆ ಇವೆಲ್ಲವೂ ಈ ಪ್ರದೇಶವನ್ನು ಭಿನ್ನವಾಗಿಸಿವೆ. ಈ ಸಂಸ್ಥೆಗಳು ರಾಜಕೀಯ ಎಚ್ಚರ, ಸಾಕ್ಷರತಾ ಪ್ರಮಾಣ ಹೆಚ್ಚಳ, ಆರೋಗ್ಯ ಸೌಲಭ್ಯ ವೃದ್ಧಿ, ಬ್ಯಾಂಕಿಂಗ್ ವ್ಯಾಪ್ತಿಯ ವಿಸ್ತರಣೆಯ ಮೂಲಕ ಆರ್ಥಿಕವಾಗಿ ಸದೃಢಗೊಳ್ಳಲು ಸಹಕಾರಿಯಾಗಿವೆ. ಸಾಮುದಾಯಿಕ ಸಂಘಟನೆಯು ಈ ಪ್ರದೇಶದ ವೈಶಿಷ್ಟ್ಯವಾಗಿದ್ದು, ಜಾಗತಿಕ ಅಧ್ಯಯನಕ್ಕೆ ಹೊಸ ಸಾಧ್ಯತೆಗಳನ್ನು ಒದಗಿಸಿದೆ.
- ಗ್ರಾಮೀಣಾಭಿವೃದ್ಧಿ: ಖಾಸಗಿ ತೊಡಗಿಕೊಳ್ಳುವಿಕೆಗಳು ಹಾಗೂ ಅವುಗಳ ಯಶಸ್ಸಿನ ಗುರುತುಗಳು ಉದಾಹರಣೆಗೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ (ಎಸ್‌ಕೆಡಿಆರ್‌ಡಿಪಿ) ಮತ್ತು ಸಿರಿ ಗ್ರಾಮೋದ್ಯೋಗ ಯೋಜನೆಗಳು ಗ್ರಾಮೀಣ ಪ್ರದೇಶದ ರೂಪುರೇಷೆಯನ್ನೇ ಬದಲಾಯಿಸಿವೆ. ಗ್ರಾಮೀಣ ಪ್ರದೇಶಗಳಲ್ಲಿ ಯಶಸ್ವಿಯಾಗಿರುವ ಒಟ್ಟು ನೈರ್ಮಲ್ಯ ಯೋಜನೆಗಳು (ಟಿಎಸ್‌ಸಿ), ಗುಣಮಟ್ಟದ ಶಾಲೆಗಳು, ಉತ್ತಮ ಆರೋಗ್ಯ ಸೇವೆಗಳು, ಉತ್ತಮ ಬ್ಯಾಂಕಿಂಗ್ ವ್ಯವಸ್ಥೆ ಮತ್ತು ಸಹಕಾರಿ ಬ್ಯಾಂಕುಗಳು ಈ ಪ್ರದೇಶವನ್ನು ವಿಭಿನ್ನವಾಗಿಸಿವೆ. ಇವುಗಳಲ್ಲಿ ಹೆಚ್ಚಿನವು ಸ್ಥಳೀಯ ತೊಡಗಿಕೊಳ್ಳುವಿಕೆಗಳು ಹಾಗೂ ಸಮುದಾಯ ಬೆಂಬಲಿತ ಚಟುವಟಿಕೆಗಳ ಫಲಿತಾಂಶಗಳು.

- ಸಮುದಾಯ ಅಧ್ಯಯನಗಳು ಮತ್ತು ಜನಾಂಗೀಯತೆ: ಈ ಪ್ರದೇಶವು ತನ್ನದೇ ಆದ ಸಾಂಸ್ಕೃತಿಕ ಆಚರಣೆಗಳೊಂದಿಗೆ ವಿಭಿನ್ನ ಬುಡಕಟ್ಟು ಹಾಗೂ ಸಮುದಾಯಗಳನ್ನು ಹೊಂದಿದ್ದು, ಅವುಗಳ ಅಧ್ಯಯನದ ಮೂಲಕ ಸಂಶೋಧನೆಗೆ ಹೆಚ್ಚಿನ ಅವಕಾಶಗಳುಳ್ಳ ಪ್ರದೇಶವಾಗಿದೆ. ಉದಾಹರಣೆಗೆ ಕೊಡವ ಸಮುದಾಯದವರು ಅವರದೇ ಆದ ವಿಭಿನ್ನ ಕ್ರೀಡೆಗಳನ್ನು ಹೊಂದಿದ್ದು, ಅವುಗಳು ವಿಭಿನ್ನವಾಗಿವೆ. ಅನೇಕ ಸಮುದಾಯಗಳ ವಿಶಿಷ್ಟ ಆರಾಧನಾ ಪದ್ಧತಿಗಳು ಮತ್ತು ಅಭ್ಯಾಸಗಳು ವಿದ್ವಾಂಸರ ಗಮನವನ್ನು ಸೆಳೆಯುತ್ತಿದೆ. ಸಮುದಾಯ ಅಧ್ಯಯನಗಳು ಜಾಗತಿಕ ಸಂಶೋಧನೆಗೆ ಹೆಚ್ಚಿನ ಅವಕಾಶವನ್ನು ನೀಡುತ್ತಿದೆ.
- ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿನ ಸಂಶೋಧನೆಗಳು ಈ ಪ್ರದೇಶದ ಭೌಗೋಳಿಕ ಕಾಳಜಿಗಳು, ಸಾಮಾಜಿಕ ಅಗತ್ಯಗಳು ಮತ್ತು ಇತರ ಪ್ರಮುಖ ವಿಚಾರಗಳನ್ನು ಗಮನದಲ್ಲಿರಿಸಿಕೊಳ್ಳುತ್ತವೆ. ಈ ವಿಶ್ವವಿದ್ಯಾನಿಲಯವು ಕರ್ನಾಟಕದ ಕರಾವಳಿ ಪ್ರದೇಶದಲ್ಲಿದ್ದು, ಪಶ್ಚಿಮ ಘಟ್ಟಗಳಿಗೆ ಸಮೀಪದಲ್ಲಿದೆ. ಪಶ್ಚಿಮ ಘಟ್ಟವು ಅಮೂಲ್ಯ ಔಷಧೀಯ ಸಸ್ಯವರ್ಗವನ್ನು ಹೊಂದಿದೆ. ಕೆಲವು ಉನ್ನತ ಸಂಶೋಧನೆಗಳು ಇವುಗಳ ಗುಣಲಕ್ಷಣ, ಔಷಧ ಅಭಿವೃದ್ಧಿ ಮತ್ತು ಸಸ್ಯೋತ್ಪನ್ನಗಳ ಸುಧಾರಣೆಯ ಬಗ್ಗೆ ಗಮನವನ್ನು ಹರಿಸಿವೆ. ಜೈವಿಕ ಪರಿವೀಕ್ಷಣೆ ಇಂತಹ ಪ್ರಮುಖ ಕ್ಷೇತ್ರಗಳಲ್ಲಿ ಒಂದು. ನ್ಯಾನೋ ತಂತ್ರಜ್ಞಾನ, ಔಷಧ ವಿನ್ಯಾಸ ಮತ್ತು ಅಭಿವೃದ್ಧಿ, ವಿಕಿರಣ ಜೈವಿಕ ಭೌತಶಾಸ್ತ್ರ, ಸೌರಶಕ್ತಿ ಮತ್ತು ಘನ ತ್ಯಾಜ್ಯ ಬಳಕೆಯನ್ನು ಸಂಶೋಧನೆಯ ಪ್ರಮುಖ ಕ್ಷೇತ್ರಗಳನ್ನಾಗಿಸಲಾಗಿದೆ.

ಸಂಶೋಧನೆಯ ಪ್ರಮುಖ ಕ್ಷೇತ್ರಗಳು ಈ ಕೆಳಗಿನಂತಿವೆ:

- ಪಶ್ಚಿಮ ಘಟ್ಟದ ಪರಿಸರ ವ್ಯವಸ್ಥೆ – ಅಳಿವಿನಂಚಿನಲ್ಲಿರುವ ಸಸ್ಯ ಮತ್ತು ಪ್ರಾಣಿಗಳ ವಿಶ್ಲೇಷಣೆ, ಸಂರಕ್ಷಣೆ ಮತ್ತು ರಕ್ಷಣೆ
- ವಿವಿಧ ರೋಗಗಳಿಗೆ ಸಸ್ಯ ಆಧಾರಿತ ಔಷಧಗಳ ಸಂಶೋಧನೆ ಮತ್ತು ಅಭಿವೃದ್ಧಿ
- ಸಾಂಕ್ರಾಮಿಕ ಮಾರಣಾಂತಿಕ ರೋಗಗಳನ್ನು ನಿವಾರಿಸಲು ಔಷಧಗಳ ಸಂಶೋಧನೆ ಮತ್ತು ಅಭಿವೃದ್ಧಿ, ಸೂಕ್ತ ವಿತರಣಾ ವ್ಯವಸ್ಥೆಗಳು ಮತ್ತು ಪರಿಹಾರ ತಂತ್ರಜ್ಞಾನಗಳ ಸಂಶೋಧನೆ
- ನ್ಯಾನೋ ತಂತ್ರಜ್ಞಾನದ ಮೂಲಕ ಸುಧಾರಿತ ವಸ್ತು ಮತ್ತು ಸಾಧನಗಳ ಅಭಿವೃದ್ಧಿ
- ಮಣ್ಣಿನ ನಕ್ಷೆ ಮತ್ತು ತಿಳುವಳಿಕೆಯ ಮೂಲಕ ಕರಾವಳಿ ಕರ್ನಾಟಕ ಪ್ರದೇಶದ ಪಶ್ಚಿಮ ಘಟ್ಟಗಳ ಸಸ್ಯ ವರ್ಗಗಳ ಅಭಿವೃದ್ಧಿ
- ಸಸ್ಯ ವೈವಿಧ್ಯತೆಯ ಕ್ಯಾಟಲಾಗಿಂಗ್, ಮ್ಯಾಪಿಂಗ್ ಮತ್ತು ಬಾರ್ ಕೋಡಿಂಗ್
- ಆಯ್ದ/ಅಳಿವಿನಂಚಿನಲ್ಲಿರುವ ಸಸ್ಯವರ್ಗದ ಡಿಎನ್ಎ ಫಿಂಗರ್ ಪ್ರಿಂಟಿಂಗ್
- ನ್ಯಾನೋ ತಂತ್ರಜ್ಞಾನವನ್ನು ಬಳಸಿಕೊಂಡು ಆರ್ಕಿಡ್ ವರ್ಗವನ್ನು ಸಂರಕ್ಷಿಸುವುದು ಹಾಗೂ ವಾಣಿಜ್ಯೀಕರಣಗೊಳಿಸುವುದು.
- ಕ್ಷಿಪ್ರ ಪ್ರಸರಣಕ್ಕಾಗಿ ಅಂಗಾಂಶ ಕೃಷಿಯ ಮೂಲಕ ವೈರಲ್ ಮುಕ್ತ ಸಸ್ಯಗಳ ಉತ್ಪಾದನೆಯನ್ನು ಹೆಚ್ಚಿಸುವುದು.
- ಸ್ಥಳೀಯ ಮತ್ತು ಅಳಿವಿನಂಚಿನಲ್ಲಿರುವ ಸಸ್ಯ ಪ್ರಭೇದಗಳನ್ನು ಉಳಿಸುವುದು ಹಾಗೂ ಸಂರಕ್ಷಿಸುವುದು.
- ಇತರ ಸಂಸ್ಥೆಗಳೊಂದಿಗೆ ಸಹಯೋಗ ಹೊಂದುವ ಮೂಲಕ ಅಂತರ್‌ಶಿಸ್ತೀಯ ಸಂಶೋಧನೆ ಮತ್ತು ಉದ್ಯಮ ಮತ್ತು ಶೈಕ್ಷಣಿಕ ಸಂವಹನವನ್ನು ಸಾಧಿಸುವುದು.

ಎಫ್. ಉನ್ನತ ಶಿಕ್ಷಣದಲ್ಲಿ ಉತ್ಕೃಷ್ಟತೆಯ ಅಭಿವೃದ್ಧಿ:

- ವಿಶ್ವವಿದ್ಯಾನಿಲಯವು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಮ್ಮೇಳನಗಳನ್ನು ಆಯೋಜಿಸಿತು.
- ಕಳೆದ ವರ್ಷದಲ್ಲಿ ಸಹಯೋಗ ಕಾರ್ಯಕ್ರಮಗಳು ಮತ್ತು ಸಂಶೋಧನೆಗಾಗಿ ಅಂತಾರಾಷ್ಟ್ರೀಯ ಸಂಸ್ಥೆಗಳೊಂದಿಗೆ ಐದು ಎಂಒಯುಗಳಿಗೆ ಸಹಿ ಹಾಕಲಾಗಿದೆ.
- ಯುವ ಸಂಶೋಧಕರು ಮತ್ತು ವಿದ್ಯಾರ್ಥಿಗಳನ್ನು ಪ್ರೇರೇಪಿಸಲು 35ಕ್ಕೂ ಹೆಚ್ಚು ಹಿರಿಯ ಶಿಕ್ಷಣ ತಜ್ಞರು ಮತ್ತು ಹಿರಿಯ ಸಂಶೋಧಕರನ್ನು ವಿವಿಧ ವಿಭಾಗಗಳಲ್ಲಿ ವಿಶೇಷ ಗೌರವ ಪ್ರಾಧ್ಯಾಪಕರನ್ನಾಗಿ ನೇಮಿಸಲಾಗಿದೆ. ವಿಶ್ವವಿದ್ಯಾನಿಲಯವು 'ಮೂಲಕ್ಕೆ ಹಿಂದಿರುಗಿ' (ಬ್ಯಾಕ್ ಟು ರೂಟ್ಸ್) ಸಿದ್ಧಾಂತವನ್ನು ಅಳವಡಿಸಿಕೊಂಡಿದೆ. ವಿದೇಶಗಳಲ್ಲಿ ಪ್ರಸಿದ್ಧ ವಿಶ್ವವಿದ್ಯಾನಿಲಯಗಳಲ್ಲಿ ಕಾರ್ಯ ನಿರ್ವಹಿಸುವ ಉತ್ತಮ ಅಧ್ಯಾಪಕರು ಮತ್ತು ಸಂಶೋಧಕರನ್ನು ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಕರೆತರಲಾಗಿದೆ.

ವಿಶ್ವವಿದ್ಯಾನಿಲಯದ ಸಮಗ್ರ ಅಭಿವೃದ್ಧಿಗಾಗಿ ಕೈಗೊಂಡ ಕ್ರಮಗಳು:

- ಸಿಎಆರ್ಆರ್ಟಿ, ಸಿಎಆರ್ಇಆರ್ನಂತಹ ಸಂಶೋಧನಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ ಮತ್ತು ಮುಂದುವರಿದ ಸಂಶೋಧನೆಗಳನ್ನು ಕೈಗೊಳ್ಳಲು ಪರ್ಸ್ ಪ್ರಯೋಗಾಲಯವನ್ನು ಬಲಪಡಿಸಲಾಗಿದೆ.
- ಉನ್ನತ ಶಿಕ್ಷಣದಲ್ಲಿ ಬದಲಾಗುತ್ತಿರುವ ಪ್ರವೃತ್ತಿಗಳಿಗೆ ಅನುಗುಣವಾಗಿ ವಿಶ್ವವಿದ್ಯಾನಿಲಯವು ಹೊಸ ಪದವಿ ಮತ್ತು ಸ್ನಾತಕೋತ್ತರ ಪದವಿ ಕೋರ್ಸುಗಳನ್ನು ಆರಂಭಿಸಿದೆ. ಮಂಗಳಗಂಗೋತ್ರಿ ಆವರಣದಲ್ಲಿ ಸ್ಥಾಪಿಸಲಾದ ಹೊಸ ಪದವಿ ಕಾಲೇಜು ಬಿಎ, ಬಿಬಿಎ ಮತ್ತು ಬಿ.ಕಾಂ. ಪದವಿಗಳನ್ನು ನೀಡುತ್ತಿದೆ. ನಗರದಲ್ಲಿ ಕೆಲಸದಲ್ಲಿ ತೊಡಗಿರುವ ವರ್ಗದ ಶೈಕ್ಷಣಿಕ ಅವಶ್ಯಕತೆಗಳನ್ನು ಪೂರೈಸಲು ವಿಶ್ವವಿದ್ಯಾನಿಲಯವು ಮಂಗಳೂರಿನ ವಿಶ್ವವಿದ್ಯಾನಿಲಯವು ಸಂಧ್ಯಾ ಕಾಲೇಜನ್ನು ತೆರೆದಿದೆ. ವಿಶ್ವವಿದ್ಯಾನಿಲಯವು ಎಲ್ಎಲ್ಎಂ ಪದವಿಯನ್ನು ಆರಂಭಿಸಲು ಕ್ರಮಗಳನ್ನು ಕೈಗೊಂಡಿದೆ.
- ತಾಂತ್ರಿಕ ಕ್ರಮಗಳು: ವಿಶ್ವವಿದ್ಯಾನಿಲಯದ ಆವರಣದೊಳಗೆ ವೈ–ಫೈ ಸೌಲಭ್ಯವನ್ನು ಅಳವಡಿಸಲಾಗಿದ್ದು, 24 ಗಂಟೆ ಅಂತರ್ಜಾಲ ಸೌಲಭ್ಯ ಲಭ್ಯವಿರುವಂತೆ ನೋಡಿಕೊಳ್ಳಲಾಗಿದೆ. ಎಲ್ಲ ಬೋಧಕೇತರ ಸಿಬ್ಬಂದಿಗಳಿಗೆ ಗಣಕಯಂತ್ರವನ್ನು ಒದಗಿಸುವ ಮೂಲಕ ಕಚೇರಿಗಳನ್ನು ಕಾಗದ ರಹಿತವನ್ನಾಗಿಸಲಾಗಿದೆ. ವಿಶ್ವವಿದ್ಯಾನಿಲಯವು ಕರ್ನಾಟಕ ಸರಕಾರದ ಇ–ಆಡಳಿತ ಕ್ರಮಗಳನ್ನೂ ಅಳವಡಿಸಿಕೊಂಡಿದೆ. ಐಸಿಟಿಯು ಬೋಧನೆ ಮತ್ತು ಕಲಿಕೆಯ ಪ್ರಮುಖ ಭಾಗವಾಗಿದೆ. ಅದರಂತೆ ಎಲ್ಲಾ ತರಗತಿ ಕೊಠಡಿಗಳಿಗೆ ಶ್ರವ್ಯ, ದೃಶ್ಯ ಮತ್ತು ಐಸಿಟಿ ಸೌಲಭ್ಯವನ್ನು ಒದಗಿಸಲು ಕ್ರಮಗಳನ್ನು ಕೈಗೊಳ್ಳಲಾಗಿದೆ. ಎಲ್ಲಾ ಬೋಧಕ ವರ್ಗದವರಿಗೆ ಲ್ಯಾಪ್ಟಾಪ್ ಒದಗಿಸಲಾಗಿದ್ದು, ಆ ಮೂಲಕ ಅವರು ಇ–ಸಂಪನ್ಮೂಲಗಳನ್ನು ಪರಿಣಾಮಕಾರಿ ಬೋಧನೆಗಾಗಿ ಬಳಸಿಕೊಳ್ಳುವಂತೆ ನೋಡಿಕೊಳ್ಳಲಾಗಿದೆ. ಪ.ಜಾ/ಪ.ಪಂ.ದ ಸಂಶೋಧನಾ ವಿದ್ಯಾರ್ಥಿಗಳು ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಅಧ್ಯಯನಕ್ಕಾಗಿ ಗ್ರಂಥಾಲಯದಲ್ಲಿ ಹೆಚ್ಚುವರಿ ಪುಸ್ತಕಗಳನ್ನು ನೀಡುವುದರೊಂದಿಗೆ ಎಸ್ಸಿಪಿ/ಟಿಎಸ್ಪಿ ಅನುದಾನದಡಿಯಲ್ಲಿ ಲ್ಯಾಪ್ಟಾಪ್ಗಳನ್ನು ಒದಗಿಸಲಾಗಿದೆ. ಪುಸ್ತಕಗಳು ಮತ್ತು ಪತ್ರಿಕೆಗಳ ಆನ್ಲೈನ್ ಮಾಹಿತಿಗಾಗಿ ಗ್ರಂಥಾಲಯವು ಸೈಬರ್ ಲ್ಯಾಬ್ ಅನ್ನೂ ಹೊಂದಿದೆ. ರಿಮೋಟ್ ಅಕ್ಸೆಸ್ ಮೂಲಕ ಬಳಕೆದಾರರಿಗೆ ಗ್ರಂಥಾಲಯದಲ್ಲಿನ ಆನ್ಲೈನ್ ಸಂಪನ್ಮೂಲಗಳನ್ನು ಎಲ್ಲಿಂದಲಾದರೂ ಯಾವಾಗ ಬೇಕಾದರೂ ನೋಡಲು ಅವಕಾಶವನ್ನು ಕಲ್ಪಿಸಲಾಗಿದೆ. ಎಲ್ಲಾ ಸಂಶೋಧಕರಿಗೆ ತಮ್ಮ ಲೇಖನಗಳನ್ನು ಮತ್ತು ಮಹಾಪ್ರಬಂಧಗಳನ್ನು ಕೃತಿಚೌರ್ಯ ಪತ್ತೆಯ ಮೂಲಕ ಪರಿಶೀಲಿಸಿ ಗುಣಮಟ್ಟವನ್ನು ಹೆಚ್ಚಿಸಲು ಗ್ರಂಥಾಲಯದಲ್ಲಿ ಕೃತಿಚೌರ್ಯ ಪತ್ತೆ ಸಾಫ್ಟ್ವೇರ್ ಅನ್ನು ಸ್ಥಾಪಿಸಲಾಗಿದೆ. ಇಡೀ ಕ್ಯಾಂಪಸ್ನಲ್ಲಿ ಸಿಸಿಟಿವಿಗಳನ್ನು ಅಳವಡಿಸಲಾಗಿದೆ.
- ಹಸಿರೀಕರಣ ಕಾರ್ಯಕ್ರಮಗಳು: ಎಲ್ಲಾ ವಿಜ್ಞಾನ ಪ್ರಯೋಗಾಲಯಗಳನ್ನು ತುಕ್ಕು ವಿರೋಧಿ ಮತ್ತು ತುಕ್ಕು ನಿರೋಧಕ ವಸ್ತುಗಳನ್ನು ಸಲಕರಣೆಗಳಿಗೆ ಜೋಡಿಸುವ ಮೂಲಕ ಮಾಡ್ಯುಲರ್ ಲ್ಯಾಬ್ಗಳಾಗಿ ಪರಿವರ್ತಿಸಲಾಗಿದೆ. ಕ್ಯಾಂಪಸ್ನಲ್ಲಿನ ತ್ಯಾಜ್ಯವನ್ನು ಬಳಸಿಕೊಳ್ಳಲು ಹಾಗೂ ತ್ಯಾಜ್ಯ ನಿರ್ವಹಣೆಗಾಗಿ ವರ್ಮಿ ಕಾಂಪೋಸ್ಟ್ ಸ್ಥಾವರವನ್ನು ಸ್ಥಾಪಿಸಲಾಗಿದೆ. ಜಿಲ್ಲಾ ಪಂಚಾಯತ್ನ ಸಹಯೋಗದೊಂದಿಗೆ ತ್ಯಾಜ್ಯ ನಿರ್ವಹಣೆಗೆ ಹಳ್ಳಿಗಳಿಗೆ ಸಹಾಯ ಮಾಡಲು ಘನ ತ್ಯಾಜ್ಯ ನಿರ್ವಹಣಾ ಘಟಕವನ್ನು ಸ್ಥಾಪಿಸಲಾಗಿದೆ. ಎಲ್ಲಾ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಪ್ರತೀ ತಿಂಗಳ ಮೂರನೇ ಶನಿವಾರ ಕ್ಯಾಂಪಸ್ ಅನ್ನು ಸ್ವಚ್ಛಗೊಳಿಸುವ ಕಾರ್ಯದಲ್ಲಿ ತೊಡಗಿಸಿಕೊಳ್ಳುವ ಮೂಲಕ ಕ್ಯಾಂಪಸ್ ಅನ್ನು ಶುಚಿಗೊಳಿಸುವ ಕಾರ್ಯವನ್ನು ಆರಂಭಿಸಲಾಗಿದೆ. ಸೌರಶಕ್ತಿ ಸೌಲಭ್ಯಗಳ ಸ್ಥಾಪನೆ ಮತ್ತು ಮಳೆ ನೀರು ಕೊಯ್ಲು ಯೋಜನೆಗಳನ್ನು ಪೂರ್ಣಗೊಳಿಸಲಾಗಿದೆ. ಆವರಣದಲ್ಲಿರುವ ಎಲ್ಲಾ ಬೀದಿ ದೀಪಗಳನ್ನು ಎಲ್ಇಡಿಗಳಾಗಿ ಪರಿವರ್ತಿಸುವ ಮೂಲಕ ವಿದ್ಯುತ್ ಅನ್ನು ಉಳಿತಾಯ ಮಾಡಲು ಮತ್ತು ಉತ್ತಮ ರೀತಿಯಲ್ಲಿ ಬಳಸಿಕೊಳ್ಳುವಂತೆ ಮಾಡಲಾಗಿದೆ.
- ಇತರ ಕ್ರಮಗಳು: ಮಂಗಳೂರು ವಿಶ್ವವಿದ್ಯಾನಿಲಯವನ್ನು ಅಂತಾರಾಷ್ಟ್ರೀಯ ಸಮುದಾಯಕ್ಕೆ ಪರಿಚಯಿಸಲು ಮತ್ತು ಸಂಶೋಧನೆಯ ಉದ್ದೇಶಕ್ಕಾಗಿ ಅಂತಾರಾಷ್ಟ್ರೀಯ ವಿದ್ಯಾರ್ಥಿಗಳನ್ನು ವಿಶ್ವವಿದ್ಯಾನಿಲಯಕ್ಕೆ ಕರೆತರಲು ಯೋಜಿಸಲಾಗಿದೆ. ಈಗ ಕ್ಯಾಂಪಸ್ನಲ್ಲಿ ಸುಮಾರು 140 ಅಂತಾರಾಷ್ಟ್ರೀಯ ವಿದ್ಯಾರ್ಥಿಗಳು ಪದವಿ, ಸ್ನಾತಕೋತ್ತರ ಪದವಿ, ಪಿಹೆಚ್.ಡಿ ಅಧ್ಯಯನದಲ್ಲಿ ತೊಡಗಿಸಿಕೊಂಡಿದ್ದಾರೆ. ಪ್ರತೀ ವರ್ಷ ಪ್ರತಿಷ್ಠಾಪನಾ ದಿನದಂದು ಹಳೆಯ ವಿದ್ಯಾರ್ಥಿಗಳಲ್ಲಿ ಕ್ರೀಡೆ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರನ್ನು ಸನ್ಮಾನಿಸಲಾಗುತ್ತದೆ. ಕ್ರೀಡಾ ನೀತಿಯನ್ನು ರೂಪಿಸುವ ಮೂಲಕ ಮತ್ತು ಉನ್ನತ ಶಿಕ್ಷಣಕ್ಕಾಗಿ ಕ್ರೀಡಾಪಟುಗಳಿಗೆ ವಿದ್ಯಾರ್ಥಿವೇತನಗಳನ್ನು ನೀಡುವ ಮೂಲಕ ಕ್ರೀಡೆಗಳಿಗೆ ಪ್ರೋತ್ಸಾಹವನ್ನು ನೀಡಲಾಗುತ್ತಿದೆ. ಆವರಣದಲ್ಲಿ ಮತ್ತು ಎಲ್ಲಾ ಘಟಕ ಕಾಲೇಜುಗಳಲ್ಲಿ ಮಾಹಿತಿ ಕಿಯೋಸ್ಕ್ ಮತ್ತು ಡಿಜಿಟಲ್ ಸೈನೇಜ್ ಬೋರ್ಡುಗಳನ್ನು ಸ್ಥಾಪಿಸುವ ಮೂಲಕ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದಿಂದ ಯಾವುದೇ ಮಾಹಿತಿಯನ್ನು ಪಡೆಯಲು ಹಾಗೂ ವಿಶ್ವವಿದ್ಯಾನಿಲಯದ

ಕಾರ್ಯಕ್ರಮಗಳನ್ನು ನೋಡಲು ಅವಕಾಶವನ್ನೂ ಕಲ್ಪಿಸಲಾಗಿದೆ. 'ಮಂಗಳ ಯೋಜನೆ' ಎಂಬ ಬ್ಯಾನರ್‌ನ ಅಡಿಯಲ್ಲಿ ಗ್ರಾಮಗಳನ್ನು ದತ್ತು ತೆಗೆದುಕೊಳ್ಳುವ ಕಾರ್ಯಕ್ರಮಗಳನ್ನು ಆರಂಭಿಸಲಾಗಿದೆ. ಇದು ವಿಶ್ವವಿದ್ಯಾನಿಲಯವನ್ನು ಗ್ರಾಮಗಳಿಗೆ ಕರೆದೊಯ್ಯುವ ಮೂಲಕ ಗ್ರಾಮಗಳಿಗೆ ಎಲ್ಲಾ ಕ್ಷೇತ್ರಗಳಲ್ಲಿ ಅಭಿವೃದ್ಧಿಯನ್ನು ಹೊಂದಲು ಸಹಕರಿಸುತ್ತದೆ.

ಜಿ. ಪ.ಜಾ/ಪ.ಪಂ/ಹಿಂದುಳಿದ ವರ್ಗ/ಮಹಿಳೆ/ದಿವ್ಯಾಂಗರು ಮತ್ತು ಇತರರಿಗಾಗಿ ಕಲ್ಯಾಣ ಕ್ರಮಗಳು:

ಪ.ಜಾ/ಪ.ಪಂ/ಹಿಂದುಳಿದ ವರ್ಗ/ಮಹಿಳೆ/ದಿವ್ಯಾಂಗರು ಮತ್ತು ಇತರ ಸಮುದಾಯದವರ ಅಭಿವೃದ್ಧಿಗಾಗಿ ಅನೇಕ ಕಲ್ಯಾಣ ಕ್ರಮಗಳನ್ನು ಒದಗಿಸಲಾಗಿದೆ. ಈ ಕೆಳಗಿನ ಕೋಶಗಳನ್ನು ಬಲಪಡಿಸುವ ಮೂಲಕ ವಿದ್ಯಾರ್ಥಿ ಸಮುದಾಯಕ್ಕೆ ಅಗತ್ಯವಾದ ಸೌಲಭ್ಯಗಳನ್ನು ಒದಗಿಸುವ ಗುರಿಯನ್ನು ಹೊಂದಲಾಗಿದೆ:

ಪ.ಜಾ/ಪ.ಪಂ ಘಟಕ:

- ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಮೀಸಲಾತಿಯ ಕಾರ್ಯಕ್ರಮಗಳು ಮತ್ತು ನೀತಿಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಕಲ್ಯಾಣಕ್ಕಾಗಿ ವಿಶೇಷ ಘಟಕ ಅಸ್ತಿತ್ವಕ್ಕೆ ಬಂದಿದೆ. ಈ ಘಟಕ ಶೈಕ್ಷಣಿಕ ಮತ್ತು ಶೈಕ್ಷಣಿಕೇತರ ವಿಷಯಗಳಿಗೆ ಸಂಬಂಧಿಸಿದಂತೆ ವಿವಿಧ ನೀತಿ ಮತ್ತು ವಿಷಯಗಳ ಬಗ್ಗೆ ಕುಲಪತಿಗಳ ಅಧ್ಯಕ್ಷತೆಯ ಸ್ಥಾಯಿ ಸಮಿತಿಯಿಂದ ಸಲಹೆಯನ್ನು ಪಡೆಯುತ್ತದೆ.
- ಘಟಕವು ಪಿಹೆಚ್.ಡಿ ವಿದ್ಯಾರ್ಥಿಗಳಿಗೆ ಪ.ಜಾ./ಪ.ಪಂ. ಸಂಶೋಧನಾ ವಿದ್ಯಾರ್ಥಿವೇತನ ಮತ್ತು ಕಾಂಟಿನ್‌ಜೆನ್ಸಿ ಅನುದಾನವನ್ನು ನೀಡುತ್ತದೆ. ಇದು ಶೈಕ್ಷಣಿಕ ಪ್ರವಾಸ, ಪ್ರಬಂಧ/ಯೋಜನಾ ವರದಿಗಳ ತಯಾರಿಕೆ, ಕ್ರೀಡಾ ಕಿಟ್‌ಗಳ ಖರೀದಿ ಮತ್ತು ಕಂಪ್ಯೂಟರ್ ತರಬೇತಿಯಂತಹ ವಿವಿಧ ಕಾರ್ಯಕ್ರಮಗಳಿಗೆ ಹಣಕಾಸಿನ ನೆರವನ್ನು ನೀಡುತ್ತದೆ. ಇದು ಯುಜಿಸಿ/ಜೆಆರ್‌ಎಫ್/ಉಪನ್ಯಾಸ ಪರೀಕ್ಷೆಗಳಿಗೆ ಹಾಜರಾಗುವ ಪ.ಜಾ./ಪ.ಪಂ. ವಿದ್ಯಾರ್ಥಿಗಳಿಗೆ ತರಬೇತಿ ಕಾರ್ಯಕ್ರಮಗಳು, ಸೌಲಭ್ಯಗಳ ಜಾಗೃತಿ ಕಾರ್ಯಕ್ರಮ, ವೃತ್ತಿ ಮಾರ್ಗದರ್ಶನ ಮತ್ತು ವ್ಯಕ್ತಿತ್ವ ಅಭಿವೃದ್ಧಿ ಕಾರ್ಯಕ್ರಮಗಳನ್ನು ಸಹ ನಡೆಸುತ್ತದೆ.
- ಮಂಗಳೂರು ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳಲ್ಲಿ ಮತ್ತು ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪ.ಜಾ./ಪ.ಪಂ. ವಿದ್ಯಾರ್ಥಿಗಳ ಮಾಹಿತಿಯನ್ನು ಪ.ಜಾ./ಪ.ಪಂ. ಘಟಕ ನಿರ್ವಹಿಸುತ್ತದೆ.
- ಸ್ನಾತಕೋತ್ತರ ವಿಭಾಗಗಳಲ್ಲಿ ಓದುತ್ತಿರುವ ಪ.ಜಾ./ಪ.ಪಂ. ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ, ವಸತಿನಿಲಯದಲ್ಲಿರುವ ವಿದ್ಯಾರ್ಥಿಗಳ ಇಬಿಎಲ್ ಶುಲ್ಕ ಮತ್ತು ಸ್ನಾತಕೋತ್ತರ ವಿಭಾಗಗಳಲ್ಲಿ ಅಧ್ಯಯನ ನಡೆಸುತ್ತಿರುವ ಪಜಾ/ಪಪಂ ವಿದ್ಯಾರ್ಥಿಗಳ ಶುಲ್ಕ ಮರುಪಾವತಿಯ ಹೊಣೆಯನ್ನು ನಿರ್ವಹಿಸುತ್ತದೆ.

2019–20ನೇ ಸಾಲಿನ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಘಟಕದ ಚಟುವಟಿಕೆಗಳು

ವಿಶ್ವವಿದ್ಯಾನಿಲಯ ಧನ ಸಹಾಯ ಆಯೋಗದ ಮಾರ್ಗಸೂಚಿ ನಿರ್ದೇಶನದಂತೆ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಪರಿಶಿಷ್ಟ ಜಾತಿ/ಪಂಗಡ ಘಟಕವು 1996ರಲ್ಲಿ ಸ್ಥಾಪಿಸಲಾಗಿರುತ್ತದೆ. ಸದರಿ ಘಟಕವು ಕುಲಪತಿಗಳ ಅಧ್ಯಕ್ಷತೆಯಲ್ಲಿ ರಚಿಸಲಾದ ಉನ್ನತ ಮಟ್ಟದ ಸಲಹಾ ಸಮಿತಿಯ ಮಾರ್ಗದರ್ಶನದಲ್ಲಿ ಕಾರ್ಯ ನಿರ್ವಹಿಸುತ್ತದೆ. ಈ ಸಮಿತಿಯು ಪರಿಶಿಷ್ಟ ಜಾತಿ/ಪಂಗಡಗಳ ವಿದ್ಯಾರ್ಥಿಗಳಿಗೆ ಇರುವ ಮೀಸಲಾತಿ ನೀತಿ ಮತ್ತು ಇತರ ಕಲ್ಯಾಣ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವುದನ್ನು ದೃಢಪಡಿಸುತ್ತದೆ. 2019–20ನೇ ಸಾಲಿನಲ್ಲಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ.

ಮಂಗಳೂರು ವಿಶ್ವವಿದ್ಯಾನಿಲಯದ ಪರಿಶಿಷ್ಟ ಜಾತಿ/ಪಂಗಡ ಘಟಕವು ವಿಶೇಷಾಧಿಕಾರಿ ಹಾಗೂ ಇತರ ಸಿಬ್ಬಂದಿಗಳ ಸಹಕಾರದೊಂದಿಗೆ ಕಾರ್ಯನಿರ್ವಹಿಸುತ್ತಿದ್ದು ವಿಶೇಷಾಧಿಕಾರಿಯಾಗಿ ಡಾ. ಕೆ. ಪುಟ್ಟಣ್ಣ ಸಹ ಪ್ರಾಧ್ಯಾಪಕರು, ವ್ಯವಹಾರ ಆಡಳಿತ ವಿಭಾಗ ಇವರು ಘಟಕದ ವಿಶೇಷಾಧಿಕಾರಿಯಾಗಿ ಕಾರ್ಯಭಾರ ನಿರ್ವಹಿಸುತ್ತಿರುವರು.

1. 2019–20ನೇ ಸಾಲಿನ ಪರಿಶಿಷ್ಟ ಜಾತಿ/ಪಂಗಡ ಘಟಕದ ಸಂಶೋಧನಾ ಶಿಷ್ಯವೇತನಕ್ಕಾಗಿ ಒಟ್ಟು 21 ಮಂದಿ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿರುತ್ತಾರೆ.

ಕ್ರ.ಸಂ	ವಿದ್ಯಾರ್ಥಿಯ ಹೆಸರು	ಜಾತಿ/ವರ್ಗ	ಸಂಶೋಧನಾ ಮಾರ್ಗದರ್ಶಕರು	ವಿಭಾಗ
1.	ಶಿವರಾಜ್ ಎನ್. ಸಿ.	ಪ.ಜಾತಿ	ಡಾ. ಎಚ್. ಎಲ್. ಶಶಿರೇಖಾ	ಗಣಕ ವಿಜ್ಞಾನ
2.	ನವೀನ್ ಕುಮಾರ್ ಕೆ.	ಪ.ಪಂಗಡ	ಡಾ. ಈಶ್ವರ್ ಪಿ.	ವಾಣಿಜ್ಯ
3.	ಮೋಹನ್ ಕುಮಾರ್ ಡಿ.	ಪ.ಜಾತಿ	ಡಾ. ಜಗದೀಶ್ ಪ್ರಸಾದ್ ಡಿ.	ರಸಾಯನಶಾಸ್ತ್ರ
4.	ಜಯಶ್ರೀ ಆರ್	ಪ.ಜಾತಿ	ಡಾ. ಜಗದೀಶ್ ಪ್ರಸಾದ್ ಡಿ.	ರಸಾಯನಶಾಸ್ತ್ರ
5.	ದೀಪಾಲಿ ವರಳೆ	ಪ.ಜಾತಿ	ಡಾ. ಜಿ. ಕೆ. ನಾಗರಾಜ್	ರಸಾಯನಶಾಸ್ತ್ರ
6.	ವೆಂಕಟೇಶ್ ಮಂಜು ಗೊಂಡ್	ಪ.ಪಂಗಡ	ಡಾ. ಜಯರಾಜ್ ಅಮೀನ್	ರಾಜ್ಯಶಾಸ್ತ್ರ
7.	ಬಸಪ್ಪ ಹರಿಜನ	ಪ.ಜಾತಿ	ಡಾ. ಬಿ. ನಾರಾಯಣ	ಭೌತಶಾಸ್ತ್ರ
8.	ರೇಷ್ಮಾ ಆರ್. ಪಿ.	ಪ.ಜಾತಿ	ಡಾ. ಗೋಪಾಲ್ ಕೃಷ್ಣ ನಾಯಕ್	ಭೌತಶಾಸ್ತ್ರ
9.	ಸೋಮಶೇಖರ	ಪ.ಜಾತಿ	ಡಾ. ದಶರಥ ಪಿ. ಅಂಗಡಿ	ಭೂಗೋಳ ಶಾಸ್ತ್ರ
10.	ಅಭಿಷೇಕ್ ಆರ್.	ಪ.ಜಾತಿ	ಡಾ. ಹೆಚ್. ಗಂಗಾಧರ್ ಭಟ್	ಸಾಗರ ಭೂ ವಿಜ್ಞಾನ
11.	ದರ್ಶನ್ ಎಮ್. ಎಸ್.	ಪ.ಜಾತಿ	ಡಾ. ಶಿವಣ್ಣ	ಸಾಗರ ಭೂ ವಿಜ್ಞಾನ
12.	ಮೇಘಾ ಎಮ್.	ಪ.ಜಾತಿ	ಡಾ. ನವೀನ್ ಕುಮಾರ್ ಎಸ್. ಕೆ.	ಇಲೆಕ್ಟ್ರಾನಿಕ್ಸ್
13.	ಪ್ರತಾಪ್ ನಾಯಕ ಟಿ. ಸಿ.	ಪ.ಪಂಗಡ	ಡಾ. ನಯನ ಕೆ. ಎಸ್.	ಆಂಗ್ಲ
14.	ಮಹೇಶ್ ಪಾಂಡಪ್ಪ ಲಮಾಣಿ	ಪ.ಜಾತಿ	ಡಾ. ಕೃಷ್ಣ ಶರ್ಮ	ಯೋಗ ವಿಜ್ಞಾನ
15.	ಪರಮಶ್ರೀ ದೀಪ	ಪ.ಪಂಗಡ	ಡಾ. ಸಿದ್ಧರಾಜು	ಜೀವ ವಿಜ್ಞಾನ
16.	ಲೋಕೇಶ್ ಮೂರ್ತಿ ಆರ್.	ಪ.ಪಂಗಡ	ಡಾ. ನಿರ್ಮಲ್ ರಾಜು	ಇತಿಹಾಸ
17.	ರಾಜು ಎಸ್.	ಪ.ಜಾತಿ	ಡಾ. ಐ. ಕೆ. ಮಂಜುಳ	ಸೂಕ್ಷ್ಮ ಜೀವ ವಿಜ್ಞಾನ
18.	ಬಸವರಾಜು ಎಂ.	ಪ.ಜಾತಿ	ಡಾ. ಗುಣಶ್ರೀ ಬಿ. ಎಸ್.	ಸೂಕ್ಷ್ಮ ಜೀವ ವಿಜ್ಞಾನ
19.	ರಾಕೇಶ್ ನಾಯಕ್ ಕೆ.	ಪ.ಪಂಗಡ	ಡಾ. ವಜಿದಾ ಬಾನು	ಅರ್ಥಶಾಸ್ತ್ರ
20.	ಮಮತ ಕೆ.	ಪ.ಪಂಗಡ	ಡಾ. ರಾಮಕೃಷ್ಣ ಬಿ..ಎಮ್.	ಅರ್ಥಶಾಸ್ತ್ರ
21.	ಬಾಬು ಕೆ. ಎಮ್.	ಪ.ಜಾತಿ	ಡಾ. ತಿಪ್ಪೇಸ್ವಾಮಿ	ಅರ್ಥಶಾಸ್ತ್ರ

2. 2019–20ನೇ ಸಾಲಿಗೆ ವಿಶ್ವವಿದ್ಯಾನಿಲಯ ಮತ್ತು ಧನ ಸಹಾಯ ಆಯೋಗದ ನೇಷನಲ್ ಫೆಲೋಶಿಪ್ ಆ್ಯಂಡ್ ಸ್ಕಾಲರ್‌ಶಿಪ್ ಫಾರ್ ಹೈಯರ್ ಎಜ್ಯುಕೇಷನ್ ಆಫ್ ಎಸ್‌ಟಿ ಸ್ಟೂಡೆಂಟ್ (ಎನ್.ಎಫ್.ಎಸ್.ಟಿ.) ಗೆ ಈ ಕೆಳಗಿನ ವಿದ್ಯಾರ್ಥಿಗಳು ಆಯ್ಕೆಯಾಗಿರುತ್ತಾರೆ.

ಕ್ರ.ಸಂ	ವಿದ್ಯಾರ್ಥಿ ಹೆಸರು	ಜಾತಿ/ವರ್ಗ	ವಿಭಾಗ	ಶಿಷ್ಯವೇತನ
1.	ಮಂಜುನಾಥ ಎಮ್.	ಪ.ಪಂಗಡ	ವಸ್ತುವಿಜ್ಞಾನ	ಎನ್.ಎಫ್.ಎಸ್.ಟಿ.
2.	ಧರ್ಮರಾಯ ಬಾಲಪ್ಪ ಹವಲ್ದಾರ್	ಪ.ಪಂಗಡ	ರಾಜ್ಯಶಾಸ್ತ್ರ	ಎನ್.ಎಫ್.ಎಸ್.ಟಿ.
3.	ಕಾವ್ಯಶ್ರೀ ಕುಪ್ಪಯ್ಯ ಗೊಂಡ್	ಪ.ಪಂಗಡ	ರಸಾಯನ ಶಾಸ್ತ್ರ	ಎನ್.ಎಫ್.ಎಸ್.ಟಿ.
4.	ರಮೇಶ್	ಪ.ಪಂಗಡ	ಇತಿಹಾಸ	ಎನ್.ಎಫ್.ಎಸ್.ಟಿ.
5.	ರಾಘವೇಂದ್ರ ಎಸ್.	ಪ.ಪಂಗಡ	ಇತಿಹಾಸ	ಎನ್.ಎಫ್.ಎಸ್.ಟಿ.

3. 2019–20ನೇ ಸಾಲಿಗೆ ಮಂಗಳೂರು ವಿಶ್ವವಿದ್ಯಾನಿಲಯದ ಪರಿಶಿಷ್ಟ ಜಾತಿ/ಪಂಗಡದ ಕ್ಷೇಮಾಭ್ಯುದಯ ನಿಧಿಗೆ ಅನುದಾನ ಒಟ್ಟು ಮೊತ್ತ ರೂ.2,50,00,000/– (ರೂಪಾಯಿ ಎರಡು ಕೋಟಿ ಐವತ್ತು ಲಕ್ಷ ರೂಪಾಯಿ) ಕಾಯ್ದಿರಿಸಲಾಗಿದೆ (ಲೆಕ್ಕ ಶೀರ್ಷಿಕೆ ಸಂಖ್ಯೆ '1434') ಸದರಿ ಅನುದಾನವನ್ನು ಈ ಕೆಳಗೆ ನಮೂದಿಸಿದ ಕಾರ್ಯಕ್ರಮಗಳಿಗೆ ವಿನಿಯೋಗಿಸಲಾಗಿದೆ.

ಕ್ರ.ಸಂ.	ವಿವರ	ಮೊತ್ತ ರೂ.
1.	ಸಂಶೋಧನಾ ವಿದ್ಯಾರ್ಥಿಗಳ ಶಿಷ್ಯವೇತನ ಪಾವತಿ/ ವಾರ್ಷಿಕ ಸಾದಿಲ್ವಾರು ವೆಚ್ಚ	1,30,14,000.00
2.	ಸ್ನಾತಕೋತ್ತರ ವಿದ್ಯಾರ್ಥಿಗಳ ಸ್ಟೋರ್ಟ್ಸ್ ಕಿಟ್/ಪ್ರೌಢ ಪ್ರಬಂಧ/ ಶೈಕ್ಷಣಿಕ ಅಧ್ಯಯನ ಪ್ರವಾಸ	7,00,000.00
3.	ಸಂಶೋಧನಾ ವಿದ್ಯಾರ್ಥಿಗಳ ಸೆಮಿನಾರ್, ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಸಮ್ಮೇಳನ ಮತ್ತು ಕಾರ್ಯಗಾರಗಳಿಗೆ ಭಾಗವಹಿಸಲು ಪ್ರಯಾಣ, ದಿನ ಭತ್ಯೆಗಳು ಹಾಗೂ ನೋಂದಣಿ ಶುಲ್ಕ.	13,60,000.00
4.	ವಿಶ್ವವಿದ್ಯಾನಿಲಯ ಆವರಣ, ಸ್ನಾತಕೋತ್ತರ ಕೇಂದ್ರ ಚಿಕ್ಕ ಅಳುವಾರ ಪುರುಷರ/ಮಹಿಳೆಯರ ಮತ್ತು ಉದ್ಯೋಗಸ್ಥ ಮಹಿಳೆಯರ ವಸತಿಗೃಹದಲ್ಲಿ ವಾಸ್ತವ್ಯವಿದ್ದ ಪ.ಜಾ./ಪ.ಪಂ. ವಿದ್ಯಾರ್ಥಿಗಳ ಊಟೋಪಚಾರ ವೆಚ್ಚ ಮತ್ತು ವಾಸ್ತವ್ಯ	1,10,18,000.00
5.	ವಿಶ್ವವಿದ್ಯಾನಿಲಯ ಗ್ರಂಥಾಲಯ/ಘಟಕ ಕಾಲೇಜುಗಳಲ್ಲಿ ಪರಿಶಿಷ್ಟ ಜಾತಿ/ಪಂಗಡದ ವಿದ್ಯಾರ್ಥಿಗಳಿಗೆ ಬುಕ್ ಬ್ಯಾಂಕ್ ಸವಲತ್ತು	12,00,000.00
	ಒಟ್ಟು	2,72,92,000.00

4. ಇತರ ಚಟುವಟಿಕೆಗಳು:

ಎ) 2019–20ನೇ ಸಾಲಿನಲ್ಲಿ SCP-TSP ಯೋಜನೆಯಡಿಯಲ್ಲಿ ರೂ.6,00,000/– (ಆರು ಲಕ್ಷ) ಬಿಡುಗಡೆಯಾಗಿರುತ್ತದೆ. ಸದ್ರಿ ಮೊತ್ತವನ್ನು 2019–20ರ ಸಾಲಿನಲ್ಲಿ ವ್ಯಾಸಂಗ ಮಾಡಿರುವ ಸ್ನಾತಕೋತ್ತರ ಮತ್ತು ಸಂಶೋಧನಾ ವಿದ್ಯಾರ್ಥಿಗಳಿಗೆ ಶುಲ್ಕ ಮರುಭರಣೆಗಾಗಿ ವಿನಿಯೋಗಿಸಲಾಗಿದೆ.

ಬಿ) ಸದರಿ ಶೈಕ್ಷಣಿಕ ವರ್ಷದ 2019–20ರಲ್ಲಿ ವಿಶ್ವವಿದ್ಯಾನಿಲಯ ಆವರಣದ 162 ಸ್ನಾತಕೋತ್ತರ ಮತ್ತು ಸಂಶೋಧನಾ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆಗೆ ಒಟ್ಟು ಮೊತ್ತ ರೂ.99,20,610/–ನ್ನು ವಿಶ್ವವಿದ್ಯಾನಿಲಯದ ಆಂತರಿಕ ನಿಧಿಯಿಂದ ಬಳಸಲಾಗಿದೆ.

ಸಿ) ಶೈಕ್ಷಣಿಕ ವರ್ಷ 2019–20ನೇ ಸಾಲಿನಲ್ಲಿ ಸ್ನಾತಕೋತ್ತರ ವಿಭಾಗಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ/ಪಂಗಡದ ಒಟ್ಟು 325 ವಿದ್ಯಾರ್ಥಿಗಳು ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಮಂಜೂರಾತಿಗಾಗಿ ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿಗಳನ್ನು ಪರಿಶೀಲಿಸಿ ಸಮಾಜ ಕಲ್ಯಾಣ ಇಲಾಖೆಗೆ ಒಟ್ಟು ಮೊತ್ತ ರೂ.64,31,710/– (ರೂಪಾಯಿ ಆರುವತ್ತ ನಾಲ್ಕು ಲಕ್ಷದ ಮೂವತ್ತೊಂದು ಸಾವಿರದ ಏಳು ನೂರ ಹತ್ತು ಮಾತ್ರ) ಮೊತ್ತವನ್ನು ಮಂಜೂರು ಮಾಡುವಂತೆ ಕೋರಲಾಗಿದೆ.

ಹಿಂದುಳಿದ ವರ್ಗಗಳ ಘಟಕ:

ಅಲ್ಪಸಂಖ್ಯಾತರನ್ನು ಒಳಗೊಂಡಂತೆ ಇತರ ಹಿಂದುಳಿದ ವರ್ಗಗಳ (ಒಬಿಸಿ) ಕಲ್ಯಾಣಕ್ಕಾಗಿ ವಿಶ್ವವಿದ್ಯಾನಿಲಯದಲ್ಲಿ ಇರುವ ವಿಶೇಷ ಘಟಕವು ಸಂಯೋಜಕರನ್ನು ಹೊಂದಿದೆ. ಇದು 2005ರಲ್ಲಿ ಸ್ಥಾಪನೆಯಾಯಿತು. ಇದರ ಪ್ರಮುಖ ಕಾರ್ಯಗಳು ಈ ಕೆಳಗಿನಂತಿವೆ:

- ಹಿಂದುಳಿದ ವರ್ಗದವರ ಶಿಕ್ಷಣ, ತರಬೇತಿ ಮತ್ತು ಉದ್ಯೋಗದ ಕುರಿತಾಗಿ ಭಾರತ ಸರ್ಕಾರ ಮತ್ತು ಯುಜಿಸಿಯ ಆದೇಶಗಳಿಗೆ ಸಂಬಂಧಿಸಿದ ವರದಿ ಮತ್ತು ಮಾಹಿತಿಗಳನ್ನು ಸಂಗ್ರಹಿಸುವುದು.
- ಭಾರತ ಸರ್ಕಾರದ ಆದೇಶಗಳು ಮತ್ತು ಯುಜಿಸಿಯ ನಿರ್ಧಾರಗಳನ್ನು ಪ್ರಸಾರ ಮಾಡುವುದು ಮತ್ತು ವಿಶ್ವವಿದ್ಯಾನಿಲಯದಲ್ಲಿ ಬೋಧಕ ಮತ್ತು ಬೋಧಕೇತರ ಹುದ್ದೆಗಳಿಗೆ ಈ ವರ್ಗದವರನ್ನು ನೇಮಿಸುವುದು ಹಾಗೂ ತರಬೇತಿ ನೀಡುವುದು. ವಿಶ್ವವಿದ್ಯಾನಿಲಯದಲ್ಲಿ ನಿಗದಿತ ದಿನಾಂಕದೊಳಗೆ ಹುದ್ದೆಗೆ ಅರ್ಜಿ ಸಲ್ಲಿಸಲು ಅವರಿಗೆ ಸಹಾಯ ಮಾಡುವುದು ಮತ್ತು ಅಗತ್ಯವಿರುವಲ್ಲಿ ಅವರಿಗೆ ಅರ್ಜಿ ಸಲ್ಲಿಸಲು ಮತ್ತು ಮುಂದಿನ ಕ್ರಮಗಳನ್ನು ಗಮನಿಸಲು ಸಹಕರಿಸುವುದು.
- ಹಿಂದುಳಿದ ವರ್ಗದ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗಳ ಅಂಕಿ ಅಂಶವನ್ನು ಸಂಗ್ರಹಿಸುವುದು.
- ಅಲ್ಪಸಂಖ್ಯಾತ ವಿದ್ಯಾರ್ಥಿಗಳೂ ಸೇರಿದಂತೆ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯದಲ್ಲಿ ಪರಿಹಾರ ತರಬೇತಿ ಕಾರ್ಯದ ಮೇಲ್ವಿಚಾರಣೆ ನಡೆಸುವುದು.
- ಅಲ್ಪಸಂಖ್ಯಾತ ವಿದ್ಯಾರ್ಥಿಗಳು ಮತ್ತು ಉದ್ಯೋಗಿಗಳು ಸೇರಿದಂತೆ ಹಿಂದುಳಿದ ವರ್ಗದ ವಿದ್ಯಾರ್ಥಿಗಳ ಕುಂದು ಕೊರತೆಗಳ ನಿವಾರಣೆಗಾಗಿ ಕುಂದು ಕೊರತೆ ನಿವಾರಣಾ ಕೋಶವಾಗಿ ಕಾರ್ಯ ನಿರ್ವಹಿಸುವುದು.

ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ:

ಡಿಎಸ್‌ಡಬ್ಲ್ಯೂ ಕ್ಯಾಂಪಸ್‌ನ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿಗಾಗಿ ಕೆಲಸ ಮಾಡುವ ಸಂಸ್ಥೆಯಾಗಿದೆ. ಇದು ವಿದ್ಯಾರ್ಥಿಗಳ ಮೇಲ್ವಿಚಾರಣೆಯೊಂದಿಗೆ ಅವರ ಪಠ್ಯೇತರ ಚಟುವಟಿಕೆಗಳನ್ನೂ ಪ್ರೋತ್ಸಾಹಿಸುತ್ತದೆ. ಡಿಎಸ್‌ಡಬ್ಲ್ಯೂ ವಿದ್ಯಾರ್ಥಿಗಳಲ್ಲಿ ಏಕತೆ ಮತ್ತು ಸಮಗ್ರತೆಯನ್ನು ಮೂಡಿಸಲು ಪ್ರಯತ್ನಿಸುತ್ತದೆ. ಇದು ವಿಶ್ವವಿದ್ಯಾನಿಲಯದೊಂದಿಗೆ ಆರಂಭವಾದರೂ ಆಡಳಿತ ಅಧಿಕಾರಿ ಇದರ ನಿರ್ವಹಣೆಯನ್ನು ನಡೆಸುತ್ತಾರೆ. 1992ರಿಂದ ಕೇಂದ್ರವು ನಿರ್ದೇಶಕರಿಂದ ನಿರ್ವಹಿಸಲ್ಪಡುತ್ತಿದೆ.

ಸ್ನಾತಕೋತ್ತರ ವಿದ್ಯಾರ್ಥಿ ಸಂಘದ ಪದಾಧಿಕಾರಿಗಳ ಆಯ್ಕೆ:

2019–20ನೇ ಸಾಲಿನ ಶೈಕ್ಷಣಿಕ ವರ್ಷದ ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿದ್ಯಾರ್ಥಿ ಸಂಘದ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆಯು ದಿನಾಂಕ 08.08.2019ರಂದು ಚುನಾವಣೆ ಮೂಲಕ ನಡೆಯಿತು. ಸ್ನಾತಕೋತ್ತರ ವಿದ್ಯಾರ್ಥಿ ಸಂಘದ ಪದಾಧಿಕಾರಿಗಳಾಗಿ ಈ ಕೆಳಕಂಡವರು ಆಯ್ಕೆಯಾಗಿದ್ದಾರೆ.

1.	ಅಧ್ಯಕ್ಷ	:	ಶ್ರೀ ಸುಮನ್ ಕುಮಾರ್ ದೈಹಿಕ ಶಿಕ್ಷಣ ವಿಭಾಗ
2.	ಉಪಾಧ್ಯಕ್ಷ	:	ಶ್ರೀ ಹವಿನ್ ಕುಮಾರ್ ಕೆ.ಪಿ. ಮೆಡಿಕಲ್ ಫಿಸಿಕ್ಸ್ ವಿಭಾಗ
3.	ಕಾರ್ಯದರ್ಶಿ	:	ಶ್ರೀ ಭರತ್‌ರಾಜ್ ಸಿ.ಎಚ್ ಗಣಕ ವಿಜ್ಞಾನ ವಿಭಾಗ
4.	ಸಹ ಕಾರ್ಯದರ್ಶಿ	:	ಕು. ದೀಕ್ಷಿತಾ ಕೆ. ಜೀವ ರಸಾಯನಶಾಸ್ತ್ರ ವಿಭಾಗ
5.	ಸಾಂಸ್ಕೃತಿಕ ಕಾರ್ಯದರ್ಶಿ	:	ಶ್ರೀ ಚರಿತ್ ಕುಮಾರ್ ವಾಣಿಜ್ಯ ವಿಭಾಗ
6.	ಸಹ ಸಾಂಸ್ಕೃತಿಕ ಕಾರ್ಯದರ್ಶಿ	:	ಶ್ರೀ ಜೀವನ್ ಎಸ್. ಎಚ್. ಆನ್ವಯಿಕ ಸಸ್ಯಶಾಸ್ತ್ರ ವಿಭಾಗ

ಅಂತರ ಕಾಲೇಜು ಮಟ್ಟದ ಸಾಂಸ್ಕೃತಿಕ ಸ್ಪರ್ಧೆಗಳು 2019–20

2019–20ನೇ ಸಾಲಿನಲ್ಲಿ ಮಂಗಳೂರು ವಿಶ್ವವಿದ್ಯಾನಿಲ0ಯದ ವ್ಯಾಪ್ತಿಗೆ ಬರುವ ಅಧೀನ ಕಾಲೇಜುಗಳ ವಿದ್ಯಾರ್ಥಿಗಳಿಗೆ ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳನ್ನು ಏರ್ಪಡಿಸಲು ಸಲಹಾ ಸಮಿತಿಯಲ್ಲಿ ನಿರ್ಣಯಿಸಲಾಗಿದ್ದು, ಈ ಸ್ಪರ್ಧೆಗಳನ್ನು ಈ ಕೆಳಗಿನ ಕಾಲೇಜುಗಳಿಗೆ ಸಂಘಟಿಸಲು ಹಂಚಿಕೆ ಮಾಡಲಾಗಿತ್ತು,

ಕಾರ್ಯಕ್ರಮದ ದಿನಾಂಕ	ಸ್ಪರ್ಧೆಗಳು	ಕಾಲೇಜು
12.8.2019	ಸಾಹಿತ್ಯ	ಎಸ್. ಎಂ. ಎಸ್ ಕಾಲೇಜು, ಬ್ರಹ್ಮಾವರ
16.8.2019	ಲಲಿತಕಲೆ	ಕೆನರಾ ಕಾಲೇಜು. ಮಂಗಳೂರು
30 ಮತ್ತು 31.8.2019	ಸ0ಗೀತ	ವಿವೇಕಾನಂದ ಕಾಲೇಜು, ಪುತ್ತೂರು
19 ಮತ್ತು 20.8.2019	ರಂಗಭೂಮಿ	ಭಂಡಾರ್ಕಾರ್ಸ್ ಕಾಲೇಜು, ಕುಂದಾಪುರ
26 ಮತ್ತು 27.8.2019	ನೃತ್ಯ	ಗೋವಿಂದದಾಸ ಕಾಲೇಜು, ಸುರತ್ಕಲ್

ಈ ಕೆಳಗಿನಂತೆ 5 ವಿಭಾಗಗಳಲ್ಲಿ 25 ಸ್ಪರ್ಧೆಗಳು ನಡೆದವು:

1.	ಸಾಹಿತ್ಯ	:	ರಸಪ್ರಶ್ನೆ, ಭಾಷಣ, ಚರ್ಚಾಸ್ಪರ್ಧೆ (ಇಂಗ್ಲಿಷ್ ಮತ್ತು ಕನ್ನಡ).
2.	ಲಲಿತಕಲೆ	:	ಸ್ಥಳದಲ್ಲಿ ವರ್ಣಚಿತ್ರಲೇಖನ, ಕೋಲಾಜ್, ಪೋಸ್ಟರ್ ಮೇಕಿಂಗ್, ಕ್ಲೇ ಮಾಡೆಲಿಂಗ್, ವ್ಯಂಗ್ಯಚಿತ್ರ ರಚನೆ, ರಂಗೋಲಿ, ಆಶು ಛಾಯಾಚಿತ್ರ
3.	ಸಂಗೀತ	:	ಶಾಸ್ತ್ರೀಯ ಸಂಗೀತ (ಹಿಂದುಸ್ಥಾನಿ/ಕರ್ನಾಟಕ), ಶಾಸ್ತ್ರೀಯ ವಾದ್ಯ ಸಂಗೀತ (ತಾಳವಾದ್ಯ), ಶಾಸ್ತ್ರೀಯ ವಾದ್ಯ ಸಂಗೀತ (ಸ್ವರವಾದ್ಯ),

ಲಘು ಸಂಗೀತ (ಭಾರತೀಯ), ಪಾಶ್ಚಾತ್ಯ ಸಂಗೀತ, ಸಮೂಹಗಾನ (ಭಾರತೀಯ), ಸಮೂಹಗಾನ (ಪಾಶ್ಚಾತ್ಯ), ಜನಪದ ವಾದ್ಯ ಸಂಗೀತ.

4. ರಂಗಭೂಮಿ : ಏಕಾಂಕ ನಾಟಕ, ಸ್ಕಿಟ್ (ಕಿರು ಪ್ರಹಸನ), ಮೈಮ್ (ಮೂಕಾಭಿನಯ), ಮಿಮಿಕ್ರಿ.

5. ನೃತ್ಯ : ಜನಪದ ನೃತ್ಯ, ಶಾಸ್ತ್ರೀಯ ನೃತ್ಯ (ಭಾರತೀಯ).

ವಿದ್ಯಾರ್ಥಿ ಸಾಧನೆಗಳು:

ಅಂತರ್ ಕಾಲೇಜು ಮಟ್ಟದಲ್ಲಿ ನಡೆದ ಸ್ಪರ್ಧೆಗಳಲ್ಲಿ ಬಹುಮಾನ ಪಡೆದು ಆಯ್ಕೆಯಾದ ಗೋವಿಂದದಾಸ ಕಾಲೇಜು, ಸುರತ್ಕಲ್, ಮತ್ತು ಆಳ್ವಾಸ್ ಕಾಲೇಜು, ಮೂಡಬಿದ್ರೆ ತಿರುಪತಿಯ ಪದ್ಮಾವತಿ ಮಹಿಳಾ ವಿಶ್ವವಿದ್ಯಾನಿಲಯದಲ್ಲಿ ನಡೆದ ದಕ್ಷಿಣ ವಲಯ ಯುವಜನೋತ್ಸವಕ್ಕೆ ಅರ್ಹತೆಯನ್ನು ಪಡೆದವು.

ದಕ್ಷಿಣ ವಲಯ ಯುವಜನೋತ್ಸವ:

ಅಂತರ್ ಕಾಲೇಜು ಮಟ್ಟದಲ್ಲಿ ನಡೆದ ಸ್ಪರ್ಧೆಗಳಲ್ಲಿ ಬಹುಮಾನ ಪಡೆದು ಆಯ್ಕೆಯಾದ ಗೋವಿಂದದಾಸ ಕಾಲೇಜು, ಸುರತ್ಕಲ್, ಇಲ್ಲಿನ 16 ವಿದ್ಯಾರ್ಥಿಗಳು, ಎಂ.ಜಿ.ಎಂ. ಕಾಲೇಜು, ಉಡುಪಿ ಇಲ್ಲಿನ 12 ವಿದ್ಯಾರ್ಥಿಗಳು, ಭಂಡಾರ್ಕಾರ್ಸ್ ಕಾಲೇಜಿನ 01 ವಿದ್ಯಾರ್ಥಿನಿ, ಎಸ್.ಡಿ.ಎಂ. ಕಾಲೇಜು, ಉಜಿರೆ ಇಲ್ಲಿನ 09 ವಿದ್ಯಾರ್ಥಿಗಳನ್ನೊಳಗೊಂಡ ಒಟ್ಟು 42 ವಿದ್ಯಾರ್ಥಿಗಳ ತಂಡವನ್ನು ದಿನಾಂಕ 18 ರಿಂದ 22, ಡಿಸೆಂಬರ್ 2019ರಲ್ಲಿ ಅಲಗಪ್ಪ ವಿಶ್ವವಿದ್ಯಾನಿಲಯ, ತಮಿಳುನಾಡು ಇಲ್ಲಿ ನಡೆದ ದಕ್ಷಿಣ ವಲಯ ಯವಜನೋತ್ಸವಕ್ಕೆ ಕಳುಹಿಸಲಾಯಿತು. ಗೋವಿಂದದಾಸ ಕಾಲೇಜು, ಸುರತ್ಕಲ್ ಇಲ್ಲಿನ ವಿದ್ಯಾರ್ಥಿಗಳು ನೃತ್ಯದಲ್ಲಿ ಪ್ರಥಮ, ಎಂ.ಜಿ.ಎಂ. ಉಡುಪಿ ಪ್ರಹಸನ ತೃತೀಯ ಮತ್ತು ಆಶುಭಾಷಣ ತೃತೀಯ ಹಾಗೂ ಅಮಿಟಿ ವಿಶ್ವವಿದ್ಯಾನಿಲಯ ನೋಯ್ಡಾ, ಇಲ್ಲಿ ನಡೆಯುವ 35ನೇ ರಾಷ್ಟ್ರೀಯ ಮಟ್ಟದ ಯುವಜನೋತ್ಸವಕ್ಕೆ ಆಯ್ಕೆಯಾಗಿರುತ್ತಾರೆ.

ಸಹಕಾರ ಸ್ಪರ್ಧೆ:

19–09–2019ರಂದು ವಿದ್ಯಾರ್ಥಿ ಕಲ್ಯಾಣ ಕಛೇರಿಯ ನಿರ್ದೇಶಕರು ಬೆಂಗಳೂರಿನ ಕರ್ನಾಟಕ ರಾಜ್ಯ ಸಹಕಾರಿ ಒಕ್ಕೂಟದ ಸಹಕಾರದೊಂದಿಗೆ ಪದವಿ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗಾಗಿ ಕನ್ನಡದಲ್ಲಿ ಸಹಕಾರ ಚರ್ಚಾ ಸ್ಪರ್ಧೆಯನ್ನು ಆಯೋಜಿಸಿದ್ದರು. ಈ ಸ್ಪರ್ಧೆಯಲ್ಲಿ ಸುಮಾರು 34 ವಿದ್ಯಾರ್ಥಿಗಳು ತಮ್ಮ ಹೆಸರನ್ನು ನೋಂದಾಯಿಸಿದ್ದರು. ಪದವಿ ವಿಭಾಗದಿಂದ 22 ಮತ್ತು ಸ್ನಾತಕೋತ್ತರ ಪದವಿ ವಿಭಾಗದಿಂದ 12 ವಿದ್ಯಾರ್ಥಿಗಳು ಈ ಚರ್ಚೆಯಲ್ಲಿ ಭಾಗವಹಿಸಿದ್ದರು.

ಸ್ಪರ್ಧೆಯ ವಿಷಯ:

ಪದವಿ ವಿದ್ಯಾರ್ಥಿಗಳು ಸಹಕಾರಿ ರಂಗದ ಬೆಳವಣಿಗೆಯಲ್ಲಿ ಯುವಕರ ಮತ್ತು ಮಹಿಳೆಯರ ಪಾತ್ರ

ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು ಸಹಕಾರ ಚಳುವಳಿಯನ್ನು ಯಶಸ್ವಿಗೊಳಿಸುವಲ್ಲಿ ಮಹಿಳೆಯರ ಪಾತ್ರ ಬಹಳ ಮುಖ್ಯ?

ಫಲಿತಾಂಶ:

ಪದವಿ ವಿದ್ಯಾರ್ಥಿಗಳು:

ಪ್ರಥಮ ಬಹುಮಾನ: ವೆಂಕಟೇಶ್ ಪ್ರಸಾದ, ಪೂರ್ಣಪ್ರಜ್ಞ ಸಂಧ್ಯಾ ಕಾಲೇಜು, ಉಡುಪಿ.

ದ್ವಿತೀಯ ಬಹುಮಾನ: ಅರ್ಜುನ್ ಶೆಣೈ, ಶ್ರೀ. ಧ. ಮಂ. ಕಾಲೇಜು, ಉಜಿರೆ

ತೃತೀಯ ಬಹುಮಾನ: ರಕ್ಷಾ, ಶ್ರೀ. ಧ. ಮಂ. ಕಾಲೇಜು, ಉಜಿರೆ

ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು:

ಪ್ರಥಮ ಬಹುಮಾನ: ಶ್ರೀಗಣೇಶ್ ಪಿ., ಭೌತಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ.

ದ್ವಿತೀಯ ಬಹುಮಾನ: ಅರ್ಪಿತ ಕೆ., ಕನ್ನಡ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ. ಮಂಗಳಗಂಗೋತ್ರಿ.

ತೃತೀಯ ಬಹುಮಾನ: ವಿನಯ ಆರ್. ಭಟ್, ಭುವನೇಂದ್ರ ಕಾಲೇಜು ಕಾರ್ಕಳ.

ಪ್ರತಿಭಾ ಪುರಸ್ಕಾರ:

ಚಂಢೀಗಡದ ಚಂಢೀಗರ್ ವಿಶ್ವವಿದ್ಯಾನಿಲಯದಲ್ಲಿ 2019ರ ಫೆಬ್ರವರಿ 1ರಿಂದ 5ರವರೆಗೆ ನಡೆದ ರಾಷ್ಟ್ರೀಯ ಯುವಜನೋತ್ಸವದ ಪ್ರದರ್ಶನವನ್ನು ಆಧರಿಸಿ ಈ ಕೆಳಗಿನ ಕಾಲೇಜು ವಿದ್ಯಾರ್ಥಿಗಳು ಟ್ರೋಫಿ ಮತ್ತು ನಗದು ಬಹುಮಾನವನ್ನು ಪಡೆದರು.

ಜಾನಪದ ನೃತ್ಯ – ಆಳ್ವಾಸ್ ಕಾಲೇಜು, ಮೂಡಬಿದ್ರೆ ಟ್ರೋಫಿ ಮತ್ತು 25,000 ನಗದು

ಛತ್ತೀಸ್‌ಗಡದ ರಾಯ್‌ಪುರದ ರವಿಶಂಕರ್ ಶುಕ್ಲಾ ವಿಶ್ವವಿದ್ಯಾನಿಲಯದಲ್ಲಿ 2019ರ ಫೆಬ್ರವರಿ 22ರಿಂದ 25ರವರೆಗೆ ನಡೆದ ಅಂತಾರಾಷ್ಟ್ರೀಯ ಯುವಜನೋತ್ಸವದ ಪ್ರದರ್ಶನವನ್ನು ಆಧರಿಸಿ ಈ ಕೆಳಗಿನ ಕಾಲೇಜು ವಿದ್ಯಾರ್ಥಿಗಳು ಟ್ರೋಫಿ ಮತ್ತು ನಗದು ಬಹುಮಾನವನ್ನು ಪಡೆದರು.

ಜಾನಪದ ನೃತ್ಯ – ಗೋವಿಂದದಾಸ ಕಾಲೇಜು, ಸುರತ್ಕಲ್, ಟ್ರೋಫಿ ಮತ್ತು 50,000 ನಗದು

2019–20ನೇ ಸಾಲಿನ ಸ್ನಾತಕೋತ್ತರ ವಿದ್ಯಾರ್ಥಿ ಪರಿಷತ್ತಿನ ಉದ್ಘಾಟನಾ ಕಾರ್ಯಕ್ರಮ ಹಾಗೂ ಅಂತರ್ ವಿಭಾಗ ಮಟ್ಟದ "ಪ್ರತಿಭಾ ಪ್ರದರ್ಶನ" ಕಾರ್ಯಕ್ರಮ:

ಸ್ನಾತಕೋತ್ತರ ವಿದ್ಯಾರ್ಥಿ ಪರಿಷತ್ತಿನ ಉದ್ಘಾಟನಾ ಕಾರ್ಯಕ್ರಮವು ದಿನಾಂಕ. 22.10.2019ರಂದು ಮಾನ್ಯ ಕುಲಪತಿಯವರಾದ ಪ್ರೊ. ಪಿ. ಎಸ್. ಯಡಪಡಿತ್ತಾಯ ಹಾಗೂ ಕುಲಸಚಿವರಾದ ಪ್ರೊ. ಎ. ಎಮ್. ಖಾನ್ ಇವರ ಅನುಪಸ್ಥಿತಿಯಲ್ಲಿ ಪರೀಕ್ಷಾಂಗ ಕುಲಸಚಿವರಾದ ಪ್ರೊ. ರವೀಂದ್ರಾಚಾರಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಉದ್ಘಾಟನೆಗೆ ಮುಖ್ಯ ಅತಿಥಿಗಳಾಗಿ ಶ್ರೀ ರೂಪೇಶ್ ಶೆಟ್ಟಿ, ಖ್ಯಾತ ತುಳು ಚಲನಚಿತ್ರ ನಟ ಮತ್ತು ನಿರ್ದೇಶಕರು ಇವರು ಆಗಮಿಸಿದ್ದರು. ತದನಂತರ ಅಂತರ್ ವಿಭಾಗ ಮಟ್ಟದ ಪ್ರತಿಭಾ ಪ್ರದರ್ಶನವು ದಿನಾಂಕ 22.10.2019ರಿಂದ 24.10.2019ರವರೆಗೆ ನಡೆಯಿತು.

ವಿವೇಕಾನಂದ ಜಯಂತಿ:

ದಿನಾಂಕ 28.01.2020ರಂದು ಸ್ವಾಮಿ ವಿವೇಕಾನಂದ ಜಯಂತಿಯನ್ನು ಮಾನ್ಯ ಕುಲಪತಿಗಳಾದ ಪ್ರೊ. ಪಿ. ಎಸ್. ಯಡಪಡಿತ್ತಾಯ ಹಾಗೂ ಕುಲಸಚಿವರಾದ ಪ್ರೊ. ಎ. ಎಂ. ಖಾನ್ ಇವರ ಉಪಸ್ಥಿತಿಯಲ್ಲಿ ವಿಶ್ವವಿದ್ಯಾನಿಲಯದಲ್ಲಿ ಆಚರಿಸಲಾಯಿತು. ಸ್ವಾಮಿ ಜಿತಕಮಾನಂದಜಿ, ರಾಮಕೃಷ್ಣ ಮಿಷನ್, ಮಂಗಳೂರು, ಕ್ಯಾಪ್ಟನ್ ಗಣೇಶ್ ಕಾರ್ಣಿಕ್, ಮಾಜಿ ವಿಧಾನ ಪರಿಷತ್ತು ಸದಸ್ಯರು, ಕರ್ನಾಟಕ ಮತ್ತು ಶ್ರೀ ಕೃಷ್ಣ ಉಪಾಧ್ಯಾಯ, ಪುತ್ತೂರು ಇವರುಗಳು ಮುಖ್ಯ ಅತಿಥಿಗಳಾಗಿದ್ದು ವಿವೇಕಾನಂದರ ಕುರಿತು ವಿಶೇಷ ಉಪನ್ಯಾಸವನ್ನು ನೀಡಿದರು. ನಂತರ ಶ್ರೀ ಪ್ರಕಾಶ್, ಮಲ್ಪೆ ಇವರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರಸ್ತುತ ಪಡಿಸಿದರು.

ಅಖಿಲ ಭಾರತ ಅಂತರ್ ವಿಶ್ವವಿದ್ಯಾನಿಲಯ ರಾಷ್ಟಮಟ್ಟದ ಯುವಜನೋತ್ಸವ:

ರಾಷ್ಟ್ರ ಮಟ್ಟದ ಯವಜನೋತ್ಸವವು ಅಮಿಟಿ ವಿಶ್ವವಿದ್ಯಾನಿಲಯ ನೋಯ್ಡ, ಇಲ್ಲಿ ದಿ. 03.02.2020ರಿಂದ 07.02.2020ರವರೆಗೆ ನಡೆಯಿತು. ಈ ಕಾರ್ಯಕ್ರಮದಲ್ಲಿ ಗೋವಿಂದದಾಸ್ ಕಾಲೇಜು, ಸುರತ್ಕಲ್ ಇಲ್ಲಿಂದ 17 ವಿದ್ಯಾರ್ಥಿಗಳು ಮತ್ತು ಎಂ.ಜಿ.ಎಂ. ಕಾಲೇಜು ಉಡುಪಿ ಇಲ್ಲಿನ 12 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಎಂ.ಜಿ.ಎಂ. ಕಾಲೇಜು, ಉಡುಪಿಯ ವಿದ್ಯಾರ್ಥಿಗಳು ಪ್ರಹಸನ ಪ್ರಥಮ ಮತ್ತು ಆಶುಭಾಷಣ ಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನಗಳನ್ನು ಪಡೆದಿರುತ್ತಾರೆ.

ಎಚ್. ಕನ್ನಡವನ್ನು ಅದರ ಎಲ್ಲಾ ಪ್ರಸಿದ್ಧ ರೂಪಗಳಲ್ಲಿ ಪ್ರಚಾರ ಮಾಡುವುದು:

- ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಸ್ವೀಕರಿಸಲಾಗಿದೆ.
- ಕನ್ನಡ ಭಾಷೆಯನ್ನು ಪ್ರಚಾರ ಮಾಡುವ ಉದ್ದೇಶದಿಂದ ವಿವಿಧ ಸಂಯೋಜಿತ ಕಾಲೇಜುಗಳಲ್ಲಿ ನಿಯಮಿತವಾಗಿ ಸರಣಿ ಉಪನ್ಯಾಸಗಳನ್ನು ಏರ್ಪಡಿಸಲಾಗಿದೆ.
- ಪ್ರಸಾರಾಂಗದ ಮೂಲಕ ಕನ್ನಡ ಪುಸ್ತಕಗಳು, ಕಾದಂಬರಿಗಳು, ಸಂಶೋಧನಾ ಪ್ರಕಟಣೆಗಳು ಹಾಗೂ ವ್ಯಕ್ತಿಚಿತ್ರಗಳನ್ನು ಮುದ್ರಿಸಲಾಗುತ್ತಿದೆ.
- ವಿಶ್ವವಿದ್ಯಾನಿಲಯದ ವೆಬ್‌ಸೈಟ್ ಅನ್ನು ಕನ್ನಡದಲ್ಲಿ ಮರು ವಿನ್ಯಾಸಗೊಳಿಸಲಾಗಿದೆ.

ಐ. ಪಿಪಿಪಿ, ಹಳೆ ವಿದ್ಯಾರ್ಥಿಗಳು/ಹಳೆ ವಿದ್ಯಾರ್ಥಿ ಸಂಘ ಮೊದಲಾದವುಗಳ ಮೂಲಕ ಹಣಕಾಸನ್ನು ಬಲಪಡಿಸುವ ಕಾರ್ಯಗಳು:

- ವೈಯಕ್ತಿಕ/ಸಾಂಸ್ಥಿಕ ದಾನಿಗಳ ಸಹಾಯದಿಂದ ವಿವಿಧ ಪೀಠಗಳನ್ನು ಸ್ಥಾಪಿಸಲಾಗಿದೆ.
- ಸರ್ಕಾರದ ಅನುದಾನದ ಮೂಲಕ ಪೀಠಗಳು/ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

ಜೆ. ಮುಂದಿನ ಸೆಮಿಸ್ಟರ್‌ಗಳನ್ನು ಆರಂಭಿಸುವ ಮುನ್ನ ಪದವಿ ಮತ್ತು ಸ್ನಾತಕೋತ್ತರ ಪದವಿಗಳ ಫಲಿತಾಂಶದ ಘೋಷಣೆಗಾಗಿ ನವೀನ ಕ್ರಮಗಳು

ಲಭ್ಯವಿರುವ ನೂತನ ತಂತ್ರಜ್ಞಾನ ಮತ್ತು ಸುಧಾರಿತ ಕ್ರಮಗಳನ್ನು ಅಳವಡಿಸಿಕೊಳ್ಳುವ ಮೂಲಕ ಮಂಗಳೂರು ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗವು ನಿರಂತರವಾಗಿ ಪ್ರಗತಿಯನ್ನು ಸಾಧಿಸುತ್ತಿದೆ. ಕೆಲವು ನವೀನ ಕ್ರಮಗಳು ಈ ಕೆಳಗಿನಂತಿವೆ:

- ವಿದ್ಯಾರ್ಥಿಗಳ ವಿವರಗಳನ್ನು ಆನ್‌ಲೈನ್ ಪ್ರವೇಶಾತಿ ವಿವರಗಳಿಂದ ನೇರವಾಗಿ ಪಡೆಯಲಾಗುತ್ತಿದೆ.

- ಪರೀಕ್ಷಾ ನೋಂದಣಿ ಮತ್ತು ಅಂತರಿಕ ಅಂಕಗಳ ದಾಖಲಿಸುವಿಕೆಯನ್ನು ಆನ್‌ಲೈನ್‌ನಲ್ಲಿ ಮಾಡಲಾಗುತ್ತಿದೆ.
- ಪರೀಕ್ಷಾ ಪ್ರವೇಶಾತಿ ಕಾರ್ಡುಗಳನ್ನು ಕಾಲೇಜುಗಳಿಗೆ ಆನ್‌ಲೈನ್ ಮೂಲಕ ನೇರವಾಗಿ ನೀಡಲಾಗುತ್ತಿದೆ.
- ಮೌಲ್ಯಮಾಪನಕ್ಕಾಗಿ ಎಲ್ಲಾ ಕೋರ್ಸುಗಳ ಉತ್ತರ ಪತ್ರಿಕೆಗಳನ್ನು ಕೋಡ್ ಮಾಡಲಾಗುತ್ತಿದೆ.
- ಉತ್ತರ ಪತ್ರಿಕೆಗಳಲ್ಲಿ ನೇರವಾಗಿ ಕೋಡ್‌ಗಳನ್ನು ಮುದ್ರಿಸುವ ಸಾಮರ್ಥ್ಯವನ್ನು ಹೊಂದಿರುವ ಮುದ್ರಕಗಳನ್ನು ಬಳಸುವ ಮೂಲಕ ಉತ್ತರ ಪತ್ರಿಕೆಯ ಕೋಡಿಂಗ್ ಅನ್ನು ಸ್ವಯಂಚಾಲಿತವಾಗಿ ಮಾಡುವ ಮೂಲಕ ಕೈಯಿಂದ ಮಾಡುವಾಗ ಸಂಭವಿಸುವ ತಪ್ಪುಗಳನ್ನು ಕಡಿಮೆ ಮಾಡಲಾಗಿದೆ.
- ಎಲ್ಲಾ ಅಂಕಗಳ ನಮೂದನ್ನು (ಥಿಯರಿ ಮತ್ತು ಪ್ರಾಯೋಗಿಕ) ಮೌಲ್ಯಮಾಪಕರು/ಪರೀಕ್ಷಕರು ನಮೂದಿಸುವುದರಿಂದ ಸಮಯವು ಉಳಿತಾಯವಾಗುತ್ತದೆ ಹಾಗೂ ಅಂಕಪಟ್ಟಿಯಲ್ಲಿನ ತಪ್ಪುಗಳೂ ಕಡಿಮೆ.
- ಅಕ್ಟೋಬರ್/ನವೆಂಬರ್ 2018ರ ಪರೀಕ್ಷೆಯಲ್ಲಿ ವಿಶ್ವವಿದ್ಯಾನಿಲಯವು ಮೌಲ್ಯಮಾಪನ ಕೇಂದ್ರದಲ್ಲಿಯೇ ಅಂಕಗಳನ್ನು ಆನ್‌ಲೈನ್ ಮೂಲಕ ದಾಖಲಿಸುವ ಹೊಸ ವ್ಯವಸ್ಥೆಯನ್ನು ಪರಿಚಯಿಸಿದೆ ಮತ್ತು ಮೌಲ್ಯಮಾಪನ ಕಾರ್ಯಗಳು ಪೂರ್ಣಗೊಂಡ ಒಂದು ವಾರದೊಳಗೆ ಫಲಿತಾಂಶಗಳನ್ನು ಪ್ರಕಟಿಸಲಾಗಿದೆ.
- ಏಪ್ರಿಲ್/ಮೇ 2019ರ ಪರೀಕ್ಷೆಯಲ್ಲಿ ಪ್ರಾಯೋಗಿಕ ಪರೀಕ್ಷೆಯ ಎಲ್ಲಾ ಅಂಕಗಳನ್ನು ಪ್ರಾಯೋಗಿಕ ಪರೀಕ್ಷೆಗಳನ್ನು ನಡೆಸಿದ ಕೇಂದ್ರದಿಂದಲೇ ನೇರವಾಗಿ ಆನ್‌ಲೈನ್ ಮೂಲಕ ದಾಖಲಿಸಲಾಗಿದೆ.

ಕೆ. ಶೈಕ್ಷಣಿಕ ಮಂಡಳಿಯ ವಿದ್ಯಾರ್ಥಿ ಪ್ರತಿನಿಧಿಗಳು (ಕೆಎಸ್‌ಯುನ ಅಧಿನಿಯಮ 2000 ಪ್ರಕರಣ 30)

ಸದರಿ ವಿಷಯಕ್ಕೆ ಸಂಬಂಧಿಸಿ, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ 2000ದ ಪ್ರಕರಣ 30(1)ರಡಿಯಲ್ಲಿ ದಿನಾಂಕ 01.04.2019 ರಿಂದ 31.03.2020 ರವರೆಗೆ ಮಂಗಳೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮಂಡಳಿಗೆ ಈ ಕೆಳಗಿನ ವಿದ್ಯಾರ್ಥಿ ಪ್ರತಿನಿಧಿಗಳು ನಾಮನಿರ್ದೇಶಿತರಾಗಿದ್ದರು.

ಪ್ರಕರಣ	ಹೆಸರು ಮತ್ತು ವಿಳಾಸ	ವರ್ಗ	ಇಂದ	ಇಲ್ಲಿಯವರೆಗೆ
30(1)(x)	ಕು. ಚೊಂದಮ್ಮ ಎಂ. ಬಿ. III ಬಿ.ಎಸ್ಸಿ., ಕಾವೇರಿ ಕಾಲೇಜು, ಗೋಣಿಕೊಪ್ಪಲ್– 571 213	ಪದವಿ/ಎನ್‌ಸಿಸಿ	19.11.2018	16.04.2019
30(1)(x)	ಶ್ರೀ ಲಾರೆನ್ಸ್ ಮೊಂತೇರೋ III ಬಿ. ಕಾಂ., ಕಾವೇರಿ ಕಾಲೇಜು, ಗೋಣಿಕೊಪ್ಪಲ್– 571 213	ಪದವಿ/ಎನ್‌ಸಿಸಿ	19.11.2018	16.04.2019
30(1)(x)	ಶ್ರೀ ಕಿರಣ್ ಪಿ. ಎಂ. III ಬಿ. ಕಾಂ., ಕಾವೇರಿ ಕಾಲೇಜು, ಗೋಣಿಕೊಪ್ಪಲ್– 571 213	ಸ್ನಾತಕೋತ್ತರ ಪದವಿ	19.11.2018	16.04.2019
30(1)(x)	ಕು. ದೀಕ್ಷಿತಾ II ಎಂ.ಎಸ್ಸಿ., ಗಣಿತಶಾಸ್ತ್ರ ವಿಭಾಗ ಮಂಗಳೂರು ವಿಶ್ವವಿದ್ಯಾನಿಲಯ ಮಂಗಳಗಂಗೋತ್ರಿ – 574 199	ಸ್ನಾತಕೋತ್ತರ ಪದವಿ	19.11.2018	04.05.2019
30(1)(x)	ಕು. ನೇಹಾ ರೌನಿಯಾರ್ II ಎಂ.ಬಿ.ಎ., ವ್ಯವಹಾರ ಆಡಳಿತ ವಿಭಾಗ ಮಂಗಳೂರು ವಿಶ್ವವಿದ್ಯಾನಿಲಯ ಮಂಗಳಗಂಗೋತ್ರಿ – 574 199	ವೃತ್ತಿಪರರು	19.11.2018	01.06.2019

30(1)(x)	ಕು. ವಾಣಿ III ಬಿ.ಎಸ್ಸಿ. ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು – 575 001	ವೃತ್ತಿಪರರು	09.12.2019	20.04.2020
30(1)(x)	ಕು. ಶ್ವೇತಾ ಪಿ. III ಬಿ. ಕಾಂ., ಗೋವಿಂದದಾಸ ಕಾಲೇಜು, ಸುರತ್ಕಲ್– 575 014 ಎನ್ಎಸ್ಎಸ್	09.12.2019	20.04.2020	
30(1)(x)	ಶ್ರೀ ಹೇಮಂತ ಎ. ಎಂ. III ಬಿ. ಎ., ಕಾವೇರಿ ಕಾಲೇಜು, ಗೋಣಿಕೊಪ್ಪಲ್– 571 213	ಎನ್ಎಸ್ಎಸ್	09.12.2019	20.04.2020
30(1)(x)	ಕು. ಅಕ್ಷತಾ ಸಿ. II ಎಂ.ಎಸ್ಸಿ., ಜೈವಿಕ ವಿಜ್ಞಾನ ವಿಭಾಗ ಮಂಗಳೂರು ವಿಶ್ವವಿದ್ಯಾನಿಲಯ ಮಂಗಳಗಂಗೋತ್ರಿ – 574 19'9	ಕ್ರೀಡೆ	09.12.2019	20.04.2020
30(1)(x)	ಶ್ರೀ ಕಿನ್ಜಂಗ್ ವಾಂಗ್ ಚುಕ್ III ಬಿಎಎಸ್ಎಲ್ಪಿ, ಮ್ಯಾಪ್ಸ್ ಕಾಲೇಜು, ಸಿ.ವಿ. ನಾಯಕ್ ಹಾಲ್ ಎದುರು, ಮಂಗಳೂರು–575003	ಕ್ರೀಡೆ	09.12.2019	20.04.2020
30(1)(x)	ಕು. ಸಹನಾ ದಿನೇಶ್ ಸಂಶೋಧನಾ ವಿದ್ಯಾರ್ಥಿ, ವಾಣಿಜ್ಯ ವಿಭಾಗ ಮಂಗಳೂರು ವಿಶ್ವವಿದ್ಯಾನಿಲಯ ಮಂಗಳಗಂಗೋತ್ರಿ – 574 199	ಸಂಶೋಧನಾ ವಿದ್ಯಾರ್ಥಿ	09.12.2019	08.12.2021

3. ಧ್ಯೇಯೋದ್ದೇಶ

* ಉನ್ನತ ಅಧ್ಯಯನ ಮತ್ತು ಗುಣಾತ್ಮಕ ಮಾನವ ಸಂಪನ್ಮೂಲವನ್ನು ಹುಟ್ಟು ಹಾಕುವ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಕೇಂದ್ರವನ್ನಾಗಿ ಬೆಳೆಸುವುದು.

ಕಾರ್ಯಯೋಜನೆ

* ಅತ್ಯುತ್ತಮ ಶೈಕ್ಷಣಿಕ, ಭೌತಿಕ, ಆಡಳಿತಾತ್ಮಕ, ಮೂಲ ಸೌಲಭ್ಯಯುಕ್ತ ನೈತಿಕ ವಾತಾವರಣವನ್ನು ಒದಗಿಸುವುದು.
* ಬೋಧನೆ, ಕಲಿಕೆ ಹಾಗೂ ಸಂಶೋಧನೆಯಲ್ಲಿ ಗುಣಮಟ್ಟ ಮತ್ತು ಘನತೆಯನ್ನು ಉನ್ನತೀಕರಿಸುವ ನೆಲೆಯಲ್ಲಿ ಉತ್ತೇಜನ ನೀಡುವುದು.
* ಪ್ರಾದೇಶಿಕ ಭಾಷೆ, ಜಾನಪದ, ಕಲೆ ಮತ್ತು ಸಂಸ್ಕೃತಿಗಳ ಅನನ್ಯತೆ ಮತ್ತು ಅಪೂರ್ವತೆಗಳನ್ನು ಕಾಪಾಡುವುದು ಮತ್ತು ಬೆಳೆಸುವುದು.
* ಸಾಮಾಜಿಕವಾಗಿ ಸಂವೇದನಾಶೀಲ, ಮಾನವೀಯ ಹಾಗೂ ಎಲ್ಲರನ್ನೂ ಒಳಗೊಳ್ಳುವ ಸಮಾನತೆಯ ಸಮಾಜವನ್ನು ನಿರ್ಮಾಣ ಮಾಡುವುದು.
* ಸೃಜನಶೀಲ ಹಾಗೂ ಹೊಸ ಪರಿವರ್ತನಾ ಮನೋಭಾವವನ್ನು ಸ್ಫುರಿಸುವ ವಿಮರ್ಶಾತ್ಮಕ ಚಿಂತನೆಯನ್ನು ಬೆಳೆಸುವುದು.

4. **ಸಂಸ್ಥೆ ಮತ್ತು ಆಡಳಿತ:**

ಎ. **ಆಂತರಿಕ ಮತ್ತು ಅಂತರ್ ಆವರಣ ಆಡಳಿತವನ್ನು ನಿರ್ವಹಿಸುವ ಕ್ರಮಗಳು:**

i. ದಿನನಿತ್ಯದ ಚಟುವಟಿಕೆಗಳ ಮೇಲ್ವಿಚಾರಣೆಗೆ ವೀಡಿಯೋ ಕಾನ್ಫರೆನ್ಸಿಂಗ್ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವುದು.

ii. ಅಧ್ಯಕ್ಷರು, ನಿರ್ದೇಶಕರು ಮತ್ತು ಪ್ರಾಂಶುಪಾಲರೊಡನೆ ನಿಯಮಿತವಾಗಿ ಸಭೆ ನಡೆಸುವುದು.

iii. ಕ್ಯಾಂಪಸ್‌ನ ವಿಭಾಗಗಳು, ಸ್ನಾತಕೋತ್ತರ ಕೇಂದ್ರ ಮತ್ತು ಕಾಲೇಜುಗಳಿಗೆ ಅಗತ್ಯವಾದಲ್ಲಿ ಮುಖತಃ ಭೇಟಿ.

iv. ವಿಭಾಗದ ಸುಗಮ ಕಾರ್ಯ ನಿರ್ವಹಣೆಗೆ ಆಡಳಿತ ವಿಭಾಗದೊಂದಿಗೆ ಮಧ್ಯವರ್ತಿಗಳಾಗಿ ಕಾರ್ಯ ನಿರ್ವಹಿಸಲು ವಿಭಾಗದ ಮುಖ್ಯಸ್ಥರಿಗೆ ಜವಾಬ್ದಾರಿಗಳನ್ನು ವಹಿಸುವುದು.

v. ಸಿಂಡಿಕೇಟ್ ಮತ್ತು ಶೈಕ್ಷಣಿಕ ಮಂಡಳಿಗಳಂತಹ ಆಡಳಿತದ ಉನ್ನತ ಮಟ್ಟದಲ್ಲಿ ತೆಗೆದುಕೊಂಡ ಕ್ರಮಗಳ ಕುರಿತು ಚರ್ಚೆಯ ಮೂಲಕ ಅನುಸರಣಾ ಚಟುವಟಿಕೆಗಳ ಮೇಲ್ವಿಚಾರಣೆ ನಡೆಸುವುದು.

ಬಿ. **ಆಡಳಿತಾತ್ಮಕ/ತಾಂತ್ರಿಕ/ಸಹಾಯಕ ಸಿಬ್ಬಂದಿಗಳ ಖಾಲಿ ಹುದ್ದೆಗಳನ್ನು ನಿರ್ವಹಿಸುವ ಕ್ರಮಗಳು:**

i. ಬೋಧಕ ಮತ್ತು ಬೋಧಕೇತರ ವರ್ಗಗಳಲ್ಲಿ ಖಾಲಿ ಇರುವ ಹುದ್ದೆಗಳ ವಿವರಗಳನ್ನು ಯುಜಿಸಿ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುತ್ತದೆ.

ii. ಬೋಧಕ ಸಿಬ್ಬಂದಿಗಳ ಹುದ್ದೆಗಳನ್ನು (ಬ್ಯಾಕ್‌ಲಾಗ್ ಮತ್ತು ಹೈದರಾಬಾದ್–ಕರ್ನಾಟಕ ಖಾಲಿ ಹುದ್ದೆಗಳು) ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗಿದ್ದು, ಉನ್ನತ ಶಿಕ್ಷಣ ಇಲಾಖೆ ಆದೇಶದಂತೆ ವಿವರಗಳನ್ನು ಕೆಇಎಗೆ ಕಳುಹಿಸಿಕೊಡಲಾಗಿದೆ.

iii. ಬೋಧಕ ಮತ್ತು ಬೋಧಕೇತರ ವಿಷಯಗಳಲ್ಲಿ ವಿಶ್ವವಿದ್ಯಾನಿಲಯದ ಸುಗಮ ಕಾರ್ಯ ನಿರ್ವಹಣೆಗೆ ಅಗತ್ಯ ಆಧಾರದ ಮೇಲೆ ಗೌರವ ಪ್ರಾಧ್ಯಾಪಕರು, ಸಂದರ್ಶಕ ಪ್ರಾಧ್ಯಾಪಕರು, ಅತಿಥಿ ಉಪನ್ಯಾಸಕರು ಮತ್ತು ತಾತ್ಕಾಲಿಕ ಬೋಧಕೇತರ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಲಾಗಿದೆ.

ಸಿ. **ಕ್ಯಾಂಪಸ್ ಭದ್ರತೆ (ಮುಖ್ಯ ಮತ್ತು ಇತರ ಆವರಣಗಳು):**

i. ಮಂಗಳಗಂಗೋತ್ರಿ ಆವರಣ, ಸ್ನಾತಕೋತ್ತರ ಕೇಂದ್ರ ಚಿಕ್ಕ ಅಳುವಾರ ಮತ್ತು ಮಂಗಳೂರಿನ ವಿಶ್ವವಿದ್ಯಾನಿಲಯ ಕಾಲೇಜುಗಳಲ್ಲಿ ಕಣ್ಗಾವಲು ವ್ಯವಸ್ಥೆಯನ್ನು ಮಾಡಲಾಗಿದೆ.

ii. ಕ್ಯಾಂಪಸ್‌ನ ನಿರ್ವಹಣೆಗಾಗಿ 24*7 ಭದ್ರತಾ ಸೇವೆಗಳನ್ನು ನಿಯೋಜಿಸಲಾಗಿದೆ.

ಡಿ. **ಬೋಧಕೇತರ ಮತ್ತು ಬೋಧಕ ಸಿಬ್ಬಂದಿಗಳ ಕ್ಷೇಮಾಭಿವೃದ್ಧಿ ಕ್ರಮಗಳು:**

i. ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ವೃತ್ತಿಪರ ಸಾಮರ್ಥ್ಯವನ್ನು ಹೆಚ್ಚಿಸಲು ವಿಶ್ವವಿದ್ಯಾನಿಲಯವು ಅನೇಕ ಕ್ರಮಗಳನ್ನು ಕೈಗೊಂಡಿದೆ. ವಿಶ್ವವಿದ್ಯಾನಿಲಯವು ಬೋಧಕ ವರ್ಗದವರಿಗೆ ಓರಿಯಂಟೇಶನ್ ಕಾರ್ಯಕ್ರಮಗಳು, ರಿಫ್ರೆಷರ್ ಕೋರ್ಸುಗಳು, ಬೇಸಗೆ ಮತ್ತು ಚಳಿಗಾಲದ ತರಗತಿಗಳು, ಕಾರ್ಯಾಗಾರಗಳು, ವಿಚಾರಸಂಕಿರಣಗಳು, ಸಮಾವೇಶಗಳು ಮತ್ತು ವಿಚಾರಗೋಷ್ಠಿಗಳಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸುತ್ತದೆ. ವಿಶ್ವವಿದ್ಯಾನಿಲಯದ ಬೋಧಕ ವರ್ಗದವರನ್ನು ವಿವಿಧ ಸಂಸ್ಥೆಗಳು ನೀಡುವ ಧನಸಹಾಯದ ಸಂಶೋಧನಾ ಯೋಜನೆಗಳಿಗೆ ಅರ್ಜಿ ಸಲ್ಲಿಸಲು ನಿರಂತರವಾಗಿ ಪ್ರೋತ್ಸಾಹಿಸುತ್ತದೆ. ಕಿರಿಯ ಬೋಧಕ ವರ್ಗದ ಸದಸ್ಯರಿಗೆ ತಮ್ಮ ಸಂಶೋಧನಾ ಚಟುವಟಿಕೆಯನ್ನು ಆರಂಭಿಸಲು ಮೂಲಭೂತ ಸೌಲಭ್ಯಗಳನ್ನು ಹೊಂದಲು 1 ಲಕ್ಷದವರೆಗೆ ಮೂಲ ಬಂಡವಾಳವನ್ನು ಒದಗಿಸುತ್ತದೆ. ಅಂತರ್‌ಶಿಸ್ತೀಯ ಸಂಶೋಧಕರಿಗೆ 5 ಲಕ್ಷದವರೆಗೆ ಮೂಲ ಬಂಡವಾಳವನ್ನು ನೀಡುವ ಮೂಲಕ ಅಂತರ್‌ಶಿಸ್ತೀಯ ಸಂಶೋಧನೆಯನ್ನು ಪ್ರೋತ್ಸಾಹಿಸಲಾಗುತ್ತಿದೆ. ಪೋಸ್ಟ್ ಡಾಕ್ಟರಲ್ ಸಂಶೋಧನೆಗಾಗಿ ಶಿಷ್ಯವೇತನವನ್ನು ಪಡೆದು ವಿದೇಶಕ್ಕೆ ತೆರಳುವವರಿಗೆ ಒಂದು ವರ್ಷದ ಅಧ್ಯಯನ ರಜೆಯನ್ನು ನೀಡಲಾಗುತ್ತದೆ ಮತ್ತು ಸಂಶೋಧನಾ ಕಾರ್ಯಗಳನ್ನು ಪೂರ್ಣಗೊಳಿಸಲು ವಿಶ್ರಾಂತಿ ರಜೆಯನ್ನೂ ನೀಡಲಾಗುತ್ತದೆ. ಉನ್ನತ ಶಿಕ್ಷಣ ಸಂಸ್ಥೆಗಳ ಬೆಳವಣಿಗೆಯಲ್ಲಿ ಶಿಕ್ಷಕರ ಪಾತ್ರ ಮತ್ತು ಪ್ರಾಮುಖ್ಯತೆಯನ್ನು ವಿಷದಪಡಿಸುವ ಉದ್ದೇಶದಿಂದ ವಿಶ್ವವಿದ್ಯಾನಿಲಯವು ಆಯ್ದ ಉತ್ತಮ ಶಿಕ್ಷಕರಿಗೆ 25,000/– ರೂ.ಗಳ ನಗದು ಬಹುಮಾನವನ್ನು ನೀಡುತ್ತದೆ. ಬೋಧಕೇತರ ಸಿಬ್ಬಂದಿಗಳಿಗೆ ವಿಶ್ವವಿದ್ಯಾನಿಲಯದ ಆಡಳಿತ ಮತ್ತು ಇತರ ಸಂಸ್ಥೆಗಳು ಆಯೋಜಿಸಿರುವ ತರಬೇತಿ ಕಾರ್ಯಕ್ರಮಗಳಿಗೆ ಹಾಜರಾಗುವಂತೆ ಪ್ರೋತ್ಸಾಹಿಸಲಾಗುತ್ತದೆ.

ii. ವಿಶ್ವವಿದ್ಯಾನಿಲಯವು ಒಂದು ಸ್ವ–ಸಂಯೋಜಿತ ಸೌಲಭ್ಯವಾಗಿದ್ದು, ಉನ್ನತ ಶಿಕ್ಷಣದಲ್ಲಿ ಶ್ರೇಷ್ಠತೆಯ ಅನ್ವೇಷಣೆಗೆ ಎಲ್ಲ ಅಗತ್ಯ ಸೌಲಭ್ಯಗಳು ಮತ್ತು ಮೂಲಸೌಕರ್ಯವನ್ನು ಒದಗಿಸುತ್ತದೆ. ಆಕರ್ಷಕ ಆಡಳಿತ ಸೌಧ, ಭೇಟಿ ನೀಡುವ ಗಣ್ಯರು ಮತ್ತು ಅಧ್ಯಾಪಕರಿಗೆ ಎರಡು ಅತಿಥಿ ಗೃಹಗಳು, ಸುಸಜ್ಜಿತ ಆರೋಗ್ಯ ಕೇಂದ್ರ, ಅನುಕೂಲಕರ ವ್ಯಾಪಾರ ಸಂಕೀರ್ಣ, ಎರಡು ರಾಷ್ಟ್ರೀಕೃತ ಬ್ಯಾಂಕುಗಳು ಮತ್ತು ಎಟಿಎಂಗಳಿವೆ. ಕ್ಯಾಂಪಸ್‌ನಲ್ಲಿ ಅಂಚೆ ಕಛೇರಿ ಮತ್ತು ದೂರವಾಣಿ ವಿನಿಮಯ ಕೇಂದ್ರವಿದೆ. ವಿಶ್ವವಿದ್ಯಾನಿಲಯವು ತನ್ನ ಉದ್ಯೋಗಿಗಳಿಗೆ ಕ್ಯಾಂಪಸಿನಲ್ಲಿಯೇ ವಸತಿನಿಲಯಗಳನ್ನು ಒದಗಿಸಿದೆ. ವಿಶ್ವವಿದ್ಯಾನಿಲಯದ ಆವರಣದಲ್ಲಿ ಮಹಿಳೆಯರು ಮತ್ತು ಪುರುಷರಿಗಾಗಿ ಎರಡು ವಸತಿನಿಲಯಗಳು ಮತ್ತು ಉದ್ಯೋಗಸ್ಥ ಮಹಿಳೆಯರಿಗಾಗಿ ವಸತಿನಿಲಯವಿದೆ. ಎಲ್ಲ ವಸತಿನಿಲಯಗಳಲ್ಲೂ ಸೌರ ಬಿಸಿನೀರಿನ ವ್ಯವಸ್ಥೆಯನ್ನು ಮಾಡಲಾಗಿದೆ. ಆಟದ ಮೈದಾನಗಳು ಮತ್ತು ಕೋರ್ಟುಗಳು, ಆಧುನಿಕ ಜಿಮ್ನಾಷಿಯಂ ಮತ್ತು ಒಳಾಂಗಣ ಕ್ರೀಡಾ ಸೌಲಭ್ಯವಿದೆ. ವಿಶ್ವವಿದ್ಯಾನಿಲಯದ ನೌಕರರು ವಿಶ್ವಮಂಗಳ ಸೊಸೈಟಿಯನ್ನು ರೂಪಿಸಿಕೊಂಡು ಕ್ಯಾಂಪಸ್‌ನಲ್ಲಿ ಪ್ರಾಥಮಿಕ ಶಾಲೆ, ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜನ್ನು ಯಶಸ್ವಿಯಾಗಿ ನಡೆಸುತ್ತಿದ್ದಾರೆ. ಅವರು ನೌಕರರು ಮತ್ತು ವಿದ್ಯಾರ್ಥಿಗಳ ಅಗತ್ಯಗಳನ್ನು ಪೂರೈಸಲು ನೌಕರರ ಸಹಕಾರಿ ಸಂಘವನ್ನೂ ನಡೆಸುತ್ತಿದ್ದಾರೆ. ವಿಶ್ವವಿದ್ಯಾನಿಲಯವು ಆರೋಗ್ಯ ಕೇಂದ್ರ, ಬೇಬಿ ಸಿಟ್ಟಿಂಗ್, ಉತ್ತಮ ಗುಣಮಟ್ಟದ ಆಂಗ್ಲ ಮಾಧ್ಯಮ ಶಾಲೆ, ಸಹಕಾರಿ ಕ್ರೆಡಿಟ್ ಸೊಸೈಟಿ, ಡಬಲ್ ರಸ್ತೆಯಲ್ಲಿ ವಾಕಿಂಗ್ ಲಾನ್, 400ಮೀ. ಟ್ರ್ಯಾಕ್, ಜಿಮ್ನಾಷಿಯಂ, ಉಡುಗೊರೆ ಕೇಂದ್ರ ಮತ್ತು ಸ್ಟೇಷನರಿ ಅಂಗಡಿಯನ್ನೂ ಹೊಂದಿದೆ. ವಿಶ್ವವಿದ್ಯಾನಿಲಯವು ಕುಡಿಯುವ ನೀರಿನ ಸೌಲಭ್ಯ ಮತ್ತು ನೀರು ಶುದ್ಧೀಕರಣ ವ್ಯವಸ್ಥೆಯನ್ನೂ ಹೊಂದಿದೆ.

iii. ಗಣಕಯಂತ್ರ ಮತ್ತು ಅಂತರ್ಜಾಲ ಬಳಕೆಯಲ್ಲಿ ಹೊಸ ತಂತ್ರಜ್ಞಾನದ ಬಗ್ಗೆ ಅರಿವನ್ನು ಮೂಡಿಸಲು ಹಾಗೂ ಐಸಿಟಿಯ ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವ ಬಗ್ಗೆ ವಿಶ್ವವಿದ್ಯಾನಿಲಯವು ಅಧ್ಯಾಪಕರಿಗೆ ನಿಯಮಿತ ತರಬೇತಿ ಕಾರ್ಯಕ್ರಮಗಳನ್ನೂ ನಡೆಸುತ್ತದೆ.

iv. ಮಾಹಿತಿ ಮತ್ತು ಸಂವಹನ ತಂತ್ರಜ್ಞಾನಗಳನ್ನು ಬಳಸಲು ಸಂಶೋಧಕರು, ಶಿಕ್ಷಣ ತಜ್ಞರು, ವಿದ್ಯಾರ್ಥಿಗಳು ಮತ್ತು ಆಡಳಿತ ವರ್ಗದವರಿಗೆ ಅಂತರ್ಜಾಲ ಸೌಲಭ್ಯವನ್ನು ಒದಗಿಸಲಾಗಿದೆ. ಪ್ರತೀ ಶೈಕ್ಷಣಿಕ ವರ್ಷದ ಆರಂಭದಲ್ಲಿ ವಿಶ್ವವಿದ್ಯಾನಿಲಯವು ಶೈಕ್ಷಣಿಕ ಕ್ಯಾಲೆಂಡರ್ ಅನ್ನು ಸಿದ್ಧಪಡಿಸಿ ವಿತರಿಸುತ್ತದೆ. ಇದು ಎಲ್ಲ ಶೈಕ್ಷಣಿಕ ಕಾರ್ಯಕ್ರಮಗಳು, ಪ್ರವೇಶಾತಿ ಮತ್ತು ಪರೀಕ್ಷಾ ವೇಳಾಪಟ್ಟಿಯ ನಿಖರ ಮಾಹಿತಿಯನ್ನು ಒದಗಿಸುತ್ತದೆ.

5. ಯುಜಿಸಿ ಅಧಿಸೂಚನೆ 2010ರ ಪ್ರಕಾರ ಐಕ್ಯೂಎಸಿ(ಆಂತರಿಕ ಗುಣಮಟ್ಟ ಖಾತರಿ ಕೋಶ) ಸಂವಿಧಾನ ಮತ್ತು ಅದರ ಕಾರ್ಯ ವೈಖರಿ:

ಉನ್ನತ ಶಿಕ್ಷಣ ಸಂಸ್ಥೆಗಳ ಕಾರ್ಯಕ್ಷಮತೆ ಮೌಲ್ಯಮಾಪನ, ಮೌಲ್ಯಮಾಪನ, ಮಾನ್ಯತೆ ಮತ್ತು ಗುಣಮಟ್ಟದ ಉನ್ನತೀಕರಣಕ್ಕಾಗಿ ನ್ಯಾಕ್ ರಾಷ್ಟ್ರೀಯ ಕ್ರಿಯಾ ಯೋಜನೆಯ ಅನುಸಾರವಾಗಿ ಐಕ್ಯೂಎಸಿ ಅನ್ನು 2010ರಲ್ಲಿ ಸ್ಥಾಪಿಸಲಾಯಿತು. ನ್ಯಾಕ್ ಮಾರ್ಗಸೂಚಿಗಳ ಪ್ರಕಾರ ಐಕ್ಯೂಎಸಿ ಗುಣಮಟ್ಟದ ವರ್ಧನೆಯ ಆಂತರೀಕರಣ ಮತ್ತು ಇ ಸಾಂಸ್ಥೀಕರಣಕ್ಕಾಗಿ ಶ್ರಮಿಸುತ್ತದೆ. ಇದು ವಿಶ್ವವಿದ್ಯಾನಿಲಯಕ್ಕೆ ಪೂರಕವಾಗಿ ಮತ್ತು ಸ್ವಯಂಪ್ರೇರಿತ ವ್ಯವಸ್ಥೆಯ ಭಾಗವಾಗಿ ಕಾರ್ಯವನ್ನು ನಿರ್ವಹಿಸುತ್ತದೆ. ಈ ಕೆಳಗಿನ ಉದ್ದೇಶಗಳನ್ನು ಐಕ್ಯೂಎಸಿ ಹೊಂದಿದೆ.

- ಸಮಯೋಚಿತ, ಸಮರ್ಥ ಮತ್ತು ಪ್ರಗತಿಪರ ಶೈಕ್ಷಣಿಕ, ಆಡಳಿತ ಮತ್ತು ಆರ್ಥಿಕ ಕಾರ್ಯಗಳನ್ನು ಖಚಿತಪಡಿಸುವುದು.
- ಶೈಕ್ಷಣಿಕ ಮತ್ತು ಸಂಶೋಧನಾ ಕಾರ್ಯಗಳ ಪ್ರಸ್ತುತತೆ ಮತ್ತು ಗುಣಮಟ್ಟವನ್ನು ಮೇಲ್ವಿಚಾರಣೆ ಮಾಡುವುದು/ಪರಿಶೀಲಿಸುವುದು.
- ಸಮಾಜದ ವಿವಿಧ ವರ್ಗಗಳಿಗೆ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಸಮಾನ ಅವಕಾಶ ಸಿಗುವಂತೆ ಮತ್ತು ಕೈಗೆಟುಕುವಂತೆ ನೋಡಿಕೊಳ್ಳುವುದು.
- ಬೋಧನೆ ಮತ್ತು ಕಲಿಕೆಯ ಆಧುನಿಕ ವಿಧಾನಗಳು ಸೂಕ್ತ ಹಾಗೂ ಅತ್ಯುತ್ತಮವಾಗಿರುವಂತೆ ಮತ್ತು ಅಳವಡಿಸಿಕೊಳ್ಳುವಂತೆ ನೋಡಿಕೊಳ್ಳುವುದು.
- ಮೌಲ್ಯಮಾಪನಾ ಕಾರ್ಯವಿಧಾನಗಳ ವಿಶ್ವಾಸಾರ್ಹತೆ.
- ಸಹಾಯಕ ರಚನೆಗಳು ಮತ್ತು ಸೇವೆಗಳ ಸಮರ್ಪಕತೆ, ನಿರ್ವಹಣೆ ಮತ್ತು ಕಾರ್ಯನಿರ್ವಹಣೆಯನ್ನು ಖಚಿತಪಡಿಸುವುದು.
- ಸಂಸ್ಥೆಗಳ ವಿವಿಧ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಚಟುವಟಿಕೆಗಳಿಗೆ ಗುಣಮಟ್ಟದ ಮಾನದಂಡಗಳು/ನಿಯತಾಂಕಗಳನ್ನು ಅಭಿವೃದ್ಧಿಪಡಿಸುವುದು ಮತ್ತು ಅನ್ವಯಿಸುವುದು.
- ಉನ್ನತ ಶಿಕ್ಷಣದ ಗುಣಮಟ್ಟದ ನಿಯತಾಂಕಗಳ ಬಗ್ಗೆ ಮಾಹಿತಿಯನ್ನು ನೀಡುವುದು.
- ಗುಣಮಟ್ಟ ಸಂಬಂಧಿ ವಿಷಯಗಳ ಬಗ್ಗೆ ಕಾರ್ಯಾಗಾರಗಳು ಮತ್ತು ವಿಚಾರ ಸಂಕಿರಣಗಳನ್ನು ಆಯೋಜಿಸುವುದು.

- ಗುಣಮಟ್ಟದ ಸುಧಾರಣೆಗೆ ಕಾರಣವಾಗುವ ವಿವಿಧ ಕಾರ್ಯಕ್ರಮಗಳು/ಚಟುವಟಿಕೆಗಳನ್ನು ದಾಖಲಿಸುವುದು.
- ಗುಣಮಟ್ಟ ಸಂಬಂಧಿ ಚಟುವಟಿಕೆಗಳಿಗಾಗಿ ಸಂಸ್ಥೆಯ ನೋಡಲ್ ಏಜೆನ್ಸಿಯಾಗಿ ಕಾರ್ಯನಿರ್ವಹಿಸುವುದು.
- ನಿಯತಾಂಕಗಳ ಆಧಾರದ ಮೇಲೆ ನ್ಯಾಕ್‌ಗೆ ಸಲ್ಲಿಸಬೇಕಾದ ವಾರ್ಷಿಕ ಗುಣಮಟ್ಟ ಭರವಸೆ ವರದಿ (ಐಕ್ಯೂಎಆರ್)ಯನ್ನು ಸಿದ್ಧಪಡಿಸುವುದು.
- ಎಂಐಎಸ್ ಮೂಲಕ ಸಾಂಸ್ಥಿಕ ದತ್ತಾಂಶ ಅಭಿವೃದ್ಧಿ ಮತ್ತು ನಿರ್ವಹಿಸುವುದು.
- ಸಂಸ್ಥೆಯಲ್ಲಿ ಗುಣಮಟ್ಟದ ಸಂಸ್ಕೃತಿಯನ್ನು ಅಭಿವೃದ್ಧಿಪಡಿಸುವುದು.
- ವಿವಿಧ ಶ್ರೇಯಾಂಕಗಳಿಗೆ ಒಳಗಾಗಲು ವಿಶ್ವವಿದ್ಯಾನಿಲಯವನ್ನು ಸಜ್ಜಾಗಿಸುವುದು.

ಐಕ್ಯುಎಸಿಯ (ಆಂತರಿಕ ಗುಣಮಟ್ಟ ಖಾತರಿ ಕೋಶ) ಸಲಹಾ ಮಂಡಳಿ:

ಕುಲಪತಿಗಳು ಮಂಗಳೂರು ವಿಶ್ವವಿದ್ಯಾನಿಲಯ	ಅಧ್ಯಕ್ಷರು
ಕುಲಸಚಿವರು ಮಂಗಳೂರು ವಿಶ್ವವಿದ್ಯಾನಿಲಯ	ಸದಸ್ಯರು
ಕುಲಸಚಿವರು (ಪರೀಕ್ಷಾಂಗ) ಮಂಗಳೂರು ವಿಶ್ವವಿದ್ಯಾನಿಲಯ	ಸದಸ್ಯರು
ಗ್ರಂಥಪಾಲಕರು ಮಂಗಳೂರು ವಿಶ್ವವಿದ್ಯಾನಿಲಯ	ಸದಸ್ಯರು
ಹಣಕಾಸು ಅಧಿಕಾರಿಗಳು ಮಂಗಳೂರು ವಿಶ್ವವಿದ್ಯಾನಿಲಯ	ಸದಸ್ಯರು
ಡೀನ್, ಕಲಾ ವಿಭಾಗದ ಪ್ರಾಧ್ಯಾಪಕರು ಮಂಗಳೂರು ವಿಶ್ವವಿದ್ಯಾನಿಲಯ	ಸದಸ್ಯರು
ಡೀನ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗದ ಪ್ರಾಧ್ಯಾಪಕರು ಮಂಗಳೂರು ವಿಶ್ವವಿದ್ಯಾನಿಲಯ	ಸದಸ್ಯರು
ಡೀನ್, ವಾಣಿಜ್ಯ ವಿಭಾಗದ ಪ್ರಾಧ್ಯಾಪಕರು ಮಂಗಳೂರು ವಿಶ್ವವಿದ್ಯಾನಿಲಯ	ಸದಸ್ಯರು
ಡೀನ್, ಶಿಕ್ಷಣ ವಿಭಾಗದ ಪ್ರಾಧ್ಯಾಪಕರು ಮಂಗಳೂರು ವಿಶ್ವವಿದ್ಯಾನಿಲಯ	ಸದಸ್ಯರು
ವಿದ್ಯಾರ್ಥಿ ಕಲ್ಯಾಣ/ಕ್ಷೇಮಪಾಲನಾ ನಿರ್ದೇಶಕರು ಮಂಗಳೂರು ವಿಶ್ವವಿದ್ಯಾನಿಲಯ	ಸದಸ್ಯರು
ನಿರ್ದೇಶಕರು, ಕಾಲೇಜು ಅಭಿವೃದ್ಧಿ ವಿಭಾಗ ಮಂಗಳೂರು ವಿಶ್ವವಿದ್ಯಾನಿಲಯ	ಸದಸ್ಯರು
ನಿರ್ದೇಶಕರು, ಗಣಕ ವಿಜ್ಞಾನ ವಿಭಾಗ ಮಂಗಳೂರು ವಿಶ್ವವಿದ್ಯಾನಿಲಯ	ಸದಸ್ಯರು
ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ಜ್ಞಾನ ಕಾವೇರಿ ಆವರಣ ಚಿಕ್ಕ ಅಳುವಾರ	ಸದಸ್ಯರು

ಸೋಮವಾರಪೇಟೆ ತಾಲೂಕು ಕೊಡಗು ಜಿಲ್ಲೆ	ಸದಸ್ಯರು
ಪ್ರೊ. ಮಂಜುನಾಥ ಪಟ್ಟಾಭಿ ವಸ್ತು ವಿಜ್ಞಾನ ವಿಭಾಗ ಮಂಗಳೂರು ವಿಶ್ವವಿದ್ಯಾನಿಲಯ	ಸದಸ್ಯರು
ಪ್ರೊ. ಡಿ. ಎಚ್. ಮಂಜಯ್ಯ ಗಣಕ ವಿಜ್ಞಾನ ವಿಭಾಗ ಮಂಗಳೂರು ವಿಶ್ವವಿದ್ಯಾನಿಲಯ	ಸದಸ್ಯರು
ಡಾ. ಎನ್. ಕರುಣಾಕರ್ ವಿಶ್ವವಿದ್ಯಾನಿಲಯ ವಿಜ್ಞಾನ ಮತ್ತು ಉಪಕರಣ ಕೇಂದ್ರ ಮಂಗಳೂರು ವಿಶ್ವವಿದ್ಯಾನಿಲಯ	ಸದಸ್ಯರು ಸದಸ್ಯರು
ಪ್ರೊ. ಎಂ. ಅಬ್ದುಲ್ ರೆಹಮಾನ್ ಮಾಜಿ ಕುಲಪತಿಗಳು ಕಣ್ಣೂರು ಮತ್ತು ಕ್ಯಾಲಿಕಟ್ ವಿಶ್ವವಿದ್ಯಾನಿಲಯಗಳು ಹಾಲ್ಸಿಆನ್, ಕಾಪ್ರಿಗುಡ್ಡ ಹೊಸ ರಸ್ತೆ ಮಂಗಳೂರು – 575 001	ಸದಸ್ಯರು
ಪ್ರೊ. ಎಸ್. ಎನ್. ಹೆಗ್ಡೆ ಮಾಜಿ ಕುಲಪತಿಗಳು 'ವಿದ್ವತ್', ಜೋಡು ರಸ್ತೆ, ವಿದ್ಯಾನಗರ, 2ನೇ ಹಂತ, ಕೆನರಾ ಬ್ಯಾಂಕಿನ ಹತ್ತಿರ, ಮೈಸೂರು– 570017	ಸದಸ್ಯರು
ಶ್ರೀ ಕಿಶೋರ್ ಆಳ್ವ ಸಿಇಒ, ಅದನಿ ಗ್ರೂಪ್, ಉಡುಪಿ	ಸದಸ್ಯರು
ಪ್ರೊ. ಕಿಶೋರಿ ನಾಯಕ್ ಕೆ. ಐಕ್ಯುಎಸಿ ನಿರ್ದೇಶಕರು ಮಂಗಳೂರು ವಿಶ್ವವಿದ್ಯಾನಿಲಯ	ಸಂಚಾಲಕರು

2019–20ರ ಅವಧಿಯ ಐಕ್ಯೂಎಸಿ ಚಟುವಟಿಕೆಗಳು

ಈ ಅವಧಿಯಲ್ಲಿ ಈ ಕೆಳಗಿನ ರ್‍ಯಾಂಕಿಂಗ್ ಏಜನ್ಸಿಗಳಿಗೆ ಅರ್ಜಿಗಳನ್ನು ಸಲ್ಲಿಸಲಾಗಿದೆ.

ಕ್ರಮ ಸಂಖ್ಯೆ	ರ್‍ಯಾಂಕಿಂಗ್ ಏಜನ್ಸಿ	ಅವಧಿ	ರ್‍ಯಾಂಕಿಂಗ್ ಚಟುವಟಿಕೆಗಳು	ಫಲಿತಾಂಶ
1	ಯುಐ ಗ್ರೀನ್ ಮೆಟ್ರಿಕ್ ವರ್ಲ್ಡ್ ಯೂನಿವರ್ಸಿಟಿ ರ್‍ಯಾಂಕಿಂಗ್	ಮೇ ಇಂದ ಅಕ್ಟೋಬರ್ 2019	ಸಂಬಂಧಿಸಿದ ಇಂಜಿನಿಯರ್ ವಿಭಾಗದಿಂದ ಇದಕ್ಕೆ ಅಗತ್ಯವಾದ ಪೂರಕ ದಾಖಲೆಗಳನ್ನು ಪಡೆಯಲಾಗಿದೆ. ಅರಣ್ಯ ಪ್ರದೇಶದ ಲೆಕ್ಕ, ವಾಹನ ನಿಲುಗಡೆ ಸ್ಥಲ, ನೀರಿನ ಹೀರಿಕೆಯ ಪ್ರಮಾಣ, ಸಸ್ಯ ಬೆಳೆಸಿದ ಪ್ರದೇಶವನ್ನು ಗೂಗಲ್ ನಕ್ಷೆ ನೋಡಿ ಗುರುತಿಸಲಾಗಿದೆ. ಗ್ರೀನ್ ಮೆಟ್ರಿಕ್ ಪೋರ್ಟಲ್‌ನಲ್ಲಿ ಇರುವ ಅಂಶಗಳಂತೆ ವಿಶ್ವವಿದ್ಯಾನಿಲಯ ಆವರಣದ ಛಾಯಾಚಿತ್ರ ಮತ್ತಿತರ ದಾಖಲೆಗಳನ್ನು ಸಂಗ್ರಹಿಸಿ ವಿಶ್ಲೇಷಿಸಲಾಗಿದೆ.	ದೇಶದಲ್ಲಿ ಎರಡನೇ ಸ್ಥಾನ ಮತ್ತು ವಿಶ್ವದಲ್ಲಿ 178ನೇ ಸ್ಥಾನ ಪಡೆದಿದೆ. ಡಿಸೆಂಬರ್ 3, 2019ರಂದು ಫಲಿತಾಂಶ ಘೋಷಣೆಯಾಗಿದೆ.
2	ಕ್ಯೂಎಸ್ ವಿಶ್ವ ಯೂನಿವರ್ಸಿಟಿ ರ್‍ಯಾಂಕಿಂಗ್ 2020 (ಅಂತರಾಷ್ಟ್ರೀಯ ಏಜೆನ್ಸಿ) ಕ್ಯೂಎಸ್ ವಿಶ್ವ ಯೂನಿವರ್ಸಿಟಿ ರ್‍ಯಾಂಕಿಂಗ್ 2021	ಜುಲೈ 2019 ನವೆಂಬರ್ 2019 ಮತ್ತು ಮಾರ್ಚ್ 2020	ಆಡಳಿತದ ಹಲವು ವಿಭಾಗಗಳಿಂದ ದಾಖಲೆಗಳನ್ನು ಪಡೆದು ವಿಶ್ಲೇಷಿಸಿ, ಅಪ್ಲೋಡ್ ಮಾಡಲಾಗಿದೆ.	ಭಾರತದ ಕ್ಯೂಎಸ್ ರ್‍ಯಾಂಕಿಂಗ್‌ನಲ್ಲಿ 48ನೇ ಸ್ಥಾನ 2020. (ಅಕ್ಟೋಬರ್ 24, 2019ರಂದು ಫಲಿತಾಂಶ ಘೋಷಣೆ) ಫಲಿತಾಂಶವನ್ನು ನಿರೀಕ್ಷಿಸಲಾಗಿದೆ.
3	ಕೆ–ಎಸ್‌ಯುಆರ್‌ಎಫ್ ರ್‍ಯಾಂಕಿಂಗ್ಸ್ (ರಾಷ್ಟ್ರೀಯ ಏಜೆನ್ಸಿ)	ಜನವರಿ – ಮಾರ್ಚ್ 2018	ಆಡಳಿತದ ಹಲವು ವಿಭಾಗಗಳಿಂದ ದಾಖಲೆಗಳನ್ನು ಪಡೆದು ವಿಶ್ಲೇಷಿಸಿ, ಅಪ್ಲೋಡ್ ಮಾಡಲಾಗಿದೆ.	4 ತಾರಾ ಮೌಲ್ಯ/ ಸ್ಟಾರ್ ಸ್ಟೇಟಸ್ ಮತ್ತು ರಾಜ್ಯದಲ್ಲಿ 6ನೇ ಸ್ಥಾನ. (ಫಲಿತಾಂಶ ಘೋಷಣೆ ಫೆಬ್ರವರಿ 2020)
4	ಇಂಡಿಯಾ ಟುಡೇ ಎಂಡಿಆರ್‌ಎ ಬೆಸ್ಟ್ ಯೂನಿವರ್ಸಿಟಿ ರ್‍ಯಾಂಕಿಂಗ್ 2019 ಇಂಡಿಯಾ ಟುಡೇ ಎಂಡಿಆರ್‌ಎ ಬೆಸ್ಟ್ ಯೂನಿವರ್ಸಿಟಿ ರ್‍ಯಾಂಕಿಂಗ್ 2020	ಡಿಸೆಂಬರ್ 2018 ಜನವರಿ 2020 (ಒಂದು ತಿಂಗಳ ಅವಧಿ)	ಮಾಹಿತಿ ಸಂಗ್ರಹಕ್ಕಾಗಿ ಫಾರ್ಮಾಟನ್ನು ತಯಾರಿಸಿ, ವಿವಿಧ ವಿಭಾಗಗಳಿಂದ ಮತ್ತು ಆಡಳಿತ ವಿಭಾಗದಿಂದ, ಗ್ರಂಥಾಲಯದಿಂದ ಮಾಹಿತಿ ಪಡೆದುಕೊಂಡು, ಎಣಿಕೆ ಮಾಡಿ, ಅಪ್ಲೋಡ್ ಮಾಡಲಾಗಿದೆ.	ಶೈಕ್ಷಣಿಕ ಸಂಸ್ಥೆಗಳಲ್ಲಿ 8ನೇ ಸ್ಥಾನವನ್ನು ಪಡೆದಿದೆ. (ಫಲಿತಾಂಶ ಘೋಷಣೆ: ಜುಲೈ 1, 2019) ಫಲಿತಾಂಶಕ್ಕಾಗಿ ನಿರೀಕ್ಷಿಸಲಾಗುತ್ತಿದೆ.
5	ನ್ಯಾಶನಲ್ ಇನ್ಸ್‌ಟ್ಯೂಶನಲ್ ರ್‍ಯಾಂಕಿಂಗ್ ಫ್ರೇಮ್‌ವರ್ಕ್, ಎಂಹೆಚ್‌ಆರ್‌ಡಿ, (ಎನ್‌ಐಆರ್‌ಎಫ್) 2019 ನ್ಯಾಶನಲ್ ಇನ್ಸ್‌ಟ್ಯೂಶನಲ್ ರ್‍ಯಾಂಕಿಂಗ್ ಫ್ರೇಮ್‌ವರ್ಕ್, ಎಂಹೆಚ್‌ಆರ್‌ಡಿ,	ನವೆಂಬರ್ 2018 ನವೆಂಬರ್ 2019 ಇತರರಿಂದ ಮಾಹಿತಿ ಸಂಗ್ರಹಣೆ,	ಮಾಹಿತಿ ಸಂಗ್ರಹಕ್ಕಾಗಿ ಫಾರ್ಮಾಟನ್ನು ತಯಾರಿಸಿ, ಮಂಗಳೂರು ವಿ.ವಿ.ಯ ವಿವಿಧ ವಿಭಾಗಗಳಿಂದ, ಚಿಕ್ಕಅಳುವಾರ, ವಿ.ವಿ. ಕಾಲೇಜು ಮಂಗಳೂರು ಮತ್ತು ಎಫ್ ಎಂ ಕೆ ಎಂ ಸಿ ಮಡಿಕೇರಿ ಕಾಲೇಜುಗಳಿಂದ ಮಾಹಿತಿ ಪಡೆದು–ಕೊಂಡು, ಎಣಿಕೆ ಮಾಡಿ, ಅಪ್ಲೋಡ್ ಮಾಡಲಾಗಿದೆ.	ರಾಷ್ಟ್ರಮಟ್ಟದಲ್ಲಿ 87ನೇ ಸ್ಥಾನ. (ಫಲಿತಾಂಶ ಘೋಷಣೆ: ಏಪ್ರಿಲ್ 8, 2019) ವಿಶ್ವವಿದ್ಯಾನಿಲಯ (ರ್‍ಯಾಂಕ್ ಪಟ್ಟಿ 101–150) (ಫಲಿತಾಂಶ ಘೋಷಣೆ: ಜುಲೈ 11, 2020)

6	(ಎನ್‌ಐಆರ್‌ಎಫ್) 2020 ದಿ ವೀಕ್ ಬೆಸ್ಟ್ ಯೂನಿವರ್ಸಿಟಿ ರ್ಯಾಂಕಿಂಗ್ಸ್ ಸರ್ವೆ 2019, (ರಾಷ್ಟ್ರೀಯ ಏಜೆನ್ಸಿ)	ಇತರರಿಂದ ಮಾಹಿತಿ ಸಂಗ್ರಹಣೆ,	ದೇಶದಲ್ಲಿ 31ನೇ ಸ್ಥಾನ.

ಐಕ್ಯೂಎಸಿಯಿಂದ ನಡೆಸಲ್ಪಟ್ಟ ಕಾರ್ಯಾಗಾರಗಳು

ಕ್ರಮ ಸಂಖ್ಯೆ	ವಿಷಯ	ದಿನಾಂಕ	ಸ್ಥಳ	ಅತಿಥಿಗಳ ಹೆಸರು	ಭಾಗವಹಿಸಿದವರ ಸಂಖ್ಯೆ	ಷರಾ
1.	ನ್ಯಾಕ್ ಮಾನ್ಯತೆಯ ಕುರಿತು ವಿಶೇಷ ಉಪನ್ಯಾಸ	0 8 / 0 5 / 2019	ಹೊಸ ಸೆನೆಟ್ ಸಭಾಂಗಣ ಮಂಗಳ–ಗಂಗೋತ್ರಿ.	ಪ್ರೊ. ಎಂ. ಅಬ್ದುಲ್ ರೆಹೆಮಾನ್, ಕಣ್ಣೂರು ಮತ್ತು ಕ್ಯಾಲಿಕಟ್ ವಿಶ್ವವಿದ್ಯಾನಿಲಯಗಳ ಮಾಜಿ ಉಪಕುಲಪತಿಗಳು. ಪ್ರೊ. ಎ. ಎಂ ಖಾನ್, ಕುಲಸಚಿವರು, ಮಂಗಳೂರು ವಿಶ್ವವಿದ್ಯಾನಿಲಯ,	260	
2.	ನ್ಯಾಕ್ ಮಾನ್ಯತೆ ಪಡೆಯಲಿರುವ ಸಂಸ್ಥೆಗಳಿಗಾಗಿ ನ್ಯಾಕ್ ಅರಿವು / ಜಾಗೃತಿ ಕಾರ್ಯಗಾರ	3 0 – 0 5 – 2019	ಹಳೆ ಸೆನೆಟ್ ಸಭಾಂಗಣ, ಮಂಗಳ–ಗಂಗೋತ್ರಿ	ಪ್ರೊ. ಎಂ. ಅಬ್ದುಲ್ ರೆಹೆಮಾನ್, ಕಣ್ಣೂರು ಮತ್ತು ಕ್ಯಾಲಿಕಟ್ ವಿಶ್ವವಿದ್ಯಾನಿಲಯಗಳ ಮಾಜಿ ಉಪಕುಲಪತಿಗಳು. ಡಾ ಬದ್ರಿ ಹೆಚ್. ಎಸ್., ಉಪ ನಿರ್ದೇಶಕರು ಐಕ್ಯೂಎಸಿ ಸದಸ್ಯರು, ಕಾರ್ಯದರ್ಶಿ, ಪ್ರೆಸಿಡೆನ್ಸಿ ವಿಶ್ವವಿದ್ಯಾಲಯ, ಬೆಂಗಳೂರು.	ಹಲವು ಕಾಲೇಜುಗಳಿಂದ ಬಂದ 150	ಪಿಎಂಇಬಿ (ಪ್ಲಾನಿಂಗ್ ಮಾನಿಟರಿಂಗ್ ಮತ್ತು ಇವ್ಯಾಲ್ಯುವೇಶನ್ ಬೋರ್ಡ್) ನೊಂದಿಗೆ ಸಹಭಾಗಿತ್ವ.

ವರದಿಗಳು

ಕ್ರಮ ಸಂಖ್ಯೆ	ವರದಿಗಳು	ಅವಧಿ	ಚಟುವಟಿಕೆಗಳು	ಷರಾ
1	ಆನ್ಲೈನ್ ಮೂಲಕ ಬೋಧಕ ವರ್ಗದ ಹಿಮ್ಮಾಹಿತಿ ಸಂಗ್ರಹಣೆ	ಮೇ 2019	ತಾತ್ಕಾಲಿಕ, ಖಾಯಂ, ಮತ್ತು ಆಹ್ವಾನಿತ ಉಪನ್ಯಾಸಕರು/ ಪ್ರಾಧ್ಯಾಪಕರಿಂದ ಮಿಂಚಂಚೆ ವಿಳಾಸ ಪಡೆದು ಅವರಿಗೆ ಯೂಸರ್ ನೇಮ್ ಮತ್ತು ಕ್ರೆಡೆನ್ಶಿಯಲ್ಸ್ ಅನ್ನು ನೀಡಲಾಗಿದೆ. ಆನ್‌ಲೈನ್ ಮೂಲಕ ಪಡೆದ ಬೋಧಕ ವರ್ಗದವರ ಹಿಮ್ಮಾಹಿತಿಯನ್ನು ವಿಶ್ಲೇಷಿಸಲಾಗುತ್ತಿದೆ.	ವಿಶ್ಲೇಷಣಾ ವರದಿಯನ್ನು ತಯಾರಿಸಲಾಗಿದೆ.
2	ವಾರ್ಷಿಕ ಗುಣಮಟ್ಟ ಭರವಸಾ ವರದಿ	ಜೂನ್ 2018 ಡಿಸೆಂಬರ್ 2019	ಫಾರ್ಮ್ಯಾಟನ್ನು ತಯಾರಿಸಿ, ಹಲವು ಅಧ್ಯಯನ ವಿಭಾಗಗಳು, ಪೀಠಗಳು ಮತ್ತು ಇತರ ಸೆಕ್ಷನ್‌ಗಳಿಂದ ಮಾಹಿತಿ ಸಂಗ್ರಹಿಸಿ, ವಿಶ್ಲೇಷಿಸಿ, ಕಂಪ್ಯೂಟರೀಕರಣಗೊಳಿಸಿ, ನ್ಯಾಕ್‌ಗೆ ಆನ್ಲೈನ್ ಮೂಲಕ ಸಲ್ಲಿಸಲಾಗಿದೆ.	
3	ಸಾಂಸ್ಥಿಕ ಗುಣಮಟ್ಟ ಮೌಲ್ಯಮಾಪನ ಮಾಹಿತಿ ನ್ಯಾಕ್ – 3ನೇ ಸೈಕಲ್‌ಗೆ ಅರ್ಜಿ	2019 ಜುಲೈ	ಆಡಳಿತ ವಿಭಾಗಗಳು ಮತ್ತು ಅಧ್ಯಯನ ವಿಭಾಗಗಳಿಂದ ಸಂಗ್ರಹಿಸಿದ ಮಾಹಿತಿಯನ್ನು ವಿಶ್ಲೇಷಿಸಿ ಅಪಲೋಡ್ ಮಾಡಲಾಗುತ್ತಿದೆ.	30–01–2020

4	ನ್ಯಾಕ್ ಎಸ್ಎಸ್ಆರ್ ವರದಿ (ಸ್ವಯಂ ಮೌಲ್ಯಮಾಪನ ವರದಿ)ಯ ಮಾನದಂಡಗಳ ಪ್ರಕಾರ ಮಾಹಿತಿ ಸಂಗ್ರಹಣೆ ಮತ್ತು ವಿಶ್ಲೇಷಣೆ (ಮಾನದಂಡ 7)	ಮೇ 2019	ಆಡಳಿತದ ವಿವಿಧ ವಿಭಾಗಗಳು, ದತ್ತಿ ಪೀಠಗಳು ಮತ್ತು ಇಂಜಿನಿಯರಿಂಗ್ ವಿಭಾಗ ಮತ್ತು ವಿವಿಧ ಅಧ್ಯಯನ ವಿಭಾಗಗಳಿಂದ ಪಡೆದ ಮಾಹಿತಿಯನ್ನು ವಿಶ್ಲೇಷಿಸಿ ಅಪ್ಲೋಡ್ ಮಾಡಲಾಗಿದೆ.	23–03–2020.
5	ನ್ಯಾಕ್‌ಗೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯದ ವಿಸ್ತೃತ ಪ್ರೊಫೈಲ್	ಅಕ್ಟೋಬರ್ 2019.		
6	ನ್ಯಾಕ್ ವಿದ್ಯಾರ್ಥಿ ತೃಪ್ತಿ ಸಮೀಕ್ಷೆ	ಮಾರ್ಚ್ 25ರಿಂದ ಏಪ್ರಿಲ್ 24	ಅಧ್ಯಯನ ವಿಭಾಗಗಳಿಂದ ವಿದ್ಯಾರ್ಥಿಗಳ ಮಾಹಿತಿಯನ್ನು ಪಡೆದು ಎಸ್ಎಸ್ಆರ್‌ಗೆ ಅಪ್ಲೋಡ್ ಮಾಡಲಾಗಿದೆ. ಈ ಸಮೀಕ್ಷೆಯ ಕುರಿತು ವಿದ್ಯಾರ್ಥಿಗಳು ಮತ್ತು ಬೋಧಕರಿಗೆ ಮಾಹಿತಿ ನೀಡಲಾಗಿದೆ. ನ್ಯಾಕ್‌ನ ಸಲುವಾಗಿ ಈ ಸಮೀಕ್ಷೆಯನ್ನು ಕೈಗೊಳ್ಳಲಾಗಿದೆ.	23/ 03/ 2020. 24/ 03/ 2020. 25/ 03/ 2020.
7	ಮಾಹಿತಿಯನ್ನು ಕ್ರಮಬದ್ಧಗೊಳಿಸುವಿಕೆ ಮತ್ತು ಡಿವಿವಿಯಿಂದ ಪರಿಶೀಲನೆ	ಏಪ್ರಿಲ್ 13ರಿಂದ ಮೇ 10 2020ರವರೆಗೆ	ದಿವಿವಿ ಬಗ್ಗೆ ನ್ಯಾಕ್‌ನಿಂದ ಪ್ರಶ್ನೆಗಳು ಬಂದಿದ್ದು, ವಿಸ್ತೃತ ಪ್ರೊಫೈಲ್ ತಯಾರಿಕೆ ಮತ್ತು ಅಂತಿಮ ಸ್ಪಷ್ಟೀಕರಣವನ್ನು ಸಲ್ಲಿಸಲಾಗಿದೆ.	08–05–2020
8	ನ್ಯಾಕ್ ಡಿವಿವಿ ಬಗ್ಗೆ ಏಳು ಸ್ಪಷ್ಟೀಕರಣಗಳನ್ನು ಕೇಳಿದೆ (ವಿವಿಧ ಮಾನದಂಡಗಳಿ–ಗನುಗುಣವಾಗಿ) ಕೋವಿಡ್ 19ರ ಕಾರಣ–ದಿಂದಾಗಿ ಅಂತಿಮ ವಿಸ್ತರಣಾ ಗಡುವನ್ನು ಪಡೆದ ನಂತರ		ಅಂತಿಮ ಮಾಹಿತಿ ಪರಿಶೀಲನೆ ನಡೆದಿದ್ದು ಮರುಸಲ್ಲಿಕೆ ಮಾಡಲಾಗಿದೆ.	27–05–2020

ತಕ್ಷಣದ ಭವಿಷ್ಯದ ಯೋಜನೆಗಳು:

- ಎಸ್ಎಸ್ಆರ್ ವರದಿಯ ಮೂಲಕ ಸಂಗ್ರಹಿಸಿದ ದತ್ತಾಂಶದ ಪ್ರಕಾರ, 2018–19ನೇ ಸಾಲಿಗೆ ಸಿದ್ಧಪಡಿಸಿದ ಎಕ್ಯೂಎಆರ್ ಅನ್ನು ಮರು ಹೊಂದಿಸುವುದು ಮತ್ತು ಮಾರ್ಪಡಿಸುವುದು. ಸಲಹಾ ಸಮಿತಿಯ ಮೂಲಕ ಅನುಮೋದಿಸಿದ ನಂತರ ಅಪ್‌ಲೋಡ್ ಮಾಡುವುದು ಮತ್ತು ಸಲ್ಲಿಸುವುದು.
- 2019–20ನೇ ಸಾಲಿನ ಎಕ್ಯೂಎಆರ್ ತಯಾರಿಸುವುದು.
- 2019–20ನೇ ಸಾಲಿನ ವಿದ್ಯಾರ್ಥಿಗಳ ಪ್ರತಿಕ್ರಿಯೆಯನ್ನು ಆನ್‌ಲೈನ್ ಮೂಲಕ ಸಂಗ್ರಹಿಸುವುದು.
- 2019–20ನೇ ಸಾಲಿನ ಅಧ್ಯಾಪಕರ ಪ್ರತಿಕ್ರಿಯೆಯನ್ನು ಆನ್‌ಲೈನ್ ಮೂಲಕ ಸಂಗ್ರಹಿಸುವುದು.

ದೀರ್ಘಕಾಲಿಕ ಯೋಜನೆಗಳು:

- ವಿಶ್ವವಿದ್ಯಾನಿಲಯದ ಮಾಹಿತಿ ನಿರ್ವಹಣಾ ವ್ಯವಸ್ಥೆ(ಐಎಂಎಸ್)ಯನ್ನು ಅಭಿವೃದ್ಧಿಪಡಿಸುವುದು.
- ಸಂಶೋಧನೆ ಮತ್ತು ಬೋಧನೆಯಲ್ಲಿ ಗುಣಮಟ್ಟವನ್ನು ಹೆಚ್ಚಿಸಲು ವಿಭಾಗಗಳೊಂದಿಗೆ ಸಂಪರ್ಕವನ್ನು ಹೊಂದುವುದು.
- ಇ–ಆಡಳಿತ ಸೇರಿದಂತೆ ಆಡಳಿತದಲ್ಲಿ ದಕ್ಷತೆಯನ್ನು ಹೆಚ್ಚಿಸುವ ಸಲುವಾಗಿ ಕಾರ್ಯವಿಧಾನಗಳನ್ನು ರೂಪಿಸುವುದು.
- ಕ್ಯಾಂಪಸ್‌ನಲ್ಲಿ ಸ್ನಾತಕೋತ್ತರ ಕಾರ್ಯಕ್ರಮಗಳಿಗೆ ವಿದ್ಯಾರ್ಥಿಗಳ ದಾಖಲಾತಿಯನ್ನು ಹೆಚ್ಚಿಸುವ ಕಾರ್ಯವಿಧಾನಗಳನ್ನು ರೂಪಿಸುವುದು.
- ವಿಭಾಗಗಳ ಉತ್ತಮ ಅಭ್ಯಾಸ/ಆಚರಣೆಗಳನ್ನು ಗುರುತಿಸುವುದು ಮತ್ತು ಅದನ್ನು ಅಧ್ಯಾಪಕರಾದ್ಯಂತ ಪಸರಿಸುವುದು.

6. ಕೆಎಸ್‌ಯು ಕಾಯ್ದೆ 2000ದ ಪ್ರಕಾರ ಕಾರ್ಯಕ್ರಮದ ಸಂವೀಕ್ಷಣೆ ಮತ್ತು ಮೌಲ್ಯಮಾಪನ ಮಂಡಳಿ(ಪಿಎಂಇಬಿ)ಯ ಸಂವಿಧಾನ ಮತ್ತು ಅದರ ಕಾರ್ಯವೈಖರಿ:

ಯೋಜನೆ. ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿಯು ಈ ಕೆಳಗಿನ ಸದಸ್ಯರನ್ನು ಒಳಗೊಂಡಿದೆ. ಅವರೆಂದರೆ:

ಎ. ಕುಲಪತಿಗಳು

ಬಿ. ಕುಲಸಚಿವರು

ಸಿ. ಕುಲಸಚಿವರು (ಪರೀಕ್ಷಾಂಗ)

ಡಿ. ಇಬ್ಬರು ಹಿರಿಯ ಡೀನ್ ಪ್ರಾಧ್ಯಾಪಕರು

ಇ. ಇಬ್ಬರು ಹಿರಿಯ ಪ್ರಾಧ್ಯಾಪಕರು
(ವಿಜ್ಞಾನ ಮತ್ತು ತಂತ್ರಜ್ಞಾನ, ಮಾನವಿಕ ಮತ್ತು ಸಮಾಜ ವಿಜ್ಞಾನ)

ಎಫ್. ರಾಜ್ಯ ಸರ್ಕಾರವು ಎರಡು ವರ್ಷಗಳ ಅವಧಿಗೆ ನೇಮಕ ಮಾಡಿದ ಒಬ್ಬ ತಜ್ಞರು.

ಜಿ. ಯೋಜನಾ ಇಲಾಖೆಯ ರಾಜ್ಯ ಸರ್ಕಾರದ ಒಬ್ಬ ಅಧಿಕಾರಿ – ಉಪಕಾರ್ಯದರ್ಶಿ ಅಥವಾ ಜಂಟಿ ಯೋಜನಾ ನಿರ್ದೇಶಕರ ಹುದ್ದೆಗಿಂತ ಕೆಳಗಿಲ್ಲದ ಹುದ್ದೆಯ ವ್ಯಕ್ತಿಯನ್ನು ರಾಜ್ಯ ಸರ್ಕಾರವು ನಾಮ ನಿರ್ದೇಶನ ಮಾಡಿದೆ.

ಎಚ್. ಕೈಗಾರಿಕೆ ಮತ್ತು ವ್ಯಾಪಾರದ ಇಬ್ಬರು ಪ್ರತಿನಿಧಿಗಳು ಸಾಮಾನ್ಯವಾಗಿ ವಿಶ್ವವಿದ್ಯಾನಿಲಯದ ಪ್ರದೇಶದಲ್ಲಿ ವಾಸಿಸುವವರನ್ನು ರಾಜ್ಯ ಸರ್ಕಾರವು ಎರಡು ವರ್ಷಗಳ ಅವಧಿಗೆ ನಾಮ ನಿರ್ದೇಶನ ಮಾಡಿದೆ.

ಐ. ಸದಸ್ಯ ಕಾರ್ಯದರ್ಶಿ ... ಪಿಎಂಇಬಿ ನಿರ್ದೇಶಕರು

ನಿರ್ದೇಶಕರ ಕರ್ತವ್ಯಗಳು ಮತ್ತು ಜವಾಬ್ದಾರಿಗಳು:

- ವಿಶ್ವವಿದ್ಯಾನಿಲಯದ ಆಡಳಿತಾತ್ಮಕ, ಶೈಕ್ಷಣಿಕ, ಅಭಿವೃದ್ಧಿ, ಹಣಕಾಸು ಮತ್ತು ಪರೀಕ್ಷಾ ಶಾಖೆಗಳಿಗೆ ಸಂಬಂಧಿಸಿದ ದತ್ತಾಂಶವನ್ನು ಸೂಕ್ತವಾಗಿ ವಿಶ್ವವಿದ್ಯಾನಿಲಯದ ಆರಂಭದಿಂದಲೂ ಸ್ಥಾಪಿಸುವುದು ಮತ್ತು ನಿರ್ವಹಿಸುವುದು.
- ಕೋರ್ಸುಗಳ ವಿವರಗಳನ್ನು ಸಂಗ್ರಹಿಸುವುದು ಮತ್ತು ಸ್ಥಾಪಿಸುವುದು. ಪಠ್ಯಕ್ರಮ, ಸ್ಥಾಪನೆಯ ವೇಳಾಪಟ್ಟಿ, ಎಲ್ಲಾ ಅಧ್ಯಾಪಕರ ಸಿ.ವಿ., ಸ್ನಾತಕೋತ್ತರ ವಿಭಾಗಗಳು ಮತ್ತು ಘಟಕಗಳ ಬೆಳವಣಿಗೆ ಮತ್ತು ಬಲಪಡಿಸುವಿಕೆ, ದೇಶದೊಳಗಿನ ಮತ್ತು ಹೊರಗಿನ ವಿವಿಧ ಧನಸಹಾಯ ಸಂಸ್ಥೆಗಳು ಮತ್ತು ಏಜೆನ್ಸಿಗಳಿಂದ ನಿರಂತರ ಮಾಹಿತಿ ಮತ್ತು ಪ್ರತಿಕ್ರಿಯೆಯನ್ನು ಪಡೆಯುವುದು.
- ವಿವಿಧ ಏಜೆನ್ಸಿಗಳಿಂದ ಲಭ್ಯವಿರುವ ನಿಧಿಗೆ ಸಂಬಂಧಿಸಿದ ಮಾಹಿತಿಯನ್ನು ಪ್ರಸಾರ ಮಾಡುವುದು, ವಿವಿಧ ಹಣಕಾಸು ಇಲಾಖೆಗಳಿಗೆ ಸಲ್ಲಿಸಬೇಕಾದ ಯೋಜನೆಯ ಪ್ರಸ್ತಾಪಗಳನ್ನು ಸಿದ್ಧಪಡಿಸಲು ಬೋಧಕ ವರ್ಗದವರಿಗೆ ಮಾರ್ಗದರ್ಶನ ನೀಡುವುದು ಮತ್ತು ಸಹಾಯವನ್ನು ಮಾಡುವುದು.
- ಯುಜಿಸಿ, ಡಿಎಸ್‌ಟಿ, ಡಿಒಡಿ, ಡಿಎಇ ಮತ್ತು ಇತರ ಪ್ರಾಯೋಜಿತ ಸಂಶೋಧನಾ ಯೋಜನೆಗಳ ಪ್ರಧಾನ ಸಂಶೋಧಕರೊಂದಿಗೆ ಆತ್ಮೀಯವಾಗಿ ನಡೆದುಕೊಳ್ಳುವುದು ಮತ್ತು ಯೋಜನೆಗಳನ್ನು ಪೂರ್ಣಗೊಳಿಸುವುದು.
- ಸಿಬ್ಬಂದಿಗಳು ತಮ್ಮ ದಿನನಿತ್ಯದ ಕೆಲಸಗಳಿಗಾಗಿ ವಿಶ್ವವಿದ್ಯಾನಿಲಯದ ದತ್ತಾಂಶವನ್ನು ದಾಖಲಿಸಲು ಮತ್ತು ನಿರ್ವಹಿಸಲು ಪ್ರಸ್ತುತ ಇರುವ ಸಿಬ್ಬಂದಿಗಳಿಗೆ ಸೂಕ್ತ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುವುದು.
- ಬೋಧಕ ವರ್ಗದವರು ಮತ್ತು ಸಂಶೋಧಕರ ಸಂವಹನಕ್ಕಾಗಿ ವಿಜ್ಞಾನಿಗಳು/ಪ್ರಸಿದ್ಧ ಶಿಕ್ಷಣ ತಜ್ಞರು ಮತ್ತು ವೈಜ್ಞಾನಿಕ ಸಂಸ್ಥೆಗಳ ಡೈರೆಕ್ಟರಿಯನ್ನು ರಚಿಸುವುದು.
- ಸಹಯೋಗಿ ಮತ್ತು ಅಂತರ್‌ಶಿಸ್ತೀಯ ಶೈಕ್ಷಣಿಕ ಕಾರ್ಯಗಳನ್ನು ಉತ್ತೇಜಿಸಲು ಧನಸಹಾಯ ಸಂಸ್ಥೆಗಳು/ವಿಭಾಗಗಳು/ಅಧ್ಯಾಪಕರು/ಸಂಶೋಧಕರೊಡನೆ ಸಂಪರ್ಕ ಸಾಧಿಸುವುದು.
- ಕುಲಪತಿಗಳೊಡನೆ ಸಮಾಲೋಚಿಸಿ ಕಾಲಕಾಲಕ್ಕೆ ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿಯ ಸಭೆಗಳನ್ನು ಆಯೋಜಿಸುವುದು.
- ಅಧ್ಯಾಪಕರು ಮತ್ತು ಸಂಶೋಧನಾ ವಿದ್ಯಾರ್ಥಿಗಳಲ್ಲಿ ಸಂಶೋಧನಾ ಆಸಕ್ತಿಯನ್ನು ಉತ್ತೇಜಿಸಲು ಪ್ರದರ್ಶನಗಳು, ಪ್ರಾತ್ಯಕ್ಷಿಕೆಗಳು, ಸಮ್ಮೇಳನಗಳು, ವಿಚಾರಸಂಕಿರಣಗಳು, ವಿಶೇಷ ಉಪನ್ಯಾಸಗಳು ಮೊದಲಾದವುಗಳನ್ನು ಸಂಯೋಜಿಸುವುದು.

– ಸಮರ್ಪಕ ಅಂಕಿ ಅಂಶಗಳೊಂದಿಗೆ ವಿವಿಧ ಅಭಿವೃದ್ಧಿ ಚಟುವಟಿಕೆಗಳ ಯೋಜನೆ, ನಿರ್ವಹಣೆ ಮತ್ತು ಅನುಷ್ಠಾನದಲ್ಲಿ ಕುಲಪತಿಗಳಿಗೆ ಮತ್ತು ಆಡಳಿತ ವಿಭಾಗಕ್ಕೆ ಸಹಾಯ ಮಾಡುವುದು.

7. **ಕುಲಪತಿ/ಸರ್ಕಾರದ ನಿರ್ದೇಶನಗಳ ಅನುಸರಣೆ – ಸ್ಥಿತಿಗತಿ ವರದಿ.**

ಗೌರವ ಪದವಿಗಳು ಮತ್ತು ಇತರ ಪದವಿಗಳು:

i) ಸಿಂಡಿಕೇಟ್ ಸದಸ್ಯರಲ್ಲಿ ಮೂರನೇ ಎರಡಕ್ಕೆ ಕಡಿಮೆಯಿಲ್ಲದಷ್ಟು ಸದಸ್ಯರು ಅನುಮೋದಿಸಿದರೆ ಅವರು ಪ್ರಖ್ಯಾತ ಸಾಧಕ ಮತ್ತು ಸ್ಥಾನದ ಕಾರಣ ಈ ಅಭಿಪ್ರಾಯಕ್ಕೆ/ಅಂತಹ ಪದವಿಯನ್ನು ಪಡೆಯಲು ಅರ್ಹರಾಗಿದ್ದಾರೆ ಎಂದು ಭಾವಿಸಿ ಯಾವುದೇ ವ್ಯಕ್ತಿಗೆ ಗೌರವ ಪದವಿ ಅಥವಾ ಇತರ ಶೈಕ್ಷಣಿಕ ಪದವಿಗಳನ್ನು ನೀಡಬೇಕೆಂದು ಅವರು ಶಿಫಾರಸು ಮಾಡುತ್ತಾರೆ.

ii) ಗೌರವ ಪದವಿ ಅಥವಾ ಅಂತಹ ಪದವಿಯನ್ನು ವಿಶೇಷ ಸಂದರ್ಭಗಳಲ್ಲಿ ಮಾತ್ರ ಪ್ರಧಾನ ಮಾಡಬಹುದು. ಇದನ್ನು ನೀಡಬೇಕೆಂಬ ಕಾರಣಕ್ಕೆ ನೀಡಲಾಗುವುದಿಲ್ಲ. ಸಾಹಿತ್ಯ, ತತ್ತ್ವಶಾಸ್ತ್ರ, ಕಲೆ, ಸಂಗೀತ, ಚಿತ್ರಕಲೆ ಅಥವಾ ಕಲೆ ಅಥವಾ ವಿಜ್ಞಾನ ಅಥವಾ ತಂತ್ರಜ್ಞಾನ ವಿಭಾಗದ ಯಾವುದೇ ವಿಷಯ ಅಥವಾ ಶಿಕ್ಷಣದ ಕ್ಷೇತ್ರಕ್ಕೆ ಅವರು ಸಲ್ಲಿಸಿದ ಗಮನಾರ್ಹ ಸೇವೆಯನ್ನು ಗುರುತಿಸಿ ಗಣನೀಯವಾಗಿ ಸೇವೆಯನ್ನು ಸಲ್ಲಿಸಿದ ವ್ಯಕ್ತಿಗಳನ್ನು ಗುರುತಿಸಿ ಅವರಿಗೆ ಮಾತ್ರ ಇಂತಹ ಗೌರವ ಪದವಿಗಳನ್ನು ಪ್ರಧಾನ ಮಾಡಲಾಗುತ್ತದೆ. (ಡಿ.ಲಿಟ್)

iii) ವಿಜ್ಞಾನ ಮತ್ತು ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಗಳ ಯೋಜನೆ, ಸಂಘಟನೆ ಮತ್ತು ಅಭಿವೃದ್ಧಿ ಮಾಡಿದವರಿಗೆ ಡಾಕ್ಟರ್ ಆಫ್ ಸೈಯನ್ಸ್ ಆಂಡ್ ಟೆಕ್ನಾಲಜಿ(ಡಿ.ಎಸ್.ಟಿ) ಆನರೀಸ್ ಕೌಸಾ ಪ್ರಧಾನ ಮಾಡಲಾಗುವುದು.

iv) ವಿಶೇಷ ವಕೀಲರು, ನ್ಯಾಯಾಧೀಶರು, ನ್ಯಾಯಶಾಸ್ತ್ರಜ್ಞರು ಮತ್ತು ಸ್ಟೇಟ್ಸ್‌ಮನ್ ಅಥವಾ ಸಾರ್ವಜನಿಕ ಹಿತದೃಷ್ಟಿಯಿಂದ ಗಮನಾರ್ಹ ಕೊಡುಗೆಯನ್ನು ನೀಡಿದ ವ್ಯಕ್ತಿಗಳಿಗೆ ಮಾತ್ರ ಡಾಕ್ಟರ್ ಆಫ್ ಲಾಸ್(ಎಲ್.ಎಲ್.ಡಿ) ಆನರೀಸ್ ಕೌಸಾ ಪ್ರಧಾನ ಮಾಡಲಾಗುವುದು.

v) ಗೌರವ ಪದವಿಗಳನ್ನು ವಾರ್ಷಿಕ ಘಟಿಕೋತ್ಸವದಲ್ಲಿ ಮಾತ್ರ ಪ್ರಧಾನ ಮಾಡಲಾಗುತ್ತದೆ. ಅದನ್ನು ವೈಯಕ್ತಿಕವಾಗಿ ಅಥವಾ ಗೈರುಹಾಜರಿಯಲ್ಲಿ ಪಡೆದುಕೊಳ್ಳಬಹುದಾಗಿದೆ.

vi) ಗೌರವ ಪದವಿಗಳನ್ನು ನೀಡುವ ಘಟಿಕೋತ್ಸವದಲ್ಲಿ ವ್ಯಕ್ತಿಗಳ ಪ್ರಸ್ತುತಿಯನ್ನು ಕುಲಪತಿಗಳು ನಡೆಸುತ್ತಾರೆ.

vii) ವಾರ್ಷಿಕ ಘಟಿಕೋತ್ಸವವನ್ನು ನಿಯಂತ್ರಿಸುವ ಶಾಸನಗಳಲ್ಲಿ ವಿವರಿಸಿರುವ ಕಾರ್ಯವಿಧಾನವು ಗೌರವ ಪದವಿಗಳನ್ನು ನೀಡುವ ಸಂದರ್ಭದಲ್ಲಿ ಮ್ಯುಟಾಟಿಸ್/ಮ್ಯುಟಾಂಡಿಸ್ ಅನ್ವಯಿಸುತ್ತದೆ. ನಂತರ ಗೌರವ ಪದವಿಯನ್ನು ಪಡೆದವರಿಗೆ ಪದವಿಯನ್ನು ಪಡೆದ ನಂತರ ಸಂಕ್ಷಿಪ್ತವಾಗಿ ಮಾತುಗಳನ್ನು ಆಡಲು ಅವಕಾಶವನ್ನು ನೀಡಬಹುದು ಅಥವಾ ಘಟಿಕೋತ್ಸವದ ಭಾಗವಾಗಿ ಉಳಿಯಬಹುದು.

viii) ಅಗತ್ಯವಾದಲ್ಲಿ ಘಟಿಕೋತ್ಸವದ ಕಾರ್ಯ ವಿಧಾನಕ್ಕೆ ಸಂಬಂಧಿಸಿದಂತೆ ಕುಲಾಧಿಪತಿಗಳ ಪೂರ್ವ ಅನುಮೋದನೆಯೊಂದಿಗೆ ಕುಲಪತಿಗಳು ಸೂಕ್ತ ಬದಲಾವಣೆಗಳನ್ನು ಮಾಡಬಹುದು.

8. **ಕೆಎಸ್ಎಚ್ಇಸಿ ಕಾಯ್ದೆ 2000ದ ಆದೇಶಕ್ಕೆ ಅನುಗುಣವಾಗಿ ಪ್ರತೀವರ್ಷ ಮಾರ್ಚ್ 31ರ ಮೊದಲು ಅಂಗಸಂಸ್ಥೆ ಕಾರ್ಯವಿಧಾನಗಳನ್ನು ಪೂರ್ಣಗೊಳಿಸುವುದು–ಇಲ್ಲ**

9. **ಸಾಮಾಜಿಕ ವ್ಯಾವರ್ಥಕ ಮತ್ತು ಅಂತರ್ಗತ ನೀತಿ ಅಧ್ಯಯನ ಕೇಂದ್ರ (ಸೆಂಟರ್ ಫಾರ್ ಸೋಸಿಯಲ್ ಎಕ್ಸ್‌ಕ್ಲೂಸಿವ್ ಆಂಡ್ ಇನ್‌ಕ್ಲೂಸಿವ್ ಪಾಲಿಸಿ) – ಸ್ಥಿತಿಗತಿ ವರದಿ**

ವಿಶ್ವವಿದ್ಯಾನಿಲಯ ಅನುದಾನ ಆಯೋಗ (ಯುಜಿಸಿ) ಪ್ರಾಯೋಜಿತ ಸಾಮಾಜಿಕ ವ್ಯಾವರ್ಥಕ ಮತ್ತು ಅಂತರ್ಗತ ನೀತಿ ಅಧ್ಯಯನ ಕೇಂದ್ರ (ಸಿಎಸ್ಇಐಪಿ) ಸಾಮಾಜಿಕ ಕ್ಷೇತ್ರಗಳಲ್ಲಿ ಸಂಶೋಧನೆ ಮತ್ತು ಬೋಧನೆ ನಡೆಸಲು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಯುಜಿಸಿಯ ಹತ್ತನೇ ಯೋಜನೆಯಡಿಯಲ್ಲಿ ಸ್ಥಾಪಿಸಲಾದ ಬಹುಶಿಸ್ತಿನ ಸಂಶೋಧನಾ ಕೇಂದ್ರವಾಗಿದೆ. ಹೊರಗಿಡುವಿಕೆ, ತಾರತಮ್ಯದ ಅಧ್ಯಯನಗಳು, ಅಂತರ್ಗತ ನೀತಿ, ಜಾತಿ, ಜನಾಂಗೀಯತೆ ಮತ್ತು ಧರ್ಮದ ಆಧಾರದ ಮೇಲೆ ತಾರತಮ್ಯ, ಹೊರಗಿಡುವಿಕೆ ಮತ್ತು ಸೇರ್ಪಡೆಗಳನ್ನು ಕುರಿತಾಗಿ ಸಂದರ್ಭೋಚಿತ ಸಮಸ್ಯೆಗಳ ಕುರಿತಾಗಿ ಸಂಶೋಧನೆ ಮತ್ತು ಬೋಧನೆ ಮಾಡುವುದು ಕೇಂದ್ರದ ಪ್ರಮುಖ ಉದ್ದೇಶವಾಗಿದೆ. ಸೈದ್ಧಾಂತಿಕ ಮತ್ತು ಪ್ರಾಯೋಗಿಕ ಮಟ್ಟಗಳಲ್ಲಿ ಹೊರಗಿಡುವಿಕೆ ಮತ್ತು ತಾರತಮ್ಯದ ಸ್ವರೂಪ ಮತ್ತು ಕ್ರಿಯಾತ್ಮಕ ತಿಳುವಳಿಕೆಯನ್ನು ಹೆಚ್ಚಿಸುವತ್ತ ಗಮನಹರಿಸುವ ಉದ್ದೇಶವನ್ನು ಕೇಂದ್ರವು ಹೊಂದಿದೆ. ಪ್ರಸ್ತುತ ಸಿಎಸ್ಇಐಪಿ ಕೇಂದ್ರವು ಅನೇಕ ಸಂಶೋಧನಾ ಯೋಜನೆಗಳನ್ನು ರೂಪಿಸಿಕೊಂಡಿದೆ. ವಿವಿಧ ಜರ್ನಲ್‌ಗಳಲ್ಲಿ ಸಾಮಾಜಿಕವಾಗಿ ಹೊರಗಿಡುವಿಕೆ ಮತ್ತು ಅಂತರ್ಗತ ನೀತಿಗಳಿಗೆ ಸಂಬಂಧಿಸಿದ ವಿಷಯಗಳ ಕುರಿತು ಸಂಶೋಧನಾ ಲೇಖನಗಳನ್ನು ಪ್ರಕಟಿಸುತ್ತಿದೆ. ವಿಚಾರ ಸಂಕಿರಣಗಳು, ಕಾರ್ಯಾಗಾರಗಳು ಮತ್ತು

ತರಬೇತಿಗಳನ್ನು ಆಯೋಜಿಸುತ್ತಿದೆ.

ಕೇಂದ್ರದ ಉದ್ದೇಶಗಳು:

- ಜಾತಿ/ಜನಾಂಗೀಯತೆ ಮತ್ತು ಧರ್ಮದ ಆಧಾರದ ಮೇಲೆ ತಾರತಮ್ಯ, ಹೊರಗಿಡುವಿಕೆ ಮತ್ತು ಸೇರ್ಪಡೆಗಳ ವಿವರಗಳನ್ನು ಅರ್ಥೈಸಿಕೊಳ್ಳುವುದು.
- ತಾರತಮ್ಯ ಮತ್ತು ಹೊರಗಿಡುವಿಕೆಯ ಸ್ವರೂಪ ಮತ್ತು ಕ್ರಿಯಾತ್ಮಕ ತಿಳುವಳಿಕೆಯನ್ನು ಹೆಚ್ಚಿಸುವುದು.
- ತಾರತಮ್ಯ, ಹೊರಗಿಡುವಿಕೆ ಮತ್ತು ಸೇರ್ಪಡೆಗಳನ್ನು ಸಂದರ್ಭೋಚಿತಗೊಳಿಸುವುದು ಮತ್ತು ಸಮಸ್ಯಾತ್ಮಕಗೊಳಿಸುವುದು.
- ಪ್ರಾಯೋಗಿಕ ಮಟ್ಟದಲ್ಲಿ ತಾರತಮ್ಯದ ಬಗ್ಗೆ ತಿಳುವಳಿಕೆ ಮೂಡಿಸುವುದು.
- ಅಂಚಿನಲ್ಲಿರುವ ಗುಂಪುಗಳ ಹಕ್ಕುಗಳನ್ನು ರಕ್ಷಿಸಲು ನೀತಿಗಳನ್ನು ರೂಪಿಸುವುದು ಮತ್ತು ಹೊರಗಿಡುವಿಕೆ ಮತ್ತು ತಾರತಮ್ಯದ ಸಮಸ್ಯೆಗಳನ್ನು ನಿರ್ಮೂಲನೆ ಮಾಡುವುದು.

ಸಿಎಸ್‌ಇಐಪಿ ಕೇಂದ್ರದ ಸಿಬ್ಬಂದಿಗಳು:

ಪ್ರಸ್ತುತ ಮಂಗಳೂರು ವಿಶ್ವವಿದ್ಯಾನಿಲಯದ ಸಾಮಾಜಿಕ ವ್ಯಾವರ್ಥಕ(ಹೊರಗಿಡುವಿಕೆ) ಮತ್ತು ಅಂತರ್ಗತ ನೀತಿ ಅಧ್ಯಯನ ಕೇಂದ್ರ(ಸಿಎಸ್‌ಇಐಪಿ)ದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ವಿವರಗಳು ಈ ಕೆಳಗಿನಂತಿವೆ. (ಒಬ್ಬರು ಸಹ ಪ್ರಾಧ್ಯಾಪಕರು ಹಾಗೂ ಉಪ ನಿರ್ದೇಶಕರು, ಸಹಾಯಕ ಪ್ರಾಧ್ಯಾಪಕರು ಹಾಗೂ ಸಹ ನಿರ್ದೇಶಕರು, ಸಹ ಸಂಶೋಧಕರು, ಸಂಶೋಧನಾ ಸಹಾಯಕರು, ವೃತ್ತಿಪರ ಸಹಾಯಕರು ಮತ್ತು ಇಬ್ಬರು ಡಾಟಾ ಎಂಟ್ರಿ ಆಪರೇಟರ್ ಹುದ್ದೆ ಖಾಲಿ ಇದೆ.) ಈ ಸ್ಥಾನಗಳನ್ನು ಆದಷ್ಟು ಬೇಗ ಭರ್ತಿ ಮಾಡುವ ಪ್ರಕ್ರಿಯೆಯನ್ನು ವಿಶ್ವವಿದ್ಯಾನಿಲಯವು ಆರಂಭಿಸಿದೆ.

ಕೇಂದ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ವಿವರಗಳು ಕೆಳಗಿನಂತಿವೆ:

ಕ್ರ.ಸಂ.	ಹೆಸರು	ವಿದ್ಯಾರ್ಹತೆ	ನಾಮಾಂಕಿತ
ಬೋಧಕ ಸಿಬ್ಬಂದಿ			
1	ಪ್ರೊ. ವಿಶ್ವನಾಥ	ಎಂ.ಎ., ಪಿಹೆಚ್.ಡಿ.	ಪ್ರಾಧ್ಯಾಪಕರು ಹಾಗೂ ನಿರ್ದೇಶಕರು
2	ಡಾ. ವಿ. ರಾಮಕೃಷ್ಣಪ್ಪ	ಎಂ.ಎ., ಪಿಹೆಚ್.ಡಿ	ಸಹ ಪ್ರಾಧ್ಯಾಪಕರು ಹಾಗೂ ಸಹಾಯಕ ನಿರ್ದೇಶಕರು
3	ಡಾ. ಬಿ. ಎಂ. ಕುಮಾರ	ಎಂ.ಎ., ಪಿಹೆಚ್.ಡಿ	ಸಹ ಪ್ರಾಧ್ಯಾಪಕರು ಹಾಗೂ ಸಹಾಯಕ ನಿರ್ದೇಶಕರು
4	ಡಾ. ನಾಗರಾಜ್ ಎಂ. ಮುಗ್ಗೂರ್	ಎಂ.ಎ., ಪಿಹೆಚ್.ಡಿ	ಸಹ ಪ್ರಾಧ್ಯಾಪಕರು ಹಾಗೂ ಸಹಾಯಕ ನಿರ್ದೇಶಕರು
5	ಡಾ. ಸಿದ್ಧಲಿಂಗಸ್ವಾಮಿ ಕೆ. ಪಿ.	ಎಂ.ಎ., ಪಿಹೆಚ್.ಡಿ	ಸಂಶೋಧನಾ ಸಹಾಯಕರು
ಬೋಧಕೇತರ ಸಿಬ್ಬಂದಿ			
1	ಡಾ. ಮಂಜುಳಾ ಬಿ.	ಎಂ.ಎ., ಪಿಹೆಚ್.ಡಿ	ಸಂಶೋಧನಾ ಸಹಾಯಕರು
2	ಕು. ನಸೀಮಾ	ಎಂ. ಲಿಬ್. ಸೈನ್ಸ್	ಗ್ರಂಥಾಲಯ ಅಟೆಂಡೆಂಟ್
3	ಕು. ಪ್ರತಿಮಾ ದೇವಿ		ಅಟೆಂಡರ್

ಸಿಎಸ್‌ಇಐಪಿ ಅಧ್ಯಯನ ಕೇಂದ್ರದ ಪ್ರಸ್ತುತತೆ:

ಯುಜಿಸಿಯು ತನ್ನ ಹನ್ನೊಂದನೇ ಯೋಜನೆಯ ಅವಧಿಯಲ್ಲಿ (2007–2012) ವಿಶ್ವವಿದ್ಯಾನಿಲಯಗಳಿಗೆ ಹೀಗೆ ಉಲ್ಲೇಖಿಸಲಾಗಿದೆ: "ಸಾಮಾಜಿಕ ಹೊರಗಿಡುವಿಕೆ ಉದ್ವಿಗ್ನತೆ, ಹಿಂಸೆ ಮತ್ತು ಅಡ್ಡಿಯನ್ನು ಉಂಟು ಮಾಡುತ್ತದೆ. ಮಾತ್ರವಲ್ಲದೆ, ಸಮಾಜದಲ್ಲಿ ಅಸಮಾನತೆ ಮತ್ತು ಅಭಾವವನ್ನು ಶಾಶ್ವತಗೊಳಿಸುತ್ತದೆ. ಭಾರತದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಧಾರ್ಮಿಕ ಅಲ್ಪಸಂಖ್ಯಾತರಂತಹ ಕೆಲವು ಸಮುದಾಯಗಳು ಅಭಿವೃದ್ಧಿಯ ಅನುಕೂಲಗಳನ್ನು ಪಡೆಯುವಲ್ಲಿ ವ್ಯವಸ್ಥಿತ ಹೊರಗಿಡುವಿಕೆಯನ್ನು ಅನುಭವಿಸುತ್ತವೆ. ಸಾಮಾಜಿಕ ಹೊರಗಿಡುವಿಕೆಯು ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಮತ್ತು ಆರ್ಥಿಕ ಶಾಖೆಗಳನ್ನು ಹೊಂದಿರುವ ಸಂಕೀರ್ಣ ಮತ್ತು ಬಹು ಆಯಾಮದ ಪರಿಕಲ್ಪನೆಯಾಗಿದೆ. ಸ್ಥೂಲ ಆರ್ಥಿಕ ನೀತಿಗಳಾದ ಬಡತನ, ನಿರುದ್ಯೋಗ ಮತ್ತು ಅಚಾನಕ್ ವಲಸೆಯ ಪರಿಣಾಮಗಳು ಸಂತ್ರಸ್ಥರನ್ನು ಆರ್ಥಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಚಟುವಟಿಕೆಗಳಿಂದ ಹೊರಗಿಡುತ್ತಿವೆ. ಆದ್ದರಿಂದ ಸಾಂಸ್ಥಿಕ ಅಸಮಾನತೆ ಮತ್ತು ತಾರತಮ್ಯವು ನಮ್ಮ ಸಮಾಜದ ವ್ಯಾಪಕ ಲಕ್ಷಣವಾಗಿರುವ ಭಾರತೀಯ ಸನ್ನಿವೇಶದಲ್ಲಿ ಇಂತಹ ಬಲಿಷ್ಠ ರಚನೆಗಳ ಅಧ್ಯಯನವು ಹೆಚ್ಚು ಮುಖ್ಯವಾಗಿದೆ.

ಸ್ನಾತಕೋತ್ತರ ಹಂತದ ಕಲಿಕೆ ಬೋಧನಾ ಕೋರ್ಸುಗಳನ್ನು ಅಭಿವೃದ್ಧಿಪಡಿಸುವುದು, ಪಿಹೆಚ್.ಡಿ ವಿದ್ಯಾರ್ಥಿಗಳಿಗೆ ಸಂಶೋಧನಾ ಮೇಲ್ವಿಚಾರಣೆ, ಸಂಶೋಧನಾ ಯೋಜನೆಗಳನ್ನು ಕೈಗೊಳ್ಳುವುದು, ಸಾಮಾಜಿಕವಾಗಿ ಹೊರಗಿಡಲಾದ ಗುಂಪುಗಳು ಮತ್ತು ಅಂತರ್ಗತ ನೀತಿಗಳು ಮತ್ತು ವಿಸ್ತರಣಾ ಚಟುವಟಿಕೆಗಳ ವಿಷಯಗಳ ಕುರಿತು ಲೇಖನಗಳನ್ನು ಪ್ರಕಟಿಸುವುದು ಮತ್ತು ಕಾರ್ಯಾಗಾರಗಳು, ಸಮ್ಮೇಳನಗಳು ಮತ್ತು ವಿಚಾರ ಸಂಕಿರಣಗಳನ್ನು ಆಯೋಜಿಸುವುದು ಇತ್ಯಾದಿಗಳ ಮೂಲಕ ಸೈದ್ಧಾಂತಿಕವಾಗಿ ಪ್ರಾಮುಖ್ಯತೆಯನ್ನು ಪಡೆದಿದೆ.

ಪ್ರಕಟಗೊಂಡ ಪುಸ್ತಕಗಳು

ಪ್ರೊ. ವಿಶ್ವನಾಥ, 2019, ದಲಿತರಿಗಾದ ಅಭಿವೃದ್ಧಿ ಅನುಭವ: ಆಧುನಿಕ ಭಾರತದಲ್ಲಿ ಜಾತಿ ತಾರತಮ್ಯ ಮತ್ತು ಸಾಮಾಜಿಕ ಹೊರಗಿಡುವಿಕೆ, ಸ್ಪಡೆರಾ ಪ್ರೆಸ್, 1586/ 113, ತ್ರಿ ನಗರ, ದೆಹಲಿ – 110036.

ಸಂಶೋಧನಾ ಯೋಜನೆಗಳು

ಡಾ. ವಿ. ರಾಮಕೃಷ್ಣಪ್ಪ, (2019) ಐಸಿಎಸ್ಎಸ್ಆರ್ ಪ್ರಾಯೋಜಿತ ಸಂಶೋಧನಾ ಯೋಜನೆ – ನಗರದ ಅನೌಪಚಾರಿಕ ವರ್ಗದಲ್ಲಿ ಮಹಿಳಾ ಕಾರ್ಮಿಕರು ಮತ್ತು ವೇತನ ತಾರತಮ್ಯ: ಕರ್ನಾಟಕದ ನಿರ್ಮಾಣ ಕೈಗಾರಿಕೆಯೊಂದರ ಪ್ರಕರಣ ಅಧ್ಯಯನ, ಅಂತಿಮ ವರದಿಯನ್ನು 1–12–2019ರಂದು ಐಸಿಎಸ್ಎಸ್ಆರ್‌ಗೆ ಸಲ್ಲಿಸಲಾಗಿದೆ.

ಪ್ರಕಟಣೆಗಳು:

- ಡಾ. ನಾಗರಾಜ ಎಂ. ಮುಗ್ಗೂರು (2019) ಮಹಿಳಾ ಸಬಲೀಕರಣದಲ್ಲಿ ಸ್ವಸಹಾಯ ಗುಂಪುಗಳ ಪಾತ್ರ ಮತ್ತು ಗ್ರಾಮೀಣಾಭಿವೃದ್ಧಿ, ಯುಜಿಸಿ ಅನುಮೋದಿತ ಜರ್ನಲ್ ಆಫ್ ಇಂಟರ್ನ್ಯಾಶನಲ್ ಆನ್ಲೈನ್ ಮಲ್ಟಿ ಡಿಸಿಪ್ಲಿನರಿ ಜರ್ನಲ್ ಆಫ್ ರಿವ್ಯೂ ಆಫ್ ರಿಸರ್ಚ್ ಸಂಪುಟ – 8, ಸಂಚಿಕೆ – 9, ಜೂನ್ 2019, ಪಿಪಿ – 1– 9, ಐಎಸ್ಎಸ್ಎನ್ 2249–894ಎಕ್ಸ್.
- ಡಾ. ನಾಗರಾಜ ಎಂ. ಮುಗ್ಗೂರ್, (2019) ಕರ್ನಾಟಕದಲ್ಲಿ ಕೌಶಲ್ಯಾಭಿವೃದ್ಧಿಯಲ್ಲಿ ಲಿಂಗ ಸಮಾನತೆ ಎಂಬ ಲೇಖನವನ್ನು ಮಹಿಳೆ ಮತ್ತು ಕೌಶಲ್ಯಾಭಿವೃದ್ಧಿ: ಸುಸ್ಥಿರ ಜೀವನದೆಡೆಗೆ, ಗ್ರಾಬ್ಸ್ ಎಜುಕೇಶನಲ್ ಚಾರಿಟೆಬಲ್ ಸೊಸೈಟಿ ಚೆನ್ನೈ, ತಮಿಳುನಾಡು, ಪುಟ ಸಂಖ್ಯೆ 55–67, ಐಎಸ್‌ಬಿಎನ್ – 978–81–945756–0–3
- ಡಾ. ಕುಮಾರ ಬಿ. ಎಂ. (2019) ಆ್ಯನ್ ಅನಲಿಸಿಸ್ ಆಫ್ ದಲಿತ ಸಂಘರ್ಷ ಸಮಿತಿ ಅಂಡ್ ಎಂಪವರ್ಮೆಂಟ್ ಆಫ್ ದಲಿತ್ಸ್, ಶೋಧಮಂಥನ್: ಎ ಪೀರ್ ರಿವ್ಯೂಡ್ ಅಂಡ್ ರೆಫ್ರೀಡ್ ಇಂಟರ್‌ನ್ಯಾಶನಲ್ ಜರ್ನಲ್‌ನ್ಯೂ ಹಾರಿಜಾನ್ಸ್ ಆಡ್ ದಲಿತ್ ಕಲ್ಚರ್ ಅಂಡ್ ಲಿಟರೇಚರ್, ಯುಜಿಸಿ ಮಾನ್ಯತೆ ಪಡೆದ ನಿಯತಕಾಲಿಕೆ, ವಿಶೇಷ ಸಂಚಿಕೆ, 10(2), ನಂ.40908, ಇಂಪ್ಯಾಕ್ಟ್ ಫ್ಯಾಕ್ಟರ್, 463(ಎಸ್ ಜೆ ಐ ಎಫ್) ಐಎಸ್ಎಸ್ಎನ್ – 0976–5255, ಪುಟ ಸಂಖ್ಯೆ 152–154.
- ಡಾ. ಕುಮಾರ ಬಿ. ಎಂ – ಭಾರತದ ಸರಕು ಮತ್ತು ಸೇವೆಯ ವಿಶ್ಲೇಷಣೆ: ವಾಣಿಜ್ಯಶಾಸ್ತ್ರದಲ್ಲಿ ಸಮಕಾಲೀನತೆ – ಪುಸ್ತಕ, ಸಂ. ಈಶ್ವರ ಪಿ. ಮತ್ತು ಇತರರು, ಶಿವ ಪಬ್ಲಿಕೇಶನ್ಸ್, ತಮಿಳುನಾಡು, ಐಎಸ್ ಬಿ ಎನ್ – 978–81–92–4545–0–4, ಪಿಪಿ–381–5.
- ಡಾ. ವಿ. ರಾಮಕೃಷ್ಣಪ್ಪ, (2019), ಭಾರತದಲ್ಲಿ ಉನ್ನತ ಶಿಕ್ಷಣದ ಬೆಳವಣಿಗೆ ಪ್ರವೃತ್ತಿಗಳು: ಪ್ರವೇಶಾತಿ ಮತ್ತು ಬಂಡವಾಳದಲ್ಲಿ ಎದುರಾಗುವ ಸವಾಲುಗಳು, ಸೆಮಿನಾರ್ ನಡಾವಳಿಗಳು, ಶ್ರೀನಿವಾಸ ವಿಶ್ವವಿದ್ಯಾಲಯ, ಮಂಗಳೂರು, ಪುಟ ಸಂಖ್ಯೆ – 10.

ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ವಿಚಾರ ಸಂಕಿರಣಗಳಲ್ಲಿ ಮಂಡಿಸಿದ ಪ್ರಬಂಧಗಳ ಪಟ್ಟಿ:

- ಡಾ. ವಿ. ರಾಮಕೃಷ್ಣಪ್ಪ, (2019) – ಮಂಗಳೂರಿನ ಶ್ರೀನಿವಾಸ ವಿಶ್ವವಿದ್ಯಾಲಯವು ದಿನಾಂಕ 16 ಮತ್ತು 17 ಅಗಸ್ಟ್ 2019ರಲ್ಲಿ ನಿರ್ವಹಣಾ ಶಾಸ್ತ್ರ, ಮಾಹಿತಿ ತಂತ್ರಜ್ಞಾನ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಹೊಸ ಒಲವುಗಳ ಉಗಮ ಎಂಬ ವಿಚಾರದಲ್ಲಿ ಏರ್ಪಡಿಸಿದ ಅಂತರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಭಾರತದಲ್ಲಿ ಉನ್ನತ ಶಿಕ್ಷಣದ ಬೆಳವಣಿಗೆ ಪ್ರವೃತ್ತಿಗಳು: ಪ್ರವೇಶಾತಿ ಮತ್ತು ಬಂಡವಾಳದಲ್ಲಿ ಎದುರಾಗುವ ಸವಾಲುಗಳು ಎಂಬ ಪ್ರಬಂಧವನ್ನು ಮಂಡಿಸಿದ್ದಾರೆ.
- ಡಾ. ವಿ. ರಾಮಕೃಷ್ಣಪ್ಪ, (2019) – ರೋಲ್ ಆಫ್ ಇನ್ಸ್ಟಿಟ್ಯೂಶನಲ್ ಫೈನಾನ್ಸಿಂಗ್ ಇನ್ ದ ಡೆವಲ್ಪಮೆಂಟ್ ಆಫ್ ಅಗ್ರಿಕಲ್ಚರ್ & ಬಿಸಿನೆಸ್ ಡೈನಾಮಿಕ್ ಎಂಬ ವಿಷಯದ ಕುರಿತು ದಿನಾಂಕ 25 ಮತ್ತು 26 ಅಕ್ಟೋಬರ್ 2019ರಂದು ಮಂಗಳೂರು ವಿಶ್ವವಿದ್ಯಾನಿಲಯದ ವಾಣಿಜ್ಯ ಸ್ನಾತಕೋತ್ತರ ಮತ್ತು ಸಂಶೋಧನಾ ಅಧ್ಯಯನ ವಿಭಾಗದಿಂದ ಏರ್ಪಡಿಸಲಾಗಿದ್ದ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಫೈನಾನ್ಶಿಯಲ್ ಇನ್ಕ್ಲೂಶನ್ ಆಫ್ ದ ಪೂರ್ ಅಂಡ್ ಮಾರ್ಜಿನಲೈಸ್ಡ್ ಗ್ರೂಪ್ಸ್: ಎವಿಡೆನ್ಸಸ್ ಫ್ರಂ ಇಂಡಿಯಾಸ್ ರೂರಲ್ ಎಂಪ್ಲಾಯ್ಮೆಂಟ್ ಸ್ಕೀಮ್ ಎಂಬ ಪ್ರಬಂಧ ಮಂಡಿಸಿದ್ದಾರೆ.
- ಡಾ. ನಾಗರಾಜ ಎಂ. ಮುಗ್ಗೂರ್, (2019) ವಿಜ್ಞಾನ, ತಂತ್ರಜ್ಞಾನ ಮತ್ತು ಸಮಾಜ : ಪ್ರತಿಫಲನ, ಪ್ರತಿಕ್ರಿಯೆ ಮತ್ತು ಜವಾಬ್ದಾರಿಗಳು ಎಂಬ ವಿಷಯದ ಕುರಿತು ದಿನಾಂಕ 13 ಮತ್ತು 14 ಸೆಪ್ಟೆಂಬರ್ 2019ರಂದು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ

ಜರುಗಿದ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಕರ್ನಾಟಕದ ಬುಡಕಟ್ಟು ಮಹಿಳೆಯರಿಗಿರುವ ಉದ್ಯೋಗಾವಕಾಶಗಳು: ಒಂದು ಅವಲೋಕನ ಎಂಬ ಪ್ರಬಂಧ ಮಂಡಿಸಿದ್ದಾರೆ.

- ಡಾ. ನಾಗರಾಜ ಎಂ. ಮುಗ್ಗೂರ್ (2019) ಅವರು ದಿನಾಂಕ 8 ಮತ್ತು 9 ಮಾರ್ಚ್, 2020ರಂದು ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಲ್ಲಿ ಕೌಟುಂಬಿಕ ದೌರ್ಜನ್ಯ ತಡೆಗಟ್ಟುವಿಕೆ ಸಮಸ್ಯೆಗಳು ಮತ್ತು ನಿರೀಕ್ಷೆಗಳು ಎಂಬ ವಿಷಯದ ಕುರಿತು ನಡೆದ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಭಾರತದಲ್ಲಿ ಮಹಿಳೆಯರ ಮೇಲೆ ನಡೆಯುವ ಕೌಟುಂಬಿಕ ದೌರ್ಜನ್ಯ ಒಂದು ಅವಲೋಕನ ಎಂಬ ಪ್ರಬಂಧ ಮಂಡಿಸಿದ್ದಾರೆ.
- ಡಾ. ಕುಮಾರ ಬಿ. ಎಂ ಅವರು ದಿನಾಂಕ ಮಾರ್ಚ್ 5 ಮತ್ತು 6ರಂದು ತುಮಕೂರು ವಿಶ್ವವಿದ್ಯಾಲಯದ ಡಾ. ಬಿ. ಆರ್ ಅಂಬೇಡ್ಕರ್ ಅಧ್ಯಯನ ಕೇಂದ್ರವು ಏರ್ಪಡಿಸಿದ ದಲಿತ ಸಂಸ್ಕೃತಿ ಮತ್ತು ಸಾಹಿತ್ಯದ ಹೊಸ ದಿಗಂತಗಳು ಎಂಬ ವಿಷಯದ ಕುರಿತು ನಡೆದ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಕರ್ನಾಟಕದಲ್ಲಿ ದಲಿತ ಚಳುವಳಿ: ವಿಚಾರಗಳು ಮತ್ತು ಸವಾಲುಗಳು ಎಂಬ ಪ್ರಬಂಧ ಮಂಡಿಸಿದ್ದಾರೆ.
- ಡಾ. ಕುಮಾರ ಬಿ. ಎಂ. ದಿನಾಂಕ 30–03–2019ರಂದು ತುಮಕೂರಿನ ಪ್ರೊ. ಎಂ. ಡಿ. ನಂಜುಂಡಸ್ವಾಮಿ ಅಧ್ಯಯನ ಪೀಠವು ಅರ್ಥಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ ತುಮಕೂರು ವಿಶ್ವವಿದ್ಯಾನಿಲಯದ ಸಹಯೋಗದೊಂದಿಗೆ ಆಯೋಜಿಸಿದ ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಮೈಸೂರು ಜಿಲ್ಲೆಯಲ್ಲಿ ತರಕಾರಿ ಬೆಳೆಗಳ ಮಾರ್ಕೆಟಿಂಗ್ ಒಲವು: ಒಂದು ಅಧ್ಯಯನ ಎಂಬ ಪ್ರಬಂಧ ಮಂಡಿಸಿದ್ದಾರೆ.
- ಡಾ. ಕುಮಾರ ಬಿ. ಎಂ. ರೋಲ್ ಆಫ್ ಇನ್ಸ್ಟಿಟ್ಯೂಶನಲ್ ಫೈನಾನ್ಸಿಂಗ್ ಇನ್ ದ ಡೆವಲ್ಪಮೆಂಟ್ ಆಫ್ ಅಗ್ರಿಕಲ್ಚರ್ & ಬಿಸಿನೆಸ್ ಡೈನಾಮಿಕ್ ಎಂಬ ವಿಷಯದ ಕುರಿತು ದಿನಾಂಕ 25 ಮತ್ತು 26 ಅಕ್ಟೋಬರ್ 2019ರಂದು ಮಂಗಳೂರು ವಿಶ್ವವಿದ್ಯಾನಿಲಯದ ವಾಣಿಜ್ಯ ಸ್ನಾತಕೋತ್ತರ ಮತ್ತು ಸಂಶೋಧನಾ ಅಧ್ಯಯನ ವಿಭಾಗದಿಂದ ಏರ್ಪಡಿಸಲಾಗಿದ್ದ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಆರ್ಥಿಕ ಒಳಗೊಳ್ಳುವಿಕೆ ಮತ್ತು ದಲಿತ ಕೃಷಿ ಸಮುದಾಯ: ಕರ್ನಾಟಕದ ಪ್ರಾಥಮಿಕ ಕೃಷಿ ಸಹಕಾರ ಸಂಘದ ಅಧ್ಯಯನ ಎಂಬ ಪ್ರಬಂಧ ಮಂಡಿಸಿದ್ದಾರೆ.

10. ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿಗಳನ್ನು ನಿರ್ವಹಿಸುವುದಕ್ಕಾಗಿ ಗಾಂಧಿ ಅಧ್ಯಯನ ಕೇಂದ್ರ ಮತ್ತು ಡಾ. ಬಿ. ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರಗಳ ಬಳಕೆ:

ಬೋಧನಾ ಸಿಬ್ಬಂದಿ ಸದಸ್ಯ

ಹೆಸರು	ಹುದ್ದೆ	ಅರ್ಹತೆ	ವಿಶೇಷ ಪರಿಣತಿ ಕ್ಷೇತ್ರ
ಪ್ರೊ. ವಿಶ್ವನಾಥ	ನಿರ್ದೇಶಕ	ಎಂ.ಎ,, ಪಿಹೆಚ್.ಡಿ. ಅರ್ಥಶಾಸ್ತ್ರ	ಸಾಮಾಜಿಕ ಒಳಗೊಳ್ಳುವಿಕೆ ಮತ್ತು ಹೊರಗಿಡುವಿಕೆಯ ಅಧ್ಯಯನ ಗ್ರಾಮೀಣ ಅಭಿವೃದ್ಧಿ ಮತ್ತು ಅಂಬೇಡ್ಕರ್ ಕುರಿತ ಅಧ್ಯಯನ

ಹಿನ್ನೆಲೆ:

ಯುಜಿಸಿಯ ಆರ್ಥಿಕ ನೆರವಿನೊಂದಿಗೆ ಡಾ. ಬಿ. ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರವನ್ನು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ 2005ರಲ್ಲಿ ಸ್ಥಾಪಿಸಲಾಯಿತು. ಡಾ. ಬಿ. ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರವು ಡಾ. ಬಿ. ಆರ್. ಅಂಬೇಡ್ಕರ್ ಅವರ ಆಲೋಚನೆ ಮತ್ತು ನಿಲುವುಗಳನ್ನು ಅಧ್ಯಾಪಕರಿಗೆ, ವಿದ್ಯಾರ್ಥಿಗಳಿಗೆ ಮತ್ತು ಆವರಣದಲ್ಲಿರುವ ಸಮುದಾಯಗಳಿಗೆ ಹಂಚುವ ಉದ್ದೇಶವನ್ನು ಹೊಂದಿದೆ. ಕೇಂದ್ರವು ಕ್ಷೇತ್ರ ಆಧಾರಿತ ಅಧ್ಯಯನಗಳನ್ನು ಕೈಗೊಳ್ಳುವ ಮೂಲಕ ಸಂಶೋಧನೆ ಮತ್ತು ವಿಸ್ತರಣಾ ಕಾರ್ಯಗಳನ್ನು ಕೈಗೊಂಡು ಡಾ. ಬಿ. ಆರ್. ಅಂಬೇಡ್ಕರ್ ಅವರ ಆಲೋಚನೆಗಳನ್ನು ಹರಡುತ್ತಿದೆ.

ಕೇಂದ್ರದ ಉದ್ದೇಶಗಳು:

ಕೇಂದ್ರದ ಗುರಿ ಮತ್ತು ಉದ್ದೇಶಗಳು ಹೀಗಿವೆ:

- ಕೇಂದ್ರೀಕೃತ ಗುಂಪುಗಳಿಗೆ ಅಂಬೇಡ್ಕರ್ ಅವರ ಸಾಮಾಜಿಕ ಆರ್ಥಿಕ ಮತ್ತು ರಾಜಕೀಯ ವಿಚಾರಗಳ ಕುರಿತ ಆಲೋಚನೆಗಳು ಮತ್ತು ಅವರ ಕೆಲಸದ ಕುರಿತಾಗಿ ಅಲ್ಪಾವಧಿಯ ಕೋರ್ಸುಗಳನ್ನು ಆಯೋಜಿಸುವುದು.
- ಅಂಬೇಡ್ಕರ್ ಅವರ ಆಲೋಚನೆಗಳ ಮತ್ತು ಕೆಲಸಗಳ ಕುರಿತು ಮತ್ತು ಸಮಾಜದಲ್ಲಿ ತಾರತಮ್ಯಕ್ಕೆ ಒಳಗಾದ ಮತ್ತು ಅಂಚಿಗೆ

ತಳ್ಳಲ್ಪಟ್ಟವರ ಬಗ್ಗೆ ರಾಷ್ಟ್ರೀಯ ವಿಚಾರ ಸಂಕಿರಣಗಳು ಮತ್ತು ಉಪನ್ಯಾಸಗಳನ್ನು ಆಯೋಜಿಸುವುದು ಮತ್ತು ಇದರ ನಡಾವಳಿಗಳನ್ನು ಪ್ರಕಟಿಸುವುದು.

- ಸಮಕಾಲೀನ ಸಂದರ್ಭದಲ್ಲಿ ಅಂಬೇಡ್ಕರ್ ಅವರ ಆಲೋಚನೆಗಳ ಪ್ರಸ್ತುತತೆ ಮತ್ತು ದಲಿತರ ಬಗ್ಗೆ ಸಂಶೋಧನೆಗಳನ್ನು ನಡೆಸುವುದು.
- ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕರು ಮತ್ತು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗಾಗಿ ಮತ್ತು ಸಂಶೋಧಕರು ಮತ್ತು ವಿಶ್ವವಿದ್ಯಾನಿಲಯದ ಹೊರಗಿನ ಇತರೆ ಓದುಗರಿಗಾಗಿ ಅಂಬೇಡ್ಕರ್ ಅವರ ಆಲೋಚನೆಗಳು ಮತ್ತು ಸಂಬಂಧಿತ ವಿಚಾರಗಳ ಬಗ್ಗೆ ಮೂಲಸೌಕರ್ಯವನ್ನು ಮತ್ತು ಮೂಲಸೌಲಭ್ಯವನ್ನು ಒದಗಿಸುವುದು.
- ವಿಭಾಗಗಳಲ್ಲಿ ಪ್ರಸ್ತುತ ಇರುವ ಕೋರ್ಸುಗಳು/ಪತ್ರಿಕೆಗಳನ್ನು ಬೋಧನಾ ವಿಧಾನಗಳನ್ನು ಬಲಪಡಿಸುವುದು ಮತ್ತು ಇತರ ವಿಭಾಗಗಳಿಗೆ ಅಂಬೇಡ್ಕರ್ ಕುರಿತು ಕೋರ್ಸುಗಳನ್ನು ಸೇರ್ಪಡೆಗೊಳಿಸಿಕೊಳ್ಳಲು ಹಾಗೂ ಬೋಧನಾ ವಿಧಾನಗಳನ್ನು ಬಲಪಡಿಸಿಕೊಳ್ಳಲು ಸಹಕರಿಸುವುದು.

ಪ್ರಗತಿ:

ಕೇಂದ್ರದ ಚಟುವಟಿಕೆಗಳು ಕೆಳಗಿನಂತಿವೆ:

* ಡಾ. ಬಿ. ಆರ್. ಅಂಬೇಡ್ಕರ್ ಅವರ 128ನೇ ಜನ್ಮದಿನಾಚರಣೆಯ ಅಂಗವಾಗಿ 26 ಏಪ್ರಿಲ್ 2019ರಂದು ಮಂಗಳೂರು ವಿಶ್ವವಿದ್ಯಾನಿಲಯ ಮಂಗಳಗಂಗೋತ್ರಿಯ ಮಂಗಳಾ ಅಡಿಟೋರಿಯಂನಲ್ಲಿ ಡಾ. ಬಿ. ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರವು ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಿತ್ತು. ಅತಿಥಿಗಳಾಗಿದ್ದ ಗೌರವಾನ್ವಿತ ನ್ಯಾಯಮೂರ್ತಿಗಳು ಎಚ್. ಎನ್. ನಾಗಮೋಹನ್ ದಾಸ್, ನಿವೃತ್ತ ನ್ಯಾಯಾಧೀಶರು, ಹೈಕೋರ್ಟ್, ಕರ್ನಾಟಕ ಅವರು ವಿಶೇಷ ಉಪನ್ಯಾಸವನ್ನು ನೀಡಿದರು: ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿ(ಪ್ರಭಾರ)ಗಳಾದ ಪ್ರೊ. ಕಿಶೋರಿ ನಾಯಕ್ ಅವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಕೇಂದ್ರದ ನಿರ್ದೇಶಕರಾದ ಪ್ರೊ. ವಿಶ್ವನಾಥ ವಂದಿಸಿದರು.

11. ದಾಖಲಾತಿ ವಿಧಾನಗಳು:

ಎ. ರಾಜ್ಯ ಮತ್ತು ರಾಷ್ಟ್ರೀಯ ಅಂಕಿ ಅಂಶಗಳಂತೆ ವಿಶ್ವವಿದ್ಯಾನಿಲಯದ ದಾಖಲಾತಿ

- ವಿಶ್ವದ್ಯಾನಿಲಯದ ಒಟ್ಟಾರೆ ಸೀಟು ಲಭ್ಯತೆಗಾಗಿ ಕೇಂದ್ರೀಕೃತ ಪ್ರವೇಶ ಪ್ರಕ್ರಿಯೆಯನ್ನು ಅನುಸರಿಸಲಾಗುತ್ತದೆ. 2018–19ರ ಅವಧಿಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಲಭ್ಯವಿದ್ದ 3275 ಸೀಟುಗಳ ಪೈಕಿ 1699 ವಿದ್ಯಾರ್ಥಿಗಳು ವಿವಿಧ ಸ್ನಾತಕೋತ್ತರ ಕೋರ್ಸುಗಳಿಗೆ ದಾಖಲಾಗಿದ್ದಾರೆ.

ಬಿ. ಜಿಇಆರ್ ಅನ್ನು ಹೆಚ್ಚಿಸುವ ಕ್ರಮಗಳು:

- ವಿವಿಧ ವಿಭಾಗಗಳಲ್ಲಿ ಲಭ್ಯವಿರುವ ಕೋರ್ಸುಗಳ ವಿವರ, ಉದ್ಯೋಗ ಮತ್ತು ಸಂಶೋಧನೆಗೆ ಇರುವ ಅವಕಾಶ ಮತ್ತು ಪ್ರವೇಶಾತಿಗಳ ಬಗ್ಗೆ ವಿದ್ಯಾರ್ಥಿ ಸಮುದಾಯಕ್ಕೆ ಮಾಹಿತಿಗಳನ್ನು ನೀಡುವ ಉದ್ದೇಶದಿಂದ ತೆರೆದ ಮನೆ ಕಾರ್ಯಕ್ರಮವನ್ನು ಮುಖ್ಯ ಕ್ಯಾಂಪಸ್ ಮತ್ತು ಘಟಕ ಕಾಲೇಜುಗಳಲ್ಲಿ ನಡೆಸಲಾಗುತ್ತಿದೆ.
- ಅಗತ್ಯವಿರುವ ಕಡೆ ಆಕಾಂಕ್ಷಿ ವಿದ್ಯಾರ್ಥಿಗಳಿಗೆ ಅವಕಾಶವನ್ನು ಕಲ್ಪಿಸುವ ಉದ್ದೇಶದಿಂದ ಲಭ್ಯವಿರುವ ಸಿಟುಗಳ ಸಂಖ್ಯೆಯನ್ನು ಹೆಚ್ಚಿಸಲಾಗಿದೆ.
- ವಿದ್ಯಾರ್ಥಿಗಳಿಗೆ ಕಂತಿನ ಆಧಾರದಲ್ಲಿ ಶುಲ್ಕವನ್ನು ಪಾವತಿಸಲು ಅವಕಾಶವನ್ನು ನೀಡಲಾಗುತ್ತದೆ ಮತ್ತು ಲಭ್ಯವಿರುವ ಸಾಲ ಸೌಲಭ್ಯಗಳ ಬಗ್ಗೆ ಅವರಿಗೆ ಸಲಹೆಯನ್ನು ನೀಡಲಾಗುತ್ತದೆ.

ಸಿ. ವಿದ್ಯಾರ್ಥಿ ವಿವರ – ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ: ರಾಜ್ಯ/ರಾಷ್ಟ್ರದ ಇತರ ವಿಶ್ವವಿದ್ಯಾನಿಲಯಗಳು, ಗಂಡು, ಹೆಣ್ಣು (ಪ.ಜಾ./ಪ.ಪಂ./ಒಬಿಸಿ/ಮಹಿಳೆ/ಅಂತಾರಾಷ್ಟ್ರೀಯ/ಇತರರು)

ವಿದ್ಯಾರ್ಥಿಗಳ ಒಟ್ಟು ಸಂಖ್ಯೆ – ಸ್ನಾತಕೋತ್ತರ ಪದವಿ

ಕ್ರ. ಸಂ.	ಹೆಸರು	ಗಂಡು	ಹೆಣ್ಣು	ಪಜಾ		ಪಪಂ		ಹಿಂದುಳಿದ ವರ್ಗ		ಸಾಮಾನ್ಯ ಅಭ್ಯರ್ಥಿ		ವಿದೇಶಿ ವಿದ್ಯಾರ್ಥಿಗಳು		ಒಟ್ಟು
				ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	
1.	ಕ್ಯಾಂಪಸ್	655	1,559	82	118	37	70	180	606	318	746	38	19	2,214
2.	ಚಿಕ್ಕ ಅಳುವಾರ	110	231	28	50	8	2	62	148	12	31	0	0	341
3.	ಎಫ್‌ಎಂಕೆಎಂಸಿ ಕಾಲೇಜು, ಮಡಿಕೇರಿ	54	129	5	26	6	4	38	92	5	7	00	183	
4.	ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು	58	333	7	38	6	17	24	211	21	67	0	0	391
5.	ವಿಶ್ವವಿದ್ಯಾನಿಲಯ ಸಂಧ್ಯಾ ಕಾಲೇಜು, ಮಂಗಳೂರು	139	106	7	6	2	1	98	73	32	26	0	0	245
6.	ಸಂಯೋಜಿತ ಕಾಲೇಜುಗಳು	1,688	5185	94	191	58	182	1,178	3,673	356	1,139	2	0	6,873
ಒಟ್ಟು														10,247

ವಿದ್ಯಾರ್ಥಿಗಳ ಒಟ್ಟು ಸಂಖ್ಯೆ – ಪದವಿ

ಕ್ರ. ಸಂ.	ಹೆಸರು	ಗಂಡು	ಹೆಣ್ಣು	ಪಜಾ		ಪಪಂ		ಹಿಂದುಳಿದ ವರ್ಗ		ಸಾಮಾನ್ಯ ಅಭ್ಯರ್ಥಿ		ವಿದೇಶಿ ವಿದ್ಯಾರ್ಥಿಗಳು		ಒಟ್ಟು
				ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	
1	ಕ್ಯಾಂಪಸ್	44	17	14	3	4	0	12	2	14	12	0	0	61
2	ಎಫ್‌ಎಂಕೆಎಂಸಿ ಕಾಲೇಜು, ಮಡಿಕೇರಿ	696	951	127	168	15	34	538	719	16	30	0	0	1,647
3	ವಿಶ್ವವಿದ್ಯಾನಿಲಯ ಕಾಲೇಜು, ನೆಲ್ಯಾಡಿ	18	58	2	5	2	5	14	47	0	1	0	0	76
4	ವಿಶ್ವವಿದ್ಯಾನಿಲಯ ಪ್ರಥಮ ದರ್ಜೆ ಕಾಲೇಜು, ಮಂಗಳಗಂಗೋತ್ರಿ	99	169	1	9	2	4	67	137	3	7	26	12	268
5	ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು	502	1,049	117	124	23	48	308	771	54	106	0	0	1,551
6	ವಿಶ್ವವಿದ್ಯಾನಿಲಯ ಸಂಧ್ಯಾ ಕಾಲೇಜು, ಮಂಗಳೂರು	94	28	10	3	4	1	73	21	7	3	0	0	122
7	ಸಂಯೋಜಿತ ಕಾಲೇಜುಗಳು	32,725	47,782	1,858	3,039	1,069	1,973	23,957	36,381	5,820	6,364	21	25	80,507
ಒಟ್ಟು														84,232

ವಿದ್ಯಾರ್ಥಿಗಳ ಒಟ್ಟು ಸಂಖ್ಯೆ – ಪದವಿ

ಕ್ರ. ಸಂ.	ಹೆಸರು	ಗಂಡು	ಹೆಣ್ಣು	ಪಜಾ		ಪಪಂ		ಹಿಂದುಳಿದ ವರ್ಗ		ಸಾಮಾನ್ಯ ಅಭ್ಯರ್ಥಿ		ಒಟ್ಟು
				ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	
1	ಕ್ಯಾಂಪಸ್	455	482	19	34	9	26	160	158	267	264	937
2	ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು	343	607	22	48	9	30	222	429	90	100	950
3	ಎಫ್‌ಎಂಕೆಎಂಸಿ ಕಾಲೇಜು, ಮಡಿಕೇರಿ	199	205	32	27	7	13	148	144	12	21	404
4	ಸಂಯೋಜಿತ ಕಾಲೇಜುಗಳು	192	233	21	24	20	10	113	162	38	37	425
ಒಟ್ಟು												2,716

ದೂರ ಶಿಕ್ಷಣ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ (ಸ್ನಾತಕೋತ್ತರ ಪದವಿ)

ಕ್ರ. ಸಂ.	ಹೆಸರು	ಗಂಡು	ಹೆಣ್ಣು	ಪಜಾ		ಪಪಂ		ಹಿಂದುಳಿದ ವರ್ಗ		ಸಾಮಾನ್ಯ ಅಭ್ಯರ್ಥಿ		ಒಟ್ಟು
				ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	
1	ಕ್ಯಾಂಪಸ್	628	1,257	86	119	26	53	254	518	262	567	1,885
2	ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು	211	710	9	21	8	18	123	498	71	173	921
3	ಎಫ್‌ಎಂಕೆಎಂಸಿ ಕಾಲೇಜು, ಮಡಿಕೇರಿ	57	136	3	18	2	2	46	101	6	15	193
4	ಸಂಯೋಜಿತ ಕಾಲೇಜುಗಳು	116	396	4	15	4	9	82	311	26	61	512
ಒಟ್ಟು												3,511

ಡಿ. ಆಯ್ಕೆ ಆಧಾರಿತ ಮೌಲ್ಯಾಂಕನ ಪದ್ಧತಿ(ಸಿಬಿಸಿಎಸ್)ಯ ಅನುಷ್ಠಾನದ ನಂತರ ಮೌಲ್ಯಾಂಕನ ಕ್ರೋಢೀಕರಣ ಮತ್ತು ವರ್ಗಾವಣೆ ವ್ಯವಸ್ಥೆ: ಸಿಬಿಸಿಎಸ್ ಪದ್ಧತಿಯಲ್ಲಿ ಅಧ್ಯಯನ ಮಾಡದ ಇತರ ರಾಜ್ಯಗಳ ವಿದ್ಯಾರ್ಥಿಗಳು ಮತ್ತು ಅಂತಾರಾಷ್ಟ್ರೀಯ ವಿದ್ಯಾರ್ಥಿಗಳಿಗೆ ಪ್ರವೇಶಾತಿ: ಲ್ಯಾಟರಲ್ ಪ್ರವೇಶ ಮತ್ತು ಯುಜಿ ಪದವಿ ಕೋರ್ಸಿಗೆ ಡಿಪ್ಲೊಮಾ ವಿದ್ಯಾರ್ಥಿಗಳ ಪ್ರವೇಶ:

ಸ್ನಾತಕೋತ್ತರ ಮಟ್ಟದಲ್ಲಿ ಸಿಬಿಸಿಎಸ್ ಅನುಷ್ಠಾನ:

ನವದೆಹಲಿಯ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗವು ದೇಶದ ಎಲ್ಲಾ ವಿಶ್ವವಿದ್ಯಾನಿಲಯಗಳಿಗೆ ಪದವಿ ಮತ್ತು ಸ್ನಾತಕೋತ್ತರ ಪದವಿ ಮಟ್ಟದಲ್ಲಿ ಆಯ್ಕೆ ಆಧಾರಿತ ಮೌಲ್ಯಾಂಕನ ಪದ್ಧತಿ(ಸಿಬಿಸಿಎಸ್, ಸೆಮಿಸ್ಟರ್ ಪದ್ಧತಿ)ಯನ್ನು ಜಾರಿಗೆ ತರಲು ನಿರ್ದೇಶಿಸಿದೆ ಮತ್ತು ಇದಕ್ಕೆ ಸಂಬಂಧಿಸಿದಂತೆ ಹಲವಾರು ಮಾರ್ಗಸೂಚಿಗಳನ್ನು ನೀಡಿದೆ. ಕರ್ನಾಟಕ ಸರಕಾರದ ಉನ್ನತ ಶಿಕ್ಷಣ ಮಂಡಳಿಯು ಸಿಬಿಸಿಎಸ್ ಅನುಷ್ಠಾನವನ್ನು ಪರಿಗಣಿಸಿದೆ ಮತ್ತು ಈ ನಿಟ್ಟಿನಲ್ಲಿ ಕಾರ್ಯಾಗಾರಗಳನ್ನೂ ಆಯೋಜಿಸಿದೆ. ಆಯ್ಕೆ ಆಧಾರಿತ ಮೌಲ್ಯಾಂಕನ ಪದ್ಧತಿಯು ಮಂಗಳೂರು ವಿಶ್ವವಿದ್ಯಾನಿಲಯದ ಪದವಿಗಳು ಜಾಗತಿಕ ಮಾನದಂಡಗಳಿಗೆ ಸಮನಾಗಿರಲು ಅನುವು ಮಾಡಿಕೊಡುತ್ತಿದೆ. ಜಾಗತೀಕರಣದ ಪ್ರಸಕ್ತ ಪ್ರವೃತ್ತಿಯನ್ನು ಗಮನಿಸಿದರೆ, ಮಂಗಳೂರು ವಿಶ್ವವಿದ್ಯಾನಿಲಯವು ಸಿಬಿಸಿಎಸ್ ಅನ್ನು ಅಳವಡಿಸಿಕೊಳ್ಳುವುದು ಸೂಕ್ತವಾಗಿದೆ. ಇದರಿಂದಾಗಿ ವಿಶ್ವವಿದ್ಯಾನಿಲಯವು ನೀಡುವ ಕಾರ್ಯಕ್ರಮಗಳು ಮತ್ತು ಪದವಿಗಳ ಸ್ವೀಕಾರಾರ್ಹತೆಯನ್ನು ಹೋಲಿಸಬಹುದಾಗಿದೆ ಮತ್ತು ಸುಲಭವಾಗಿ ಸ್ವೀಕಾರಾರ್ಹವಾಗುತ್ತವೆ. ಸಿಬಿಸಿಎಸ್‌ನ ಕಾರ್ಯಸಾಧ್ಯತೆಯನ್ನು ಹಲವಾರು ಹಂತಗಳಲ್ಲಿ ಶಾಸನಬದ್ಧ ಸಂಸ್ಥೆಯ ಸಭೆಗಳ ಮೂಲಕ ವಿಶ್ವವಿದ್ಯಾನಿಲಯವು ಪರಿಗಣಿಸಿದೆ. ಪರಿಗಣನೆಯ ನಂತರ ಈ ಕೆಳಗಿನ ನಿಯಮಗಳನ್ನು ರೂಪಿಸಲಾಗಿದೆ.

ಆಯ್ಕೆ ಆಧಾರಿತ ಮೌಲ್ಯಾಂಕನ ಪದ್ಧತಿ(ಸಿಬಿಸಿಎಸ್, ಸೆಮಿಸ್ಟರ್ ಪದ್ಧತಿ)ಯ ಪ್ರಮುಖ ಲಕ್ಷಣಗಳು:

ಪ್ರೋಗ್ರಾಂನ ಪ್ರತಿಯೊಂದು ಕೋರ್ಸು ನಿರ್ದಿಷ್ಟ ಸಂಖ್ಯೆಯ ಮೌಲ್ಯಾಂಕನ/ಕ್ರೆಡಿಟ್‌ಗಳನ್ನು ಹೊಂದಿರುತ್ತದೆ. ಇದು ಸಾಮಾನ್ಯವಾಗಿ ಕೋರ್ಸಿನ ಮೌಲ್ಯವನ್ನು ಪ್ರತಿನಿಧಿಸುತ್ತದೆ. ಅಂದರೆ ಬೋಧನೆ, ಕಲಿಕೆ ಮತ್ತು ಮೌಲ್ಯಮಾಪನದ ಕಾರ್ಯತಂತ್ರಗಳಾದ ಬೋಧನಾ ಅವಧಿ/ಗಂಟೆಗಳು, ಕೋರ್ಸಿನ ವಿಷಯ, ಬೋಧನಾ ವಿಧಾನ, ಕಲಿಕೆಯ ನಿರೀಕ್ಷೆಗಳು ಇತ್ಯಾದಿಗಳನ್ನು ಪ್ರತಿನಿಧಿಸುತ್ತದೆ. ಪ್ರಸ್ತಾವಿತ ಕಾರ್ಯಕ್ರಮಗಳಲ್ಲಿ ಮೌಲ್ಯಾಂಕನ/ಕ್ರೆಡಿಟ್ ವಾರದಲ್ಲಿ ಲಭ್ಯವಿರುವ ಬೋಧನಾ ಅವಧಿಯನ್ನು ಆಧರಿಸಿರುತ್ತದೆ. ಸಾಮಾನ್ಯವಾಗಿ 1 ಕ್ರೆಡಿಟ್ ಥಿಯರಿಯ ಒಂದು ಗಂಟೆಗೆ ಸಮನಾಗಿರುತ್ತದೆ ಅಥವಾ 1 ಅಥವಾ 2 ಗಂಟೆಗಳ ಹೆಚ್ಚುವರಿ ಬೋಧನಾ ಅವಧಿಗೆ ಸಮನಾಗಿರುತ್ತದೆ ಅಥವಾ ವಾರಕ್ಕೆ ಒಂದೂವರೆ ಅಥವಾ ಎರಡು ಗಂಟೆಗಳ ಪ್ರಾಯೋಗಿಕ/ಕ್ಷೇತ್ರಕಾರ್ಯ/ನಿಯೋಜಿತ ಕಾರ್ಯ/ಇಂಟರ್ನ್‌ಶಿಪ್‌ಗೆ ಸಮನಾಗಿರುತ್ತದೆ.

ಸಿಬಿಸಿಎಸ್(ಸೆಮಿಸ್ಟರ್ ಪದ್ಧತಿ)ಯ ಇತರ ಲಕ್ಷಣಗಳು:

- ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳನ್ನು ಆಯ್ಕೆ ಆಧಾರಿತ ಮೌಲ್ಯಾಂಕನ ಪದ್ಧತಿಯಂತೆ ರಚಿಸಲಾಗಿದೆ.
- ಅಧ್ಯಯನ ವಿಷಯಗಳು ಮತ್ತು ಚಟುವಟಿಕೆಗಳ ಸಂಭಾವ್ಯತಾ ಪ್ರಾಮುಖ್ಯತೆಯನ್ನು ಮೌಲ್ಯಾಂಕನ/ಕ್ರೆಡಿಟ್ ಆಧಾರದಲ್ಲಿ ಮೌಲ್ಯೀಕರಿಸಲಾಗುತ್ತದೆ. ಕಾರ್ಯಕ್ರಮದ ಒಟ್ಟು ಮೌಲ್ಯಾಂಕನ/ಕ್ರೆಡಿಟ್ 84ರಿಂದ 92ರ ಮಧ್ಯೆ ಇರುತ್ತದೆ.
- ಅಧ್ಯಯನದ ಪ್ರತಿಯೊಂದು ಕಾರ್ಯಕ್ರಮವೂ 'ಕೋರ್'(ಮುಖ್ಯ) ಮತ್ತು 'ಇಲೆಕ್ಟೀವ್'(ಆಯ್ಕೆ) ಕೋರ್ಸುಗಳನ್ನು ಹೊಂದಿರುತ್ತದೆ. ಕೋರ್ ಕೋರ್ಸ್ 'ಹಾರ್ಡ್' ಮತ್ತು 'ಸಾಫ್ಟ್' ಕೋರ್ ಕೋರ್ಸುಗಳನ್ನು ಹೊಂದಿರುತ್ತದೆ. ಹಾರ್ಡ್ ಕೋರ್ ಕೋರ್ಸು 3–5 ಕ್ರೆಡಿಟ್‌ಗಳನ್ನು ಹೊಂದಿದ್ದರೆ, ಸಾಫ್ಟ್ ಕೋರ್ಸುಗಳು 3–4 ಕ್ರೆಡಿಟ್‌ಗಳನ್ನು ಹೊಂದಿರುತ್ತದೆ.
- ಪ್ರತೀ ವಿಭಾಗದಿಂದ ಎರಡು ಮತ್ತು ಮೂರನೇ ಸೆಮಿಸ್ಟರ್‌ನಲ್ಲಿ ತಲಾ 3 ಕ್ರೆಡಿಟ್‌ಗಳ 2 ಅಥವಾ 3 ಓಪನ್ ಇಲೆಕ್ಟೀವ್ ಕೋರ್ಸುಗಳನ್ನು ನೀಡುತ್ತದೆ. ನಿಕಾಯದ ಒಳಗೆ ಅಥವಾ ನಿಕಾದಿಂದ ಹೊರಗೆ ಓಪನ್ ಇಲೆಕ್ಟೀವ್ ಕೋರ್ಸುಗಳನ್ನು ಆಯ್ಕೆ ಮಾಡಬಹುದಾಗಿದೆ.
- ಪ್ರತೀ ಸೆಮಿಸ್ಟರ್‌ನ ಕೊನೆಯಲ್ಲಿ ಗಳಿಸಿದ ಗ್ರೇಡ್ ಪಾಯಿಂಟ್ ಸರಾಸರಿ (ಜಿಪಿಎ) ಮತ್ತು ಸಂಚಿತ ಗ್ರೇಡ್ ಪಾಯಿಂಟ್ ಆಧರಿಸಿ ಫಲಿತಾಂಶವನ್ನು ಘೋಷಿಸಲಾಗುತ್ತದೆ.
- ಆಲ್ಫಾ ಸೈನ್ ಗ್ರೇಡ್‌ನೊಂದಿಗೆ ಕಾರ್ಯಕ್ರಮದ ಕೊನೆಯಲ್ಲಿ ಗಳಿಸಬಹುದಾದ ಸರಾಸರಿ (ಸಿಜಿಪಿಎ).

ವಿದ್ಯಾರ್ಥಿಗಳು ಈ ಹಿಂದೆ ಅಧ್ಯಯನ ಮಾಡಿ ಕೋರ್ಸುಗಳನ್ನು ಬಿಡುವ ಆಯ್ಕೆಯನ್ನು ನೀಡುವ ಮೂಲಕ ವಿವಿಧ ಸಂಸ್ಥೆಗಳು/ವಿಶ್ವವಿದ್ಯಾನಿಲಯಗಳಲ್ಲಿ ಅಧ್ಯಯನ ಮಾಡಿದರೆ ಮತ್ತು ಅಂತಹ ಕ್ರೆಡಿಟ್‌ಗಳನ್ನು ಅವರ ಅಂಕಪಟ್ಟಿಗೆ ವರ್ಗಾಯಿಸಿದರೆ ಕ್ರೆಡಿಟ್‌ಗಳ ಕ್ರೋಢೀಕರಣಕ್ಕೆ ಅವಕಾಶವನ್ನು ಕಲ್ಪಿಸಲಾಗಿದೆ.

ಎಂಒಒಸಿಯ ಕಾರ್ಯಕ್ರಮದ ಅಡಿಯಲ್ಲಿ ನಿರ್ದಿಷ್ಟ ಸಂಖ್ಯೆಯ ಕ್ರೆಡಿಟ್‌ಗಳೊಂದಿಗೆ ಕೋರ್ಸನ್ನು ಪೂರ್ಣಗೊಳಿಸಿದ ಯಾವುದೇ ವಿದ್ಯಾರ್ಥಿಯು ನಮ್ಮ ವಿಶ್ವವಿದ್ಯಾನಿಲಯವು ನೀಡಿದ ಅಂಕಪಟ್ಟಿಗೆ ಕ್ರೆಡಿಟ್‌ಗಳನ್ನು ವರ್ಗಾಯಿಸಲು ಅರ್ಹನಾಗಿರುತ್ತಾನೆ. ನಮ್ಮ ವಿಶ್ವವಿದ್ಯಾನಿಲಯದ ಸಿಬಿಸಿಎಸ್ ಮಾದರಿಯ ಪ್ರಕಾರ ಅಧ್ಯಯನ ಮಾಡದ ವಿದ್ಯಾರ್ಥಿಗಳು ಅಂದರೆ ಬೇರೆ ರಾಜ್ಯದಲ್ಲಿ ಅಧ್ಯಯನ ಮಾಡಿದ ವಿದ್ಯಾರ್ಥಿಗಳು (ಸಿಬಿಸಿಎಸ್ ಮಾದರಿಯಲ್ಲಿ ಅಧ್ಯಯನ ಮಾಡದವರು) ಅವರ ಪತ್ರಿಕೆಗಳು/ಕೋರ್ಸುಗಳನ್ನು ಪೂರ್ಣಗೊಳಿಸುವ ಮೂಲಕ ಸಿಬಿಸಿಎಸ್‌ಗೆ ಪ್ರವೇಶಾತಿಯನ್ನು ಪಡೆಯಲು ಅವಕಾಶವಿದೆ.

ಡಿಪ್ಲೊಮಾ ಪದವಿ ಹೊಂದಿರುವವರಿಗೆ ಮೂರನೇ ಸೆಮಿಸ್ಟರ್ ಪದವಿ ಕಾರ್ಯಕ್ರಮಕ್ಕೆ ಪ್ರವೇಶಕ್ಕೆ ಅವಕಾಶ ಕಲ್ಪಿಸಲಾಗಿದೆ.

ಸಂಬಂಧಪಟ್ಟ ಕೋರ್ಸ್/ಕಾರ್ಯಕ್ರಮದ ಬೋರ್ಡ್ ಆಫ್ ಸ್ಟಡೀಸ್ ಗುರುತಿಸಿದಂತೆ ಮತ್ತು ವಿಶ್ವವಿದ್ಯಾನಿಲಯವು ಅನುಮೋದಿಸಿದಂತೆ ಮೂರು ವರ್ಷಗಳ ಪಾಲಿಟೆಕ್ನಿಕ್ ಡಿಪ್ಲೊಮಾ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಯನ್ನು ನೇರವಾಗಿ ಕಾರ್ಯಕ್ರಮದ ಮೂರನೇ ಸೆಮಿಸ್ಟರ್‌ಗೆ ಸೇರಿಸಿಕೊಳ್ಳಬಹುದು. ಅಂತಹ ಅಭ್ಯರ್ಥಿಗಳು ಮೌಲ್ಯಾಂಕನಕ್ಕೆ ಅರ್ಹರು. ಆದರೆ ಶ್ರೇಯಾಂಕಕ್ಕೆ ಅರ್ಹರಲ್ಲ.

ಕರ್ನಾಟಕ ಸರ್ಕಾರ ನಡೆಸಿದ ಸೆಕ್ರೆಟೇರಿಯಲ್/ಕಮರ್ಷಿಯಲ್ ಪ್ರಾಕ್ಟೀಸ್ ಡಿಪ್ಲೊಮಾ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಯನ್ನು ನೇರವಾಗಿ ಮೂರನೇ ಸೆಮಿಸ್ಟರ್(ಎರಡನೇ ವರ್ಷ) ಬಿ.ಕಾಂ.ಗೆ ಸೇರಿಸಿಕೊಳ್ಳಬಹುದು. ಅಂತಹ ಅಭ್ಯರ್ಥಿಗಳು ಮೌಲ್ಯಾಂಕನಕ್ಕೆ ಅರ್ಹರು. ಆದರೆ ಶ್ರೇಯಾಂಕಕ್ಕೆ ಅರ್ಹರಲ್ಲ.

12. ವಿದ್ಯಾರ್ಥಿಗಳಿಗೆ ಬೆಂಬಲ:

ಎ. ವಿದ್ಯಾರ್ಥಿ ವೇತನಗಳು, ದತ್ತಿಗಳು, ಬಹುಮಾನಗಳು, ಇತ್ಯಾದಿ.

- ಪ.ಜಾತಿ/ಪ.ಪಂಗಡ ವಿದ್ಯಾರ್ಥಿ ವೇತನ, ವಿದೇಶೀ ವಿದ್ಯಾರ್ಥಿಗಳಿಗಾಗಿ ಐಸಿಎಸ್‌ಎಸ್‌ಆರ್ ವಿದ್ಯಾರ್ಥಿವೇತನ, ಎಂ.ಪಿ.ಎಡ್ ನಾಲ್ಕನೇ ಚತುರ್ಮಾಸದ ಡೆಸರ್ಟೇಶನ್ ತಯಾರಿಸಲು

ಪ.ಜಾತಿ/ ಪ. ಪಂಗಡದ ವಿದ್ಯಾರ್ಥಿಗಳಿಗೆ ತಲಾ 5000/– ನೀಡಲಾಗುತ್ತದೆ.

ವಿದ್ಯಾರ್ಥಿ ವೇತನದ ವಿವರ:

ಕ್ರಮ ಸಂಖ್ಯೆ	ವಿದ್ಯಾರ್ಥಿ ವೇತನ	ಹಣದ ಮೊತ್ತೆ	ಅರ್ಹತೆ
1	ಶ್ರೀ ಎಂ. ಗಣೇಶ್ ಪೈ ಸ್ಮಾರಕ ದತ್ತಿ ವಿದ್ಯಾರ್ಥಿ ವೇತನ	ವರ್ಷಕ್ಕೆ ತಲಾ 600/– ರೂಪಾಯಿಗಳು	ಕಲಾ ವಾಣಿಜ್ಯ ಮತ್ತು ವಿಜ್ಞಾನ ವಿಭಾಗದ ದ್ವಿತೀಯ ವರ್ಷದ ವಿದ್ಯಾರ್ಥಿಗಳು ಪ್ರಥಮ ಸ್ನಾತಕೋತ್ತರ ಪದವಿಯಲ್ಲಿ ಅತ್ಯುತ್ತಮ ಅಂಕ ಪಡೆದು ಪ್ರಥಮ ಸ್ಥಾನ ಗಳಿಸಿದವರಿಗೆ ಈ ದತ್ತಿ ವಿದ್ಯಾರ್ಥಿವೇತನ ದೊರೆಯುತ್ತದೆ.
2	ಶ್ರೀ ಎಸ್. ಮುಕುಂದ ರಾವ್ ಮತ್ತು ಶ್ರೀಮತಿ ಶಾರದಾ ರಾವ್ ಸ್ಮಾರಕ ದತ್ತಿ ವಿದ್ಯಾರ್ಥಿ ವೇತನ	ವಾರ್ಷಿಕ ತಲಾ 5000/– ರೂಪಾಯಿಗಳು.	ಕಲಾ ವಾಣಿಜ್ಯ ಮತ್ತು ವಿಜ್ಞಾನ ವಿಭಾಗದ ದ್ವಿತೀಯ ವರ್ಷದ ವಿದ್ಯಾರ್ಥಿಗಳು ಪ್ರಥಮ ಸ್ನಾತಕೋತ್ತರ ಪದವಿಯಲ್ಲಿ ಅತ್ಯುತ್ತಮ ಅಂಕ ಪಡೆದ ಹೆತ್ತವರ ವಾರ್ಷಿಕ ಆದಾಯ 40,000/–ದ ಒಳಗಿರುವ ವಿದ್ಯಾರ್ಥಿಗಳಿಗೆ ಈ ದತ್ತಿ ವಿದ್ಯಾರ್ಥಿ ವೇತನ ದೊರೆಯುತ್ತದೆ.
3	ಕ್ರಿಸ್ಟಿನಾ ಮತ್ತು ಮಣಿ ಅಲಾಪತ್ ಉತ್ತೇಜಕ ವಿದ್ಯಾರ್ಥಿ ವೇತನ	ವಾರ್ಷಿಕ ತಲಾ 6000/– ರೂಪಾಯಿಗಳು.	ಮಂಗಳೂರು ವಿಶ್ವವಿದ್ಯಾನಿಲಯದ ಅನ್ವಯಿಕ ಸಸ್ಯಶಾಸ್ತ್ರ ವಿಭಾಗಕ್ಕೆ ಸೇರಿದ ವಿದ್ಯಾರ್ಥಿಯು ಮೊದಲ ಸ್ನಾತಕೋತ್ತರ ಪದವಿಯಲ್ಲಿ ಅತ್ಯಧಿಕ ಅಂಕ ಗಳಿಸಿದರೆ ಈ ದತ್ತಿ ಬಹುಮಾನಕ್ಕೆ ಅರ್ಹರಾಗುತ್ತಾರೆ ಮತ್ತು ದ್ವಿತೀಯ ವರ್ಷದ ಸ್ನಾತೋತ್ತರ ಪದವಿಯಲ್ಲೂ ಈ ಉತ್ತೇಜಕ ವಿದ್ಯಾರ್ಥಿ ವೇತನವನ್ನು ಪಡೆಯುತ್ತಾನೆ.

ಬಿ. ವಸತಿನಿಲಯಗಳು (ಪುರುಷ ಮತ್ತು ಮಹಿಳಾ) ಪಜಾ/ಪಪಂ/ಒಬಿಸಿ/ಇತರರು:

- 2 ಪುರುಷರ ವಸತಿನಿಲಯ
- 1 ಮಹಿಳೆಯರ ವಸತಿನಿಲಯ
- 1 ಉದ್ಯೋಗಸ್ಥ ಮಹಿಳೆಯರ ವಸತಿನಿಲಯ

ಸಿ. ಗುಂಪು ವಿಮೆ: ಒದಗಿಸಿಲ್ಲ.

ಡಿ. ನಿಧಾನ ಕಲಿಯುವವರಿಗೆ ಬೆಂಬಲ (ತರಬೇತಿ (ಕೋಚಿಂಗ್) ತರಗತಿಗಳು)

- ಆಯಾ ವಿಭಾಗಗಳಲ್ಲಿ ಪರಿಹಾರ ಬೋಧನಾ ತರಬೇತಿ ತರಗತಿಗಳನ್ನು ನಡೆಸಲಾಗುತ್ತದೆ.
- ಗ್ರಂಥಾಲಯದಲ್ಲಿ ಆನ್‌ಲೈನ್ ವಿಷಯಗಳನ್ನು ಪಡೆಯುವ ಅವಕಾಶವನ್ನು ಕಲ್ಪಿಸಲಾಗಿದೆ.

ಇ. ಕಲಿಕಾ ಉತ್ಸಾಹಿಗಳಿಗೆ ಪ್ರೋತ್ಸಾಹ:

- ವಿವಿಧ ರಾಷ್ಟ್ರೀಯ/ಅಂತಾರಾಷ್ಟ್ರೀಯ ಕಾರ್ಯಾಗಾರ ಮತ್ತು ವಿಚಾರ ಸಂಕಿರಣಗಳಲ್ಲಿ ಭಾವಹಿಸಲು ಅವಕಾಶ ಕಲ್ಪಿಸಲಾಗಿದೆ.
- ರಾಷ್ಟ್ರೀಯ ಜರ್ನಲ್‌ಗಳು ಮತ್ತು ಸಮ್ಮೇಳನಗಳಲ್ಲಿ ಪ್ರಬಂಧಗಳನ್ನು ಪ್ರಕಟಿಸುವುದು.
- ಜ್ಞಾನವರ್ಧನೆಗಾಗಿ ಹೆಚ್ಚುವರಿ ಓದಿಗೆ ಸಂಬಂಧಿಸಿದ ವಸ್ತುಗಳನ್ನು ಒದಗಿಸುವುದು.

ಎಫ್. ವಿದ್ಯಾರ್ಥಿವೇತನಗಳು, ಫ್ರೀಶಿಪ್‌ಗಳು, ಬಹುಮಾನಗಳು ಮತ್ತು ಇತರೆ:

- ಪ.ಜಾ./ಪ.ಪಂ.ದ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯದಿಂದ ವಿದ್ಯಾರ್ಥಿವೇತನವನ್ನು ನೀಡಲಾಗುತ್ತಿದೆ.
- ಒಬಿಸಿ ಮತ್ತು ಅಲ್ಪಸಂಖ್ಯಾತ ವಿದ್ಯಾರ್ಥಿಗಳು ವಿವಿಧ ಸಂಸ್ಥೆಗಳು ನೀಡುವ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸುವಂತೆ ಪ್ರೋತ್ಸಾಹಿಸಲಾಗುತ್ತಿದೆ.
- ಎಲ್ಲ ನಿಕಾಯಗಳ ವಿವಿಧ ವಿಷಯಗಳ ಅಡಿಯಲ್ಲಿ ಅನೇಕ ದತ್ತಿ ಬಹುಮಾನಗಳನ್ನು ಸ್ಥಾಪಿಸಲಾಗಿದೆ. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಾರ್ಷಿಕವಾಗಿ ಪದಕ ಮತ್ತು ನಗದು ಬಹುಮಾನಗಳನ್ನು ನೀಡಲಾಗುತ್ತಿದೆ.
- ವಿದ್ಯಾರ್ಥಿಗಳ ಆರ್ಥಿಕ ಸ್ಥಿತಿಯನ್ನು ಆಧರಿಸಿ ಅಗತ್ಯವಿರುವ ವಿದ್ಯಾರ್ಥಿಗಳಿಗೆ ಶುಲ್ಕದಲ್ಲಿ ವಿನಾಯಿತಿಯನ್ನು ನೀಡಲಾಗುತ್ತಿದೆ.

ಜಿ. ವಿದ್ಯಾರ್ಥಿಗಳ ಸಂಶೋಧನೆಗೆ ಆರ್ಥಿಕ ನೆರವು:

- ಪ.ಜಾ./ಪ.ಪಂ ವಿದ್ಯಾರ್ಥಿಗಳು ಮತ್ತು ಒಬಿಸಿ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯ ಸಂಶೋಧನಾ ವಿದ್ಯಾರ್ಥಿವೇತನವನ್ನು ನೀಡುತ್ತಿದೆ.

– ಪ.ಜಾ./ಪ.ಪಂ. ವಿದ್ಯಾರ್ಥಿಗಳು ಯೋಜನಾ ವರದಿಯನ್ನು ತಯಾರಿಸಲು ಮಾಡಿದ ಖರ್ಚಿನ ಬಾಬ್ತನ್ನು ರೂ. 5000/– ನೀಡಲಾಗುತ್ತದೆ.

ಎಚ್. ಶಿಷ್ಯವೇತನದ ವಿವರಗಳು:

ಕ್ರಮ ಸಂಖ್ಯೆ	ಶಿಷ್ಯ ವೇತನ	ಮೊತ್ತ	ಅರ್ಹತೆ	ಅವಧಿ
1	ಯುಜಿಸಿ ಪೋಸ್ಟ್ ಡಾಕ್ಟರಲ್ ವುಮೆನ್ ಫೆಲೋಶಿಪ್	ರೂ. 38,800/– ರಿಂದ 46,500/– ಕಾಂಟಿಜೆನ್ಸಿ ವಾರ್ಷಿಕ ರೂ. 50,000/–	ಅಭ್ಯರ್ಥಿಯು ನಿರುದ್ಯೋಗಿಯಾಗಿದ್ದು ಪಿಹೆಚ್.ಡಿ.ಯನ್ನು ಮುಗಿಸಿರಬೇಕು. ಅಭ್ಯರ್ಥಿಯ ವಯಸ್ಸು 55 ವರ್ಷಕ್ಕಿಂತ ಹೆಚ್ಚಾಗಿರಬಾರದು. ಪ.ಜಾತಿ/ಪ.ಪಂಗಡ/ಇತರ ಹಿಂದುಳಿದ ವರ್ಗ/ವಿಕಲ ಚೇತನ ಅಭ್ಯರ್ಥಿಗಳಿಗೆ ವಯಸ್ಸಿನ ರಿಯಾಯಿತಿ ಇರುತ್ತದೆ. ಪಿಡಿಎಫ್‌ಗೆ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು ಹಿಂದೆ ವ್ಯಾಸಂಗ ಮಾಡಿದ /ಸೇವೆ ಸಲ್ಲಿಸಿದ ಸಂಸ್ಥೆಯ ವಿಭಾಗ ಮುಖ್ಯಸ್ಥರು/ಕುಲಸಚಿವರು /ಪ್ರಾಂಶುಪಾಲರಿಂದ ಸಹಿ ಮಾಡಲ್ಪಟ್ಟ ನಿರಾಕ್ಷೇಪಣಾ ಪ್ರಮಾಣಪತ್ರವನ್ನು ಸಂಬಂಧಿಸಿದ ಕೇಂದ್ರಕ್ಕೆ ಸಲ್ಲಿಸಬೇಕು.	5 ವರ್ಷಗಳು
2	ಐಸಿಎಸ್‌ಎಸ್‌ಆರ್ – ಪೋಸ್ಟ್ ಡಾಕ್ಟರಲ್ ಫೆಲೋಶಿಪ್	ರೂ. 31,000/– ತಿಂಗಳು, 20,000/– ಕಾಂಟಿಜೆನ್ಸಿ	ಅಭ್ಯರ್ಥಿಯ ವಯಸ್ಸು 45ಕ್ಕಿಂತ ಹೆಚ್ಚಿರಬಾರದು. ಪಿಹೆಚ್.ಡಿ. ಪದವಿ ಪಡೆದಿರಬೇಕು. ಅಭ್ಯರ್ಥಿಯು ಐಸಿಎಸ್‌ಎಸ್‌ಆರ್ ಸಂಶೋಧನಾ ಕೇಂದ್ರದೊಂದಿಗೆ ಸಂಯೋಜಿತಗೊಂಡಿರಬೇಕು. ಅನುದಾನವು ಅಂಗಸಂಸ್ಥೆ / ಆಡಳಿತ ಸಂಸ್ಥೆಯಿಂದ ಬಿಡುಗಡೆಯಾಗುತ್ತದೆ.	2 ವರ್ಷಗಳು
3	ಯುಜಿಸಿ– ಬಿಎಸ್‌ಆರ್ ಫೆಲೋಶಿಪ್	ಜೆಆರ್ ಎಫ್ 31,000/– ಮಾಸಿಕ ಎಸ್‌ಆರ್‌ಎಫ್ 35,000/–ಮಾಸಿಕ ಕಾಂಟಿಜೆನ್ಸಿ– 25,000/–ವಾರ್ಷಿಕ	ಆಯ್ಕೆಯಾದ ಅಭ್ಯರ್ಥಿಗಳು ಈಗಾಗಲೇ ಯುಜಿಸಿಯ ಅಧಿಸೂಚನೆಯ ನಿಯಮದಲ್ಲಿರುವಂತೆ ಯಾವುದಾದರೂ ಯುಜಿಸಿ ಮಾನ್ಯತೆ ಹೊಂದಿದ ಸಂಶೋಧನಾ ಕೇಂದ್ರಗಳಲ್ಲಿ ನಿಯಮಕ್ಕನುಸಾರವಾಗಿ ಪ್ರವೇಶಾತಿ ಹೊಂದಿರಬೇಕು.	ಐದು ವರ್ಷಗಳು
4	ಯುಜಿಸಿ ಎನ್‌ಇಟಿ (ಜೆಆರ್‌ಎಫ್) ಮತ್ತು ಸಿಎಸ್‌ಐಆರ್ ಸಹಯೋಗದಲ್ಲಿ ಯುಜಿಸಿ (ಎನ್‌ಇಟಿ)– ಜೆಆರ್‌ಎಫ್	ಜೆಆರ್ ಎಫ್ 31,000/– ಮಾಸಿಕ ಎಸ್‌ಆರ್‌ಎಫ್ 35,000/–ಮಾಸಿಕ ಕಾಂಟಿಜೆನ್ಸಿ– 25,000/–ವಾರ್ಷಿಕ	ನೆಟ್–ಜೆಆರ್‌ಎಫ್/ ಯುಜಿಸಿ–ಸಿಎಸ್‌ಐಆರ್ ಜಂಟಿ ಪರೀಕ್ಷೆಯಲ್ಲಿ ಉತ್ತೀರ್ಣರಾದವರು ಈ ಶಿಷ್ಯವೇತನ ಪಡೆಯುತ್ತಾರೆ. ಉತ್ತೀರ್ಣರಾದವರು ಫಲಿತಾಂಶ ಬಂದ ಅಥವಾ ಜೆಆರ್‌ಎಫ್ ಅವಾರ್ಡ್ ಲೆಟರ್ ದೊರಕಿದ 2 ವರ್ಷದೊಳಗೆ ಸಂಶೋಧನಾ ಕೇಂದ್ರಗಳಲ್ಲಿ / ವಿಶ್ವವಿದ್ಯಾನಿಲಯಗಳಲ್ಲಿ ಎಂ.ಫಿಲ್. / ಪಿಎಚ್.ಡಿ. ಪದವಿಗೆ ಪ್ರವೇಶ ಪಡೆಯಬೇಕು.	ಐದು ವರ್ಷಗಳು
5	ಯುಜಿಸಿ–ಮೌಲಾನ ಆಜಾದ್ ರಾಷ್ಟ್ರೀಯ ಶಿಷ್ಯವೇತನ ಯುಜಿಸಿ (ಎನ್‌ಇಟಿ)– ಜೆಆರ್‌ಎಫ್	ಜೆಆರ್ ಎಫ್ 31,000/– ಮಾಸಿಕ ಎಸ್‌ಆರ್‌ಎಫ್ 35,000/–ಮಾಸಿಕ ಕಾಂಟಿಜೆನ್ಸಿ– 25,000/–ವಾರ್ಷಿಕ	ಅಭ್ಯರ್ಥಿಯು ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವನಾಗಿದ್ದು, ತಾನು ಎಂ.ಫಿಲ್/ಪಿಹೆಚ್.ಡಿ. ಪದವಿ ಅಧ್ಯಯನ ಮಾಡಬಯಸುವ ವಿಶ್ವವಿದ್ಯಾನಿಲಯ ಅಥವಾ ಸಂಶೋಧನಾ ಕೇಂದ್ರಗಳಲ್ಲಿ ನಿಯಮಗಳಿಗನುಸಾರವಾಗಿ ಪ್ರವೇಶಾತಿ ಪಡೆಯಬೇಕು.	ಐದು ವರ್ಷಗಳು
6	ಡಿಎಸ್ಟಿ–ಇನ್ಸ್‌ಪೈರ್ ಶಿಷ್ಯವೇತನ ಯುಜಿಸಿ (ಎನ್‌ಇಟಿ)– ಜೆಆರ್‌ಎಫ್	ಜೆಆರ್‌ಎಫ್ 31,000/– ಮಾಸಿಕ ಎಸ್‌ಆರ್‌ಎಫ್ 35,000/–ಮಾಸಿಕ ಕಾಂಟಿಜೆನ್ಸಿ– 25,000/–ವಾರ್ಷಿಕ	ಅಭ್ಯರ್ಥಿಯು ಎಂ.ಎಸ್ಸಿಯಲ್ಲಿ ಅಥವಾ ಇಂಟಿಗ್ರೇಟೆಡ್ ಎಂಎಸ್/ ಎಂ.ಎಸ್ಸಿ. ವಿಭಾಗದಲ್ಲಿ 70% ಅಂಕಗಳನ್ನು ಅಥವಾ ತತ್ಸಮಾನ ಸಿಜಿಪಿಎ ಅಂಕಗಳನ್ನು ಗಳಿಸಬೇಕಾಗುತ್ತದೆ.	ಐದು ವರ್ಷಗಳು

ಐ. **ಇಂಟರ್ನ್‌ಶಿಪ್/ತರಬೇತಿ/ಶೈಕ್ಷಣಿಕ ಭೇಟಿಗಳಿಗಾಗಿ ಉದ್ಯಮ/ಸಂಸ್ಥೆಗಳೊಂದಿಗೆ ಮಾಡಿಕೊಂಡ ವ್ಯವಸ್ಥೆಗಳು:**

ಇಂಟರ್ನ್‌ಶಿಪ್ / ತರಬೇತಿ / ಶೈಕ್ಷಣಿಕ ಭೇಟಿಗಳಿಗಾಗಿ ಉದ್ಯಮ ಸಂಸ್ಥೆಗಳೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ.

ಪ್ರತೀ ವರ್ಷ ಜೂನ್ ಜುಲೈ ತಿಂಗಳಿನಲ್ಲಿ ವಿದ್ಯಾರ್ಥಿಗಳು ಯೋಜನಾ ಕಾರ್ಯಗಳಿಗಾಗಿ ಎರಡು ತಿಂಗಳ ಕೈಗಾರಿಕಾ ಭೇಟಿಗೆ ಈ ಕೆಳಗಿನ ವಿವಿಧ ಕಂಪನಿಗಳನ್ನು ಸಂದರ್ಶಿಸುತ್ತಾರೆ.

ಕ್ರಮ ಸಂಖ್ಯೆ	ಕಂಪನಿಯ ಹೆಸರು	ವಿದ್ಯಾರ್ಥಿಗಳ ಸಂಖ್ಯೆ
1	ಅದಾನಿ ವಿಲ್ಮರ್ ಲಿಮಿಟೆಡ್, ಮಂಗಳೂರು.	02
2	ಆಂಥೆಮ್ ಬಯೋ ಸೈನ್ಸಸ್ ಪ್ರೈ. ಲಿ., ಬೆಂಗಳೂರು.	02
3	ಅರ್ಕ್‌ಜೆನ್ ಫಾರ್ಮಾ ಪ್ರೈ. ಲಿ..	02
4	ಅರೋನ್ ಯೂನಿವರ್ಸಲ್ ಲಿ., ಬೆಂಗಳೂರು.	05
5	ಆರಿಗ ರಿಸರ್ಚ್ ಪ್ರೈ. ಲಿ.	05
6	ಆರಿಜಿನ್ ಡಿಸ್ಕವರಿ ಟೆಕ್ನಾಲಜಿಸ್ ಲಿ.	04
7	ಬಿಎಎಸ್‌ಎಫ್ ಇಂಡಿಯಾ ಲಿ.	06
8	ಕ್ಯಾಂಪ್ಕೋ ಲಿ. ಪುತ್ತೂರು.	04
9	ಕಾಡೋರ್ಲೈಟ್ ಸ್ಪೆಶಾಲಿಟಿ ಕೆಮಿಕಲ್ಸ್	04
10	ಸಿಎಆರ್‌ಇಆರ್, ಮಂಗಳೂರು ವಿ.ವಿ., ಮಂಗಳಗಂಗೋತ್ರಿ	04
11	ಚೆಮ್‌ಲೈಫ್ ಇನ್ನೋವೇಶನ್ಸ್ ಪ್ರೈ. ಲಿ.	02
12	ಹಿಂದುಸ್ತಾನ್ ಇನ್ಸೆಕ್ಟಿಸೈಡ್ಸ್ ಲಿ. ಕೇರಳ	06
13	ಜುಬಿಲಂಟ್ ಆರ್ಗನೋಸಿಸ್ ಲಿ. ನಂಜನಗೂಡು	05
14	ಕೆಐಒಸಿಎಲ್ ಪಣಂಬೂರು, ಮಂಗಳೂರು.	05
15	ಲ್ಯಾಬೋರೇಟರೀಸ್ ಡ್ಯಾಫೋಡಿಲ್	02
16	ಲೇಕ್ ಕೆಮಿಕಲ್ಸ್ ಪ್ರೈ. ಲಿ. ಬೆಂಗಳೂರು	02
17	ಎಂ ಸಿ ಎಫ್ ಪಣಂಬೂರು, ಮಂಗಳೂರು.	06
18	ಮೈಕ್ರೋಲ್ಯಾಬ್ ಲಿ. ಬೆಂಗಳೂರು.	05
19	ಮೈಲ್ಯಾನ್ ಲ್ಯಾಬೋರೇಟರೀಸ್ ಲಿ. ಬೆಂಗಳೂರು.	04
20	ಎನ್ ಐ ಟಿ ಕೆ ಸುರತ್ಕಲ್, ಮಂಗಳೂರು.	04
21	ಒನ್ ಅರ್ತ್ ಎನ್ವಿರೋ ಲ್ಯಾಬ್ಸ್ ಮಂಗಳೂರು.	05
22	ಪೆಟ್ರೋಪಾತ್ ಫ್ಲೂಯಿಡ್ಸ್ ಇಂಡಿಯಾ ಪ್ರೈ. ಲಿ. ಮಂಗಳೂರು.	05
23	ಸೀಕ್ವೆಂಟ್ ಸೈಂಟಿಫಿಕ್ ಲಿ. ಮಂಗಳೂರು.	02
24	ಸಿಗ್ಮಾ ಎಎಲ್ ಡಿಆರ್‌ಐಸಿಹೆಚ್, ಬೆಂಗಳೂರು.	02
25	ಸಿಂಜೈನ್ ಇಂಟರ್‌ನ್ಯಾಶನಲ್ ಲಿ. ಬೆಂಗಳೂರು.	02
26	ಸಿಂಜೆಂಟಾ ಬಯೋ ಸೈನ್ಸಸ್ ಪ್ರೈ. ಲಿ. ಗೋವಾ	05
27	ಇಂಡೆಜೀನ್	02
28	ಸಿಂಜೈನ್ ಇಂಟರ್‌ನ್ಯಾಶನಲ್ ಲಿ. ಬೆಂಗಳೂರು.	04
29	ಮೆಡಿಟೆಕ್ ಇಂಡಿಯಾ	02

ಜೆ. ಕ್ರೀಡೆ, ಪ್ರದರ್ಶನ ಕಲೆಗಳು, ಸಾಂಸ್ಕೃತಿಕ ಚಟುವಟಿಕೆಗಳು ಮತ್ತು ನಾಯಕತ್ವದ ಪ್ರತಿಭೆಗಳನ್ನು ಉತ್ತೇಜಿಸುವ ಕ್ರಮಗಳು:

- ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಉತ್ತಮ ಸಾಧನೆ ತೋರಿದವರಿಗೆ ಉನ್ನತ ಅಧ್ಯಯಗಳಲ್ಲಿ ಸೀಟುಗಳನ್ನು ಕಾಯ್ದಿರಿಸುವುದು.
- ಪ್ರತಿಭೆಗಳನ್ನು ಗುರುತಿಸಿ ನಗದು ಬಹುಮಾನಗಳು ಮತ್ತು ಪದಕಗಳನ್ನು ನೀಡಲಾಗುವುದು.
- ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ಉತ್ತೇಜಿಸಲು ರಜೆ ಸೌಲಭ್ಯಗಳನ್ನು ನೀಡಲಾಗುವುದು.
- ಕ್ರೀಡೆ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳನ್ನು ನಿಯಮಿತವಾಗಿ ನಡೆಸಲಾಗುವುದು. ವಿಜೇತರನ್ನು ವಿಶ್ವವಿದ್ಯಾನಿಲಯದ ಕಾರ್ಯಕ್ರಮಗಳಂತಹ ಸ್ಥಾಪನಾ ದಿನಾಚರಣೆಯಂದು ಸನ್ಮಾನಿಸಲಾಗುತ್ತದೆ.

ಕೆ. ವಿದ್ಯಾರ್ಥಿ ಪತ್ರಿಕೆ/ಜರ್ನಲ್:

- ಸಂಬಂಧಪಟ್ಟ ವಿಭಾಗಗಳು ಅವರ ಪತ್ರಿಕೆಗಳ ಮತ್ತು ಜರ್ನಲ್‌ಗಳನ್ನು ಪ್ರಕಟಿಸಲು ಪ್ರೋತ್ಸಾಹಿಸಲಾಗುತ್ತಿದೆ. ಉದಾಹರಣೆಗೆ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗದ 'ಮಾಧ್ಯಮ ಮಂಗಳ' ಅಂತಹ ಒಂದು ವಿಭಿನ್ನ ಚಟುವಟಿಕೆಯಾಗಿದ್ದು, ಕ್ಯಾಂಪಸ್‌ನ ವಾರದ ಚಟುವಟಿಕೆಗಳು ಮತ್ತು ರಾಷ್ಟ್ರೀಯ/ಅಂತಾರಾಷ್ಟ್ರೀಯ ಸುದ್ದಿಗಳ ಕುರಿತು ವಾರಪತ್ರಿಕೆಯೊಂದನ್ನು ತರಲು ಉತ್ತೇಜಿಸಲಾಗುತ್ತಿದೆ.

ಎಲ್. ಪ.ಜಾ./ಪ.ಪಂ./ಒಬಿಸಿ/ಇತರರಿಗೆ ಮಂಜೂರಾದ ಮತ್ತು ವಿತರಿಸಿದ ವಿದ್ಯಾರ್ಥಿವೇತನಗಳು/ಶಿಷ್ಯವೇತನಗಳು

- ವಿವರಗಳನ್ನು ಕೆಳಗೆ ನೀಡಲಾಗಿದೆ.

ಎಂ. ವಿದ್ಯಾರ್ಥಿ ವಿನಿಮಯ ಕಾರ್ಯಕ್ರಮ: ಇಲ್ಲ

ಎನ್. ಅಂತಾರಾಷ್ಟ್ರೀಯ ವಿದ್ಯಾರ್ಥಿಗಳಿಗೆ ನೀಡಲಾದ ಸೌಲಭ್ಯಗಳು:

ಅಂತಾರಾಷ್ಟ್ರೀಯ ವಿದ್ಯಾರ್ಥಿಕೇಂದ್ರ: ಜಾಗತಿಕ ದೃಷ್ಟಿಕೋನವನ್ನು ಪ್ರೋತ್ಸಾಹಿಸಲು 2011ರಲ್ಲಿ ಪ್ರಾರಂಭವಾದ ಅಂತರಾಷ್ಟ್ರೀಯ ವಿದ್ಯಾರ್ಥಿ ಕೇಂದ್ರವು ಮಂಗಳೂರು ವಿಶ್ವವಿದ್ಯಾನಿಲಯದ ಸ್ವತಂತ್ರ ಅಂಗವಾಗಿದ್ದು ವಿಶ್ವವಿದ್ಯಾನಿಲಯದ ಬೋಧನೆ ಮತ್ತು ಸಂಶೋಧನಾ ಕಾರ್ಯಗಳನ್ನು ನಡೆಸುತ್ತಿದೆ.

ಈ ಕೇಂದ್ರವು ಒಂದೆಡೆ ವಿದೇಶೀ ವಿದ್ಯಾರ್ಥಿಗಳು, ಸಂಸ್ಥೆಗಳು ಮತ್ತು ರಾಷ್ಟ್ರೀಯ ಆಯೋಗಗಳು ಇವುಗಳು, ಇನ್ನೊಂದೆಡೆ ವಿಶ್ವವಿದ್ಯಾನಿಲಯದ ಆಡಳಿತ, ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಸಂಯೋಜಿತ ಕಾಲೇಜುಗಳು ಮತ್ತು ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿದ ಇತರ ಸಂಶೊಧನಾ ಸಂಸ್ಥೆಗಳು ನಡುವಿನ ಸಂಪರ್ಕ ಸೇತುವಾಗಿ ಕಾರ್ಯ ನಿರ್ವಹಿಸುತ್ತದೆ.

ವಿದೇಶಿ ವಿದ್ಯಾರ್ಥಿಗಳಿಗೆ ಅಗತ್ಯ ಮಾಹಿತಿಗಳನ್ನು ನೀಡಿ, ವಿಶ್ವವಿದ್ಯಾನಿಲಯದ ಹಲವು ಅಧ್ಯಯನ ವಿಭಾಗಗಳಿಗೆ ಪ್ರವೇಶಾತಿ ಪಡೆಯುವ ಪ್ರಕ್ರಿಯೆಯಲ್ಲಿ ಅವರಿಗೆ ಸಹಾಯ ಮಾಡುವುದು ಇದರ ಮುಖ್ಯ ಉದ್ದೇಶವಾಗಿದೆ. ಅಂತರಾಷ್ಟ್ರೀಯ ವಿದ್ಯಾರ್ಥಿಗಳ ಸಮುದಾಯಕ್ಕಾಗಿ ಅಭಿವೃದ್ಧಿಪಡಿಸಲಾದ ಸೌಲಭ್ಯಗಳ ವಿವರಗಳು ಈ ಕೆಳಗಿನಂತಿವೆ.

- ಸ್ವಯಂಪೂರ್ಣವಾದ ಸ್ವಚ್ಛ – ಸುಂದರ ಪರಿಸರ
- ಮೈಕ್ರೋಟ್ರಾನ್ ಸಂಶೋಧನಾ ಕೇಂದ್ರ.
- ರೇಡಿಯೋ ಐಸೋಟೋಪುಗಳು ಮತ್ತು ರೇಡಿಯೇಶನ್ (ವಿಕಿರಣ) ತಂತ್ರಜ್ಞಾನ ಕೇಂದ್ರ
- ವಿಜ್ಞಾನ, ವಾಣಿಜ್ಯ, ಕನ್ನಡ ಮತ್ತು ಮಾನವಿಕ ಅಧ್ಯಯನ ವಿಭಾಗಗಳಿಗೆ ಪ್ರತ್ಯೇಕ ಕಟ್ಟಡಗಳು
- ಆಕರ್ಷಕವಾದ ವಿಶಾಲ ಆಡಳಿತ ಕಛೇರಿ ಕಟ್ಟಡ
- ವಿಶ್ವವಿದ್ಯಾನಿಲಯ ವೈಜ್ಞಾನಿಕ ಉಪಕರಣಗಳ ಕೇಂದ್ರ
- ಉತ್ಕೃಷ್ಟ ಮಟ್ಟದ ಯುಜಿಸಿ–ಇನ್‌ಫೋನೆಟ್ ಮತ್ತು ಜೆ–ಗೇಟ್‌ಡೇಟಾಬೇಸ್ ಸೌಲಭ್ಯಗಳೊಂದಿಗೆ 2 ಲಕ್ಷ ಪುಸ್ತಕಗಳನ್ನು ಹೊಂದಿರುವ ವಿಶಾಲ ಗ್ರಂಥಾಲಯ
- ವಿಶ್ವವಿದ್ಯಾನಿಲಯಕ್ಕೆ ಆಗಮಿಸುವ ಗಣ್ಯರು ಅತಿಥಿಗಳು ಮತ್ತು ಸಂದರ್ಶಕರಿಗಾಗಿ ಎರಡು ಅತಿಥಿಗೃಹಗಳು
- ವಿಶ್ವವಿದ್ಯಾನಿಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಉದ್ಯೋಗಿಗಳಿಗೆ ಸುಸಜ್ಜಿತವಾದ ಆರೋಗ್ಯ ಕೇಂದ್ರ, ವಾಣಿಜ್ಯ ಮಳಿಗೆಗಳ ಸಂಕೀರ್ಣ, ವಸತಿಗೃಹಗಳ ಸೌಲಭ್ಯ
- ದೊಡ್ಡಮಟ್ಟದ ಕಾರ್ಯಕ್ರಮಗಳಿಗಾಗಿ ಉತ್ಕೃಷ್ಟ ಮಟ್ಟದ ಕಲಾತ್ಮಕವಾಗಿರುವ ಮಂಗಳ ಸಭಾಂಗಣವಿದೆ.

- ವಿಶ್ವವಿದ್ಯಾನಿಲಯವು ಸ್ವಂತ ನೀರು ಸರಬರಾಜು ವ್ಯವಸ್ಥೆಯನ್ನು ಹೊಂದಿದೆ.
- ವಿಶ್ವವಿದ್ಯಾನಿಲಯವು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ವಿಜಯಾ ಬ್ಯಾಂಕ್‌ಗಳನ್ನು ಹೊಂದಿದ್ದು ತನ್ನ ಆವರಣದೊಳಗೆ ನಾಲ್ಕು ಎಟಿಎಂಗಳನ್ನು ಹೊಂದಿದೆ.
- ಅಂಚೆ ಕಛೇರಿ ಮತ್ತು ದೂರವಾಣಿ ವಿನಿಮಯ ಕೇಂದ್ರ
- ವಿಶ್ವವಿದ್ಯಾನಿಲಯದ ಆವರಣದಲ್ಲಿ ಶಾಲೆ ಮತ್ತು (ಪದವಿಪೂರ್ವ) ಕಾಲೇಜುಗಳಿವೆ.
- ಸೈಬರ್ ಕೆಫೆಗಳು, ವಾಣಿಜ್ಯ ಮಳಿಗೆಗಳ ಸಂಕೀರ್ಣ ಮತ್ತು ಮೂರು ಉಪಹಾರ ಗೃಹಗಳಿವೆ.
- ಉದ್ಯೋಗಿಗಳ ಪತ್ತಿನ ಸಹಕಾರ ಸಂಘ ಮತ್ತು ಶಿಶುಪಾಲನಾ ಕೇಂದ್ರ
- ವಿದ್ಯಾರ್ಥಿ ವಿದ್ಯಾರ್ಥಿನಿಯರಿಗಾಗಿ ಎರಡು ವಸತಿನಿಲಯಗಳಿದ್ದು ಉದ್ಯೋಗಸ್ಥ ಮಹಿಳೆಯರು ಮತ್ತು ಸಂಶೋಧನಾ ವಿದ್ಯಾರ್ಥಿಗಳಿಗೆ ಪ್ರತ್ಯೇಕ ವಸತಿನಿಲಯವಿದೆ.
- ಐಸಿಟಿ ಸೇವೆಗಳನ್ನು ನೀಡಲು ವಿಶ್ವವಿದ್ಯಾನಿಲಯ ಗಣಕಕೇಂದ್ರವು ಮೇಲ್, ವೆಬ್ ಮತ್ತು ಅಪ್ಲಿಕೇಶನ್ ಸರ್ವರ್‌ಗಳನ್ನು ಹೊಂದಿದೆ.
- ಸ್ನಾತಕೋತ್ತರ ಅಧ್ಯಯನ ವಿಭಾಗಗಳ ತರಗತಿಗಳಲ್ಲಿ ಐಟಿಸಿ ಸೌಲಭ್ಯವಿದೆ.
- ವಿದ್ಯಾರ್ಥಿ ಚಟುವಟಿಕಾ ಕೇಂದ್ರವಿದೆ.
- 400 ಮೀ. ಟ್ರ್ಯಾಕ್ ಹೊಂದಿದ ಮೈದಾನ, ಆಧುನಿಕ ಜಿಮ್ನಾಶಿಯಂ ಮತ್ತು ಒಳಾಂಗಣ ಆಟಗಳ ಸೌಲಭ್ಯಗಳನ್ನು ಹೊಂದಿದ ಕ್ರೀಡಾಂಗಣವಿದೆ.
- ಟೆನ್ನಿಸ್ ಮತ್ತು ಬಾಸ್ಕೆಟ್ ಬಾಲ್ ಕ್ರೀಡೆಗಳನ್ನು ಆಡುವ ಸೌಲಭ್ಯವಿದೆ.
- ವಿದೇಶೀ ವಿದ್ಯಾರ್ಥಿಗಳಿಗೆ ಅಂತರಾಷ್ಟ್ರೀಯ ವಸತಿ ನಿಲಯವಿದೆ.

ಒ. **ದಿವ್ಯಾಂಗ ಸ್ನೇಹಿ ಉಪಕ್ರಮಗಳು: (ವಿಕಲ ಚೇತನರ ಕಾಯ್ದೆ 2016)**

- ರ್‍ಯಾಂಪ್ ಸೌಲಭ್ಯವನ್ನು ವಿಸ್ತರಿಸಲು ಕ್ರಮ ಕೈಗೊಳ್ಳಲಾಗಿದೆ.
- ಪ್ರವೇಶಾತಿ, ದಾಖಲಾತಿ ಮತ್ತು ಉದ್ಯೋಗಾವಕಾಶಗಳಲ್ಲಿ ಮೀಸಲಾತಿ ಸೌಲಭ್ಯವನ್ನು ನೀಡಲಾಗಿದೆ.
- ವಿಜ್ಞಾನ ಸಂಕೀರ್ಣದಲ್ಲಿ ಲಿಫ್ಟ್ ಸೌಲಭ್ಯವಿದೆ.

ಪಿ. **ಕುಂದು ಕೊರತೆ ಮತ್ತು ಪರಿಹಾರದ ವ್ಯವಸ್ಥೆಗಳು:**

- ಹಲವಾರು ಸಮಿತಿಗಳು ಮತ್ತು ಕೋಶಗಳು ಉದಾಹರಣೆಗೆ ಸ್ಪರ್ಶ್, ರ್‍ಯಾಗಿಂಗ್ ವಿರೋಧಿ ಸಮಿತಿ, ಒಬಿಸಿ ಕೋಶ ಇವುಗಳ ಮೂಲಕ ಕುಂದು ಕೊರತೆಗಳ ಪರಿಹಾರ ವ್ಯವಸ್ಥೆಯು ನಿರ್ವಹಿಸಲ್ಪಟ್ಟಿದೆ. ಅದರ ವಿವರಗಳು ಕೆಳಗಿನಂತಿವೆ:

ಮಂಗಳೂರು ವಿಶ್ವವಿದ್ಯಾನಿಲಯದ ಪರಿಸರ ಮತ್ತು ಅದರ ಘಟಕ/ಸಂಯೋಜಿತ ಕಾಲೇಜುಗಳಲ್ಲಿ ರ್‍ಯಾಗಿಂಗ್ ತಡೆಯುವ ಉದ್ದೇಶದಿಂದ ರ್‍ಯಾಗಿಂಗ್ ವಿರೋಧಿ ಸಮಿತಿಯನ್ನು ಈ ಕೆಳಗಿನ ಸದಸ್ಯರನ್ನು ಒಳಗೊಂಡಂತೆ ರಚಿಸಲಾಗಿದೆ.

ಸ್ಪರ್ಶ್ ಸಮಿತಿಯನ್ನು ಈ ಕೆಳಗಿನಂತೆ ಪುನರ್ ರಚಿಸಲಾಗಿದೆ:

ಕ್ರಮ ಸಂಖ್ಯೆ	ಅಧಿಕಾರಿಯ ಹೆಸರು ಮತ್ತು ಪದನಾಮ	ನೇಮಕಾತಿ
1	ಪ್ರೊ. ಕಿಶೋರಿ ನಾಯಕ್ ಕೆ. ಪ್ರಾಧ್ಯಾಪಕರು, ಆಂಗ್ಲಭಾಷಾ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ, 574199. ದೂರವಾಣಿ: +91824 2287381 ಮೊಬೈಲ್: 9342035991	ಅಧ್ಯಕ್ಷರು

2	ಐವರು ಬೋಧಕ ಪ್ರತಿನಿಧಿ ಸದಸ್ಯರು 1. ಪ್ರೊ. ಮೋನಿಕಾ ಸದಾನಂದ ಪ್ರಾಧ್ಯಾಪಕರು, ಜೀವವಿಜ್ಞಾನಗಳ ಅಧ್ಯಯನ ವಿಭಾಗ ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ. 574199. ದೂರವಾಣಿ: +91824 2261 ಮೊಬೈಲ್: 9448869719 ಇ–ಮೇಲ್: monikasadananda@gmail.com	ಸದಸ್ಯರು
	2. ಡಾ. ಹೆಚ್. ಎಲ್. ಶಶಿರೇಖಾ ಪ್ರಾಧ್ಯಾಪಕರು, ಗಣಕ ವಿಜ್ಞಾನ ಅಧ್ಯಯನ ವಿಭಾಗ ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ. 574199. ದೂರವಾಣಿ: +91824 2287670 9480573679	ಸದಸ್ಯರು
	3. ಡಾ. ಚಂದ್ರಾ ಎಂ. ಪ್ರಾಧ್ಯಾಪಕರು, ಜೀವವಿಜ್ಞಾನಗಳ ಅಧ್ಯಯನ ವಿಭಾಗ ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ. 574199. ದೂರವಾಣಿ: +91824 2287261 7353812285	ಸದಸ್ಯರು
	4. ಡಾ. ವಜೀದಾ ಬಾನು ಸಹಾಯಕ ಪ್ರಾಧ್ಯಾಪಕರು ಅರ್ಥಶಾಸ್ತ್ರ ಅಧ್ಯಯನ ವಿಭಾಗ ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ. 574199. ದೂರವಾಣಿ: +91824 2287372 9481762600	ಸದಸ್ಯರು
	5. ಪ್ರೊ. ಕೆ. ಆರ್ ಚಂದ್ರಶೇಖರ್, ಪ್ರಾಧ್ಯಾಪಕರು, ಆನ್ವಯಿಕ ಸಸ್ಯಶಾಸ್ತ್ರ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ. 574199. ದೂರವಾಣಿ: +91824 2287272 9481273648	ಸದಸ್ಯರು
3	ಇಬ್ಬರು ವಿದ್ಯಾರ್ಥಿ ಪ್ರತಿನಿಧಿಗಳು 1. ಕು॥ ರೋಸಿಲಾ ಎಂ. ಎ ಪ್ರಥಮ ವರ್ಷ	ಸದಸ್ಯರು

	ಆಂಗ್ಲಭಾಷಾ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ. 574199.	
	2. ಕು॥ ಅಭಿಷೇಕ್ ಎಂ. ಎಸ್ಸಿ ಪ್ರಥಮ ವರ್ಷ, ಭೌತಶಾಸ್ತ್ರ ಅಧ್ಯಯನ ವಿಭಾಗ ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ. 574199.	ಸದಸ್ಯರು
4	ಇಬ್ಬರು ಬೋಧಕೇತರ ಸಿಬ್ಬಂದಿ ಪ್ರತಿನಿಧಿಗಳು 1. ಶ್ರೀಮತಿ ಆಶಾಲತಾ, ಸಹಾಯಕ ಕುಲಸಚಿವರು ಕುಲಸಚಿವರ ಕಛೇರಿ (ಪರೀಕ್ಷಾಂಗ) ಮಂಗಳೂರು ವಿಶ್ವವಿದ್ಯಾನಿಲಯ ಮಂಗಳಗಂಗೋತ್ರಿ ದೂರವಾಣಿ: +91824 2284353	ಸದಸ್ಯರು
	2. ಶ್ರೀ ಹುಕ್ರಪ್ಪ ನಾಯ್ಕ್ ಸಹಾಯಕ ಕುಲಸಚಿವರು ಕುಲಸಚಿವರ ಕಛೇರಿ ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ. 574199. ದೂರವಾಣಿ: +91824 2287288 ಮೊಬೈಲ್: 8494818327	ಸದಸ್ಯರು
5	ಒಬ್ಬ ಮಹಿಳಾ ಎನ್‌ಜಿಒ ಪ್ರತಿನಿಧಿ 1. ಕು॥ ವಿನೀತ ರಾಜ್ ಪ್ಲಾಸ್ಟಿಕ್ ಹೆಕ್ಕಿಕೋ ಆಂದೋಲನ ರೋಶನಿ ನಿಲಯ, ಕಂಕನಾಡಿ, ಮಂಗಳೂರು.	ಸದಸ್ಯರು
6	ಒಬ್ಬರು ಮಹಿಳಾ ಆಪ್ತ ಸಲಹೆಗಾರರು ಡಾ. ರಮೀಲಾ ಶೇಖರ್ 17–21–1502, ಹೈ ಲ್ಯಾಂಡ್ ಹೋಮ್, ರಾವ್ ಬಹಾದ್ದೂರ್ ಗಿರಿಯಪ್ಪ ಹೈಲ್ಯಾಂಡ್ಸ್, ಮಂಗಳೂರು– 575 002. ದೂರವಾಣಿ: 9980463719	ಸದಸ್ಯರು
7	ಒಬ್ಬರು ಕಾನೂನು ಸಲಹೆಗಾರರು ಶ್ರೀಮತಿ ಲತಾ ಹೊಳ್ಳ ಅಡ್ವೊಕೇಟ್, ನೆಲಮಹಡಿ, ಶ್ರೀಕೃಷ್ಣ ಕಾಂಪ್ಲೆಕ್ಸ್, ಮಹಾತ್ಮಾ ಗಾಂಧಿ ರಸ್ತೆ, ಕೊಡಿಯಾಲ್‌ಬೈಲ್, ಮಂಗಳೂರು–3.	ಸದಸ್ಯರು

ಆಂತರಿಕ ದೂರು ಸಮಿತಿಯನ್ನು (ಉದ್ಯೋಗ ಸ್ಥಳದಲ್ಲಿ ಲೈಂಗಿಕ ದೌರ್ಜನ್ಯದ ಕುರಿತು) ಈ ಕೆಳಗಿನಂತೆ ರಚಿಸಲಾಗಿದೆ.

ಕ್ರಮ ಸಂಖ್ಯೆ	ಅಧಿಕಾರಿಯ ಹೆಸರು ಮತ್ತು ಪದನಾಮ	ನೇಮಕಾತಿಯ ಮಾದರಿ
1	ಪ್ರೊ. ಮೋನಿಕಾ ಸದಾನಂದ ಪ್ರಾಧ್ಯಾಪಕರು, ಜೀವವಿಜ್ಞಾನಗಳ ಅಧ್ಯಯನ ವಿಭಾಗ ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ. 574199. ದೂರವಾಣಿ: +91824 2261 ಮೊಬೈಲ್: 9448869719 ಇ–ಮೇಲ್: monikasadananda@gmail.com	ಅಧ್ಯಕ್ಷರು
2	ಡಾ. ಜೋಸೆಫ್ ಪಿ. ಖ. ಸಹಾಯಕ ಪ್ರಾಧ್ಯಾಪಕರು, ಎಂ. ಟಿ. ಎ. ಅಧ್ಯಯನ ವಿಭಾಗ ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ. 574199. ದೂರವಾಣಿ: +91824 2287209 ಮೊಬೈಲ್: 9886633210 ಇ ಮೇಲ್: josephpallickal@gmail.com	ಸದಸ್ಯರು
3	ಡಾ. ಪ್ರಿಯಾ ಕೆ. ಸಹ ಪ್ರಾಧ್ಯಾಪಕರು, ಸಾಗರ ಭೂವಿಜ್ಞಾನ ಅಧ್ಯಯನ ವಿಭಾಗ ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ. 574199. ದೂರವಾಣಿ: +91824 2287389 ಮೊಬೈಲ್: 9741627654	ಸದಸ್ಯರು
4	ಇಬ್ಬರು ಬೋಧಕೇತರ ಮಹಿಳಾ ಪ್ರತಿನಿಧಿಗಳು ಶ್ರೀಮತಿ ನಾಗವೇಣಿ. ಪಿ. ಹಿರಿಯ ಸಹಾಯಕರು, ಇಂಜಿನಿಯರ್ ಸೆಕ್ಷನ್ ಕಛೇರಿ ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ–574199. ದೂರವಾಣಿ: +91824 2284264 ಮೊಬೈಲ್: 9449048078 ಶ್ರೀಮತಿ ಕಮಲಾಕ್ಷಿ ದ್ವಿತೀಯ ದರ್ಜೆ ಸಹಾಯಕರು, ಕುಲಸಚಿವರ ಕಛೇರಿ ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ. 574199. ದೂರವಾಣಿ: +91824 2287314 ಮೊಬೈಲ್: 9481015401 ಇ ಮೇಲ್: pshettykamalakshi@gmail.com	ಸದಸ್ಯರು
5	ವಿದ್ಯಾರ್ಥಿ ಪ್ರತಿನಿಧಿಗಳು 1. ಅಧ್ಯಕ್ಷ ವಿದ್ಯಾರ್ಥಿ ಕ್ಷೇಮಪಾಲನಾ ಸಂಘ ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ. 574199. 2. ಅಧ್ಯಕ್ಷ ಮಂಗಳೂರು ವಿಶ್ವವಿದ್ಯಾನಿಲಯದ ಸಂಶೋಧನಾರ್ಥಿಗಳ ಸಂಘ ಮಂಗಳಗಂಗೋತ್ರಿ. 574199. 3. ಅಧ್ಯಕ್ಷ ವಿದ್ಯಾರ್ಥಿ ಕ್ಷೇಮಪಾಲನಾ ಸಂಘ ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು	 ಸದಸ್ಯರು ಸದಸ್ಯರು ಸದಸ್ಯರು
12	ಎಂ ಆರ್ ಕನ್ಸಲ್ಟ್ ಸರ್ವೀಸಸ್ ಪ್ರೈ. ಲಿ., ಕೆ. ಎಸ್. ರಾವ್ ರಸ್ತೆ, ಮಂಗಳೂರು.
13	ಶಿವಾಜಿ ವಿಜ್ಞಾನ ಕಾಲೇಜು, ಅಮರಾವತಿ ವಿಶ್ವವಿದ್ಯಾಲಯ, ಚಿಕಾಲಿ, ಬುಲ್ಡಾನಾ ಜಿಲ್ಲೆ. ಮಹಾರಾಷ್ಟ್ರ.

ಡಾ. ಪಿ. ದಯಾನಂದ ಪೈ ಮತ್ತು ಶ್ರೀ ಪಿ. ಸತೀಶ್ ಪೈ ಯಕ್ಷಗಾನ ಅಧ್ಯಯನ ಕೇಂದ್ರ

ಸ್ಥಾಪನೆಯಾದ ವರ್ಷ: 2009

ಬಂಡವಾಳದ ಮೂಲ: ಡಾ. ಪಿ. ದಯಾನಂದ ಪೈ ಮತ್ತು ಶ್ರೀ ಪಿ. ಸತೀಶ್ ಪೈ ಟ್ರಸ್ಟ್, ಬೆಂಗಳೂರು

ರೂ. ಒಂದು ಕೋಟಿಯನ್ನು ಮೂಲನಿಧಿಯಾಗಿ ಸ್ವೀಕರಿಸಲಾಗಿದೆ.

ಸಿಬ್ಬಂದಿ ವರ್ಗ:

ನಿರ್ದೇಶಕರು : **ಪ್ರೊ. ಶ್ರೀಪತಿ ಕಲ್ಲೂರಾಯ**

ಸಂಶೋಧನ ಸಹಾಯಕರು : **ಶ್ರೀ ಸತೀಶ್ ಎ.**

ಬೆರಳಚ್ಚುಗಾರರು : **ಸ್ವಾತಿ ವಿ. ರಾವ್**

- ಪರಿಪೂರ್ಣ ರಂಗಭೂಮಿಯಾದ ಯಕ್ಷಗಾನದ ಅಧ್ಯಯನ, ಪ್ರಕಟನೆ, ಸಂವರ್ಧನೆ ಮತ್ತು ಸಂರಕ್ಷಣೆಗಾಗಿ ಡಾ. ಪಿ. ದಯಾನಂದ ಪೈ ಮತ್ತು ಶ್ರೀ ಪಿ. ಸತೀಶ್ ಪೈ ಯಕ್ಷಗಾನ ಅಧ್ಯಯನ ಕೇಂದ್ರವು 2009ರಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಅಸ್ತಿತ್ವಕ್ಕೆ ಬಂದಿರುತ್ತದೆ. ಯಕ್ಷಗಾನವು ಕರಾವಳಿ ಕರ್ನಾಟಕದ ಸಾಂಪ್ರದಾಯಿಕ ಪ್ರಕಾರದ ಪ್ರಸಿದ್ಧ ಪ್ರದರ್ಶನಾ ಕಲೆಯಾಗಿದ್ದು, ತನ್ನ ವೈಶಿಷ್ಟ್ಯತೆಗಳ ಮೂಲಕ ವಿಶ್ವದ ಗಮನವನ್ನು ಸೆಳೆದಿದೆ. ಇದೊಂದು ಕರ್ನಾಟಕದ ರಂಗಭೂಮಿ ಮಾದರಿಯ ಕಲೆಯಾಗಿದ್ದು, ನಮ್ಮ ರಾಜ್ಯವನ್ನು ಪ್ರತಿನಿಧಿಸುತ್ತದೆ. ಇದು 800 ವರ್ಷಗಳಿಗೂ ಅಧಿಕ ವರ್ಷಗಳ ಇತಿಹಾಸವನ್ನು ಹೊಂದಿದ್ದು, ಕರಾವಳಿ ಕರ್ನಾಟಕದಲ್ಲಿ ಸಾಮರಸ್ಯವನ್ನು ಬಿಂಬಿಸುವ ಕಲೆಯಾಗಿ ಪ್ರಸಿದ್ಧಿಯನ್ನು ಪಡೆದಿದೆ. ಇದು ತನ್ನ ಶಕ್ತಿಯುತವಾದ ಸಂಗೀತ, ಬಣ್ಣ ಬಣ್ಣದ ವೇಷಭೂಷಣಗಳು, ವಿಭಿನ್ನ ನೃತ್ಯ ಮತ್ತು ವಿಭಿನ್ನವಾದ ಮಾತುಗಾರಿಕೆಯ ಮೂಲಕ ತನ್ನದೇ ಆದ ಒಂದು ವಿಶೇಷತೆಯನ್ನು ಹೊಂದಿದೆ. ಮನರಂಜನಾ ಕಲೆಯಾಗಿರುವ ಯಕ್ಷಗಾನವು ಮನರಂಜನೆಯೊಂದಿಗೆ ಮಾಹಿತಿ, ಮೌಲ್ಯ/ನೈತಿಕ ಶಿಕ್ಷಣವನ್ನು ಸಮುದಾಯಕ್ಕೆ ನೀಡುತ್ತದೆ. ಇದು ತನ್ನ ರಚನೆ ಮತ್ತು ಅಭಿವ್ಯಕ್ತಿ ಶೈಲಿಯಲ್ಲಿ ಶಾಸ್ತ್ರೀಯ ಮತ್ತು ಜಾನಪದದ ಲಕ್ಷಣಗಳನ್ನು ಹೊಂದಿದೆ.
- ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಯಕ್ಷಗಾನದ ಅಧ್ಯಯನ, ಮಾಹಿತಿ ಪ್ರಸಾರ, ಮಾಹಿತಿ ಸಂಗ್ರಹ ಮತ್ತು ಸಂಶೋಧನೆಗಾಗಿ ಕೇಂದ್ರವನ್ನು ಸ್ಥಾಪಿಸಿರುವುದು ಅತ್ಯಂತ ಸೂಕ್ತವಾಗಿದೆ. ಡಾ. ಪಿ. ದಯಾನಂದ ಪೈ ಮತ್ತು ಶ್ರೀ ಪಿ. ಸತೀಶ್ ಪೈ ಟ್ರಸ್ಟ್ ರೂ. ಒಂದು ಕೋಟಿಯನ್ನು ನೀಡಿ ಯಕ್ಷಗಾನ ಅಧ್ಯಯನ ಕೇಂದ್ರವನ್ನು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸಿದೆ. ಕೇಂದ್ರದ ಚಟುವಟಿಕೆಗಳು ಶೈಕ್ಷಣಿಕ ಅಧ್ಯಯನ, ಮಾಹಿತಿ ಸಂಗ್ರಹ, ಮಾಹಿತಿ ಪ್ರಸಾರ, ತರಬೇತಿ, ಪ್ರದರ್ಶನ ಮತ್ತು ಪ್ರಯೋಗಗಳು, ಪ್ರಕಟಣೆಗಳು, ವಿವಿಧ ಚಟುವಟಿಕೆಗಳ ಪ್ರೋತ್ಸಾಹ ಮತ್ತು ಯಕ್ಷಗಾನಕ್ಕೆ ಸಂಬಂಧಿಸಿದ ಮಾಹಿತಿಯ ಪ್ರಚಾರವನ್ನು ಒಳಗೊಂಡಿದೆ. ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮತ್ತು ಕಾಳಜಿಯುಕ್ತ ಯೋಚನೆಯು ಯಕ್ಷಗಾನದ ಶ್ರೀಮಂತಿಕೆ ಮತ್ತು ಮೂಲ ಸೌಂದರ್ಯವನ್ನು ಉಳಿಸಲು ಬೇಕಾದ ಸಾಂಸ್ಥಿಕ ವ್ಯವಸ್ಥೆಗಳನ್ನು ಒದಗಿಸುತ್ತದೆ.

ಕೇಂದ್ರದ ಧ್ಯೇಯೋದ್ದೇಶಗಳು:

- ಸಾಂಪ್ರದಾಯಿಕ ಯಕ್ಷಗಾನ ಕಲೆಯ ಸಂಕಲನ, ಸಂರಕ್ಷಣೆಯನ್ನು ಮಾಡುವುದು, ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮಗಳಲ್ಲಿ ಸ್ಥಳೀಯ, ಪ್ರಾದೇಶಿಕ, ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟಗಳಲ್ಲಿ ಅದರ ಎಲ್ಲ ಶೈಲಿಗಳಲ್ಲಿ(ತೆಂಕು–ಬಡಗು) ಮತ್ತು ಅದರ ಎಲ್ಲ ರೂಪಗಳಲ್ಲಿ (ತಾಳಮದ್ದಳೆ, ಆಟ ಮತ್ತು ಗೊಂಬೆಯಾಟ) ಪ್ರಚಾರ ಮತ್ತು ಪ್ರಸಾರ ಮಾಡುವುದು.
- ವಿದ್ಯಾರ್ಥಿಗಳು ಮತ್ತು ಆಸಕ್ತ ಸಾರ್ವಜನಿಕರಿಗೆ ಯಕ್ಷ ಗುರುಗಳ ಮೂಲಕ ಅದರ ಎಲ್ಲ ಅಂಶಗಳನ್ನೊಳಗೊಂಡು ಅಂದರೆ ನೃತ್ಯ, ಸಂಗೀತವನ್ನೊಳಗೊಂಡಂತೆ ಯಕ್ಷಗಾನದ ಬಗ್ಗೆ ಶಿಕ್ಷಣವನ್ನು ನೀಡುವುದು.
- ಶೈಕ್ಷಣಿಕ ಉದ್ದೇಶಕ್ಕೆ ಒತ್ತನ್ನು ನೀಡಿ ಪ್ರದರ್ಶನಗಳನ್ನು ಆಯೋಜಿಸುವ ಮೂಲಕ ಯಕ್ಷಗಾನದ ಬಗ್ಗೆ ಯುವಜನತೆ ಮತ್ತು ಸಾರ್ವಜನಿಕರಲ್ಲಿ ಆಸಕ್ತಿಯನ್ನು ಮೂಡಿಸುವುದು. ಈ ಉದ್ದೇಶಕ್ಕಾಗಿ ಕಾರ್ಯಾಗಾರ, ಉಪನ್ಯಾಸಗಳು, ಪ್ರದರ್ಶನಗಳು, ಪ್ರಾಯೋಗಿಕ ಪ್ರದರ್ಶನಗಳು ಮತ್ತು ಸಂವಾದಗಳನ್ನು ಆಯೋಜಿಸುವುದು.
- ಯಕ್ಷಗಾನದ ಅಧ್ಯಯನ ಸಂಶೋಧನೆಗಾಗಿ ಆರ್ಕೈವ್/ವಸ್ತು ಸಂಗ್ರಹಾಲಯ/ಗ್ರಂಥಾಲಯಗಳನ್ನು ಸ್ಥಾಪಿಸುವುದು. ಇದು ಯಕ್ಷಗಾನದ ಸಾಂಪ್ರದಾಯಿಕ ಸೌಂದರ್ಯದ ರಕ್ಷಣೆ ಮತ್ತು ಪ್ರಸಾರಕ್ಕೆ ಸಹಕರಿಸುವುದು. ಆ ಮೂಲಕ ಇದರ ವೈಶಿಷ್ಟ್ಯತೆಗಳನ್ನು ಜನರು ಗುರುತಿಸಲು ಸಾಧ್ಯವಾಗುವುದು ಮತ್ತು ಆ ಮೂಲಕ ಅದು ಪಸರಿಸುವುದು.
- ಯಕ್ಷಗಾನಕ್ಕೆ ಸಂಬಂಧಿಸಿದ ಸಾಹಿತ್ಯವನ್ನು ಪ್ರಕಟಿಸುವುದು ಮತ್ತು ಆ ಮೂಲಕ ಯಕ್ಷಗಾನಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಸಂಗ್ರಹಿಸುವುದು. ಈ ಕಾರಣಕ್ಕಾಗಿ ಸಮಾನ ಉದ್ದೇಶಗಳನ್ನು ಹೊಂದಿದ ಸಂಸ್ಥೆಗಳು, ಸಂಘಗಳು ಮತ್ತು ಗುಂಪುಗಳೊಂದಿಗೆ ಸಹಯೋಗ ಹೊಂದುವುದು.

ಯಕ್ಷಗಾನ ಅಧ್ಯಯನ ಕೇಂದ್ರದ ವರದಿ: ಏಪ್ರಿಲ್ 2018 – ಮಾರ್ಚ್ 2019

2009ರಲ್ಲಿ ಅಸ್ತಿತ್ವಕ್ಕೆ ಬಂದ ಯಕ್ಷಗಾನ ಅಧ್ಯಯನ ಕೇಂದ್ರವು ಕೆಳಗಿನ ಘಟಕಗಳನ್ನು ಒಳಗೊಂಡಿದೆ.

- ಎಲ್ಲ ಮೂಲಭೂತ ಸೌಲಭ್ಯಗಳನ್ನು ಹೊಂದಿದ ಯಕ್ಷಗಾನ ಕಲಾ ಮಂದಿರದಲ್ಲಿ ಕೇಂದ್ರವು ಸ್ಥಾಪನೆಯಾಗಿದ್ದು, ಕಾರ್ಯವನ್ನು ನಿರ್ವಹಿಸುತ್ತಿದೆ.
- ಕೇಂದ್ರವು ದೊಡ್ಡ ಹಾಲ್ ಮತ್ತು 750 ಜನರು ಕುಳಿತುಕೊಳ್ಳಬಹುದಾದ ಥಿಯೇಟರ್ ಮತ್ತು ರಂಗಸ್ಥಳವನ್ನು ಹೊಂದಿದೆ.
- ಕೇಂದ್ರದ ಪ್ರಮುಖ ಆಕರ್ಷಣೆಯೆಂದರೆ 'ಯಕ್ಷ ಮಂಗಳ ಸಂಗ್ರಹಾಲಯ'. ಸುಮಾರು 20 ಸಹಜ ಗಾತ್ರದ ತೆಂಕು ಮತ್ತು ಬಡಗುತಿಟ್ಟಿನ ಯಕ್ಷಗಾನದ ಶೈಲಿಗಳ ಮಾದರಿಗಳು ಇಲ್ಲಿವೆ. ಸಂಗ್ರಹಾಲಯವು ಭಾವಚಿತ್ರ ವಿಭಾಗವನ್ನೂ ಹೊಂದಿದ್ದು, ಯಕ್ಷಗಾನದ ವಿವಿಧ ಭಂಗಿಗಳ, ವಿವಿಧ ಪ್ರದರ್ಶನಗಳ ಚಿತ್ರಗಳನ್ನು ಹೊಂದಿದೆ.
- ಯಕ್ಷಗಾನದಲ್ಲಿ ಬಳಸುವ ವೇಷಭೂಷಣ, ಉಡುಗೆ–ತೊಡುಗೆ ಮತ್ತು ಸಂಗೀತ ವಾದ್ಯಗಳನ್ನು ಬೇರೆಯಾಗಿ ಪ್ರದರ್ಶಿಸಲಾಗಿದೆ.
- ಒಟ್ಟಾರೆಯಾಗಿ ಭಾರತೀಯ ರಂಗಭೂಮಿ ಮತ್ತು ನಿರ್ದಿಷ್ಟವಾಗಿ ಯಕ್ಷಗಾನಕ್ಕೆ ಸಂಬಂಧಿಸಿದ ಮೂರು ಸಾವಿರಕ್ಕೂ ಹೆಚ್ಚು ಪುಸ್ತಕಗಳ ಸಂಗ್ರಹ ಗ್ರಂಥಾಲಯದಲ್ಲಿದೆ.
- ಗ್ರಂಥಾಲಯದಲ್ಲಿ ಸುಮಾರು ನೂರು ಅತ್ಯಂತ ಹಳೆಯ, ಅಪರೂಪವಾದ ಮೌಲಿಕ ತಾಳೆಗರಿಗಳನ್ನು ರಕ್ಷಿಸಿಡಲಾಗಿದೆ.
- ದೃಶ್ಯ–ಶ್ರವ್ಯ ಮುದ್ರಣಗಳ ಸಂಗ್ರಹಗಳನ್ನೂ ಸಂರಕ್ಷಿಸಲಾಗಿದೆ.

ಏಪ್ರಿಲ್ 2019ರಿಂದ – ಮಾರ್ಚ್ 2020ರವರೆಗಿನ ಕೇಂದ್ರದ ಕಾರ್ಯಚಟುವಟಿಕೆಗಳು

1. ಯಕ್ಷಮಂಗಳ ಪ್ರಚಾರೋಪನ್ಯಾಸ ಮಾಲಿಕೆ ಉದ್ಘಾಟನೆ 2019–20 :

ಮಂಗಳೂರು ವಿಶ್ವವಿದ್ಯಾನಿಲಯದ ಡಾ. ಪಿ. ದಯಾನಂದ ಪೈ ಮತ್ತು ಶ್ರೀ ಪಿ. ಸತೀಶ್ ಪೈ ಯಕ್ಷಗಾನ ಅಧ್ಯಯನ ಕೇಂದ್ರದ ವತಿಯಿಂದ 2019–20ನೇ ಸಾಲಿನ ಯಕ್ಷಮಂಗಳ ಪ್ರಚಾರೋಪನ್ಯಾಸ ಮಾಲಿಕೆಯ ಉದ್ಘಾಟನಾ ಕಾರ್ಯಕ್ರಮವು 21 ಆಗಸ್ಟ್ 2019 ಬುಧವಾರದಂದು ಮಂಗಳಗಂಗೋತ್ರಿ ಆವರಣದ ಮಂಗಳಾ ಸಭಾಂಗಣದಲ್ಲಿ ನಡೆಯಿತು.

ಸಮಾರಂಭದ ಅಧ್ಯಕ್ಷತೆಯನ್ನು ಮಂಗಳೂರು ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳಾದ ಪ್ರೊ. ಪಿ. ಎಸ್. ಯಡಪಡಿತ್ತಾಯ ಅವರು ವಹಿಸಿ ಮಾತನಾಡಿದರು. ಬಳಿಕ 'ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಪೀಠಗಳ ಮೂಲಕ ವಿವಿಧ ಕಾರ್ಯಕ್ರಮಗಳು ನಡೆದು ಇಲ್ಲಿ ನಿತ್ಯೋತ್ಸವ ನಡೆಯಬೇಕಿದೆ. ಹಾಗೂ ಇಂತಹ ಕಾರ್ಯಕ್ರಮಗಳಲ್ಲಿ ಗ್ರಾಮದ ಜನರು ಕೂಡಾ ಪೂರಕವಾಗಿ ಭಾಗವಹಿಸುವಂತಾದರೆ ವಿಶ್ವವಿದ್ಯಾನಿಲಯದ ಕಾರ್ಯಚಟುವಟಿಕೆಗೆ ನಿಜವಾದ ಅರ್ಥ ಬರುತ್ತದೆ. ಈ ನಿಟ್ಟಿನಲ್ಲಿ ಯಕ್ಷಗಾನ ಅಧ್ಯಯನ ಕೇಂದ್ರವು ಮುನ್ನಡೆಯುತ್ತಿದೆ' ಎಂದು ಹೇಳಿದರು.

ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ, ಮಹಾಭಾರತ: ಹೊಸನೋಟ ಎಂಬ ವಿಷಯದಲ್ಲಿ ವಿಶೇಷ ಉಪನ್ಯಾಸ ನೀಡಿದ ಸಂಸ್ಕೃತಿ ಚಿಂತಕರಾದ ಶ್ರೀ ಲಕ್ಷ್ಮೀಶ ತೋಳ್ಪಾಡಿ ಅವರು ಮಹಾಭಾರತದಲ್ಲಿ ಬರುವ ಎಲ್ಲಾ ಪಾತ್ರಗಳಿಗೂ ನಿರ್ದಿಷ್ಟವಾದ ವ್ಯಕ್ತಿತ್ವ ಇದೆ. ಕೃಷ್ಣನಿಗೆ

ಮಾತ್ರ ಅವ್ಯವಸ್ಥಿತ ಪಾತ್ರ. ಒಂದು ಪಾತ್ರ ಇತಿಹಾಸದ್ದು ಮತ್ತು ಇತಿಹಾಸವನ್ನು ದಾಟಿ ಮಹತ್ವವನ್ನು ಹೊಂದುವಾಗ ಹೀಗೆಯೇ ಆಗುತ್ತದೆ. ಉಳಿದ ಎಲ್ಲಾ ಪಾತ್ರಗಳಿಗೆ ವ್ಯವಸ್ಥಿತ ವ್ಯಕ್ತಿತ್ವ ಪ್ರಾಪ್ತವಾಗುವುದೇ ಈ ಅವ್ಯವಸ್ಥೆಯಿಂದ. ಪೂರ್ವಿಕವೂ ನೂತನವೂ ಆದ ನೆಲೆಯ ಅನುಸಂಧಾನದಲ್ಲಿ ಕೃಷ್ಣನ ಪಾತ್ರ ರೂಪುಗೊಂಡಿದೆ ಎಂದು ಹೇಳಿದರು.

ಯಕ್ಷಗಾನ ಅಧ್ಯಯನ ಕೇಂದ್ರದ ಸಂಯೋಜಕರಾದ ಡಾ. ಧನಂಜಯ ಕುಂಬ್ಳೆ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಯಕ್ಷಗಾನ ಅಧ್ಯಯನ ಕೇಂದ್ರದ ಶ್ರೀ ಸತೀಶ್ ಕೊಣಾಜೆ ವಂದಿಸಿದರು. ಸಂಶೋಧನಾ ಅಧಿಕಾರಿ ಡಾ. ರಾಜಶ್ರೀ ಕಾರ್ಯಕ್ರಮ ನಿರೂಪಿಸಿದರು.

2. ಭಸ್ಮಾಸುರ ಮೋಹಿನೀ ಯಕ್ಷಗಾನ ಪ್ರದರ್ಶನ

ಮಂಗಳೂರು ವಿಶ್ವವಿದ್ಯಾನಿಲಯದ ಡಾ. ಪಿ. ದಯಾನಂದ ಪೈ ಮತ್ತು ಶ್ರೀ ಪಿ. ಸತೀಶ್ ಪೈ ಯಕ್ಷಗಾನ ಅಧ್ಯಯನ ಕೇಂದ್ರದ ವತಿಯಿಂದ 2019–20ನೇ ಸಾಲಿನ ಯಕ್ಷಮಂಗಳ ಪ್ರಚಾರೋಪನ್ಯಾಸ ಮಾಲಿಕೆಯ ಉದ್ಘಾಟನಾ ಕಾರ್ಯಕ್ರಮದ ಬಳಿಕ ಅತಿಥಿ ಕಲಾವಿದರ ಕೂಡುವಿಕೆಯಿಂದ 'ಭಸ್ಮಾಸುರ ಮೋಹಿನಿ' ಯಕ್ಷಗಾನ ಪ್ರದರ್ಶನವು 21 ಆಗಸ್ಟ್ 2019 ಬುಧವಾರದಂದು ಮಂಗಳಗಂಗೋತ್ರಿ ಆವರಣದ ಮಂಗಳಾ ಸಭಾಂಗಣದಲ್ಲಿ ನಡೆಯಿತು.

ಯಕ್ಷಗಾನ ಪ್ರದರ್ಶನದಲ್ಲಿ ಹಿಮ್ಮೇಳ ಕಲಾವಿದರಾಗಿ ಶ್ರೀ ರವಿಚಂದ್ರ ಕನ್ನಡಿಕಟ್ಟೆ, ಶ್ರೀ ಚೈತನ್ಯ ಪದ್ಯಾಣ, ಶ್ರೀ ಶಿತಿಕಂಠ ಭಟ್, ಶ್ರೀ ಮಯೂರ ನಾಯ್ಕ, ಮುಮ್ಮೇಳ ಕಲಾವಿದರಾಗಿ ಶ್ರೀ ಸುಣ್ಣಂಬಳ ವಿಶ್ವೇಶ್ವರ ಭಟ್, ಶ್ರೀ ರಾಧಾಕೃಷ್ಣ ನಾವಡ, ಶ್ರೀ ಅರುಣ್ ಕೋಟ್ಯಾನ್, ಶ್ರೀ ಅಕ್ಷಯ್ ಮಾರ್ನಾಡ್, ಶ್ರೀ ಸುನೀಲ್ ಪಲ್ಲಮಜಲು, ಶ್ರೀ ಅಕ್ಷಯ ಮೂಡಬಿದಿರೆ, ಶ್ರೀ ಶಿವರಾಜ ಬಜಕೂಡ್ಲು ಮೊದಲಾದವರು ಭಾಗವಹಿಸಿದ್ದರು.

3. 'ಸೂರ್ಯಪ್ರಭೆ' ಕೃತಿ ಬಿಡುಗಡೆ ಹಾಗೂ ಯಕ್ಷಗಾನ ತಾಳಮದ್ದಲೆ

ಮಂಗಳೂರು ವಿಶ್ವವಿದ್ಯಾನಿಲಯದ ಡಾ. ಪಿ. ದಯಾನಂದ ಪೈ ಮತ್ತು ಶ್ರೀ ಪಿ. ಸತೀಶ್ ಪೈ ಯಕ್ಷಗಾನ ಅಧ್ಯಯನ ಕೇಂದ್ರ ಹಾಗೂ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ತುಳು ಪೀಠದ ಸಹಯೋಗದಲ್ಲಿ ಸೂರ್ಯಪ್ರಭೆ ಕೃತಿ ಬಿಡುಗಡೆ ಹಾಗೂ ಯಕ್ಷಗಾನ ತಾಳಮದ್ದಲೆ ಕಾರ್ಯಕ್ರಮವು 07 ನವೆಂಬರ್ 2019 ಗುರುವಾರದಂದು ಮಂಗಳೂರು ವಿಶ್ವವಿದ್ಯಾನಿಲಯ ಕಾಲೇಜಿನ ರವೀಂದ್ರ ಕಲಾಭವನದಲ್ಲಿ ನಡೆಯಿತು.

ಮಂಗಳೂರು ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳಾದ ಪ್ರೊ. ಪಿ. ಎಸ್. ಯಡಪಡಿತ್ತಾಯ ಅವರು ಕೃತಿ ಬಿಡುಗಡೆಗೊಳಿಸಿ ಮಾತನಾಡಿದರು. ಸನ್ನಿಧಿ ಟಿ. ರೈ ಅವರ 'ಸೂರ್ಯಪ್ರಭೆ' ಕೃತಿ ಹಾಗೂ ಶ್ರೀಮತಿ ರಾಜಶ್ರೀ ಟಿ. ರೈ ಪೆರ್ಲ ಅವರ 'ಚೌಕಿ' ಕೃತಿಯ ಕುರಿತು ಹಿರಿಯ ವಿದ್ವಾಂಸರಾದ ಡಾ. ಪ್ರಭಾಕರ ಶಿಶಿಲ ಅವರು ಮಾತನಾಡಿದರು. ಮುಖ್ಯ ಅತಿಥಿಯಾಗಿ ಪ್ರಸಿದ್ಧ ಭಾಗವತರಾದ ಶ್ರೀ ಪಟ್ಲ ಸತೀಶ ಶೆಟ್ಟಿ ಇವರು ಭಾಗವಹಿಸಿದ್ದರು. 'ಚೌಕಿ' ಕಾದಂಬರಿಯ ಲೇಖಕಿ ಶ್ರೀಮತಿ ರಾಜಶ್ರೀ ಟಿ. ರೈ ಪೆರ್ಲ, ವಿಶ್ವವಿದ್ಯಾನಿಲಯ ಕಾಲೇಜು ಮಂಗಳೂರು ಇಲ್ಲಿನ ಪ್ರಾಂಶುಪಾಲರಾದ ಡಾ. ಉದಯಕುಮಾರ್ ಇರ್ವತ್ತೂರು, ವಿಶ್ವವಿದ್ಯಾನಿಲಯ ಸಂಧ್ಯಾ ಕಾಲೇಜಿನ ಪ್ರಾಂಶುಪಾಲ ಡಾ. ರಾಮಕೃಷ್ಣ ಬಿ. ಎಂ. ಉಪಸ್ಥಿತರಿದ್ದರು. ಯಕ್ಷಗಾನ ಅಧ್ಯಯನ ಕೇಂದ್ರದ ನಿರ್ದೇಶಕರಾದ ಪ್ರೊ. ಶ್ರೀಪತಿ ಕಲ್ಲೂರಾಯ ಸ್ವಾಗತಿಸಿದರು. ತುಳು ಪೀಠದ ಸಂಯೋಜಕ ಡಾ. ಮಾಧವ ಎಂ. ವಂದಿಸಿದರು. ಯಕ್ಷಗಾನ ಕೇಂದ್ರದ ಡಾ. ರಾಜಶ್ರೀ ಕಾರ್ಯಕ್ರಮ ನಿರೂಪಿಸಿದರು.

'ಸೂರ್ಯಪ್ರಭೆ' ತಾಳಮದ್ದಲೆ

ಕೃತಿ ಬಿಡುಗಡೆ ಸಮಾರಂಭದ ಬಳಿಕ ಬಾಲಪ್ರತಿಭೆ ಸನ್ನಿಧಿ ಟಿ. ರೈ ಪೆರ್ಲ ಅವರು ಬರೆದ ಎರಡನೇ ಯಕ್ಷಗಾನ ಪ್ರಸಂಗ ಸೂರ್ಯಪ್ರಭೆ ತಾಳಮದ್ದಲೆ ಕಾರ್ಯಕ್ರಮ ನಡೆಯಿತು. ಭಾಗವತರಾಗಿ ಶ್ರೀಮತಿ ಭವ್ಯಶ್ರೀ ಕುಲ್ಕುಂದ, ಮದ್ದಳೆಯಲ್ಲಿ ಶ್ರೀ ರೋಹಿತ್ ಉಚ್ಚಿಲ, ಚೆಂಡೆಯಲ್ಲಿ ಶ್ರೀ ವಿಷ್ಣು ಶರಣ ಬನಾರಿ ಹಾಗೂ ಅರ್ಥಧಾರಿಗಳಾಗಿ ಡಾ. ರಮಾನಂದ ಬನಾರಿ, ಶ್ರೀ ಸುಣ್ಣಂಬಳ ವಿಶ್ವೇಶ್ವರ ಭಟ್, ಶ್ರೀ ವೆಂಕಟ್ರಮಣ ಸುಳ್ಯ, ಡಾ. ದಿನಕರ ಪಚ್ಚನಾಡಿ ಮತ್ತು ಶ್ರೀ ಸುನೀಲ್ ಪಲ್ಲಮಜಲು ಭಾಗವಹಿಸಿದ್ದರು.

4. ಹೊಸ್ತೋಟ ಮತ್ತು ಸುಬ್ರಹ್ಮಣ್ಯ ಆಚಾರ್ಯ ನೆನಪು ಕಾರ್ಯಕ್ರಮ

ಯಕ್ಷಗಾನ ರಂಗದಲ್ಲಿ ಸುದೀರ್ಘಕಾಲ ಸೇವೆ ಸಲ್ಲಿಸಿ ನಿಧನರಾದ ಪ್ರಸಿದ್ಧ ಭಾಗವತರಾದ ಶ್ರೀ ಹೊಸ್ತೋಟ ಮಂಜುನಾಥ ಭಾಗವತ ಮತ್ತು ಶ್ರೀ ಸುಬ್ರಹ್ಮಣ್ಯ ಆಚಾರ್ಯ ಅವರಿಗೆ ಶ್ರದ್ಧಾಂಜಲಿ ಸಲ್ಲಿಸುವ ಅಂಗವಾಗಿ ಶ್ರೀ ಹೊಸ್ತೋಟ ಮಂಜುನಾಥ ಭಾಗವತ (ನಿಧನ: 07.01.2020) ಮತ್ತು ಶ್ರೀ ಸುಬ್ರಹ್ಮಣ್ಯ ಆಚಾರ್ಯ (ನಿಧನ: 07.01.2020) ನೆನಪು ಕಾರ್ಯಕ್ರಮವು ದಿನಾಂಕ: 09.01.2020ರಂದು ಮಂಗಳೂರು ವಿಶ್ವವಿದ್ಯಾನಿಲಯದ ಯಕ್ಷಗಾನ ಅಧ್ಯಯನ ಕೇಂದ್ರದಲ್ಲಿ ನಡೆಯಿತು.

ಕಾರ್ಯಕ್ರಮದಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಯಕ್ಷಗಾನ ಅಧ್ಯಯನ ಕೇಂದ್ರದ ನಿರ್ದೇಶಕರಾದ ಪ್ರೊ. ಶ್ರೀಪತಿ ಕಲ್ಲೂರಾಯ ಅವರು ಮಾತನಾಡಿ, ಕಲೆಗಾಗಿ ತಮ್ಮ ಇಡೀ ಬದುಕನ್ನು ಸಮರ್ಪಿಸಿದ ಹೊಸ್ತೋಟ ಮಂಜುನಾಥ ಭಾಗವತರು ಯಕ್ಷಗಾನ ರಂಗದ ಶ್ರೇಷ್ಠ ಕಲಾವಿದರಾಗಿದ್ದಾರೆ. ಯಕ್ಷಗಾನದಲ್ಲಿ ಭಾಗವತಿಕೆ, ಚೆಂಡೆ, ಮದ್ದಳೆ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿ ಮಂಜುನಾಥ ಭಾಗವತರು ಪರಿಣತಿ ಹೊಂದಿದ್ದರು. ಜೊತೆಗೆ ಯಕ್ಷಗಾನ ಗುರುಗಳಾಗಿ, ಪ್ರಸಂಗಕರ್ತರಾಗಿ, ಸಂಶೋಧಕರಾಗಿ ಅವರು ಯಕ್ಷಲೋಕಕ್ಕೆ ನೀಡಿದ ಕೊಡುಗೆ ಅಪಾರವಾದುದು ಎಂದರು. ಮಂಗಳೂರು ವಿಶ್ವವಿದ್ಯಾನಿಲಯದ ಯಕ್ಷಗಾನ ಅಧ್ಯಯನ ಕೇಂದ್ರದ ಎಲ್ಲಾ ಚಟುವಟಿಕೆಗಳಲ್ಲಿಯೂ ಅವರು ಸಕ್ರಿಯವಾಗಿ ಭಾಗವಹಿಸುತ್ತಿದ್ದರು. 2015ರಲ್ಲಿ ಅವರಿಗೆ ಮಂಗಳೂರು ವಿಶ್ವವಿದ್ಯಾನಿಲಯದ ಯಕ್ಷಗಾನ ಅಧ್ಯಯನ ಕೇಂದ್ರದ ವತಿಯಿಂದ

'ಯಕ್ಷಮಂಗಳ ಪ್ರಶಸ್ತಿ'ಯನ್ನು ನೀಡಿ ಗೌರವಿಸಲಾಗಿತ್ತು. ಹಾಗೆಯೇ ಯಕ್ಷಗಾನ ರಂಗದ ಮತ್ತೊಬ್ಬ ಕಲಾವಿದರಾದ ಭಾಗವತ ಸುಬ್ರಹ್ಮಣ್ಯ ಆಚಾರ್ಯ ಅವರೂ ಉತ್ತಮ ಹಾಡುಗಾರಿಕೆಯ ಮೂಲಕ ಗುರುತಿಸಿಕೊಂಡವರಾಗಿದ್ದರು ಎಂದು ಹೇಳಿದರು.

ಯಕ್ಷಗಾನ ಕೇಂದ್ರದ ಯಕ್ಷಗಾನ ಗುರುಗಳಾದ ಶ್ರೀ ದೀವಿತ್ ಕೋಟ್ಯಾನ್ ಮಾತನಾಡಿ, ಶ್ರೀ ಹೊಸ್ತೋಟ ಮಂಜುನಾಥ ಭಾಗವತ ಹಾಗೂ ಶ್ರೀ ಸುಬ್ರಹ್ಮಣ್ಯ ಆಚಾರ್ಯ ಅವರು ಯಕ್ಷಗಾನ ರಂಗಕ್ಕೆ ತಮ್ಮದೇ ಆದ ಕೊಡುಗೆ ನೀಡಿದವರಾಗಿದ್ದಾರೆ ಎಂದರು.

ಯಕ್ಷಗಾನ ಅಧ್ಯಯನ ಕೇಂದ್ರದ ನಿರ್ದೇಶಕರಾದ ಪ್ರೊ. ಶ್ರೀಪತಿ ಕಲ್ಲೂರಾಯ, ಶ್ರೀ ಸತೀಶ್ ಕೊಣಾಜೆ, ಸ್ವಾತಿ ವಿ. ರಾವ್ ಹಾಗೂ ಯಕ್ಷಮಂಗಳ ತಂಡದ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

5. ಉಚಿತ ಯಕ್ಷಗಾನ ತರಬೇತಿ ಮತ್ತು ಪ್ರದರ್ಶನ

5.1 ಕಕ್ಯಪದವಿನಲ್ಲಿ ಯಕ್ಷಮಂಗಳ ತಂಡದಿಂದ 'ಮೋಹಿನಿ ಏಕಾದಶೀ' ಪ್ರದರ್ಶನ

ವಿದ್ಯಾರ್ಥಿಗಳಲ್ಲಿ ತಮ್ಮ ಶೈಕ್ಷಣಿಕ ಚಟುವಟಿಕೆಗಳೊಂದಿಗೆ ಯಕ್ಷಗಾನ ಕಲೆಯ ಆಸಕ್ತಿಯನ್ನು ಮೂಡಿಸುವ ಉದ್ದೇಶದಿಂದ ಕಳೆದ ಹಲವು ವರ್ಷಗಳಿಂದ ಡಾ. ಪಿ. ದಯಾನಂದ ಪೈ ಮತ್ತು ಶ್ರೀ ಪಿ. ಸತೀಶ್ ಪೈ ಯಕ್ಷಗಾನ ಅಧ್ಯಯನ ಕೇಂದ್ರದ ವತಿಯಿಂದ ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಯಕ್ಷಗಾನದ ಹೆಜ್ಜೆಗಾರಿಕೆಯ ಬಗ್ಗೆ ಉಚಿತ ತರಬೇತಿಯನ್ನು ನೀಡಿ, ಪ್ರದರ್ಶನಕ್ಕೆ ಅವಕಾಶವನ್ನು ಕಲ್ಪಿಸಿಕೊಡಲಾಗುತ್ತಿದೆ.

ಯಕ್ಷಗಾನ ಅಧ್ಯಯನ ಕೇಂದ್ರದ ಯಕ್ಷಮಂಗಳ ತಂಡವು 17 ಜನವರಿ 2020 ಶುಕ್ರವಾರದಂದು ಬಂಟ್ವಾಳದ ಕಕ್ಯಪದವು ಶ್ರೀ ಪಂಚದುರ್ಗಾಪರಮೇಶ್ವರೀ ದೇವಿ ಕ್ಷೇತ್ರದಲ್ಲಿ ಮೋಹಿನಿ ಏಕಾದಶೀ ಎಂಬ ಯಕ್ಷಗಾನ ಪ್ರದರ್ಶನವನ್ನು ಯಶಸ್ವಿಯಾಗಿ ನೀಡಿದೆ.

ಶ್ರೀ ದೀವಿತ್ ಕೋಟ್ಯಾನ್ ಅವರ ನಿರ್ದೇಶನದಲ್ಲಿ 'ಮೋಹಿನಿ ಏಕಾದಶೀ' ಎಂಬ ಯಕ್ಷಗಾನ ಪ್ರದರ್ಶನವು ನಡೆದಿದ್ದು, ಮುಮ್ಮೇಳದಲ್ಲಿ ಯಕ್ಷಮಂಗಳ ತಂಡದ ವಿದ್ಯಾರ್ಥಿಗಳಾದ ಪುರುಷೋತ್ತಮ ಜಿ., ಮೇಘಶ್ರೀ, ಶ್ರೀಹರಿ, ಶ್ರೀನಾಥ್, ವಿಕೇಶ್ ವಿ. ಕೋಟ್ಯಾನ್, ಮುಕೇಶ್, ರಾಘವೇಂದ್ರ ಶೆಟ್ಟಿ, ಶಿಲ್ಪಾ, ಸತೀಶ್, ನವೀನ್ ದೇವಾಡಿಗ, ಸಹನಾ ಶೆಟ್ಟಿ, ತನುಜಾ, ಪುನೀತ್ ಕುಮಾರ್, ಸಹನಾ, ಸೌಮ್ಯ ಎಮ್. ಎನ್., ಪೂಜಶ್ರೀ, ಪವಿತ, ಪೂರ್ಣಿಮ, ಅಕ್ಷಿತ ಯು., ಅಂಶುಧರ್ ಎಚ್. ಆರ್., ಹೃಷಿಕೇಶ್ ಬಿ., ಯತೀಶ್ ಕುಮಾರ್, ಅನುಷ ಕೆ., ಮಮತ ವೈ. ಆರ್., ಪವನ್ ಕುಮಾರ್, ಅಭಿಲಾಷ ಎಸ್., ಶರಣ್ಯ, ಪೊನ್ನಮ್ಮ ಎಂ..ಕೆ., ಪುರುಷೋತ್ತಮ ಎಂ., ನಿಶಾಂತ್ ಶೆಟ್ಟಿ, ದಿವ್ಯಶ್ರೀ ಕಕ್ಯಪದವು, ಸ್ವಾತಿ ವಿ. ರಾವ್ ಮೊದಲಾದವರು ಭಾಗವಹಿಸಿದ್ದರು. ಹಿಮ್ಮೇಳದಲ್ಲಿ ಭಾಗವತರಾಗಿ ಶ್ರೀಮತಿ ಭವ್ಯಶ್ರೀ ಕುಲ್ಕುಂದ, ಚೆಂಡೆಯಲ್ಲಿ ಶ್ರೀ ಮಯೂರ ನಾಯ್ಕ, ಮದ್ದಳೆಯಲ್ಲಿ ಶ್ರೀ ಕೌಶಲ್ ರಾವ್ ಪುತ್ತಿಗೆ, ಚಕ್ರತಾಳದಲ್ಲಿ ಶ್ರೀ ಯಜ್ಞೇಶ್ ರೈ ಕಟೀಲು ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಯಕ್ಷಗಾನ ಅಧ್ಯಯನ ಕೇಂದ್ರದ ನಿರ್ದೇಶಕರಾದ ಪ್ರೊ. ಶ್ರೀಪತಿ ಕಲ್ಲೂರಾಯ, ಯಕ್ಷಗಾನ ಅಧ್ಯಯನ ಕೇಂದ್ರದ ಸಂಶೋಧನಾ ಸಹಾಯಕರಾದ ಶ್ರೀ ಸತೀಶ್ ಕೊಣಾಜೆ ಉಪಸ್ಥಿತರಿದ್ದರು.

6. ಯಕ್ಷಗಾನ ಬಣ್ಣಗಾರಿಕೆ ಕಮ್ಮಟ

ಮಂಗಳೂರು ವಿಶ್ವವಿದ್ಯಾನಿಲಯದ ಡಾ. ಪಿ. ದಯಾನಂದ ಪೈ ಮತ್ತು ಶ್ರೀ ಪಿ. ಸತೀಶ್ ಪೈ ಯಕ್ಷಗಾನ ಅಧ್ಯಯನ ಕೇಂದ್ರದ ಆಶ್ರಯದಲ್ಲಿ 01 ಫೆಬ್ರವರಿ 2020 ಶನಿವಾರದಂದು ಒಂದು ದಿನದ ಬಣ್ಣಗಾರಿಕೆ ಕಮ್ಮಟವು ಯಕ್ಷಗಾನ ಕಲಾಕೇಂದ್ರದಲ್ಲಿ ಏರ್ಪಡಿಸಲಾಯಿತು.

ಬಣ್ಣಗಾರಿಕೆ ಕಮ್ಮಟದ ಉದ್ಘಾಟನೆಯನ್ನು ಮಂಗಳೂರು ವಿಶ್ವವಿದ್ಯಾನಿಲಯದ ಮಾನ್ಯ ಕುಲಸಚಿವರಾದ ಪ್ರೊ. ಎ. ಎಂ. ಖಾನ್ ಅವರು ನೆರವೇರಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಯಕ್ಷಗಾನ ಅಧ್ಯಯನ ಕೇಂದ್ರದ ನಿರ್ದೇಶಕರಾದ ಪ್ರೊ. ಶ್ರೀಪತಿ ಕಲ್ಲೂರಾಯ ಅವರು ವಹಿಸಿದ್ದರು.

ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಯಕ್ಷಗಾನ ಕಲಾವಿದರಾದ ಶ್ರೀ ಹರಿನಾರಾಯಣ ಭಟ್ ಹಾಗೂ ಶ್ರೀ ಜನಾರ್ದನ ವಿದ್ಯಾಗಿರಿ ಅವರು ಭಾಗವಹಿಸಿ ಬಣ್ಣಗಾರಿಕೆಯ ಮಹತ್ವವನ್ನು ವಿವರಿಸಿದರು. ಯಕ್ಷಗಾನ ಅಧ್ಯಯನ ಕೇಂದ್ರದ ಶ್ರೀ ಸತೀಶ್ ಕೊಣಾಜೆ, ಸ್ವಾತಿ ವಿ. ರಾವ್ ಅವರು ಉಪಸ್ಥಿತರಿದ್ದರು. ಯಕ್ಷಮಂಗಳ ವಿದ್ಯಾರ್ಥಿಗಳಾದ ಮುಕೇಶ್ ಸ್ವಾಗತಿಸಿ, ಪುರುಷೋತ್ತಮ ವಂದಿಸಿದರು. ಮೇಘಶ್ರೀ ಕಾರ್ಯಕ್ರಮ ನಿರೂಪಿಸಿದರು.

ಸಮಾರೋಪ ಸಮಾರಂಭ:

ಯಕ್ಷಗಾನ ಅಧ್ಯಯನ ಕೇಂದ್ರದ ಆಶ್ರಯದಲ್ಲಿ ನಡೆದ ಒಂದು ದಿನದ ಯಕ್ಷಗಾನ ಬಣ್ಣಗಾರಿಕೆ ಕಮ್ಮಟದ ಸಮಾರೋಪ ಸಮಾರಂಭವು 01 ಫೆಬ್ರವರಿ 2020 ಶನಿವಾರದಂದು ಸಂಜೆ ನಡೆಯಿತು. ಸಮಾರೋಪ ಸಮಾರಂಭದಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳಾದ ಪ್ರೊ. ಪಿ. ಎಸ್. ಯಡಪಡಿತ್ತಾಯ ಅವರು ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿ, ಕಲೆಯನ್ನು ಅನುಭವಿಸುವ ಮೂಲಕ ಆಸಕ್ತಿಯನ್ನು ಮೈಗೂಡಿಸಿಕೊಂಡಾಗ ಅದರೆಡೆಗೆ ಆಕರ್ಷಿತರಾಗಿ ಕಲಾ ನೈಪುಣ್ಯತೆಯನ್ನು ಬೆಳೆಸಿಕೊಳ್ಳಲು ಸಾಧ್ಯವಾಗುತ್ತದೆ. ಯಕ್ಷಗಾನ ಕ್ಷೇತ್ರದಲ್ಲಿ ಬಣ್ಣಗಾರಿಕೆಗೆ ಅದರದ್ದೇ ಆದ ಮಹತ್ವ ಇರುತ್ತದೆ. ಯಕ್ಷಗಾನದ ಬಣ್ಣಗಾರಿಕೆಯ ಮೂಲಕವೇ ಪಾತ್ರದ ಸ್ವಭಾವವನ್ನೂ ಅರ್ಥ ಮಾಡಿಕೊಳ್ಳುವುದಕ್ಕೆ

ಸಾಧ್ಯವಿದೆ. ಯಕ್ಷಗಾನ ಸಂಪ್ರದಾಯಕ್ಕೆ ಅಥವಾ ಕಲೆಗೆ ಚ್ಯುತಿ ಬಾರದಂತೆ ಬಣ್ಣಗಾರಿಕೆಯಲ್ಲೂ ನಾವು ಎಚ್ಚರವಹಿಸುವುದು ಅಗತ್ಯ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಯಕ್ಷಗುರು ಶ್ರೀ ದೀವಿತ್ ಕೋಟ್ಯಾನ್ ಭಾಗವಹಿಸಿದ್ದರು. ಯಕ್ಷಗಾನ ಅಧ್ಯಯನ ಕೇಂದ್ರದ ಸಂಶೋಧನಾ ಸಹಾಯಕರಾದ ಶ್ರೀ ಸತೀಶ್ ಕೊಣಾಜೆ ಸ್ವಾಗತಿಸಿ, ವಿದ್ಯಾರ್ಥಿನಿ ಶಿಲ್ಪಾ ವಂದಿಸಿದರು. ಮೇಘಶ್ರೀ ಕಾರ್ಯಕ್ರಮ ನಿರೂಪಿಸಿದರು. ಕಮ್ಮಟದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಲ್ಲಿ ಅಂಶುಧರ ಹಾಗೂ ತನುಜ ಅವರು ಅನಿಸಿಕೆಯನ್ನು ವ್ಯಕ್ತಪಡಿಸಿದರು. ಬಣ್ಣಗಾರಿಕೆ ಕಮ್ಮಟದಲ್ಲಿ ಒಟ್ಟು 60 ವಿದ್ಯಾರ್ಥಿಗಳು ಭಾಗವಹಿಸಿ ಶಿಬಿರದ ಪ್ರಯೋಜನ ಪಡೆದುಕೊಂಡರು. ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರವನ್ನು ವಿತರಿಸಲಾಯಿತು.

7. ಡಾ. ಡಿ. ಕೆ. ಚೌಟರ ನೆನಪಿನಲ್ಲಿ ಯಕ್ಷರಂಗೋತ್ಸವ–2020

ಮಂಗಳೂರು ವಿಶ್ವವಿದ್ಯಾನಿಲಯದ ಡಾ. ಪಿ. ದಯಾನಂದ ಪೈ ಮತ್ತು ಶ್ರೀ ಪಿ. ಸತೀಶ್ ಪೈ ಯಕ್ಷಗಾನ ಅಧ್ಯಯನ ಕೇಂದ್ರ ಹಾಗೂ ರಂಗಚೇತನ ಸಂಸ್ಕೃತಿ ಕೇಂದ್ರ, ಬೆಂಗಳೂರು; ದಕ್ಷಿಣ ವಲಯ ಸಾಂಸ್ಕೃತಿಕ ಕೇಂದ್ರ, ತಂಜವೂರು; ಕಲಾಗಂಗೋತ್ರಿ ಯಕ್ಷಗಾನ ಕೇಂದ್ರ, ಮಂಗಳೂರು ಇದರ ಆಶ್ರಯದಲ್ಲಿ ಡಾ. ಡಿ. ಕೆ. ಚೌಟರ ನೆನಪಿನಲ್ಲಿ ಯಕ್ಷರಂಗೋತ್ಸವ –2020 ಕಾರ್ಯಕ್ರಮವು 15–19 ಫೆಬ್ರವರಿ 2020ರಂದು ಮಂಗಳೂರಿನ ಶ್ರೀ ಮುನೇಶ್ವರ ಮಹಾಗಣಪತಿ ಸಭಾಭವನದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಕಾರದೊಂದಿಗೆ ನಡೆಯಿತು.

ಈ ಕಾರ್ಯಕ್ರಮದಲ್ಲಿ ಯಕ್ಷಗಾನ ಅಧ್ಯಯನ ಕೇಂದ್ರದ ವತಿಯಿಂದ ಯಕ್ಷಮಂಗಳ ವಿದ್ಯಾರ್ಥಿಗಳು ಹಾಗೂ ಅತಿಥಿ ಕಲಾವಿದರ ಕೂಡುವಿಕೆಯೊಂದಿಗೆ ವಿಶ್ವಾಮಿತ್ರ ಮೇನಕೆ ಮತ್ತು ರಕ್ತರಾತ್ರಿ ಯಕ್ಷಗಾನ ಪ್ರದರ್ಶನವು ನಡೆಯಿತು.

ಯಕ್ಷಮಂಗಳ ವೀಡಿಯೋ ಪ್ರದರ್ಶನ ಮಂದಿರ

ಯಕ್ಷಗಾನ ಅಧ್ಯಯನ ಕೇಂದ್ರದಲ್ಲಿ ಸಾಕ್ಷ್ಯಚಿತ್ರ ಮತ್ತು ಯಕ್ಷಗಾನದ ದೃಶ್ಯ–ಶ್ರವ್ಯ ಸಿಡಿಗಳನ್ನು ಪ್ರದರ್ಶಿಸಲು ವೀಡಿಯೋ ಪ್ರದರ್ಶನ ಮಂದಿರವನ್ನು ರೂಪಿಸಲಾಗಿದೆ. ಮಿನಿ ಥಿಯೇಟರ್ ರೂಪದಲ್ಲಿರುವ ಈ ವೀಡಿಯೋ ಪ್ರದರ್ಶನ ಕೇಂದ್ರವು ಯಕ್ಷಗಾನದ ಪರಂಪರೆಯ ತಿಳುವಳಿಕೆಯನ್ನು ಮಕ್ಕಳಲ್ಲಿ ಮತ್ತು ಆಸಕ್ತರಲ್ಲಿ ಉಳಿಸಿ ಬೆಳೆಸುವಲ್ಲಿ ಅತ್ಯಂತ ಯಶಸ್ವಿಯಾಗಿದೆ.

ಯಕ್ಷಮಂಗಳ ವಸ್ತು ಸಂಗ್ರಹಾಲಯ

ಮಂಗಳೂರು ವಿಶ್ವವಿದ್ಯಾನಿಲಯದ ಡಾ. ಪಿ. ದಯಾನಂದ ಪೈ ಮತ್ತು ಶ್ರೀ ಪಿ. ಸತೀಶ್ ಪೈ ಯಕ್ಷಗಾನ ಅಧ್ಯಯನ ಕೇಂದ್ರದಲ್ಲಿ ಸುಸಜ್ಜಿತ ಹಾಗೂ ಅನನ್ಯವಾದ ಮಾದರಿ ವಸ್ತು ಸಂಗ್ರಹಾಲಯವನ್ನು ನಿರ್ಮಿಸಲಾಗಿದೆ. ಯಕ್ಷಗಾನದ ಹಿಮ್ಮೇಳ ಹಾಗೂ ಮುಮ್ಮೇಳಕ್ಕೆ ಸಂಬಂಧಿಸಿದಂತೆ ಯಕ್ಷಗಾನದ ವಿವಿಧ ವೇಷಗಳ ಮಾದರಿಗಳು, ಮುಖವಾಡಗಳು, ವಿವಿಧ ವೇಷಗಳಿಗೆ ಅನುಸಾರವಾಗಿ ವಿವಿಧ ವಿನ್ಯಾಸದ ಕಿರೀಟಗಳು, ಮುಖವರ್ಣಿಕೆಗಳು – ಹೀಗೆ ತೆಂಕುತಿಟ್ಟು ಹಾಗೂ ಬಡಗುತಿಟ್ಟು ಯಕ್ಷಗಾನಕ್ಕೆ ಸಂಬಂಧಿಸಿದಂತೆ ಬೇರೆ ಬೇರೆ ಮಾದರಿಗಳ ಪ್ರತಿಕೃತಿಗಳನ್ನು ನಿರ್ಮಿಸಲಾಗಿದೆ.

ಈ ವಸ್ತುಸಂಗ್ರಹಾಲಯಕ್ಕೆ ವಿದ್ಯಾರ್ಥಿಗಳು, ಕಲಾವಿದರು, ಸಂಶೋಧಕರು, ಆಸಕ್ತರು, ಗಣ್ಯವ್ಯಕ್ತಿಗಳು ಭೇಟಿ ನೀಡುತ್ತಿದ್ದಾರೆ. ಇವರಿಗೆ ಯಕ್ಷಗಾನದ ವೈವಿಧ್ಯ, ಮುಖವರ್ಣಿಕೆ, ವೇಷಭೂಷಣಗಳ ವ್ಯತ್ಯಾಸ, ವೈಶಿಷ್ಟಗಳ ಕುರಿತ ಮಾಹಿತಿ ಹಾಗೂ ಸೂಕ್ತ ಮಾರ್ಗದರ್ಶನವನ್ನು ನೀಡಲಾಗುತ್ತಿದೆ. ಈ ವಸ್ತು ಸಂಗ್ರಹಾಲಯದ ಎಲ್ಲಾ ರೀತಿಯ ನಿರ್ವಹಣೆಯನ್ನು ಸಮರ್ಥವಾಗಿ ಮಾಡಲಾಗುತ್ತಿದೆ.

ಯಕ್ಷ ವಾಙ್ಮಯ ಕೇಂದ್ರ

ಯಕ್ಷಗಾನ ಅಧ್ಯಯನ ಕೇಂದ್ರದ ಮೂಲ ಉದ್ದೇಶಗಳಲ್ಲಿ ಗ್ರಂಥಾಲಯದ ನಿರ್ಮಾಣವೂ ಒಂದು, ಈ ಗ್ರಂಥಾಲಯವನ್ನು ಯಕ್ಷಗಾನದ ಕುರಿತಂತೆ ಸಂಶೋಧನೆ ಮಾಡುವ ವಿದ್ಯಾರ್ಥಿಗಳಿಗೆ, ಮಾಹಿತಿ ಪಡೆಯಬಯಸುವ ಆಸಕ್ತರಿಗೆ, ಅಧ್ಯಯನಾಸಕ್ತರಿಗೆ, ಸಂಶೋಧನಾಸಕ್ತರಿಗೆ, ಕಲಾವಿದರಿಗೆ ಮುಖ್ಯ ಆಕರ ಕೇಂದ್ರವಾಗಿಸುವುದೂ ಕೂಡಾ ಆಗಿದೆ. ಈ ಹಿನ್ನೆಲೆಯಲ್ಲಿ ಯಕ್ಷಗಾನದ ವಿವಿಧ ಪ್ರಕಾರಗಳಾದ ತೆಂಕುತಿಟ್ಟು, ಬಡಗುತಿಟ್ಟು, ಘಟ್ಟದ ಕೋರೆ, ಮೂಡಲಪಾಯ, ಪಡುವಲಪಾಯ, ಶ್ರೀ ಕೃಷ್ಣ ಪಾರಿಜಾತ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಹಾಗೂ ಯಕ್ಷಗಾನಕ್ಕೆ ಸಂವಾದಿಯಾಗಿರುವ ಕೇರಳದ ಕಥಕ್ಕಳಿ, ಮೋಹಿನಿ ಅಟ್ಟಂ, ಆಂಧ್ರದ ವೀದಿನಾಟಕ; ತಮಿಳುನಾಡಿನ ತೆರಕುತ್ತು ಇತ್ಯಾದಿ ಪ್ರಕಾರಗಳಿಗೆ ಸಂಬಂಧಿಸಿದಂತೆ ಈಗಾಗಲೇ ಪ್ರಕಟಗೊಂಡ ಕೃತಿಗಳನ್ನು ಹಾಗೂ ಅಲಭ್ಯ ಕೃತಿಗಳ ನೆರಳಚ್ಚು ಪ್ರತಿಗಳನ್ನು ಒಳಗೊಂಡ ಮಾದರಿ ಗ್ರಂಥಾಲಯವನ್ನಾಗಿ ರೂಪಿಸಲಾಗುತ್ತಿದೆ. ಹಾಗಾಗಿ ಪ್ರಸ್ತುತ ವರ್ಷದಲ್ಲಿ ಯಕ್ಷಗಾನಕ್ಕೆ ಸಂಬಂಧಿಸಿದಂತೆ ಕನ್ನಡ, ತುಳು, ಹಿಂದಿ, ಸಂಸ್ಕೃತ, ಆಂಗ್ಲಭಾಷೆಯಲ್ಲಿರುವ ಕೃತಿಗಳನ್ನು ಗ್ರಂಥಾಲಯಕ್ಕೆ ಖರೀದಿಸಿ ಸೇರ್ಪಡೆಗೊಳಿಸಲಾಗಿದೆ. ಕೆಲವು ಅಲಭ್ಯ ಕೃತಿಗಳನ್ನು ವಿದ್ವಾಂಸರಿಂದ ಕಡಿಮೆ ದರದಲ್ಲಿ ಖರೀದಿಸಲಾಗಿದೆ. ಅಲಭ್ಯ ಕೃತಿಗಳ ನೆರಳಚ್ಚು ಪ್ರತಿಗಳನ್ನು ಗ್ರಂಥಾಲಯದಲ್ಲಿ ಸಂರಕ್ಷಿಸಿಡಲಾಗಿದೆ. ಯಕ್ಷ ವಾಙ್ಮಯ ಕೇಂದ್ರದಲ್ಲಿ ಸಂಗ್ರಹಿಸಿಡಲಾದ ಎರಡು ಸಾವಿರದ ಮೂವತ್ತು ಕೃತಿಗಳನ್ನು ಸಮರ್ಪಕ ರೀತಿಯಲ್ಲಿ ಸಂರಕ್ಷಿಸಿಡಲಾಗಿದೆ ಹಾಗೂ ಅದರ ಸದುಪಯೋಗವಾಗುವಂತೆ ನೋಡಿಕೊಳ್ಳಲಾಗುತ್ತಿದೆ. ಗ್ರಂಥಾಲಯವನ್ನು ಆಕರವಾಗಿ ಬಳಸುವವರನ್ನು ದೃಷ್ಟಿಯಲ್ಲಿರಿಸಿಕೊಂಡು ಯಕ್ಷಗಾನಕ್ಕೆ ಸಂಬಂಧಿಸಿದಂತೆ ಅಪೂರ್ವ ದೃಶ್ಯ–ಶ್ರವ್ಯ ಸಿಡಿಗಳ ಸಂಗ್ರಹವನ್ನು ಮಾಡಲಾಗಿದೆ.

ಗ್ರಂಥಾಲಯದ ಭಾಗವಾಗಿ ದಿನಪತ್ರಿಕೆಗಳಲ್ಲಿ ಬಂದ ಯಕ್ಷಗಾನಕ್ಕೆ ಸಂಬಂಧಿಸಿದ ಲೇಖನಗಳನ್ನು ಕತ್ತರಿಸಿ ತಿಟ್ಟುಗಳಿಗನುಸಾರವಾಗಿ ವಿಂಗಡಿಸಿ, ಅದನ್ನು ವ್ಯಕ್ತಿಚಿತ್ರ, ವಿಮರ್ಶೆ, ಪ್ರದರ್ಶನ ಮೊದಲಾದ ವಿವಿಧ ಶೀರ್ಷಿಕೆಗಳಿಗೆ ಅನುಗುಣವಾಗಿ ವಿಂಗಡಿಸಿ, ಕಡತಗಳನ್ನು ಮಾಡಲಾಗಿದೆ. ಪತ್ರಿಕೆಗಳಲ್ಲಿ ಕೇಂದ್ರದ ಶೈಕ್ಷಣಿಕ ಚಟುವಟಿಕೆಗಳ ಬಗ್ಗೆ ಬಂದ ಪ್ರಕಟಣೆಗಳನ್ನು ಕತ್ತರಿಸಿ, ಕಡತಗಳ ಮೂಲಕ ಸಂಗ್ರಹಿಸಿಡಲಾಗಿದೆ.

ಕೃತಿಗಳ ಮಾರಾಟ

ಯಕ್ಷಮಂಗಳ ಕೃತಿ ಮಾಲಿಕೆಯಲ್ಲಿ ಪ್ರಕಟವಾಗಿರುವ ಕೃತಿಗಳ ಮಾರಾಟದ ವ್ಯವಸ್ಥೆಯನ್ನು ಕೇಂದ್ರವು ಮಾಡುತ್ತಿದೆ. ಇದಕ್ಕೆ ಸಂಬಂಧಿಸಿದಂತೆ ಕೇಂದ್ರದ ಪ್ರಕಟನೆಗಳನ್ನು ವಿವಿಧ ಕಾಲೇಜುಗಳಿಗೆ, ಪುಸ್ತಕ ಭಂಡಾರಗಳಿಗೆ, ಸಾಹಿತ್ಯ ಸಮ್ಮೇಳನಗಳಿಗೆ ಕೊಂಡೊಯ್ದು ಮಾರಾಟ ಮಾಡಲಾಗುತ್ತದೆ.

ಕೊಂಕಣಿ ಅಧ್ಯಯನ ಪೀಠ:

ಸಂಯೋಜಕರು: ಡಾ. ಜಯವಂತ ನಾಯಕ್

ಅಧ್ಯಯನ ಪೀಠದ ಸಾಂಸ್ಥಿಕತೆ ಮತ್ತು ಕಾರ್ಯವೈಖರಿ:

- ಗುಣಮಟ್ಟದ ಸಂಶೋಧನಾ ಕಾರ್ಯಗಳಿಗಾಗಿ ಮತ್ತು ನಿಯಂತ್ರಣಕ್ಕಾಗಿ ಪೀಠಗಳಿಗೆ ನೀತಿಗಳನ್ನು ಅಳವಡಿಸಲಾಗಿದೆ. ಕೊಂಕಣಿ ಅಧ್ಯಯನ ಪೀಠವು ಕೊಂಕಣಿ ಸಾಹಿತ್ಯ, ಸಂಸ್ಕೃತಿ, ಪರಂಪರೆ ಇತ್ಯಾದಿಗಳ ಸಂಶೋಧನಾ ಚಟುವಟಿಕೆಗಳನ್ನು ನೀತಿಯಲ್ಲಿ ಉಲ್ಲೇಖಿಸಿದ ಉದ್ದೇಶಗಳ ಪ್ರಕಾರ ನಡೆಸುತ್ತದೆ.
- ಕರ್ನಾಟಕ ಸರಕಾರ ಮಂಜೂರು ಮಾಡಿದ ಮೊತ್ತ: ರೂ. 2 ಕೋಟಿ

ಪೀಠದ ಸಾಮಾಜಿಕ ಪ್ರಸ್ತುತತೆ:

- ಕೊಂಕಣಿಯು ಭಾರತದ ಪ್ರಾಚೀನ ಭಾಷೆಗಳಲ್ಲಿ ಒಂದಾಗಿದ್ದು, ಭಾರತದ ಪಶ್ಚಿಮ ಕರಾವಳಿ ಭಾಗದಲ್ಲಿ ಹೆಚ್ಚಾಗಿ ಮಾತನಾಡುವಂತಹ ಭಾಷೆಯಾಗಿದೆ. 1992ರಲ್ಲಿ ಇದನ್ನು ಸಂವಿಧಾನದ ಎಂಟನೇ ಪರಿಚ್ಛೇದದಲ್ಲಿ ಸೇರಿಸಲಾಯಿತು. ಆ ಮೂಲಕ ಇದೊಂದು ರಾಷ್ಟ್ರೀಯ ಭಾಷೆಯಾಗಿ ಗುರುತಿಸಲ್ಪಟ್ಟಿತು. ಹೆಚ್ಚಿನ ಕೊಂಕಣಿ ಭಾಷಿಕರು ಕರ್ನಾಟಕದಲ್ಲಿ ಕಂಡು ಬರುತ್ತಾರೆ. ಆದುದರಿಂದ ಕರ್ನಾಟಕ ಸರ್ಕಾರವು ಕೊಂಕಣಿ ಭಾಷೆಗೆ ಬೆಂಬಲವನ್ನು ನೀಡುತ್ತಿದೆ. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕೊಂಕಣಿ ಅಧ್ಯಯನ ಪೀಠವನ್ನು ಸ್ಥಾಪಿಸಲಾಗಿದೆ. 2016–17ರಲ್ಲಿ ವಿಶ್ವವಿದ್ಯಾನಿಲಯವು ಕೊಂಕಣಿ ಸ್ನಾತಕೋತ್ತರ ವಿಭಾಗವನ್ನು ಆರಂಭಿಸಲು ಮುಂದಾಗಿದೆ.
- ಕೊಂಕಣಿ ಅಧ್ಯಯನ ಪೀಠವು ಕೊಂಕಣಿ ಸಾಹಿತ್ಯ, ಸಂಸ್ಕೃತಿ, ಪರಂಪರೆ ಇತ್ಯಾದಿಗಳನ್ನು ಉತ್ತೇಜಿಸುವಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದೆ. ಇದರ ಜೊತೆಗೆ ಅಧ್ಯಯನ ಪೀಠದಲ್ಲಿ ಸಂಶೋಧನಾ ಚಟುವಟಿಕೆಗಳನ್ನು ಸಹ ಕೈಗೊಳ್ಳಲಾಗುತ್ತದೆ. ವಿಶ್ವ ಕೊಂಕಣಿ ಭಾಷೆ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನದ ಸಹಯೋಗದೊಂದಿಗೆ ಪೀಠವು 'ಕರ್ನಾಟಕದ ಕೊಂಕಣಿ ಜನರ ವಲಸೆ ಮತ್ತು ವಸಾಹತು ಮಾದರಿ' ಎಂಬ ಯೋಜನೆಯನ್ನು ಕೈಗೆತ್ತಿಕೊಂಡಿದೆ. ಭಾರತದ ಸಂವಿಧಾನದ 8ನೇ ಪರಿಚ್ಛೇದದಲ್ಲಿ ಕೊಂಕಣಿ ಭಾಷೆಯನ್ನು ಸೇರ್ಪಡೆಗೊಳಿಸಿದ ನೆನಪಿಗಾಗಿ ಪ್ರತೀ ವರ್ಷ ಕೊಂಕಣಿ ಮಾನ್ಯತಾ ದಿನವನ್ನು ಆಚರಿಸುತ್ತಾರೆ. ಸಾರ್ವಜನಿಕರಿಗಾಗಿ ರಂಗಭೂಮಿ ಅಧ್ಯಯನದ ಬಗ್ಗೆ ಪ್ರಮಾಣಪತ್ರದ ಕೋರ್ಸ್ ಅನ್ನು ನಡೆಸುತ್ತಾರೆ.

ಪ್ರಕಟಣೆಗಳು:

- ಸುಕ್ರತೀಂದ್ರ ಒರಿಯಂಟಲ್ ಸಂಶೋಧನಾ ಸಂಸ್ಥೆ ಮತ್ತು ಕೊಂಕಣಿ ಅಧ್ಯಯನ ಪೀಠವು ಜಂಟಿಯಾಗಿ ಆಯೋಜಿಸಿದ ಸಮ್ಮೇಳನದ ಪ್ರಕ್ರಿಯೆಗಳನ್ನು ಕೊಚ್ಚಿನ್‌ನ ಸುಕ್ರತೀಂದ್ರ ಒರಿಯಂಟಲ್ ಸಂಶೋಧನಾ ಸಂಸ್ಥೆಯು 'ಕೊಂಕಣಿ ಸಾಂಸ್ಕೃತಿಕ ಪರಂಪರೆಯ ಕೆಲವು ಅಂಶಗಳು' ಎಂಬುದಾಗಿ ಪ್ರಕಟಿಸಿದೆ.
- ಪದವಿ ಮಟ್ಟದಲ್ಲಿ 1 ಮತ್ತು 2ನೇ ಸೆಮಿಸ್ಟರ್‌ನಲ್ಲಿ ಕೊಂಕಣಿಯನ್ನು ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗಾಗಿ ಕೊಂಕಣಿ ಅಧ್ಯಯನ ಪೀಠವು ಪಠ್ಯಪುಸ್ತಕವನ್ನು ಪ್ರಕಟಿಸಿದೆ. ಇದು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗಾಗಿ ಅಧ್ಯಯನ ಸಾಮಾಗ್ರಿಗಳನ್ನು ಪ್ರಕಟಿಸಿದೆ.

2019–2020ರ ಚಟುವಟಿಕೆಗಳ ವರದಿ.

1. ದಿನಾಂಕ 15–04–2019ರಂದು ಮಂಗಳೂರು ವಿಶ್ವವಿದ್ಯಾನಿಲಯ ಕೊಂಕಣಿ ಅಧ್ಯಯನ ಪೀಠ, ಸ್ನಾತಕೋತ್ತರ ಹಿಂದಿ ಅಧ್ಯಯನ ವಿಭಾಗ ವಿಶ್ವವಿದ್ಯಾನಿಲಯ ಕಾಲೇಜು ಮಂಗಳೂರು ಹಾಗೂ ಕೊಂಕಣಿ ಸ್ನಾತಕೋತ್ತರ ಅಧ್ಯಯನ ವಿಭಾಗ ವಿಶ್ವವಿದ್ಯಾನಿಲಯ ಸಂಧ್ಯಾ ಕಾಲೇಜು ಮಂಗಳೂರು ಸಹಯೋಗದೊಂದಿಗೆ ವಿಶ್ವವಿದ್ಯಾನಿಲಯ ಕಾಲೇಜಿನಲ್ಲಿ ಬಹು–ಭಾಷಾ ಏಕದಿನ ರಾಷ್ಟ್ರೀಯ ವಿಚಾರ ಸಂಕಿರಣ ಏರ್ಪಡಿಸಲಾಗಿತ್ತು. ವಿಚಾರ ಸಂಕಿರಣವನ್ನು ಖ್ಯಾತ ಜನಪದ ವಿದ್ವಾಂಸರಾದ ಹಂಪಿ ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಎ. ವಿ. ನಾವುಡಾ ಉದ್ಘಾಟಿಸಿದರು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಂಗಳೂರು ವಿಶ್ವವಿದ್ಯಾನಿಲಯದ ಪ್ರಭಾರ ಕುಲಪತಿಗಳಾದ ಪ್ರೊ. ಕಿಶೋರಿ ನಾಯಕ್ ವಹಿಸಿದ್ದರು. ಪ್ರಸಿದ್ಧ ಕೊಂಕಣಿ ಸಾಹಿತಿ ಹಾಗೂ ಸಂಶೋಧಕ ಶ್ರೀ ಭೂಷಣ ಭಾವೆ ಬೀಜ ಭಾಷಣ ನೆರವೇರಿಸಿದರು.

2. ಕೊಂಕಣಿ ಅಧ್ಯಯನ ಪೀಠದ ಸಲಹಾ ಸಮಿತಿ ಸಭೆ ಮಂಗಳೂರು ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಯವರಾದ ಪ್ರೊ. ಪಿ. ಎಸ್ ಯಡಪಡಿತ್ತಾಯ ಅವರ ಅಧ್ಯಕ್ಷತೆಯಲ್ಲಿ ದಿನಾಂಕ 26–08–2019ರಂದು ನಡೆಯಿತು. ಸಭೆಯಲ್ಲಿ 2019–20ರ ಕಾ0ರ್ಯ0ಯೋಜನೆ0ಯ ಕುರಿತು ಚರ್ಚಿಸಲಾಯಿತು.

3. ದಿನಾಂಕ 20–08–2019ರಂದು ಮಂಗಳೂರು ವಿಶ್ವವಿದ್ಯಾನಿಲಯ ಕೊಂಕಣಿ ಅಧ್ಯಯನ ಪೀಠ ಹಾಗೂ ಕೊಂಕಣಿ ಸ್ನಾತಕೋತ್ತರ ವಿಭಾಗ ವಿಶ್ವವಿದ್ಯಾನಿಲಯ ಸಂಧ್ಯಾ ಕಾಲೇಜು, ಮಂಗಳೂರು ಇದರ ಸಹಯೋಗದಲ್ಲಿ ವಿಶ್ವವಿದ್ಯಾನಿಲಯ ಕಾಲೇಜಿನ ರವೀಂದ್ರ ಕಲಾಭವನದಲ್ಲಿ ಕೊಂಕಣಿ ಮಾನ್ಯತಾ ದಿನಾಚರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ ಪಿ.ಎಸ್. ಯಡಪಡಿತ್ತಾಯ ನೆರವೇರಿಸಿದರು. ಕೊಂಕಣಿ ಮಾನ್ಯತಾ ದಿನಾಚರಣೆಯ ಸಂದೇಶವನ್ನು ಖ್ಯಾತ ಕೊಂಕಣಿ ಸಾಹಿತಿ ಶ್ರೀ ಎಚ್.ಎಂ ಪೆರ್ನಾಳ್ ನೀಡಿದರು. ಶ್ರೀ ರೊಯ್ ಕೆಸ್ತಲಿನೋ, ಬಸ್ತಿ ವಾಮನ ಶೆಣೈ, ಫಾ. ಅಲ್ವಿನ್ ಸೆರಾವೊ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

4. ಕೊಂಕಣಿ ಸ್ನಾತಕ ಹಾಗೂ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ಅಧ್ಯಯನ ಸಾಮಾಗ್ರಿಯ ಅವಶ್ಯಕತೆ ಇದ್ದು,ಂ ಈ ಮೊದಲಿನ ಸಲಹಾ ಸಮಿತಿಯಲ್ಲಿ ತೆಗೆದುಕೊಂಡ ನಿರ್ಧಾರದಂತೆ ಅಧ್ಯಯನ ಸಾಮಾಗ್ರಿಯನ್ನು ಸಂಪನ್ಮೂಲ ವ್ಯಕ್ತಿಗಳಿಂದ ರಚಿಸಲಾಯಿತು.

5. ದಿನಾಂಕ 04–10–2019 ರಂದು ಕೊಂಕಣಿ ಅಧ್ಯಯನ ಪೀಠ, ಶ್ರೀ ಮಲ್ಲಿಕಾರ್ಜುನ ಕಾಲೇಜು ಕಾಣಕೋಣ, ಗೋವಾ ಹಾಗೂ ಆಶಾವಾದಿ ಪ್ರಕಾಶನ ಸಂಸ್ಥೆ ಮುಂಬಯಿ, ಇವುಗಳ ಆಶ್ರಯದಲ್ಲಿ ಒಂದು ದಿನದ "ಆದಿವಾಸಿ ಸಂಸ್ಕೃತಾಯ್ ಕೊಂಕಣಿ ಭಾಸ್: ನಾದ್ ಆನಿ ಸಂವಾದ್" ಎಂಬ ವಿಷಯ ಆಧರಿತ ರಾಷ್ಟ್ರೀಯ ಸಮ್ಮೇಳನ ಜರಗಿತು. ಸಮ್ಮೇಳನದ ಅಧ್ಯಕ್ಷತೆಯನ್ನು ಜ್ಞಾನ ಪ್ರಬೋಧಿನಿ ಮಂಡಲದ ಮುಖ್ಯಸ್ಥರಾದ ಶ್ರೀ ಆರ್. ಎ. ಮಜಾಲ್ಕರ್ ವಹಿಸಿದ್ದರು. ಕಾರ್ಯಕ್ರಮವನ್ನು ವಿಶ್ವ ಕೊಂಕಣಿ ಕೇಂದ್ರ ಮಂಗಳೂರು, ಇದರ ಅಧ್ಯಕ್ಷರಾದ ಶ್ರೀ ಬಸ್ತಿ ವಾಮನ ಶೆಣೈ ಉದ್ಘಾಟಿಸಿದರು. ಸಮ್ಮೇಳನದಲ್ಲಿ "ಕೊಂಕಣಿ ಕಲೆ ಹಾಗೂ ಸಂಸ್ಕೃತಿಯಲ್ಲಿ ಆದಿವಾಸಿ ಬದುಕಿನ ಪ್ರತಿಫಲನ", "ಆದಿವಾಸಿ ಬದುಕು, ಸಂಸ್ಕೃತಿ ಹಾಗೂ ಸಾಹಿತ್ಯದ ಭವಿಷ್ಯ", ಕುಣುಬಿ, ಸಿದ್ಧಿ ಜನಾಂಗದ ಜನಪದ ನೃತ್ಯದ ಪ್ರದರ್ಶನ ನಡೆಯಿತು. ಕಾರ್ಯಕ್ರಮದಲ್ಲಿ ಖ್ಯಾತ ಕೊಂಕಣಿ ಬರಹಗಾರರು ಹಾಗೂ ಚಿಂತಕರಾದ ಡಾ ಪೂರ್ಣಾನಂದಾಚಾರಿ, ಡಾ. ಪಾಂಡುರಂಗ ಪಡದೇಸಾಯಿ, ಡಾ. ಭೂಷಣ್ ಭಾವೆ, ಡಾ. ದೇವದಾಸ ಪೈ ಹಾಗೂ ಇನ್ನಿತರರು ವಿಚಾರ ಮಂಡನೆ ಮಾಡಿದರು.

6. ಕೊಂಕಣಿ ಅಧ್ಯಯನ ಪೀಠ ಹಾಗೂ ಸಾಧನಾ ಬಳಗ ಮಂಗಳೂರು ಇದರ ಸಹಯೋಗದಲ್ಲಿ 'ರಂಗಪ್ರವೇಶಿಕಾ' ಎಂಬ ಶೀರ್ಷಿಕೆಯಡಿಯಲ್ಲಿ ಅಲ್ಪಾವಧಿ ಸರ್ಟಿಫಿಕೇಟ್ ಕೋರ್ಸ್ ನಡೆಸಲಾಯಿತು. ರಂಗಭೂಮಿ ತರಬೇತಿ ಶಿಬಿರದಲ್ಲಿ ಸುಮಾರು 20 ಜನ ವಿದ್ಯಾರ್ಥಿಗಳು ಭಾಗವಹಿಸಿದ್ದರು. ದಿನಾಂಕ 11–09–2019ರಂದು ಮಂಗಳೂರಿನ ಖ್ಯಾತ ಉದ್ಯಮಿ ಶ್ರೀ ನಂದಗೋಪಾಲ ಶೆಣೈ ತರಬೇತಿ ಶಿಬಿರವನ್ನು ಉದ್ಘಾಟಿಸಿದರು. ದಿನಾಂಕ 25–10–2019ರಂದು ಶಿಬಿರಾರ್ಥಿಗಳಿಂದ "ಕಾಲಚಕ್ರಾಂತು" ನಾಟಕ ಪ್ರದರ್ಶನದೊಂದಿಗೆ ಶಿಬಿರ ಸಂಪನ್ನವಾಯಿತು. ಕಾರ್ಯಕ್ರಮದಲ್ಲಿ ಅತಿಥಿಯಾಗಿ ಹಿರಿಯ ರಂಗ ನಿರ್ದೇಶಕ ಶ್ರೀ ಅರುಣ್‌ರಾಜ್ ಭಾಗಿಯಾದರು. ಶಿಬಿರದಲ್ಲಿ ಶ್ರೀ ಜಗನ್ ಪವಾರ್, ಶ್ರೀ ಪ್ರಕಾಶ ಶೆಣೈ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು. ಶಿಬಿರಾರ್ಥಿಗಳಿಗೆ ನಾಟಕರಚನೆ, ಅಭಿನಯ, ಬೆಳಕು, ಪ್ರಸಾದನ ಇತ್ಯಾದಿ ವಿಚಾರಗಳ ಬಗ್ಗೆ ತರಬೇತಿ ನೀಡಲಾಯಿತು.

7. ಕೊಂಕಣಿ ಅಧ್ಯಯನ ಪೀಠ, ಕೊಂಕಣಿ ಸಂಸ್ಕೃತಿ ಹಾಗೂ ಪರಂಪರೆಯನ್ನು ಪ್ರತಿಬಿಂಬಿಸುವ ವಿಶಿಷ್ಠ ಗ್ರಂಥ ರಚನೆಗೆ ಸಂಬಂಧಪಟ್ಟ ಎರಡು ವರ್ಷ ಅವಧಿಯ ಯೋಜನೆಯನ್ನು ಪ್ರಾರಂಭಿಸಿದೆ. ಜನಪದ ಕೋಶ ರಚನೆಯ ಸಂಯೋಜಕರಾಗಿ ಡಾ. ಬಿ. ದೇವದಾಸ್ ಪೈ ಕಾರ್ಯ ನಿರ್ವಹಿಸುತ್ತಿದ್ದಾರೆ. ಈಗಾಗಲೇ ಇದಕ್ಕೆ ಸಂಬಂಧಿಸಿದಂತೆ ಗೋವಾದ ಪಣಜಿಯಲ್ಲಿ ಒಂದನೇ ಸ್ತರದ ಹಾಗೂ ಎರಡನೇ ಸ್ತರದ ಕಾರ್ಯಾಗಾರ ನಡೆಸಲಾಗಿದೆ. ದಿನಾಂಕ 15–12–2019ರಿಂದ 19–12–2019ರವರೆಗೆ ಪಣಜಿಯ ಕೇಂದ್ರ ಗ್ರಂಥಾಲಯದ ಸಭಾಂಗಣದಲ್ಲಿ ಜನಪದಕೋಶದ ಮಾಹಿತಿ ಸಂಗ್ರಹಕ್ಕೆ ಸಂಬಂಧಿಸಿದ ಕಾರ್ಯಾಗಾರ ಜರಗಿತು. ಕಾರ್ಯಾಗಾರವನ್ನು ಮುಖ್ಯ ಗ್ರಂಥಪಾಲಕರಾದ ಡಾ. ಕಾರ್ಲೊಸ್ ಎಂ. ಫೆರ್ನಾಂಡಿಸ್ ಉದ್ಘಾಟಿಸಿದರು. ಕಾರ್ಯಾಗಾರದಲ್ಲಿ ಕೊಂಕಣಿ ಸಾಹಿತಿ ಡಾ. ಪಾಂಡುರಂಗ ಪಡದೇಸಾಯಿ, ಪ್ರೊ. ತಾನಾಜಿ ಹರ್ಣಣ್ಕರ್ ಉಪಸ್ಥಿತರಿದ್ದರು.

8. ಕೊಂಕಣಿ ಅಧ್ಯಯನ ಪೀಠವು 2019–20ನೇ ಸಾಲಿನಲ್ಲಿ ಕೊಂಕಣಿ ತೆಸೌರಸ್ ರಚನೆಗೆ ಸಂಬಂಧಪಟ್ಟ ಮೂರು ವರ್ಷ ಅವಧಿಯ ಯೋಜನೆಯನ್ನು ಪ್ರಾರಂಭಿಸಿದೆ. ತೆಸೌರಸ್ ಗ್ರಂಥ ರಚನೆಯ ಸಂಯೋಜಕರಾಗಿ ಕೊಂಕಣಿ ಸಾಹಿತಿ ಹಾಗೂ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತ ಶ್ರೀ ಗೋಕುಲದಾಸ್ ಪ್ರಭು ಇವರು ಕಾರ್ಯ ನಿರ್ವಹಿಸುತ್ತಿದ್ದಾರೆ. ಈಗಾಗಲೇ ಇದಕ್ಕೆ ಸಂಬಂಧಿಸಿದಂತೆ ಗೋವಾದ ಪಣಜಿಯಲ್ಲಿ ಒಂದನೇ ಹಂತದ ಹಾಗೂ ಎರಡನೇ ಹಂತದ ಕಾರ್ಯಾಗಾರ ನಡೆಸಲಾಗಿದೆ. ದಿನಾಂಕ 15–12–2019ರಿಂದ 19–12–2019ರವರೆಗೆ ಪಣಜಿಯ ಕೇಂದ್ರ ಗ್ರಂಥಾಲಯದ ಸಭಾಂಗಣದಲ್ಲಿ ತೆಸೌರಸ್ ರಚನೆಗೆ ಸಂಬಂಧಿಸಿದ ಮಾಹಿತಿ ಕಲೆಹಾಕುವ ಕಾರ್ಯಾಗಾರ ಜರಗಿತು. ಕಾರ್ಯಾಗಾರವನ್ನು ಮುಖ್ಯ ಗ್ರಂಥಪಾಲಕರಾದ ಡಾ. ಕಾರ್ಲೊಸ್ ಎಂ. ಫೆರ್ನಾಂಡಿಸ್ ಉದ್ಘಾಟಿಸಿದರು. ಕಾರ್ಯಾಗಾರದಲ್ಲಿ ಕೊಂಕಣಿ ಸಾಹಿತಿ ಡಾ. ಪಾಂಡುರಂಗ ಪಡದೇಸಾಯಿ, ಪ್ರೊ. ತಾನಾಜಿ ಹರ್ಣಣ್ಕರ್ ಉಪಸ್ಥಿತರಿದ್ದರು.

9. ಮಂಗಳೂರು ವಿಶ್ವವಿದ್ಯಾನಿಲಯ ಕೊಂಕಣಿ ಅಧ್ಯಯನ ಪೀಠ ಮತ್ತು ಕೊಂಕಣಿ ಭಾಷೆ ಹಾಗೂ ಸಾಂಸ್ಕೃತಿಕ ಪ್ರತಿಷ್ಠಾನ ಶಕ್ತಿನಗರ ಮಂಗಳೂರು ಇವರು ಜಂಟಿಯಾಗಿ ಕೈಗೊಂಡಿರುವ "ಕೊಂಕಣಿ ಸಮುದಾಯದ ಮೂಲ, ವಲಸೆ, ಹಾಗೂ ವಸಾಹತು ಮಾದರಿ" ಎಂಬ ನಾಲ್ಕು ವರ್ಷದ ಯೋಜನೆಯು ಈಗಾಗಲೇ ಎರಡು ವರ್ಷಗಳನ್ನು ಪೂರೈಸಿ ಪ್ರಗತಿಯಲ್ಲಿದೆ. ಡಾ. ಗೀತಾ ಶೆಣೈ ಹಾಗೂ ಶ್ರೀ ಜೈಸನ್ ಸಿಕ್ವೇರಾ ಅವರು ಸಂಶೋಧನಾ ಸಹಾಯಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ಯೋಜನೆಗೆ ಸಂಬಂಧಿಸಿದಂತೆ ಈಗಾಗಲೇ ಗೋವಾ, ಮಹಾರಾಷ್ಟ್ರ, ಕರ್ನಾಟಕ ಇತ್ಯಾದಿ ರಾಜ್ಯಗಳಲ್ಲಿರುವ ಕೊಂಕಣಿಗರ ರಕ್ತ ಮಾದರಿಯನ್ನು ಅವರ ವಂಶವಾಹಿ ಅಧ್ಯಯನಕ್ಕೋಸ್ಕರ ಸಂಗ್ರಹಿಸಲಾಗಿದೆ. ಅದೇ ರೀತಿ ಸಮುದಾಯದ ಇನ್ನಿತರ ಮಾಹಿತಿಗಳನ್ನು ಸಂಗ್ರಹ ಮಾಡಲಾಗಿದೆ.

10. ದಿನಾಂಕ 10–02–2020ರಂದು ಕೊಂಕಣಿ ಅಧ್ಯಯನ ಪೀಠ ಮತ್ತು ಮಿಲಾಗ್ರಿಸ್ ಕಾಲೇಜು ಸಹಯೋಗದಲ್ಲಿ ಬಹು ಭಾಷಾ ಆಧರಿತ **"ಭಾಷಾ ಸಂಗಮ್"** ಅಂತರಾಷ್ಟ್ರೀಯ ಸಮ್ಮೇಳನ ಜರಗಿತು. ಇಂಗ್ಲೆಂಡ್‌ನ ಶ್ರೇಷ್ಠ ಸಾಹಿತಿ ಮ್ಯಾಗಿ ಹಾರಿಸ್ ಸಮ್ಮೇಳನದಲ್ಲಿ ಶಿಖರೋಪನ್ಯಾಸ ನೀಡಿದರು. ಕೊಂಕಣಿ ಭಾಷೆಗೆ ಸಂಬಂಧಿಸಿದಂತೆ ಫಾ. ಪ್ರತಾಪಾನಂದ ನಾಯ್ಕ್, ಶ್ರೀ ವಲ್ಲಿ ಕ್ವಾಡ್ರೆಸ್, ಡಾ. ದೇವದಾಸ ಪೈ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು.

11. ದಿನಾಂಕ 05–03–2020ರಂದು ಕೊಂಕಣಿ ಅಧ್ಯಯನ ಪೀಠ ಮತ್ತು ಸಂತ ಅಲೋಶಿಯಸ್ ಕಾಲೇಜು ಮಂಗಳೂರು ಸಹಯೋಗದಲ್ಲಿ ಒಂದು ದಿನದ **"ಡಿಜಿಟಲ್ ಯುಗದಲ್ಲಿ ಕೊಂಕಣಿ ಸಾಹಿತ್ಯಿಕ ವಿಮರ್ಶೆ"** ವಿಷಯ ಆಧರಿತ ವಿಚಾರ ಸಂಕಿರಣ ನಡೆಯಿತು. ವಿಚಾರ ಸಂಕಿರಣದ ಉದ್ಘಾಟನೆಯನ್ನು ಕೊಂಕಣಿಯ ಶ್ರೇಷ್ಠ ಚಿಂತಕರು ಹಾಗೂ ವಿದ್ವಾಂಸರಾದ ಫಾ. ಪ್ರಶಾಂತ್ ಮಾಡ್ತಾ ನೆರವೇರಿಸಿದರು.

12. ಮಂಗಳೂರು ವಿಶ್ವವಿದ್ಯಾನಿಲಯ ಕೊಂಕಣಿ ಅಧ್ಯಯನ ಪೀಠ ಹಾಗೂ ಕೊಂಕಣಿ ಸ್ನಾತಕೋತ್ತರ ಅಧ್ಯಯನ ವಿಭಾಗ ವಿಶ್ವವಿದ್ಯಾನಿಲಯ ಸಂಧ್ಯಾ ಕಾಲೇಜು ಮಂಗಳೂರು ಸಹಯೋಗದೊಂದಿಗೆ 2019–20ರ ಸಾಲಿನ 6 ಸರಣಿ ಕಾರ್ಯಕ್ರಮಗಳನ್ನು ಸಂಘಟಿಸಲಾಗಿದೆ. ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಕೊಂಕಣಿ ಸಾಹಿತ್ಯ, ಸಂಶೋಧನೆ ಹಾಗೂ ಬರಹಗಾರರನ್ನು ಅಹ್ವಾನಿಸಿ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಇದರಿಂದ ಪ್ರಯೋಜನವಾಗುವ ನಿಟ್ಟಿನಲ್ಲಿ ಶ್ರಮ ವಹಿಸಲಾಗಿದೆ. ಅದರ ವಿವರ ಇಂತಿದೆ:

ಕ್ರ.ಸಂ	ಕಾರ್ಯಕ್ರಮದ ವಿವರ	ಸಂಪನ್ಮೂಲ ವ್ಯಕ್ತಿ	ದಿನಾಂಕ
1	ಸಣ್ಣಕಥಾ ರಚನೆ ಕಾರ್ಯಾಗಾರ	ಡಾ. ಎಡ್ವರ್ಡ್ ನಜೆರತ್	21–09–2019
2	ಜನಪದ ಕಥಾ ನಿರೂಪಣಾ ಕಾರ್ಯಾಗಾರ	ಶ್ರೀಮತಿ ಮರೋಳಿ ಸಬಿತಾ ಕಾಮತ್	21–09–2019
3	ಕವಿತಾ ವಿಮರ್ಶಾ ಕಾರ್ಯಾಗಾರ	ಪ್ರೊ. ಪ್ರಿಯದರ್ಶಿನಿ ತಾಡ್ಕೋಡ್ಕರ್	26–09–2019
4	ಶ್ರೀ ಗೋಪಾಲ ಗೌಡರಿಗೆ ನುಡಿನಮನ ಕಾರ್ಯಕ್ರಮ	ಶ್ರೀ ವಿಜಯ ಗೌಡ	22–10–2019
5	ಪ್ರಬಂಧ ಮಂಡಣಾ ಕೌಶಲ್ಯ ಕಾರ್ಯಾಗಾರ	ಡಾ. ಕುಮಾರಸ್ವಾಮಿ	30–10–2019
6	ಸೃಜನಶೀಲ ಬರವಣಿಗೆ ಕಾರ್ಯಾಗಾರ (ಸೇಕ್ರೆಡ್ ಹಾರ್ಟ್ ಕಾಲೇಜು, ಮಡಂತ್ಯಾರ್)	ಶ್ರೀ ವಿವೇಕಾನಂದ ಕಾಮತ್	11–02–2019
7	ಸಣ್ಣಕಥಾ ವಿಮರ್ಶಾ ಕಾರ್ಯಾಗಾರ	ಪ್ರೊ. ಪ್ರಿಯದರ್ಶಿನಿ ತಾಡ್ಕೋಡ್ಕರ್	04–03–2020

ನೆಹರೂ ಅಧ್ಯಯನ ಕೇಂದ್ರ:

ಧನ ಸಹಾಯ ಮೂಲ: – 3,00,00,000/ – (3 ಕೋಟಿ)

ಅವಧಿ: 17 ನವೆಂಬರ್ 2017ರಿಂದ ಇಲ್ಲಿಯವರೆಗೆ

ಪ್ರಸ್ತುತ ಸ್ಥಿತಿ: ಕಾರ್ಯ ನಿರ್ವಹಿಸುತ್ತಿದೆ.

ಮಂಗಳೂರು ವಿಶ್ವವಿದ್ಯಾನಿಲಯ ಧ್ಯೇಯೋದ್ದೇಶಗಳ ಹೇಳಿಕೆಯ ಜೊತೆ ಜೊತೆಗೆ ನೆಹರು ಚಿಂತನ ಕೇಂದ್ರವನ್ನು ಭಾರತವೆನ್ನುವ ಸಂಕೀರ್ಣ ಕಲ್ಪನೆಯನ್ನು ಅದರ ಎಲ್ಲಾ ಸೂಕ್ಷ್ಮ ಆಯಾಮಗಳೊಂದಿಗೆ ಶಿಕ್ಷಕ, ಶಿಕ್ಷಕೇತರ ಮತ್ತು ವಿದ್ಯಾರ್ಥಿ ಸಮುದಾಯಗಳಿಗೆ ತಲುಪಿಸುವ ಉದ್ದೇಶದಿಂದ ಸ್ಥಾಪಿಸಲಾಗಿದೆ. ಜನಸಮುದಾಯಗಳಲ್ಲಿ ಪ್ರಜಾತಂತ್ರ ಮತ್ತು ಸೆಕ್ಯುಲರ್‌ವಾದಗಳ ಕುರಿತು ತಿಳುವಳಿಕೆಯಿಂದ ಕೂಡಿದ ವಿಮರ್ಶಾತ್ಮಕ ದೃಷ್ಟಿಕೋನವನ್ನು ಬೆಳೆಸುವುದಕ್ಕಾಗಿಯೂ ನೆಹರು ಚಿಂತನ ಕೇಂದ್ರ ಕೆಲಸ ಮಾಡುತ್ತದೆ.

ನೆಹರು ಚಿಂತನ ಕೇಂದ್ರದ ಧ್ಯೇಯೋದ್ದೇಶಗಳು ಈ ಕೆಳಗಿನಂತಿವೆ:

* ಶಿಕ್ಷಕರು ಮತ್ತು ವಿದ್ಯಾರ್ಥಿಗಳಲ್ಲಿ ನೆಹರೂ ಅವರ ರಾಜಕೀಯ ತತ್ವಶಾಸ್ತ್ರದ ಬಗ್ಗೆ ವಿಮರ್ಶಾತ್ಮಕ ಚಿಂತನೆ ಮತ್ತು ದೃಷ್ಟಿಕೋನವನ್ನು ರೂಪಿಸುವುದು.

* ಪ್ರಜಾಪ್ರಭುತ್ವ, ಸೆಕ್ಯುಲರಿಸಮ್, ಬಹುತ್ವ ಮತ್ತು ಅಭಿವೃದ್ಧಿಗಳ ಕುರಿತಂತೆ ಚರ್ಚೆಗಳನ್ನು ಏರ್ಪಡಿಸಿ, ಸಾರ್ವಜನಿಕರಿಗೆ ಅರಿವು ಮೂಡಿಸುವುದು.
* ಜಾತಿವಾದ, ಕೋಮುವಾದ, ಧಾರ್ಮಿಕ ಮೂಲಭೂತವಾದ ಮತ್ತು ಇತರ ಮತಾಂಧತೆ ಮುಂತಾದ ಸಮಾಜ ವಿರೋಧಿ ಶಕ್ತಿಗಳನ್ನು ಎದುರಿಸುವಲ್ಲಿ ಜನಪ್ರಿಯ ಪರಿಕಲ್ಪನಾತ್ಮಕ ಪ್ರಕ್ರಿಯೆಗಳನ್ನು ರೂಪಿಸುವುದು.
* ಸ್ಥಳೀಯ ಸಂಪ್ರದಾಯಗಳು ಮತ್ತು ಆಚರಣೆಗಳ ಕುರಿತು ಗಂಭೀರ ಅಧ್ಯಯನಕ್ಕೆ ಪ್ರೋತ್ಸಾಹಿಸುವುದರ ಮೂಲಕ, ಕ್ರಮವಾಗಿ ಪ್ರತಿದಿನದ ಅಧ್ಯಯನಕ್ಕೆ ಒತ್ತು ನೀಡುವುದರ ಮೂಲಕ ಪ್ರಜಾಪ್ರಭುತ್ವ ಮತ್ತು ಮಾನವೀಯ ಮೌಲ್ಯಗಳ ಕುರಿತು ವಿಮರ್ಶಿಸಲು ಸಿದ್ಧಗೊಳಿಸುವುದು.
* ವಿದ್ಯಾರ್ಥಿಗಳು, ಯುವಜನತೆ ಮತ್ತು ಸಾರ್ವಜನಿಕರಲ್ಲಿ ಸ್ವಾತಂತ್ರ್ಯದ ಕಲ್ಪನೆಗಳ ಬಗೆಗೆ ಜಾಗೃತಿ ಮೂಡಿಸಿ ಸಮಾನತೆ, ನ್ಯಾಯ, ಹಕ್ಕುಗಳು, ಕಾನೂನು, ಅಸಹಕಾರ ಮತ್ತು ಇತರ ಸದ್ಗುಣಗಳನ್ನೂ ಮತ್ತು ಸಾರ್ವಜನಿಕ ಜೀವನದಲ್ಲಿ ಅರ್ಥಪೂರ್ಣ ಮಾನವೀಯತೆಯನ್ನು ಪೋಷಿಸುವುದು.
* ಸಂಪ್ರದಾಯ ಮತ್ತು ಆಧುನಿಕತೆಯ ಕುರಿತ ಸಂಕೀರ್ಣ ವಿಚಾರಗಳ ಕುರಿತು ಚರ್ಚೆಗಳನ್ನು ಏರ್ಪಡಿಸುವುದು.

ನೆಹರು ಚಿಂತನ ಕೇಂದ್ರ ಮುಂದಿನ ಐದು ವರುಷಗಳಲ್ಲಿ ಸಂಘಟಿಸಲು ಉದ್ದೇಶಿಸಿರುವ ಕಾರ್ಯಕ್ರಮಗಳನ್ನು ಹೀಗೆ ಮುಂದಿಡಬಹುದು:

1. ಪ್ರಜಾತಂತ್ರದ ಸಂವಾದ

ನೆಹರು ಚಿಂತನ ಕೇಂದ್ರ ಮುಂದಿನ ಐದು ವರುಷಗಳಲ್ಲಿ ಪ್ರಜಾತಂತ್ರಕ್ಕೆ ಸಂಬಂಧಿಸಿದ ಬೇರೆ ಬೇರೆ ಉಪನ್ಯಾಸಗಳನ್ನು ಪ್ರಜಾತಾಂತ್ರಿಕ ಸಂವಾದ ಎನ್ನುವ ಶೀರ್ಷಿಕೆಯಲ್ಲಿ ಸಂಘಟಿಸಲು ಯೋಚಿಸಿದೆ. ಈ ಪ್ರಜಾತಾಂತ್ರಿಕ ಸಂವಾದದ ಉಪನ್ಯಾಸಗಳು ವಿಶ್ವವಿದ್ಯಾನಿಲಯದ ಆವರಣದಲ್ಲಿ ಮಾತ್ರವಲ್ಲದೇ ವಿಶ್ವವಿದ್ಯಾನಿಲಯ ಅಧೀನಕ್ಕೆ ಒಳಪಡುವ ವಿವಿಧ ಕಾಲೇಜುಗಳಲ್ಲೂ ನಡೆಯುತ್ತದೆ. ಈ ಉಪನ್ಯಾಸಗಳು ಸಂವಾದದ ರೂಪದಲ್ಲಿದ್ದೂ ಅವುಗಳು ಪ್ರಜಾತಂತ್ರದ ಬೇರೆ ಬೇರೆ ಆಯಾಮಗಳ ಕುರಿತು ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಪ್ರಜಾತಾಂತ್ರಿಕ ಸಂವಾದದ ಮೂಲಕ ವಿಮರ್ಶಾತ್ಮಕ ದೃಷ್ಟಿಕೋನವನ್ನು ಬೆಳೆಸಿಕೊಳ್ಳಲು ಸಹಾಯಕವಾಗುತ್ತದೆ.

2. ಪ್ರಜಾತಾಂತ್ರಿಕ ಮುಂದಾಳತ್ವದ ಕುರಿತು ಭೌದ್ಧಿಕ ಕಾರ್ಯಗಾರ

ನೆಹರು ಚಿಂತನ ಕೇಂದ್ರ ಮಂಗಳೂರು ವಿಶ್ವವಿದ್ಯಾನಿಲಯದ ಸುತ್ತಮುತ್ತ ವಿದ್ಯಾರ್ಥಿಗಳನ್ನು ಮತ್ತು ಯುವ ಸಮುದಾಯವನ್ನು ಒಳಗೊಳ್ಳುವ ಪ್ರಜಾತಾಂತ್ರಿಕ ಮುಂದಾಳತ್ವದ ಶಿಬಿರವನ್ನು ಸಂಘಟಿಸಲು ಯೋಜಿಸಿದೆ. ಈ ಪ್ರಜಾತಂತ್ರದ ಮುಂದಾಳುತ್ವದ ಬೌದ್ಧಿಕ ಶಿಬಿರಗಳು ರಾಜಕಾರಣದ ಕುರಿತು ವಿಮರ್ಶಾತ್ಮಕ ತಿಳುವಳಿಕೆ ಮೂಡಿಸುವುದು ಮಾತ್ರವಲ್ಲದೇ ಅವರನ್ನು ಕ್ರಿಯಾಶೀಲ ನಾಗರಿಕರನ್ನಾಗಿ ತರಬೇತಿಗೊಳಿಸುವ ಮತ್ತು ರಾಜಕಾರಣದ ನಡುಪ್ರವೇಶಕ್ಕೆ ಅವರನ್ನು ಸಜ್ಜುಗೊಳಿಸುವ ಉದ್ದೇಶವನ್ನು ಇರಿಸಿಕೊಂಡಿದೆ.

3. ಪ್ರಾದೇಶಿಕ, ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ವಿಚಾರ ಸಂಕಿರಣಗಳು

ನೆಹರು ಚಿಂತನ ಕೇಂದ್ರ ಪ್ರಾದೇಶಿಕ, ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ವಿಚಾರ ಸಂಕಿರಣಗಳನ್ನು ಕಾಲಕಾಲಕ್ಕೆ ಸಂಘಟಿಸಿ ಅವುಗಳ ಮೂಲಕ ನೆಹರು ಮತ್ತು ಅವರ ಕಾಳಜಿಗಳನ್ನು ಶೈಕ್ಷಣಿಕ ಸಮುದಾಯಕ್ಕೆ ತಲುಪಿಸುವ ಉದ್ದೇಶವನ್ನು ಹೊಂದಿದೆ. ಅಂತೆಯೇ, ಈ ಕಾಳಜಿಗಳನ್ನು ಬದಲಾಗುತ್ತಿರುವ ಭಾರತ ಮತ್ತು ಜಗತ್ತಿನ ಸಂದರ್ಭದಲ್ಲಿ ಮರು ನಿರೂಪಿಸಲು ಯತ್ನಿಸುತ್ತದೆ.

4. ಸಂಶೋಧನ ಯೋಜನೆಗಳು (ಕಿರುಕಾಲಿಕ ಮತ್ತು ದೀರ್ಘಕಾಲಿಕ)

ನೆಹರು ಚಿಂತನ ಕೇಂದ್ರ ವಿವಿಧ ಬಗೆಯ ಕಿರುಕಾಲಿಕ ಮತ್ತು ದೀರ್ಘಕಾಲಿಕ ಯೋಜನೆಗಳಿಗೆ ಉತ್ತೇಜನ ನೀಡುತ್ತದೆ. ಈ ಯೋಜನೆಗಳು ಜಾಗತಿಕ ರಾಷ್ಟ್ರೀಯ ಹಾಗೂ ಪ್ರಾದೇಶಿಕ ನೆಲೆಗಳಲ್ಲಿ ಪ್ರಜಾತಂತ್ರ ಮತ್ತು ಸೆಕ್ಯುಲರ್‌ವಾದಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಸಂಶೋಧನೆಗೆ ಎತ್ತಿಕೊಳ್ಳುತ್ತದೆ. ಈ ಮೂಲಕ ಜಾತಿ, ಮತ, ಪ್ರದೇಶ, ಭಾಷೆ, ಲಿಂಗ ಮತ್ತು ಧರ್ಮಗಳ ನೆಲೆಗಳಲ್ಲಿ ಉದ್ಭವಿಸುವ ಅಸಮಾನತೆ ಮತ್ತು ಹಿಂಸೆಗಳನ್ನು ಅರ್ಥಮಾಡಿಕೊಳ್ಳುವ ಮತ್ತು ಪರಿಹರಿಸುವ ನೆಲೆಯಲ್ಲಿ ಯೋಜಿತವಾಗಿದೆ.

5. ಸಾಂಸ್ಕೃತಿಕ ನೆಲೆಯ ಅಧ್ಯಯನಗಳು

ನೆಹರು ಚಿಂತನ ಕೇಂದ್ರ ಅನೇಕ ಬಗೆಯ ಸಾಂಸ್ಕೃತಿಕ ನೆಲೆಯ ಅಧ್ಯಯನಗಳಿಗೆ ಚಾಲನೆ ಕೊಡಲು ಉದ್ದೇಶಿಸಿದೆ. ಈ ಅಧ್ಯಯನಗಳು ಸಾಂಪ್ರದಾಯಗಳ, ದಿನನಿತ್ಯದ ಆಚರಣೆಗಳ ಹಾಗೂ ಶಿಷ್ಟಾಚಾರಗಳ ಅಧ್ಯಯನಗಳನ್ನು ನಡೆಸಿ ಅವುಗಳಲ್ಲಿ ಸುತ್ತವಾಗಿರುವ ಪ್ರಜಾತಾಂತ್ರಿಕ ಹಾಗೂ ಮಾನವಿಕ ಆಯಾಮಗಳನ್ನು ಬೆಳಕಿಗೆ ತರಲು ಯತ್ನಿಸುತ್ತದೆ.

6. ಪತ್ರಗಾರ ಮತ್ತು ವಿಶೇಷ ಗ್ರಂಥಾಲಯ

ನೆಹರು ಚಿಂತನ ಕೇಂದ್ರವು ಭಾರತದ ಸ್ವಾತಂತ್ರ್ಯ ಹೋರಾಟ, ಸಂವಿಧಾನ ರಚನೆ ಮತ್ತು ಭಾರತದ ರಾಜಕೀಯ ತತ್ವಜ್ಞಾನಕ್ಕೆ ಕುರಿತಾದ ಪತ್ರಗಾರ ಮತ್ತು ವಿಶೇಷ ಗ್ರಂಥಾಲಯವನ್ನು ಸ್ಥಾಪಿಸಲು ಯೋಜಿಸಿದೆ. ಆ ಮೂಲಕ ವಿಶೇಷ ಅಧ್ಯಯನಾಕಾಂಕ್ಷಿಗಳಿಗೆ ಪೂರಕವಾಗುವ ಪರಿಕರಗಳನ್ನು ಒದಗಿಸಬಹುದೆಂದು ಕೇಂದ್ರ ತಿಳಿಯುತ್ತದೆ.

7. **ಪ್ರಕಟನೆಗಳು**

ನೆಹರು ಚಿಂತನ ಕೇಂದ್ರ ತಾನು ದೀರ್ಘಾವಧಿಯಲ್ಲಿ ನೆರೆವೇರಿಸಲಿರುವ ಯೋಜನೆಗಳು ಹಾಗೂ ಕಾರ್ಯಕ್ರಮಗಳ ಕುರಿತು ಒಂದು ದಾಖಲೆ ಪತ್ರವನ್ನು ಪ್ರಕಟಿಸಲು ಯೋಜಿಸಿದೆ. ಜೊತೆಗೆ ರಾಜಕೀಯ ತತ್ವಜ್ಞಾನ, ಆಧುನಿಕ ಭಾರತದ ರಾಜಕೀಯ ಚಿಂತನೆ ಹಾಗೂ ಭಾರತದ ಪ್ರಜಾತಾಂತ್ರಿಕ ರಾಜಕಾರಣದ ಕುರಿತು ಗ್ರಂಥಗಳನ್ನು ಸಂಪಾದಿಸುವ ಮತ್ತು ಪ್ರಕಟಿಸುವ ಯೋಜನೆಯನ್ನು ಇರಿಸಿಕೊಂಡಿದೆ. ಇದು ಆಯಾ ಕ್ಷೇತ್ರಗಳಲ್ಲಿ ವಿಶೇಷ ಅಧ್ಯಯನ ನಡೆಸುವ ಶಿಕ್ಷಕರಿಗೆ, ಸಂಶೋಧಕರಿಗೆ ಮತ್ತು ವಿದ್ಯಾರ್ಥಿಗಳಿಗೆ ನೆರವಾಗಲಿದೆ ಎಂದು ಕೇಂದ್ರ ತಿಳಿಯುತ್ತದೆ.

ಸಂಘಟಿಸಿದ ಕಾರ್ಯಕ್ರಮಗಳು:

1. **"ಭಾವಿಸಿದ ಕರ್ನಾಟಕ – ಒಂದು ಸಹಚಿಂತನೆ"**, ದಿನಾಂಕ: 27/09/2019

   ಸ್ಥಳ: ಶ್ರೀ. ವೀರರಾಜೇಂದ್ರ ಹೆಗ್ಡೆ ಸಭಾಭವನ, ಶ್ರೀ ಶಾರದಾ ಕಾಲೇಜು, ಬಸ್ರೂರು

   ಸಂವಾದಕರು: ವೆಲೇರಿಯನ್ ರೋಡ್ರಿಗಸ್, ರಾಜೇಂದ್ರ ಜೆನ್ನಿ, ನಿತ್ಯಾನಂದ ಶೆಟ್ಟಿ, ಲಕ್ಷ್ಮೀಶ ತೋಳ್ಪಾಡಿ, ಎನ್. ಎಸ್. ಗುಂಡೂರ, ಮೇಟಿ ಮಲ್ಲಿಕಾರ್ಜುನ, ಎಸ್. ಚಂದ್ರಶೇಖರ್

2. ಗಾಂಧಿಯ ಚಿಂತನೆಯ ಕುರಿತು ವಿಚಾರ ಸಂಕಿರಣ, ದಿನಾಂಕ: 21/10/2019,

   ಸ್ಥಳ: ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು

   ಸಂವಾದಕರು: ಜಿ. ಎನ್. ದೇವಿ, ಗಾಂಧಿ ಚಿಂತಕರು, ನವದೆಹಲಿ

3. ಗುಲ್ವಾಡಿ ವೆಂಕಟರಾವ್‌ರವರ "ಇಂದಿರಾ ಬಾಯಿ" ಕುರಿತಾದ ರಾಷ್ಟ್ರೀಯ ವಿಚಾರ ಸಂಕಿರಣ, ದಿನಾಂಕ: 17/01/2020,

   ಸ್ಥಳ: ಡಾ. ಯು. ಆರ್. ರಾವ್ ಸಭಾಂಗಣ (ಹಳೆಯ ಸೆನೆಟ್ ಹಾಲ್), ಮಂಗಳೂರು ವಿಶ್ವವಿದ್ಯಾನಿಲಯ

   ಸಂವಾದಕರು: ಶಿವರಾಮ್ ಪಡಿಕ್ಕಲ್, ಹೈದಾರಬಾದ್ ವಿಶ್ವವಿದ್ಯಾನಿಲಯ, ಪ್ರೊ. ವನಮಾಲಾ ವಿಶ್ವನಾಥ್, ಅಜೀಮ್ ಪ್ರೇಮ್ ಜೀ, ಬೆಂಗಳೂರು, ಮಿಸ್. ಮಿನಿ ಕೃಷ್ಣನ್, ಭಾಷಾಂತರ ಸಂಪಾದಕರು, ಒಯುಪಿ, ಪ್ರೊ. ಬಿ. ಎ. ವಿವೇಕ ರೈ, ನಿವೃತ್ತ ಕುಲಪತಿಗಳು, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ ಮತ್ತು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು, ಪ್ರೊ. ನಿತ್ಯಾನಂದ ಬಿ. ಶೆಟ್ಟಿ, ಕನ್ನಡ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ಪ್ರೊ. ಶಶಿಕಾಂತ್ ಕೌಡೂರು, ಇಂಗ್ಲೀಷ್ ವಿಭಾಗ, ಎನ್.ಐ.ಟಿ.ಕೆ. ಸುರತ್ಕಲ್, ಮಿಸ್. ವರ್ಷ ಶೆಣೈ, ಸಂಶೋಧನ ವಿದ್ಯಾರ್ಥಿ, ಇಂಗ್ಲೀಷ್ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ

4. **"ಡಿಬೇಟಿಂಗ್ ಗಾಂಧಿ"** ಗಾಂಧಿ ಕುರಿತಾದ ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣ, ದಿನಾಂಕ: 29/01/2020

   ಸ್ಥಳ: ಸಾನಿಧ್ಯ ಹಾಲ್, ಸಂತ ಅಲೋಶಿಯಸ್ ಕಾಲೇಜು, ಮಂಗಳೂರು

   ಸಂವಾದಕರು: ಪ್ರೊ. ಬಿ. ಕೆ. ಚಂದ್ರಶೇಖರ್, ನಿವೃತ್ತ ಶಿಕ್ಷಣ ಸಚಿವರು, ಕರ್ನಾಟಕ ಸರಕಾರ

   ಪ್ರೊ. ರಾಜೇಂದ್ರ ಜೆನ್ನಿ, ನಿವೃತ್ತ ಪ್ರಾಧ್ಯಾಪಕರು, ಕುವೆಂಪು ವಿಶ್ವವಿದ್ಯಾನಿಲಯ

   ಪ್ರೊ. ವಲೇರಿಯನ್ ರೊಡ್ರಿಗಸ್, ನಿವೃತ್ತ ಪ್ರಾಧ್ಯಪಕರು, ಜೆಯನ್‌ಯು

   ಪ್ರೊ. ವಿವೇಕ್ ಧಾರೇಶ್ವರ್, ಬೆಂಗಳೂರು

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ತುಳುಪೀಠ

ಸ್ಥಾಪನೆ	:	1992
ಸಂಯೋಜಕರು	:	ಡಾ. ಮಾಧವ
ಸಂಶೋಧನಾ ಸಹಾಯಕಿ	:	ಕೀರ್ತನಾ ಬಿ.

ಉದ್ದೇಶ – ಕಾರ್ಯಯೋಜನೆಗಳು:

* ತುಳು ಸಾಹಿತ್ಯಕ್ಕೆ ಸಂಬಂಧಪಟ್ಟ ವಿಚಾರ ಸಂಕಿರಣ, ಪ್ರಚಾರಣೋಪನ್ಯಾಸ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.
* ತುಳು ಭಾಷೆ ಮತ್ತು ಸಂಸ್ಕೃತಿಯನ್ನು ಪ್ರೋತ್ಸಾಹಿಸುವುದರ ಮೂಲಕ ತುಳುವಿನ ಮಹತ್ವವನ್ನು ಸಾರುವುದು.
* ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತುಳುನಾಡಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ವೈಶಿಷ್ಟ್ಯವನ್ನು ಎತ್ತಿ ತೋರಿಸುವಂತಹ, ತುಳು ಇತಿಹಾಸವನ್ನು ಚಿತ್ರಿಸುವಂತಹ ವಸ್ತು ಸಂಗ್ರಾಲಯವನ್ನು ತೆರೆಯುವುದು.
* ತುಳು ಜಾನಪದ ಸಾಹಿತ್ಯಗಳ ಸಂಗ್ರಹಣೆ.

* ತುಳು ಹಸ್ತಪ್ರತಿ ಪ್ರಕಟಣೆ ಮತ್ತು ತುಳು ಸಂಶೋಧನಾ ಗ್ರಂಥಗಳ ಸಂಗ್ರಹಣೆ

* ತುಳು ಭಾಷೆ ಮತ್ತು ಸಂಸ್ಕೃತಿಗಳ ಬೆಳವಣಿಗೆಗೆ ಸಹಕಾರಿಯಾಗುವಂತಹ ಇತರ ಯೋಜನಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

1. ಬಹುಭಾಷಾ ಕವಿಗೋಷ್ಠಿ :

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ತುಳು ಪೀಠ, ತುಳು ಸ್ನಾತಕೋತ್ತರ ಅಧ್ಯಯನ ವಿಭಾಗ ಹಾಗೂ ಶಿಶಿರ ಮಂಗಳೂರು ಇದರ ಸಂಯುಕ್ತ ಆಶ್ರಯದಲ್ಲಿ ಮಂಗಳೂರು ವಿಶ್ವವಿದ್ಯಾನಿಲಯ ಕಾಲೇಜಿನ ಶಿವರಾಮ ಕಾರಂತ ಸಭಾಭವನದಲ್ಲಿ 2019ರ ಸೆಪ್ಟೆಂಬರ್ 30 ರಂದು "ಬಹುಭಾಷಾ ಕವಿಗೋಷ್ಠಿ" ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ 60 ಮಂದಿ ಕವಿಗಳು ಭಾಗವಹಿಸಿದ್ದು, ತುಳು, ಬ್ಯಾರಿ, ಕೊಂಕಣಿ, ಕನ್ನಡ, ತಮಿಳು. ಇಂಗ್ಲೀಷ್ ಈ ಎಲ್ಲಾ ಭಾಷೆಗಳಲ್ಲಿ ಕವಿತೆಗಳನ್ನು ರಚಿಸಿ ವಾಚಿಸಿದರು.

ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಪಿ. ಯಸ್. ಯಡಪಡಿತ್ತಾಯ ಕಾರ್ಯಕ್ರಮವನ್ನು ಉದ್ಘಾಟಿಸಿ, ಕಾವ್ಯ, ಕವನ, ಬರಹದ ವಿವಿಧ ಪ್ರಕಾರಗಳು ಕವಿ ಸಮಯದಲ್ಲಿ ಸೃಷ್ಟಿಯಾಗುತ್ತದೆ. ಪ್ರತಿಯೊಬ್ಬನಲ್ಲೂ ಒಬ್ಬ ಕವಿ ಅಡಗಿದ್ದಾನೆ. ಆದರೆ ಅದಕ್ಕೆ ಪ್ರೇರಣೆ ಬೇಕು ಎಂದು ಹೇಳಿ ಭವಿಷ್ಯದ ಕವಿಗಳಿಗೆ ಶುಭ ಕೋರಿದರು.

ಕವಿ ರವಿ ಇಡ್ಕಿದು ಕವಿಗೋಷ್ಠಿ ಅಧ್ಯಕ್ಷತೆ ವಹಿಸಿದ್ದರು. ವಿವಿ ಸಂಧ್ಯಾ ಕಾಲೇಜು ಪ್ರಾಂಶುಪಾಲ ಡಾ. ರಾಮಕೃಷ್ಣ ಬಿ. ಎಂ., ತುಳು ಸ್ನಾತಕೋತ್ತರ ಅಧ್ಯಯನ ವಿಭಾಗದ ಸಂಯೋಜಕ ಡಾ. ಮಾಧವ ಎಂ., ಶಿಶಿರ ಮಂಗಳೂರು ಇದರ ಉಪಾಧ್ಯಕ್ಷ ಜಿ. ಕೆ. ಭಟ್, ಕೋಶಾಧಿಕಾರಿ ಚೇತನ್ ಆರ್., ಉಪನ್ಯಾಸಕ ಶ್ಯಾಮ್ ಪ್ರಸಾದ್, ಹಿರಿಯ ವಿದ್ಯಾರ್ಥಿ ಶಿವಾನಂದ ಕರ್ಕೇರ ವೇದಿಕೆಯಲ್ಲಿ ಉಪಸ್ಥಿತರಿದ್ದರು.

2. ಕೃತಿ ಬಿಡುಗಡೆ ಹಾಗೂ ಯಕ್ಷಗಾನ ತಾಳಮದ್ದಳೆ:

ಮಂಗಳೂರು ವಿಶ್ವವಿದ್ಯಾನಿಲಯದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ತುಳು ಪೀಠ ಹಾಗೂ ಯಕ್ಷಗಾನ ಅಧ್ಯಯನ ಕೇಂದ್ರದ ಸಹಯೋಗದೊಂದಿಗೆ 2019ರ ನವೆಂಬರ್ 07ರಂದು ಮಂಗಳೂರು ವಿಶ್ವವಿದ್ಯಾನಿಲಯ ಕಾಲೇಜಿನ ರವೀಂದ್ರ ಕಲಾ ಭವನದಲ್ಲಿ "ಕೃತಿ ಬಿಡುಗಡೆ ಹಾಗೂ ತಾಳಮದ್ದಳೆ" ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ಸನ್ನಿಧಿ ಟಿ. ರೈ ಇವರ "ಸೂರ್ಯಪ್ರಭೆ ಹಾಗೂ ಚೌಕಿ" ಕೃತಿಗಳನ್ನು ಬಿಡುಗಡೆಗೊಳಿಸಲಾಯಿತು.

ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಪಿ. ಯಸ್. ಯಡಪಡಿತ್ತಾಯ ಕಾರ್ಯಕ್ರಮವನ್ನು ಉದ್ಘಾಟಿಸಿ, ಸಂಸ್ಕೃತಿಯನ್ನು ಶ್ರೀಮಂತಗೊಳಿಸುವ ಸಾಮರ್ಥ್ಯ ಹೊಂದಿದ ಬಾಲ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸುವುದು ಸಮಾಜದ ಸಾಂಸ್ಕೃತಿಕ ಜವಾಬ್ದಾರಿ ಎಂದು ಮಾತನಾಡಿ, ಯಕ್ಷಗಾನ ಹಾಗೂ ಇತರ ಕ್ಷೇತ್ರದಲ್ಲಿ ಇನ್ನಷ್ಟು ಸಾಧನೆ ಮಾಡಲಿ ಎಂದು ಬಾಲ ಪ್ರತಿಭೆಗೆ ಶುಭ ಹಾರೈಸಿದರು.

ಅತಿಥಿ ಸ್ಥಾನ ವಹಿಸಿದ್ದ ಭಾಗವತ ಪಟ್ಲ ಸತೀಶ್ ಶೆಟ್ಟಿ ಮಾತನಾಡಿ ಯಕ್ಷಗಾನ ಲೋಕವೇ ಒಂದು ವಿಸ್ಮಯ ಅದಕ್ಕೆ ಎಲ್ಲಾ ವಯೋಮಾನದವರನ್ನು, ಮನಸ್ಥಿತಿಯವರನ್ನು ಸಮ್ಮೋಹನಗೊಳಿಸುವ ಶಕ್ತಿ ಇದೆ ಎಂದು ಹೇಳಿದರು. ವೇದಿಕೆಯಲ್ಲಿ ಸನ್ನಿಧಿ ಟಿ. ರೈ, ರಾಜಶ್ರೀ ಟಿ. ರೈ, ಡಾ. ಉದಯಕುಮಾರ್ ಇರ್ವತ್ತೂರು, ವಿವಿ ಸಂಧ್ಯಾ ಕಾಲೇಜು ಪ್ರಾಂಶುಪಾಲ ಡಾ. ರಾಮಕೃಷ್ಣ ಬಿ. ಎಂ., ತುಳು ಸ್ನಾತಕೋತ್ತರ ಅಧ್ಯಯನ ವಿಭಾಗದ ಸಂಯೋಜಕ ಡಾ. ಮಾಧವ ಎಂ., ಪ್ರೊ. ಶ್ರೀಪತಿ ಕಲ್ಲೂರಾಯ, ಡಾ. ರಾಜಶ್ರೀ ಉಪಸ್ಥಿತರಿದ್ದರು. ನಂತರ ವೇದಿಕೆಯಲ್ಲಿ 'ಸೂರ್ಯಪ್ರಭೆ' ತಾಳಮದ್ದಲೆ ಪ್ರದರ್ಶನ ನಡೆಯಿತು.

3. ಗುರುವಿನ ಅರಿವು–ನಾರಾಯಣ ಗುರು ಜೀವನ ಸಾಧನೆ–ಉಪನ್ಯಾಸ ಮಾಲೆ:

ಮಂಗಳೂರು ವಿಶ್ವವಿದ್ಯಾನಿಲಯದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ತುಳು ಪೀಠ, ತುಳು ಸ್ನಾತಕೋತ್ತರ ಅಧ್ಯಯನ ವಿಭಾಗ ಹಾಗೂ ಬ್ರಹ್ಮಶ್ರೀ ನಾರಾಯಣ ಗುರು ಅಧ್ಯಯನ ಪೀಠದ ಸಂಯುಕ್ತ ಆಶ್ರಯದಲ್ಲಿ ಮಂಗಳೂರು ವಿಶ್ವವಿದ್ಯಾನಿಲಯ ಕಾಲೇಜಿನ ಶಿವರಾಮ ಕಾರಂತ ಸಭಾಭವನದಲ್ಲಿ 2019ರ ನವೆಂಬರ್ 19ರಂದು "ಗುರುವಿನ ಅರಿವು–ನಾರಾಯಣ ಗುರು ಜೀವನ ಸಾಧನೆ" ಎಂಬ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಡಾ. ವಾಮನ ನಂದಾವರ ಇವರು ಮಾತನಾಡಿ, ಸುಮಾರು ಎರಡು ಶತಮಾನದ ಹಿಂದಿನ ನಾರಾಯಣ ಗುರುಗಳ ಚರಿತ್ರೆಯನ್ನು ತುಳುವಿನಲ್ಲಿ ಮಹಾಕಾವ್ಯವಾಗಿ ರಚಿಸಿ ಪೇರೂರು ಜಾರು ಅವರು ವಿನೂತನ ಸಾಧನೆ ಮಾಡಿದ್ದಾರೆ. ಇತಿಹಾಸಕ್ಕೆ ಎಲ್ಲೂ ಕುಂದುಂಟಾಗದಂತೆ ನೂತನ ಛಂದಸ್ಸಿನಲ್ಲಿ ಮಹಾಕಾವ್ಯ ರಚಿಸಿ ಯಶಸ್ವಿಯಾಗಿರುವುದು ಇದರ ವಿಶೇಷ ಎಂದು ಹೇಳಿದರು.

ವಿವಿ ಸಂಧ್ಯಾ ಕಾಲೇಜು ಪ್ರಾಂಶುಪಾಲ ಡಾ.ರಾಮಕೃಷ್ಣ ಬಿ. ಎಂ. ಅಧ್ಯಕ್ಷತೆ ವಹಿಸಿದ್ದರು. ಪ್ರಾಧ್ಯಾಪಕಿ ಬಿ. ಎಂ. ರೋಹಿಣಿ ಅವರು "ಪೇರೂರು ಜಾರು ಮೆರೆನ ಕಾವ್ಯದ ಬಂಧ" ಎಂಬ ವಿಷಯದ ಕುರಿತು ಮಾತನಾಡಿ ಕಾವ್ಯದ ಬಂಧ, ಛಂದಸ್ಸು, ಕಾವ್ಯಾತ್ಮಕ ಪಾತ್ರ ಚಿತ್ರಣದ ಸೌಂದರ್ಯವನ್ನು ಶ್ಲಾಘಿಸಿದರು. ಪ್ರಾಧ್ಯಾಪಕ ಡಾ. ವಾಸುದೇವ ಬೆಳ್ಳೆ "ಪೇರೂರು ಕಾವ್ಯೊಡು ಮೂಡ್ದ ಬತ್ತಿನ ನಾರಾಯಣ ಗುರುಕುಲು" ಎಂಬ ವಿಷಯದ ಕುರಿತು ಮಾತನಾಡಿದರು. ವೇದಿಕೆಯಲ್ಲಿ ರತ್ನಾವತಿ ಬೈಕಾಡಿ, ಮುದ್ದು ಮೂಡುಬೆಳ್ಳೆ, ಡಾ. ಮಾಧವ ಎಂ., ಆನಂದ ಕಿದೂರು, ಜ್ಞಾನೇಶ್ವರಿ, ಪ್ರಶಾಂತಿ ಶೆಟ್ಟಿ ಉಪಸ್ಥಿತರಿದ್ದರು.

4. ಪೊಲಿ ಪೊಲ್ಲುದ ಬುಲೆಕ್ಲೆನ ಪೊಲಬು ಬೊಕ್ಕ ಪಾತೆರಕತೆ:

ಮಂಗಳೂರು ವಿಶ್ವವಿದ್ಯಾನಿಲಯದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ತುಳು ಪೀಠ ಹಾಗೂ ತುಳು ಸ್ನಾತಕೋತ್ತರ ಅಧ್ಯಯನ ವಿಭಾಗ ವಿ. ವಿ. ಸಂಧ್ಯಾ ಕಾಲೇಜು, ಮಂಗಳೂರು ಇದರ ಸಹಯೋಗದೊಂದಿಗೆ, 2019ರ ನವೆಂಬರ್ 20ರಂದು ವಿ. ವಿ. ಸಂಧ್ಯಾ ಕಾಲೇಜಿನಲ್ಲಿ "ಪೊಲಿ ಪೊಲ್ಲುದ ಬುಲೆಕ್ಲೆನ ಪೊಲಬು ಬೊಕ್ಕ ಪಾತೆರಕತೆ" ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದಲ್ಲಿ ವಿವಿ ಸಂಧ್ಯಾ ಕಾಲೇಜು ಪ್ರಾಂಶುಪಾಲ ಡಾ. ರಾಮಕೃಷ್ಣ ಬಿ. ಎಂ. ಅಧ್ಯಕ್ಷತೆ ವಹಿಸಿದ್ದರು. ನಿಟ್ಟೆ ಶರತ್ ಭಂಡಾರಿ ಇವರು ಪೊಲಿ ಪೊಲ್ಲುದ ಬುಲೆಕ್ಲೆನ ಪೊಲಬು ಬೊಕ್ಕ ಪಾತೆರಕತೆ ಕಾರ್ಯಕ್ರಮದ ಕುರಿತಾಗಿ ಮಾತನಾಡಿದರು. ವೇದಿಕೆಯಲ್ಲಿ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ತುಳು ಪೀಠದ ಸಂಯೋಜಕ ಡಾ. ಮಾಧವ ಎಂ., ಉಪನ್ಯಾಸಕಿ ದುರ್ಗಾ ಮೆನನ್ ಉಪಸ್ಥಿತರಿದ್ದರು.

5. ತುಳುವೆರೆ ಪಾರಂಪರಿಕ ಜ್ಞಾನ:

ಮಂಗಳೂರು ವಿಶ್ವವಿದ್ಯಾನಿಲಯದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ತುಳು ಪೀಠ, ತುಳು ಸ್ನಾತಕೋತ್ತರ ಅಧ್ಯಯನ ವಿಭಾಗ ವಿ. ವಿ. ಸಂಧ್ಯಾ ಕಾಲೇಜು ಹಾಗೂ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಸ್ಯಾಯತ್ತ ಮಹಾವಿದ್ಯಾಲಯ, ಉಜಿರೆ ಇದರ ಸಹಯೋಗದಲ್ಲಿ 2020ರ ಜನವರಿ 23ರಂದು ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಸ್ವಾಯತ್ತ ಮಹಾವಿದ್ಯಾಲಯ, ಉಜಿರೆ ಕಾಲೇಜಿನ ಸ್ನಾತಕೋತ್ತರ ಅಧ್ಯಯನ ಕೇಂದ್ರದಲ್ಲಿ "ತುಳುವೆರೆ ಪಾರಂಪರಿಕ ಜ್ಞಾನ" ಎಂಬ ವಿಷಯದ ಕುರಿತು ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು, ಉಪನ್ಯಾಸಕರು, ಅಧ್ಯಾಪಕೇತರ ವರ್ಗದವರು, ಸಾರ್ವಜನಿಕರನ್ನೊಳಗೊಂಡಂತೆ ಸುಮಾರು 250 ಮಂದಿ ಸಾಹಿತ್ಯಾಸಕ್ತರು ಸೇರಿದ್ದರು.

ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಪಿ. ಯಸ್. ಯಡಪಡಿತ್ತಾಯ ಅಧ್ಯಕ್ಷತೆ ವಹಿಸಿ, ತುಳು ಸಂಸ್ಕೃತಿಯನ್ನು ಬೆಳೆಸಬಾಕಾದರೆ ಈಗಿನ ಮಕ್ಕಳಗೆ ತುಳುನಾಡಿನ ಆಚಾರ–ವಿಚಾರಗಳು ತಿಳಿದಿರಬೇಕು. ಇಂದಿನ ಮಕ್ಕಳಿಗೆ ತುಳುವಿನ ಬಗ್ಗೆ ತಿಳಿಯದೇ ಇರುವ ಕಾರಣದಿಂದ ತುಳು ಮೂಲೆಗುಂಪಾಗುತ್ತದೆ ಎಂದು ಅಭಿಪ್ರಾಯ ಪಟ್ಟರು.

ಪ್ರಾಚೀನ ಮತ್ತು ಆಧುನೀಕತೆಯ ಸಂಗಮ ಕಾಲದಲ್ಲಿರುವ ನಾವು, ಭವ್ಯ ಇತಿಹಾಸ, ಪರಂಪರೆ ಮತ್ತು ವೈವಿಧ್ಯಮಯ ಹಿನ್ನೆಲೆ ಹೊಂದಿರುವ ತುಳು ಭಾಷೆ ಮತ್ತು ಸಂಸ್ಕೃತಿ ಬಗ್ಗೆ ಕೀಳರಿಮೆ ಹೊಂದದೆ ಅಭಿಮಾನ–ಗೌರವಗಳೊಂದಿಗೆ ಉಳಿಸಿಕೊಳ್ಳಬೇಕು. ತುಳುನಾಡಿನ ನಂಬಿಕೆ–ನಡಾವಳಿ, ಆಚಾರ–ವಿಚಾರಗಳು, ಸಂಧಿ–ಪಾಡ್ದನ, ಯಕ್ಷಗಾನ–ತಾಳಮದ್ದಲೆ, ಜಾನಪದ ಕಲೆಗಳು, ಬಲಿಯೇಂದ್ರ ಪೂಜೆ, ಭೂತರಾಧನೆ, ನಾಗಾರಾಧನೆ, ಕೃಷಿ ಸಂಸ್ಕೃತಿ ಸಾರ್ಥಕ ಬದುಕಿಗೆ ಪ್ರೇರಕವಾಗಿದೆ ಎಂದು ಕಾರ್ಯಕ್ರಮದ ಉದ್ಘಾಟಿಸಿದ ಧರ್ಮಸ್ಥಳದ ಶ್ರೀಮತಿ ಹೇಮಾವತಿ ವಿ. ಹೆಗ್ಗಡೆಯವರು ಹೇಳಿದರು.

ಸ್ನಾತಕೋತ್ತರ ಅಧ್ಯಯನ ಕೇಂದ್ರ ಸ. ಪ್ರ. ದರ್ಜೆ ಕಾಲೇಜು ಕಾಸರಗೋಡು ಇಲ್ಲಿಯ ಕನ್ನಡ ಸಹಾಯಕ ಪ್ರಾಧ್ಯಾಪಕ ಡಾ. ರತ್ನಾಕರ ಮಲ್ಲಮೂಲೆ "ಆರಾಧನಾ ಪರಂಪರೆ" ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು. ಗೊಷ್ಠಿ–2ರಲ್ಲಿ ವಿಶ್ರಾಂತ ಪ್ರಾಂಶುಪಾಲ ಪ್ರೊ. ಸುಭಾಶ್ಚಂದ್ರ ಕಣ್ವತೀರ್ಥ "ಬೆನ್ನಿ ಬೇಸಾಯ ಪರಂಪರೆ" ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು.

ಎಸ್. ಡಿ. ಯಂ ಕಾಲೇಜಿನ ವಿದ್ಯಾರ್ಥಿಗಳು ರಚಿಸಿದ "ಅರಿವು" ಡಿಜಿಟಲ್ ಪತ್ರಿಕೆಯನ್ನು ಬಿಡುಗಡೆಗೊಳಿಸಿದ ಡಾ. ಯಶೋವರ್ಮ, ಯುವ ಜನತೆ ತುಳು ಸಂಸ್ಕೃತಿಯನ್ನು ಉಳಿಸಿ–ಬೆಳೆಸಬೇಕು ಎಂದು ಹೇಳಿ, ತುಳುವನ್ನು ಸಂವಿಧಾನದ 8ನೇ ಪರಿಚ್ಛೇದಕ್ಕೆ ಸೇರಿಸುವ ಪ್ರಯತ್ನ ನಡೆಸಲಾಗುತ್ತದೆ. ತುಳು ಭಾಷೆ ಸಂಸ್ಕೃತಿ ಸಂರಕ್ಷಣೆಗೆ ಯುಕವಜನತೆ ಕಟಿಬದ್ಧರಾಗಬೇಕು ಎಂದು ಹೇಳಿದರು. ವೇದಿಕೆಯಲ್ಲಿ ಡಾ. ಮಾಧವ.ಎಂ., ಡಾ. ಅಭಯ್ ಕುಮಾರ್, ದಯಾನಂದ ಕತ್ತಲ್‌ಸಾರ್, ಡಾ. ರಾಮಕೃಷ್ಣ ಬಿ. ಎಂ. ಉಪಸ್ಥಿತರಿದ್ದರು.

6. ಮಂದಾರ ರಾಮಾಯಣ : ಇತಿಹಾಸ ಮತ್ತು ಸಂಸ್ಕೃತಿ ಶೋಧ:

ಮಂಗಳೂರು ವಿಶ್ವವಿದ್ಯಾನಿಲಯದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ತುಳು ಪೀಠ, ತುಳು ಸ್ನಾತಕೋತ್ತರ ಅಧ್ಯಯನ ವಿಭಾಗ ವಿ. ವಿ. ಸಂಧ್ಯಾ ಕಾಲೇಜು ಹಾಗೂ ಆಳ್ವಾಸ್ ಕಾಲೇಜು ಮೂಡುಬಿದಿರೆ ಇದರ ಸಹಯೋಗದಲ್ಲಿ 2020ರ ಫೆಬ್ರವರಿ 15ರಂದು ಆಳ್ವಾಸ್ ಕಾಲೇಜು ಮೂಡುಬಿದಿರೆಯ ಕುವೆಂಪು ಸಭಾಂಗಣದಲ್ಲಿ "ಮಂದಾರ ರಾಮಾಯಣ : ಇತಿಹಾಸ ಮತ್ತು ಸಂಸ್ಕೃತಿ ಶೋಧ" ಎಂಬ ವಿಷಯದ ಕುರಿತು ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು, ಉಪನ್ಯಾಸಕರು, ಅಧ್ಯಾಪಕೇತರ ವರ್ಗದವರು, ಸಾರ್ವಜನಿಕರನ್ನೊಳಗೊಂಡಂತೆ ಸುಮಾರು 300 ಮಂದಿ ಸಾಹಿತ್ಯಾಸಕ್ತರು ಸೇರಿದ್ದರು.

ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಪಿ. ಯಸ್. ಯಡಪಡಿತ್ತಾಯ ಕಾರ್ಯಕ್ರಮವನ್ನು ಉದ್ಘಾಟಿಸಿ, ತುಳು ಇತಿಹಾಸದ ಮತ್ತು ಸಂಸ್ಕೃತಿಯನ್ನು ವಿದ್ಯಾರ್ಥಿಗಳು ಶೋಧಿಸಬೇಕು. ನಮ್ಮ ಸಂಸ್ಕೃತಿ, ಆಚಾರ, ವಿಚಾರ ಉಳಿಯಬೇಕಾದರೆ ಭಾಷೆಯನ್ನು ಉಳಿಸುವತ್ತ ಎಲ್ಲರೂ ಗಮನ ಹರಿಸಬೇಕು ಎಂದು ಹೇಳಿದರು. ಅಧ್ಯಕ್ಷತೆ ವಹಿಸಿದ್ದ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ. ಮೋಹನ್ ಆಳ್ವ ಮಾತನಾಡಿ, ತುಳು ಜನಪದ ಸಂಪ್ರದಾಯಗಳಲ್ಲಿ ಅತ್ಯಂತ ಶ್ರೀಮಂತ ನಾಡು. ಅಷ್ಟೇ ಅಲ್ಲದೇ ಇಲ್ಲಿಯ ಆಚರಣೆ, ಗದ್ಯ–ಪದ್ಯ ಸಾಹಿತ್ಯಗಳು ಹೀಗೆ ಎಲ್ಲದರಲ್ಲೂ ವಿಭಿನ್ನತೆ ಹೊಂದಿದೆ ಎಂದು ಹೇಳಿದರು.

ವಿಶ್ರಾಂತ ಪ್ರಾಂಶುಪಾಲರು ಮತ್ತು ಕಲಾ ವಿಮರ್ಶಕರಾದ ಡಾ. ಪ್ರಭಾಕರ ಜೋಶಿ ಆಶಯ ನುಡಿಗಳನ್ನಾಡಿದರು. ನಿವೃತ್ತ ಪ್ರಾಧ್ಯಾಪಕ ಡಾ. ಪುಂಡಿಕ್ಯಾ ಗಣಪಯ್ಯ ಭಟ್ "ಸಾಹಿತ್ಯ ಮತ್ತು ಇತಿಹಾಸ ಶೋಧ" ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು. ನಿವೃತ್ತ ಉಪನ್ಯಾಸಕರು ಶ್ರೀ ಭಾಸ್ಕರ ರೈ ಕುಕ್ಕುವಳ್ಳಿ "ಮಂದಾರ ರಾಮಾಯಣ ಸಂಸ್ಕೃತಿ ಶೋಧ" ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲ ಡಾ. ಕುರಿಯನ್, ವಿವಿ ಸಿಂಡಿಕೇಟು ಸದಸ್ಯರಾದ ರಮೇಶ್ ಕೆ., ತುಳು ಪೀಠದ ಸಂಯೋಜಕ ಡಾ. ಮಾಧವ ಎಂ., ಕಾಲೇಜಿನ ಇತಿಕಾಸದ ವಿಭಾಗದ ಉಪನ್ಯಾಸಕ ಅಶೋಕ್ ರಾಕೇಶ್, ಕನ್ನಡ ವಿಭಾಗದ ಉಪನ್ಯಾಸಕ ಡಾ. ಯೋಗೀಶ್ ಕೈರೋಡಿ ಉಪಸ್ಥಿತರಿದ್ದರು.

7. ಅಂತರ್ ಕಾಲೇಜು ತುಳು ಸಾಹಿತ್ಯ ಪಂಥೋ:

ಮಂಗಳೂರು ವಿಶ್ವವಿದ್ಯಾನಿಲಯದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ತುಳು ಪೀಠ ಹಾಗೂ ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಬಲ್ಮಠ ಮಂಗಳೂರು ಇದರ ಸಹಯೋಗದಲ್ಲಿ 2020ರ ಫೆಬ್ರವರಿ 02ರಂದು ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಸಭಾಂಗಣದಲ್ಲಿ "ಪೊರ್ಲು–ಪದ ಪಾತೆರದ ಸಿಂಗಾರ ವಿಶ್ವವಿದ್ಯಾನಿಲಯ ಮಟ್ಟದ ಅಂತರ್ ಕಾಲೇಜು ತುಳು ಸಾಹಿತ್ಯ ಪಂಥೋ" ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ 6 ಸ್ಪರ್ಧೆಗಳನ್ನು ಆಯೋಜಿಸಿದ್ದು, 14 ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಕಾರ್ಯಕ್ರಮದ ಉದ್ಘಾಟನೆಯನ್ನು ಮಾಡಿದ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ದಯಾನಂದ ಕತ್ತಲ್‌ಸಾರ್ ಮಾತನಾಡಿ ತುಳುನಾಡಿನ, ತುಳು ಜನರ, ತುಳು ಭಾಷೆಯ ಚಂದವು ಇವತ್ತಿನ ದಿನ ಇಂತಹ ಕಾರ್ಯಕ್ರಮಕ್ಕೆ ಮಾತ್ರ ಮೀಸಲಾಗುತ್ತಿದೆ. ತುಳುನಾಡಿನ ವಿಶೇಷತೆ ಬಗ್ಗೆ ಇವತ್ತು ಭಾಷಣಗಳಲ್ಲಿ, ಪುಸ್ತಕಗಳಲ್ಲಿ ಓದುವಂತಹ ಪರಿಸ್ಥಿತಿ ತುಳುನಾಡಿನ ಜನರಿಗೆ ಬಂದೊದಗಿದೆ. ಆದರೆ ಈ ರೀತಿ ಮುಂದಿನ ದಿನಗಳಲ್ಲಿ ಆಗದಂತೆ ಇಂದಿನ ಮಕ್ಕಳು ಇನ್ನಾದರೂ ಎಚ್ಚೆತ್ತುಕೊಳ್ಳಬೇಕಾಗಿದೆ ಎಂದು ಹೇಳಿದರು.

ಕಾಲೇಜಿನ ಪ್ರಾಂಶುಪಾಲ ಡಾ. ಜಗದೀಶ ಬಾಳ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಶುಭ ಹಾರೈಸಿದರು. ವೇದಿಕೆಯಲ್ಲಿ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ತುಳು ಪೀಠದ ಸಂಯೋಜಕ ಡಾ. ಮಾಧವ ಎಂ., ತುಳು ಅಧ್ಯಯನ ಮಂಡಳಿಯ ಮಾಜಿ ಸದಸ್ಯೆ ಡಾ. ಮೀನಾಕ್ಷಿ ರಾಮಚಂದ್ರ, ಸಂತ ಅಲೋಶಿಯಸ್ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ. ವಿಶ್ವನಾಥ ಬದಿಕ್ಕಾನ, ಕಾಲೇಜಿನ ಉಪನ್ಯಾಸಕಿ ಪ್ರೊ. ಜ್ಯೋತಿಪ್ರಿಯಾ, ಪ್ರೊ. ಚಂದ್ರಶೇಖರ್ ಕೆ. ಉಪಸ್ಥಿತರಿದ್ದರು.

"ಅಂತರ್ ಕಾಲೇಜು ತುಳು ಸಾಹಿತ್ಯ ಪಂಥೋ" ದಲ್ಲಿ ಏರ್ಪಡಿಸಿದ ಸ್ಪರ್ಧೆಗಳು:

1. ಯಕ್ಷಗಾನ ಮುಖವರ್ಣಿಕೆ (ವಿದೂಷಕ ವೇಷ)
2. ತುಳು ಕೊಲೇಜ್
3. ತುಳು ರಸಪ್ರಶ್ನೆ
4. ತುಳು ಹಳೆಯ ಚಿತ್ರಗೀತೆ
5. ತುಳು ಆಶುಭಾಷಣ
6. ಪಾಡ್ದನ

8. ಕಡಲ್ದ ಬಗೆಟ್ ಪಾತೆರಕತೆ : ಕಡಲ ಜಾನಪದ ವಿಚಾರಗೋಷ್ಠಿ:

ಮಂಗಳೂರು ವಿಶ್ವವಿದ್ಯಾನಿಲಯದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ತುಳು ಪೀಠ, ತುಳು ಸ್ನಾತಕೋತ್ತರ ಅಧ್ಯಯನ ವಿಭಾಗ ವಿ. ವಿ. ಸಂಧ್ಯಾ ಕಾಲೇಜು ಹಾಗೂ ತುಳು ಪರಿಷತ್, ಮಂಗಳೂರು ಇದರ ಸಹಯೋಗದಲ್ಲಿ 2020ರ ಫೆಬ್ರವರಿ 21ರಂದು ರಾಣಿ ಅಬ್ಬಕ್ಕ ಕ್ರೂಸ್ (ಹಳೆ ಬಂದರು) ಮಂಗಳೂರು ಇಲ್ಲಿ "ಕಡಲ್ದ ಬಗೆಟ್ ಪಾತೆರಕತೆ" ಎಂಬ ಕಡಲ ಜಾನಪದದ ಕುರಿತು ವಿಚಾರಗೋಷ್ಠಿಯನ್ನು ಹಮ್ಮಿಕೊಳ್ಳಲಾಗಿತ್ತು.

ಮಂಗಳೂರು ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ. ಎ. ಎಂ. ಖಾನ್, ಎಸ್‌ಸಿಡಿಸಿಸಿ ಬ್ಯಾಂಕ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರವೀಂದ್ರ ಬಿ., ಮ್ಯಾಪ್ ಕಾಲೇಜಿನ ದಿನೇಶ್ ಆಳ್ವ, ವಿದ್ವಾಂಸ ಡಾ. ಕೆ. ಎಂ. ನಂಬಿಯಾರ್, ಎಂಆರ್‌ಪಿಯಲ್ ಕಾರ್ಪೋರೇಟ್ ಕಮ್ಯುನಿಕೇಶನ್‌ನ ಜನರಲ್ ಮ್ಯಾನೇಜರ್ ರುಡಾಲ್ಫ್ ಜೇ ನೋರೊನ್ಹಾ, ಲೇಖಕಿ ಡಾ. ಮೀನಾಕ್ಷಿ, ತುಳು ಪರಿಷತ್‌ನ ಗೌರವಾಧ್ಯಕ್ಷ ಸ್ವರ್ಣ ಸುಂದರ್, ಡಾ. ಪ್ರಭಾಕರ ನೀರುಮಾರ್ಗ, ಕೋಶಾಧಿಕಾರಿ ಶುಭೋದಯ ಆಳ್ವ, ತುಳು ಸ್ನಾತಕೋತ್ತರ ಅಧ್ಯಯನದ ಸಂಯೋಜಕ ಡಾ. ಮಾಧವ ಎಂ. ತುಳು ಪರಿಷತ್‌ನ ಅಧ್ಯಕ್ಷ ತಾರನಾಥ ಗಟ್ಟಿ, ಬೆನೆಟ್ ಅಮ್ಮನ್ನ, ಗೋಪಾಲ್ ಅಂಚನ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಪ್ರಥಮ ಗೋಷ್ಠಿಯಲ್ಲಿ ಎಂಆರ್‌ಪಿಯಲ್ ಕಾರ್ಪೋರೇಟ್ ಕಮ್ಯುನಿಕೇಶನ್‌ನ ಜನರಲ್ ಮ್ಯಾನೇಜರ್ ರುಡಾಲ್ಫ್ ಜೇ ನೋರೊನ್ಹಾ, "ಹಳೆ ಕಾಲದ ಕಡಲ ಬದುಕಿನ ತಂತ್ರಜ್ಞಾನ" ಎಂಬ ವಿಷಯದ ಬಗ್ಗೆ ತಮ್ಮ ಅಭಿಪ್ರಾಯ ಮಂಡಿಸಿದರು. 1800ಕ್ಕೂ ಅಧಿಕ ವರ್ಷಗಳ ಹಿಂದೆಯೇ ವಿದೇಶಕ್ಕೂ ನಮಗೂ ವ್ಯಾಪಾರ ವಹಿವಾಟು ನಡೆದಿರುವ ಉಲ್ಲೇಖವಿದೆ. ತುಳುನಾಡಿನ ಬೆಳವಣಿಗೆಯಲ್ಲಿ ಯುರೋಪಿಯನ್ ಹಿನ್ನೆಲೆ ಇದೆ ಎಂದು ವಿವರಿಸಿದರು. ವಿದ್ವಾಂಸ ಡಾ. ಕೆ. ಎಂ. ನಂಬಿಯಾರ್ "ಪಡವುದಪ್ಪೆನ ಪಾರ್ದನ" ವಿಷಯದ ಕುರಿತಾಗಿ ತಮ್ಮ ಅಭಿಪ್ರಾಯ ಮಂಡಿಸಿದರು.

9. ಬೆನ್ನಿದ ಪರ್ಬೊ ಕೆಡ್ಡಸೊ:

ತುಳು ವಾರ್ಷಿಕ ಆವರ್ತನದ "ಪೊನ್ನಿ" ತಿಂಗಳಲ್ಲಿ ಬರುವ "ಕೆಡ್ಡಸ" ಹಬ್ಬದ ಆಚರಣೆಯ ಕುರಿತು ವಿದ್ಯಾರ್ಥಿಗಳಿಗೆ ಆಸಕ್ತಿ ಮೂಡಿಸುವ ಸಲುವಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ತುಳು ಪೀಠ, ತುಳು ಸ್ನಾತಕೋತ್ತರ ಅಧ್ಯಯನ ವಿಭಾಗ ವಿ. ವಿ. ಸಂಧ್ಯಾ ಕಾಲೇಜು ಹಾಗೂ ಲಯನ್ಸ್ ಕ್ಲಬ್, ಬಂಟ್ವಾಳ ಇದರ ಸಹಯೋಗದೊಂದಿಗೆ, 2020ರ ಮಾರ್ಚ್ 02ರಂದು ವಿ. ವಿ. ಸಂಧ್ಯಾ ಕಾಲೇಜಿನ ರವೀಂದ್ರ ಕಲಾಭವನದಲ್ಲಿ "ಬೆನ್ನಿದ ಪರ್ಬೊ ಕೆಡ್ಡಸೊ" ಎಂಬ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಪಿ. ಯಸ್. ಯಡಪಡಿತ್ತಾಯ ಕಾರ್ಯಕ್ರಮವನ್ನು ಉದ್ಘಾಟಿಸಿ, ಕೆಡ್ಡಸ ಹಬ್ಬ ತುಳುನಾಡ ಸಾಂಸ್ಕೃತಿಕ ಬದುಕಿನಲ್ಲಿ ಅಂತರ್ಗತವಾಗಿಜರುವ ಒಂದು ಅವಿನಾಭಾವ ಸಂಬಂಧದ ವಾರ್ಷಿಕ ಆವರ್ತನದ ಆಚರಣೆ. ಇಲ್ಲಿ ಧಾರ್ಮಿಕ, ಸಾಂಸ್ಕೃತಿಕ, ವಿನೋದಾವಳಿ ಪ್ರಕ್ರಿಯೆಗಳು ಅಡಕವಾಗಿದ. ಭೂಮಿ ತಾಯಿಯ ಫಲವಂತಿಕೆಯನ್ನು ಸಂಕೇತಿಸುವ ಈ ಹಬ್ಬದಲ್ಲಿ ತುಳುವರ ಆದ್ಯಾತ್ಮಿಕ ಚಿಂತನೆ, ಸಾಮಾಜಿಕ ಬದುನಕಿನ ವಿವಿಧ ಆಯಾಮಗಳಲ್ಲಿ ಹೊರಹೊಮ್ಮುತ್ತದೆ ಎಂದು ಹೇಳಿದರು.

ಅಕ್ಷರ ಸಂತ ಹರೇಕಳ ಹಾಜಬ್ಬ ಮಾತನಾಡಿ, ಶಾಲಾ–ಕಾಲೇಜಿನ ವಿದ್ಯಾರ್ಥಿಗಳ ಮುಂದೆ ನಿಂತು ಮಾತಾನಾಡುವುದೇ ಒಂದು ಸೌಭಾಗ್ಯ. ಎಂದು ಹೇಳಿ ಕೆಡ್ಡಸ ಹಬ್ಬದ ಶುಭ ಕೋರಿದರು. ತುಳು ರಂಗಭೂಮಿ, ಸಿನೆಮಾ ನಟ ಅರವಿಂದ ಬೋಳಾರ್ ಮಾತನಾಡಿ, ಅಗೆದಷ್ಟು ಮೌಲ್ಯಗಳು ದೊರಕುವ ಹಬ್ಬಗಳ ಆಚರಣೆಗಳು ನಡೆಯಬೇಕು. ಯುವ ಪೀಳಿಗೆ ಸಂಸ್ಕೃತಿ ಮತ್ತು ಪಾಲಕರನ್ನು ಗೌರವಿಸುವ ಕರ್ತವ್ಯವನ್ನು ನಿರ್ವಹಿಸಬೇಕು ಎಂದರು. ವೇದಿಕೆಯಲ್ಲಿ ವಿವಿ ಸಂಧ್ಯಾ ಕಾಲೇಜು ಪ್ರಾಂಶುಪಾಲ ಡಾ. ರಾಮಕೃಷ್ಣ ಬಿ. ಎಂ., ತುಳು ಸ್ನಾತಕೋತ್ತರ ಅಧ್ಯಯನ ವಿಭಾಗದ ಸಂಯೋಜಕ ಡಾ. ಮಾಧವ ಎಂ., ಡಾ. ಉದಯಕುಮಾರ್, ಬಂಟ್ವಾಳ್ ಲಯನ್ಸ್ ಕ್ಲಬ್ ಅಧ್ಯಕ್ಷ ಶ್ರೀನಿವಾಸ ಪೂಜಾರಿ, ತುಳು–ಕನ್ನಡ ಸಿನೆಮಾ ಬಾಲನಟಿ ಚಿತ್ರಾಲಿ ಉಪಸ್ಥಿತರಿದ್ದರು. ನಂತರ ವೇದಿಕೆಯಲ್ಲಿ ಕೆಡ್ಡಸ ಆಚರಣೆಯ ನೃತ್ಯ ಪ್ರದರ್ಶನ, "ಕೆಡ್ಡಸದ ಬೋಂಟೆ" ಎಂಬ ಯಕ್ಷಗಾನ ಪ್ರದರ್ಶನ ನಡೆಯಿತು.

ವಿಶೇಷ ಉಪನ್ಯಾಸ ಮಾಲಿಕೆ :

1. ತುಳುನಾಡಿನ ಜನಪದ ಸಾಹಿತ್ಯ:

ಮಂಗಳೂರು ವಿಶ್ವವಿದ್ಯಾನಿಲಯದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ತುಳು ಪೀಠ ಹಾಗೂ ತುಳು ಸ್ನಾತಕೋತ್ತರ ಅಧ್ಯಯನ ವಿಭಾಗ ವಿ. ವಿ. ಸಂಧ್ಯಾ ಕಾಲೇಜು ಸಹಯೋಗದಲ್ಲಿ 2020ರ ಜನವರಿ 21ರಂದು ವಿಶ್ವವಿದ್ಯಾನಿಲಯ ಸಂಧ್ಯಾ ಕಾಲೇಜು ಮಂಗಳೂರು ಇಲ್ಲಿ "ತುಳುನಾಡಿನ ಜನಪದ ಸಾಹಿತ್ಯ" ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯ ಹಾವೇರಿಯ ವಿಶ್ರಾಂತ ಕುಲಪತಿ ಡಾ. ಕೆ. ಚಿನ್ನಪ್ಪ ಗೌಡ ತುಳು ಜನಪದ ಸಾಹಿತ್ಯದ ಕುರಿತಾಗಿ ವಿಶೇಷ ಉಪನ್ಯಾಸ ನೀಡಿದರು. ವೇದಿಕೆಯಲ್ಲಿ ವಿ. ವಿ. ಸಂಧ್ಯಾ ಕಾಲೇಜು ಪ್ರಾಂಶುಪಾಲ ಡಾ. ರಾಮಕೃಷ್ಣ ಬಿ. ಎಂ., ತುಳು ಸ್ನಾತಕೋತ್ತರ ಅಧ್ಯಯನ ವಿಭಾಗದ ಸಂಯೋಜಕ ಡಾ. ಮಾಧವ ಎಂ. ಉಪಸ್ಥಿತರಿದ್ದರು.

2. ತುಳು ಜನಪದ ಸಾಹಿತ್ಯ ಮತ್ತು ಕುಲಕಸುಬು :

ಮಂಗಳೂರು ವಿಶ್ವವಿದ್ಯಾನಿಲಯದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ತುಳು ಪೀಠ ಹಾಗೂ ತುಳು ಸ್ನಾತಕೋತ್ತರ ಅಧ್ಯಯನ ವಿಭಾಗ ವಿ. ವಿ. ಸಂಧ್ಯಾ ಕಾಲೇಜು ಸಹಯೋಗದಲ್ಲಿ 2020ರ ಜನವರಿ 28ರಂದು ವಿಶ್ವವಿದ್ಯಾನಿಲಯ ಸಂಧ್ಯಾ ಕಾಲೇಜು ಮಂಗಳೂರು ಇಲ್ಲಿ "ತುಳು ಜನಪದ ಸಾಹಿತ್ಯ ಮತ್ತು ಕುಲಕಸುಬು " ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಶ್ರೀರಾಮಕೃಷ್ಣ ಪದವಿ ಪೂರ್ವ ಕಾಲೇಜು ಬಂಟ್ಸ್ ಹಾಸ್ಟೆಲ್ ಮಂಗಳೂರು ಇಲ್ಲಿಯ ಪ್ರಾಂಶುಪಾಲ ಡಾ. ಕಿಶೋರ್ ಕುಮಾರ್ ರೈ ಶೇಣಿ ತುಳು ಜನಪದ ಸಾಹಿತ್ಯ ಮತ್ತು ಕುಲಕಸುಬು ಎಂಬ ವಿಷಯದ ಕುರಿತಾಗಿ ವಿಶೇಷ ಉಪನ್ಯಾಸ ನೀಡಿದರು. ವೇದಿಕೆಯಲ್ಲಿ ವಿವಿ ಸಂಧ್ಯಾ ಕಾಲೇಜು ಪ್ರಾಂಶುಪಾಲ ಡಾ. ರಾಮಕೃಷ್ಣ ಬಿ. ಎಂ., ತುಳು ಸ್ನಾತಕೋತ್ತರ ಅಧ್ಯಯನ ವಿಭಾಗದ ಸಂಯೋಜಕ ಡಾ. ಮಾಧವ ಎಂ. ಉಪಸ್ಥಿತರಿದ್ದರು.

3. ತುಳುನಾಡಿನ ಜನಪದ ಕುಣಿತಗಳು:

ಮಂಗಳೂರು ವಿಶ್ವವಿದ್ಯಾನಿಲಯದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ತುಳು ಪೀಠ ಹಾಗೂ ತುಳು ಸ್ನಾತಕೋತ್ತರ ಅಧ್ಯಯನ ವಿಭಾಗ ವಿ. ವಿ. ಸಂಧ್ಯಾ ಕಾಲೇಜು ಸಹಯೋಗದಲ್ಲಿ 2020ರ ಫೆಬ್ರವರಿ 04ರಂದು ವಿಶ್ವವಿದ್ಯಾನಿಲಯ ಸಂಧ್ಯಾ ಕಾಲೇಜು ಮಂಗಳೂರು ಇಲ್ಲಿ "ತುಳುನಾಡಿನ ಜನಪದ ಕುಣಿತಗಳು" ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಎಸ್‌ವಿಪಿ ಕನ್ನಡ ಅಧ್ಯಯನ ಸಂಸ್ಥೆ ಮಂಗಳೂರು ವಿವಿಯ ಅಧ್ಯಕ್ಷರು ಪ್ರೊ. ಕೆ. ಅಭಯ್ ಕುಮಾರ್ ತುಳುನಾಡಿನ ಜನಪದ ಕುಣಿತಗಳು ಎಂಬ ವಿಷಯದ ಕುರಿತಾಗಿ ವಿಶೇಷ ಉಪನ್ಯಾಸ ನೀಡಿದರು. ವೇದಿಕೆಯಲ್ಲಿ ವಿವಿ ಸಂಧ್ಯಾ ಕಾಲೇಜು ಪ್ರಾಂಶುಪಾಲ ಡಾ. ರಾಮಕೃಷ್ಣ ಬಿ. ಎಂ., ತುಳು ಸ್ನಾತಕೋತ್ತರ ಅಧ್ಯಯನ ವಿಭಾಗದ ಸಂಯೋಜಕ ಡಾ. ಮಾಧವ ಎಂ. ಉಪಸ್ಥಿತರಿದ್ದರು.

4. ತುಳು ಸಂಸ್ಕೃತಿ ಮತ್ತು ಇತಿಹಾಸ:

ಮಂಗಳೂರು ವಿಶ್ವವಿದ್ಯಾನಿಲಯದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ತುಳು ಪೀಠ ಹಾಗೂ ತುಳು ಸ್ನಾತಕೋತ್ತರ ಅಧ್ಯಯನ ವಿಭಾಗ ವಿ. ವಿ. ಸಂಧ್ಯಾ ಕಾಲೇಜು ಸಹಯೋಗದಲ್ಲಿ 2020ರ ಫೆಬ್ರವರಿ 14ರಂದು ವಿಶ್ವವಿದ್ಯಾನಿಲಯ ಸಂಧ್ಯಾ ಕಾಲೇಜು ಮಂಗಳೂರು ಇಲ್ಲಿ "ತುಳು ಸಂಸ್ಕೃತಿ ಮತ್ತು ಇತಿಹಾಸ" ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ತುಳು ಜಾನಪದ ವಿದ್ವಾಂಸರು, ಕನ್ನಡ ವಿಶ್ವವಿದ್ಯಾನಿಲಯ ಹಂಪಿ ಮತ್ತು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿಗಳಾದ ಪ್ರೊ. ಬಿ. ಎ. ವಿವೇಕ್ ರೈ ಇವರು ತುಳು ಸಂಸ್ಕೃತಿ ಮತ್ತು ಇತಿಹಾಸ ಎಂಬ ವಿಷಯದ ಕುರಿತಾಗಿ ವಿಶೇಷ ಉಪನ್ಯಾಸ ನೀಡಿದರು. ವೇದಿಕೆಯಲ್ಲಿ ವಿವಿ ಸಂಧ್ಯಾ ಕಾಲೇಜು ಪ್ರಾಂಶುಪಾಲ ಡಾ. ರಾಮಕೃಷ್ಣ ಬಿ. ಎಂ., ತುಳು ಸ್ನಾತಕೋತ್ತರ ಅಧ್ಯಯನ ವಿಭಾಗದ ಸಂಯೋಜಕ ಡಾ. ಮಾಧವ ಎಂ. ಉಪಸ್ಥಿತರಿದ್ದರು.

5. ತುಳು ಪತ್ರಿಕೋದ್ಯಮದ ಬುಲೆಟ್ಟಿಲ್:

ಮಂಗಳೂರು ವಿಶ್ವವಿದ್ಯಾನಿಲಯದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ತುಳು ಪೀಠ ಹಾಗೂ ತುಳು ಸ್ನಾತಕೋತ್ತರ ಅಧ್ಯಯನ ವಿಭಾಗ ವಿ.ವಿ.ಸಂಧ್ಯಾ ಕಾಲೇಜು ಸಹಯೋಗದಲ್ಲಿ 2020ರ ಫೆಬ್ರವರಿ 18ರಂದು ವಿಶ್ವವಿದ್ಯಾನಿಲಯ ಸಂಧ್ಯಾ ಕಾಲೇಜು ಮಂಗಳೂರು ಇಲ್ಲಿ "ತುಳು ಪತ್ರಿಕೋದ್ಯಮದ ಬುಲೆಟ್ಟಿಲ್ " ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ ಕುವೆಂಪು ವಿಶ್ವವಿದ್ಯಾನಿಲಯ ಶಿವಮೊಗ್ಗ ಇಲ್ಲಿನ ಸಹ ಪ್ರಾಧ್ಯಾಪಕರು ಡಾ.ಸತೀಶ್ ಕುಮಾರ್ ಅಂಡಿಂಜೆ ಇವರು ತುಳು ಪತ್ರಿಕೋದ್ಯಮದ ಬುಲೆಟ್ಟಿಲ್ ಕುರಿತಾಗಿ ವಿಶೇಷ ಉಪನ್ಯಾಸ ನೀಡಿದರು. ವೇದಿಕೆಯಲ್ಲಿ ವಿವಿ ಸಂಧ್ಯಾ ಕಾಲೇಜು ಪ್ರಾಂಶುಪಾಲ ಡಾ.ರಾಮಕೃಷ್ಣ ಬಿ.ಎಂ, ತುಳುಸ್ನಾತಕೋತ್ತರ ಅಧ್ಯಯನ ವಿಭಾಗದ ಸಂಯೋಜಕ ಡಾ.ಮಾಧವ ಎಂ, ಉಪನ್ಯಾಸಕ ನವೀನ್ ಮಂಡನಗದ್ದೆ ಉಪಸ್ಥಿತರಿದ್ದರು.

6. ತುಳು ಜ್ಞಾನ–ತಂತ್ರಜ್ಞಾನ:

ಮಂಗಳೂರು ವಿಶ್ವವಿದ್ಯಾನಿಲಯದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ತುಳು ಪೀಠ ಹಾಗೂ ತುಳು ಸ್ನಾತಕೋತ್ತರ ಅಧ್ಯಯನ ವಿಭಾಗ ವಿ. ವಿ. ಸಂಧ್ಯಾ ಕಾಲೇಜು ಸಹಯೋಗದಲ್ಲಿ 2020ರ ಫೆಬ್ರವರಿ 25ರಂದು ವಿಶ್ವವಿದ್ಯಾನಿಲಯ ಸಂಧ್ಯಾ ಕಾಲೇಜು ಮಂಗಳೂರು ಇಲ್ಲಿ "ತುಳು ಜ್ಞಾನ–ತಂತ್ರಜ್ಞಾನ" ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಸಂತ ಅಲೋಶಿಯಸ್ ಕಾಲೇಜಿನ ಕನ್ನಡ ಸಹಾಯಕ ಪ್ರಾಧ್ಯಾಪಕರು ಡಾ. ವಿಶ್ವನಾಥ ಬದಿಕ್ಕಾನ ಇವರು ತುಳು ಜ್ಞಾನ–ತಂತ್ರಜ್ಞಾನ ಕುರಿತಾಗಿ ವಿಶೇಷ ಉಪನ್ಯಾಸ ನೀಡಿದರು. ವೇದಿಕೆಯಲ್ಲಿ ವಿವಿ ಸಂಧ್ಯಾ ಕಾಲೇಜು ಪ್ರಾಂಶುಪಾಲ ಡಾ. ರಾಮಕೃಷ್ಣ ಬಿ. ಎಂ., ತುಳು ಸ್ನಾತಕೋತ್ತರ ಅಧ್ಯಯನ ವಿಭಾಗದ ಸಂಯೋಜಕ ಡಾ. ಮಾಧವ ಎಂ., ಉಪನ್ಯಾಸಕ ನವೀನ್ ಮಂಡನಗದ್ದೆ ಉಪಸ್ಥಿತರಿದ್ದರು.

ಮಹಿಳಾ ಅಧ್ಯಯನ ಕೇಂದ್ರ:

ಮಹಿಳಾ ಅಧ್ಯಯನ ಕೇಂದ್ರವು ಏಪ್ರಿಲ್ 2019–ಮಾರ್ಚ್ 2020ರ ಅವಧಿಯಲ್ಲಿ ವಿವಿಧ ಚಟುವಟಿಕೆಗಳನ್ನು ಆಯೋಜಿಸಿತು. ಈ ಶೈಕ್ಷಣಿಕ ವರ್ಷದಲ್ಲಿ ಕೋವಿಡ್‌ನ ಕಾರಣದಿಂದ ಕೇಂದ್ರವು ಆಯೋಜಿಸಿದ ಹಲವಾರು ಚಟುವಟಿಕೆಗಳನ್ನು ಪೂರ್ಣಗೊಳಿಸಲು ಸಾಧ್ಯವಾಗಲಿಲ್ಲ. ಮಾರ್ಚ್ 2020ರಲ್ಲಿ ನಡೆಯಬೇಕಿದ್ದ ಉಡುಪಿ ಮತ್ತು ಮಡಿಕೇರಿಯ 2 ಜಿಲ್ಲೆಗಳ ಕಾಲೇಜಿನ ಮಹಿಳಾ ಘಟಕಗಳ ಸಂಯೋಜಕರಿಗೆ ಲೈಂಗಿಕ ಕಿರುಕುಳ ತಡೆಗಟ್ಟುವ ಕಾರ್ಯಾಗಾರವನ್ನು ನಡೆಸಲು ಸಾಧ್ಯವಾಗಲಿಲ್ಲ. ಅದೇ ರೀತಿ ಮಹಿಳಾ ದಿನಾಚರಣೆ, ಉಪನ್ಯಾಸಗಳು ಮತ್ತು ಹಲವಾರು ಕಾರ್ಯಗಾರಗಳ ಯೋಜನೆಗಳು ಕೈಗೂಡಲಿಲ್ಲ. ಮುಂದಿನ ಶೈಕ್ಷಣಿಕ ವರ್ಷದಲ್ಲಿ ಬದಲಾದ ವಿಧಾನಗಳೊಂದಿಗೆ ಅವೆಲ್ಲವನ್ನು ಮಾಡಲು ಆಶಿಸುತ್ತೇವೆ.

ಮೇಲಿನ ಸವಾಲುಗಳ ನಡುವೆಯೂ, ಕೇಂದ್ರದ ಚಟುವಟಿಕೆಗಳ ವಿವರಗಳನ್ನು ಕೆಳಗೆ ನೀಡಲಾಗಿದೆ.

ಕಾರ್ಯಾಗಾರಗಳು

ಎ. ಲಿಂಗ ಚಾಂಪಿಯನ್ಸ್ ತರಬೇತಿ ಕೈಪಿಡಿ ಕುರಿತು ಕಾರ್ಯಾಗಾರ:

ಕಾಲೇಜುಗಳು ಮತ್ತು ವಿಶ್ವವಿದ್ಯಾನಿಲಯಗಳಲ್ಲಿ ಲಿಂಗ ಚಾಂಪಿಯನ್‌ಗಳನ್ನು ನೇಮಿಸಲು ಯುಜಿಸಿ ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಹಲವಾರು ಜಾಪನೆಗಳನ್ನು ಕಳುಹಿಸಿತ್ತು. ತಮ್ಮ ಕರ್ತವ್ಯಗಳನ್ನು ನಿರ್ವಹಿಸಲು, ಲಿಂಗ ಚಾಂಪಿಯನ್‌ಗಳು ತಮ್ಮ ಜವಾಬ್ದಾರಿಗಳ ಸ್ವರೂಪವನ್ನು ಅರ್ಥಮಾಡಿಕೊಳ್ಳಬೇಕು. ಲಿಂಗ ಚಾಂಪಿಯನ್‌ನ ತರಬೇತುದಾರರಿಗಾಗಿ ಕೈಪಿಡಿ ಬರೆಯುವ ಪ್ರಕ್ರಿಯೆಯನ್ನು ಕೇಂದ್ರವು ಈಗಾಗಲೇ ಪ್ರಾರಂಭಿಸಿತ್ತು. ಆದ್ದರಿಂದ ಮಾಡಿದ ಪ್ರಗತಿಯನ್ನು ಚರ್ಚಿಸಲು ಮತ್ತು ಕೈಪಿಡಿಯ ಅಗತ್ಯವನ್ನು ಅಂತಿಮಗೊಳಿಸುವ ಕಾರ್ಯಾಗಾರವನ್ನು ನಡೆಸಬೇಕು ಎಂದು ಭಾವಿಸಲಾಯಿತು.

ಕಾರ್ಯಾಗಾರಗಳಲ್ಲಿ ಮೊದಲನೆಯ ಕಾರ್ಯಾಗಾರವನ್ನು ಆಗಸ್ಟ್ 8, 2019ರಂದು ಪ್ರಾರಂಭಿಸಲಾಯಿತು. ಕಾರ್ಯಾಗಾರದಲ್ಲಿ ವಿವಿಧ ಎನ್‌ಜಿಒಗಳ ಸದಸ್ಯರು ಮತ್ತು ಅವರ ಕ್ಷೇತ್ರ ಕಾರ್ಯಕರ್ತರು ಭಾಗವಹಿಸಿದ್ದರು. ಇದರಲ್ಲಿ 9 ಘಟಕಗಳಿಗೆ ಕೈಪಿಡಿ ಬರಹಗಾರರೂ ಸೇರಿದ್ದಾರೆ. ಮಂಗಳೂರು

ವಿಶ್ವವಿದ್ಯಾನಿಲಯದ ಮಹಿಳಾ ಅಧ್ಯಯನ ಕೇಂದ್ರದ ನಿರ್ದೇಶಕರಾದ ಡಾ. ಅನಿತಾ ರವಿಶಂಕರ್‌ರವರು ಹಾಜರಿದ್ದವರನ್ನು ಸ್ವಾಗತಿಸಿದರು. ಮತ್ತು ಕಾರ್ಯಾಗಾರದ ಉದ್ದೇಶಗಳನ್ನು ತಿಳಿಸಿದರು. ಹೆಚ್ಚಿನ ಚರ್ಚೆಗಳ ನಂತರ, ಕಾರ್ಯಗಾರದ ವಿಭಿನ್ನ ಮಾಡ್ಯೂಲ್‌ಗಳು, ಮಾಡ್ಯೂಲ್‌ಗಳಲ್ಲಿನ ವಿಷಯ, ಮಾಡ್ಯೂಲ್ ಹೊರಬರುವ ಭಾಷೆಗಳನ್ನು ಉಲ್ಲೇಖಿಸಿ ಒಮ್ಮತವನ್ನು ತರಲಾಯಿತು.



ಕೈಪಿಡಿ ಬರಹಗಾರರು ಎಡದಿಂದ ಬಲಕ್ಕೆ– ಡಾ. ಅನಿತಾ ರವಿಶಂಕರ್, ನಿರ್ದೇಶಕರು, ಮಹಿಳಾ ಅಧ್ಯಯನ ಕೇಂದ್ರ, ಶ್ರೀಮತಿ ಮಂಜುಳಾ, ಶ್ರೀಮತಿ ಮರ್ಲಿನ್ ಮಾರ್ಟಿಸ್, ಮತ್ತು ಶ್ರೀಮತಿ ಶೋಭಾ ದೇವಿ.

ಮಂಗಳೂರು ವಿಶ್ವವಿದ್ಯಾನಿಲಯದ ಮಹಿಳಾ ಅಧ್ಯಯನ ಕೇಂದ್ರದ ನಿರ್ದೇಶಕರಾದ ಡಾ. ಅನಿತಾ ರವಿಶಂಕರ್, ಅವರು ಸ್ವಾಗತ ಮತ್ತು ಪರಿಚಯದೊಂದಿಗೆ ಕಾರ್ಯಾಗಾರ ಪ್ರಾರಂಭಿಸಿದರು. ಪ್ರಸುತ್ತ ಕಾರ್ಯಾಗಾರದ ಉದ್ದೇಶಗಳು ಇಲ್ಲಿಯವರೆಗೆ ಮಾಡಿದ ಕಾರ್ಯಗಳ ಅವಲೋಕನ ಮತ್ತು ಕೈಪಿಡಿಯು ಪೂರ್ಣಗೊಳ್ಳಲು ತೆಗೆದುಕೊಳ್ಳಬೇಕಾದ ನಿರ್ದೇಶನವನ್ನು ವಿವರಿಸಿದರು. ಪ್ರತಿ ಕಾಲೇಜಿನಲ್ಲಿ ಲಿಂಗ ಚಾಂಪಿಯನ್‌ಗಳನ್ನು ಹೊಂದುವ ಪ್ರಾಮುಖ್ಯತೆಯನ್ನು ಕಾಲೇಜುಗಳು ಮತ್ತು ವಿಶ್ವವಿದ್ಯಾನಿಲಯಗಳಲ್ಲಿ ಲಿಂಗ ಚಾಂಪಿಯನ್‌ಗಳನ್ನು ಹೊಂದಲು ಯುಜಿಸಿ ಕಳುಹಿಸಿದ ಹಲವಾರು ಜಾಪನೆಗಳಲ್ಲಿ ಕಂಡುಬರುತ್ತದೆ. ಆದ್ದರಿಂದ ತರಬೇತಿ ಕೈಪಿಡಿಯನ್ನು ಅಂತಿಮಗೊಳಿಸಲು ಪ್ರಸುತ್ತ ಕಾರ್ಯಾಗಾರವು ಮುಖ್ಯವಾಗಿತ್ತು. ಅವರು ಕೈಪಿಡಿಯ ಒರಟು ಕರಡು ಸಿದ್ದವಾಗಿದೆ ಎಂದು ಹೇಳಿದರು.

ಕಾರ್ಯಾಗಾರದಲ್ಲಿ ನಗರದ ವಿವಿಧ ಎನ್‌ಜಿಒಗಳ ಸದಸ್ಯರು ಭಾಗವಹಿಸಿದ್ದರು. ಅವರಲ್ಲಿ ಕೆಲವರು ಕೈಪಿಡಿ ಬರಹಗಾರರು. ಚರ್ಚೆಗಳು ಮತ್ತು ತಿದ್ದುಪಡಿಗಾಗಿ ವಿವಿಧ ಮಾಡ್ಯೂಲ್‌ಗಳನ್ನು ತೆಗೆದುಕೊಳ್ಳಲಾಗಿದೆ.

ಒಂದೆರಡು ತಿಂಗಳುಗಳಲ್ಲಿ ಹಲವಾರು ಚರ್ಚೆಗಳ ಮೂಲಕ ಈ ಮಾಡ್ಯುಲ್‌ಗಳು ಸಿದ್ದವಾಗಿದೆ. ಈ ಮಾಡ್ಯೂಲ್‌ಗಳನ್ನು ಮಾರ್ಚ್ ತಿಂಗಳಲ್ಲಿ ಮಾಡಬೇಕಾಗಿತ್ತು. ಕೋವಿಡ್ ಸಾಂಕ್ರಾಮಿಕದಿಂದ ಕಾಲೇಜುಗಳನ್ನು ಮುಚ್ಚಿದ್ದರಿಂದ ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಇದನ್ನು ಆನ್‌ಲೈನ್ ಮೋಡ್‌ಗೆ ತಕ್ಕಂತೆ ಮಾರ್ಪಾಡುಗಳೊಂದಿಗೆ ಮಾಡಬೇಕಾಗಿದೆ.

ಲಿಂಗ ಚಾಂಪಿಯನ್ಸ್ ಕೈಪಿಡಿಗಾಗಿ ಮಾಡ್ಯೂಲ್‌ಗಳನ್ನು ಅಂತಿಮಗೊಳಿಸಲಾಗಿದೆ:

ಕೆಳಗಿನ ಮಾಡ್ಯೂಲ್‌ಗಳ ಮೊದಲ ಕರಡನ್ನು ಚರ್ಚೆಗೆ ತೆಗೆದುಕೊಳ್ಳಲಾಗಿದೆ. ಈ ಕೆಳಗಿನವುಗಳನ್ನು ನಿರ್ಧರಿಸಿದ ಮಾಡ್ಯೂಲ್‌ಗಳು ಹೀಗಿವೆ:

ಮಾಡ್ಯೂಲ್–1– ಲಿಂಗ ಚಾಂಪಿಯನ್‌ಗಳ ಪರಿಚಯ, ಯಾರು ಲಿಂಗ ಚಾಂಪಿಯನ್‌ಗಳು, ಶಿಕ್ಷಣ ಸಂಸ್ಥೆಗಳಲ್ಲಿ ಅವರ ಅವಶ್ಯಕತೆ, ಪಾತ್ರಗಳ ಜವಾಬ್ದಾರಿ ಇತ್ಯಾದಿ, ಕಾರ್ಯಾಗಾರದ ಉದ್ದೇಶಗಳು ಮತ್ತು ಅದರ ಯಶಸ್ವಿ ಅನುಷ್ಠಾನದಲ್ಲಿ ತರಬೇತುದಾರನ ಪಾತ್ರ.

ಮಾಡ್ಯೂಲ್–2– ವಿವಿಧ ಲಿಂಗ ಪರಿಕಲ್ಪನೆಗಳ ಪರಿಚಯ–ಲೈಂಗಿಕತೆ, ಲಿಂಗ, ಲೈಂಗಿಕತೆ ಮತ್ತು ಲಿಂಗಗಳ ನಡುವಿನ ವ್ಯತ್ಯಾಸ, ಲಿಂಗ ತಾರತಮ್ಯದ ಪರಿಣಾಮ.

ಮಾಡ್ಯೂಲ್–3– ಪಿತೃಪ್ರಭುತ್ವ ಮತ್ತು ಅದರ ಪರಿಣಾಮಗಳು. ಕುಟುಂಬ, ಶಾಲೆ, ಕೆಲಸದ ಸ್ಥಳಗಳಲ್ಲಿ ವಿವಿಧ ಸಂದರ್ಭಗಳಲ್ಲಿ ಪಿತೃಪ್ರಭುತ್ವವನ್ನು ವಿಶ್ಲೇಷಿಸುವುದು.

ಮಾಡ್ಯೂಲ್–4– ಲಿಂಗ ಸಮಾನತೆ–ಲಿಂಗ ಸಮಾನ ಸಮಾಜವನ್ನು ದೃಶ್ಯೀಕರಿಸುವುದು.

ಮಾಡ್ಯೂಲ್–5 – ಮಹಿಳೆಯರ ಸಾಂವಿಧಾನಿಕ ಹಕ್ಕುಗಳು.

ಮಾಡ್ಯೂಲ್– 6– ವಿವಿಧ ಧರ್ಮಗಳ ಮದುವೆ ಕಾನೂನುಗಳು, ಅರ್ಹತೆ, ವಿಚ್ಛೇದನ, ನಿರ್ವಹಣೆ, ಕೌಟುಂಬಿಕ ಹಿಂಸೆ.

ಮಾಡ್ಯೂಲ್–7– ಲೈಂಗಿಕ ಅಪರಾಧಗಳು, ಸೈಬರ್ ಅಪರಾಧ, ಕ್ರಿಮಿನಲ್ ಕಾನೂನುಗಳು, POSH.

ಮಾಡ್ಯೂಲ್–8– ಶೈಕ್ಷಣಿಕ ಕ್ಯಾಂಪಸ್‌ಗಳನ್ನು ಲಿಂಗ ಸೂಕ್ಷ್ಮವಾಗಿಸುವಲ್ಲಿ ಲಿಂಗ ಚಾಂಪಿಯನ್‌ಗಳ ರೋಲ್.

ಮಾಡ್ಯೂಲ್–9– ಸಂಯೋಜಕರು ಮತ್ತು ಲಿಂಗ ಚಾಂಪಿಯನ್‌ಗಳ ಕಾರ್ಯ ಯೋಜನೆ ಅಂದರೆ ಗುರಿಗಳನ್ನು ನಿಗದಿಪಡಿಸುವುದು ಮತ್ತು ಸಾಧನೆಗಳ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ.

ಕೈಪಿಡಿಯನ್ನು ಇಂಗ್ಲಿಷ್ ಮತ್ತು ಕನ್ನಡದಲ್ಲಿ ದ್ವಿಭಾಷದಲ್ಲಿ ತರಲು ನಿರ್ಧರಿಸಲಾಯಿತು. TOT ಅವಧಿಯು ಮೂರು ದಿನಗಳವರೆಗೆ ಇರುತ್ತದೆ. ಎಲ್ಲಾ ಶಿಕ್ಷಕರು ಮತ್ತು ಮಹಿಳಾ ಕೋಶ ಸಂಯೋಜಕರ ಉತ್ತಮ ಭಾಗವಹಿಸುವಿಕೆಗೆ ಅನುಕೂಲವಾಗುವಂತೆ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಬರುವ ಮೂರು ಜಿಲ್ಲೆಗಳಲ್ಲಿ ಪ್ರತಿಯೊಂದರಲ್ಲೂ ತರಬೇತಿಯನ್ನು ನಡೆಸಬಹುದು ಎಂದು ನಿರ್ಧರಿಸಲಾಯಿತು.

ಕೈಪಿಡಿಯಲ್ಲಿ ಸಾಕಷ್ಟು ಶೈಕ್ಷಣಿಕ ಮತ್ತು ತಾಂತ್ರಿಕ ಪರಿಣತಿ ಇದ್ದುದರಿಂದ, ಪ್ರತಿ ಮಾಡ್ಯೂಲ್‌ನ ಲೇಖಕರಿಗೆ ರೂ. 2,000/– ಪಾವತಿಸಲಾಗುವುದು. ಕೈಪಿಡಿ ಇಂಗ್ಲಿಷ್ ಮತ್ತು ಕನ್ನಡ ಎರಡರಲ್ಲೂ ಇರುವುದರಿಂದ ರೂ. 1,500/– ಅನುವಾದಕರಿಗೆ ಪಾವತಿಸಲಾಗುವುದು.



ಲಿಂಗ ಚಾಂಪಿಯನ್‌ನ ಕೈಪಿಡಿಯ ಕುರಿತು ನಡೆಯುತ್ತಿರುವ ಚರ್ಚೆ.

ಬಿ. ಲಿಂಗ ಮತ್ತು ಕಾನೂನು ಕಾರ್ಯಾಗಾರ:

ಮಹಿಳಾ ಅಧ್ಯಯನ ಕೇಂದ್ರವು ಮಂಗಳೂರು ವಿಶ್ವವಿದ್ಯಾನಿಲಯದ ಅಂಗಸಂಸ್ಥೆಯಾದ ಮಂಗಳೂರಿನ ಬೆಸೆಂಟ್ ಸಂಧ್ಯಾ ಕಾಲೇಜಿನ ವಿದ್ಯಾರ್ಥಿಗಳಿಗೆ ದಿನಾಂಕ 30.09.2020ರಂದು ಲಿಂಗ ಮತ್ತು ಕಾನೂನು ಕುರಿತು ಕಾರ್ಯಾಗಾರವನ್ನು ಆಯೋಜಿಸಿತ್ತು. ಕಾರ್ಯಾಗಾರದಲ್ಲಿ ಒಟ್ಟು 65 ವಿದ್ಯಾರ್ಥಿಗಳು, ಬಾಲಕ ಮತ್ತು ಬಾಲಕಿಯರು ಮತ್ತು ದುಡಿಯುವ ಪುರುಷರು ಮತ್ತು ಮಹಿಳೆಯರು ಅತ್ಯಂತ ಸಕ್ರಿಯವಾಗಿ ಭಾಗವಹಿಸಿದರು. ಕಾಲೇಜಿನ ಸಿಬ್ಬಂದಿಗಳೂ ಉತ್ತಮ ರೀತಿಯಲ್ಲಿ ಪಾಲ್ಗೊಂಡಿದ್ದರು. ಕಾರ್ಯಾಗಾರವು ಸ್ವಾಗತದೊಂದಿಗೆ ಪ್ರಾರಂಭವಾಯಿತು. ಕೇಂದ್ರದ ನಿರ್ದೇಶಕರಾದ ಡಾ. ಅನಿತಾ ರವಿಶಂಕರ್ ಅವರು ಕಾರ್ಯಾಗಾರದ ಉದ್ದೇಶಗಳನ್ನು ವಿವರಿಸಿದರು. ಸಂಪನ್ಮೂಲ ವ್ಯಕ್ತಿಗಳು ನಮ್ಮ ಸಂವಿಧಾನದಲ್ಲಿ ಲಿಂಗ ಸಮಾನತೆಯನ್ನು ಉತ್ತೇಜಿಸುವ ವಿವಿಧ ಕಾನೂನುಗಳಿಗೆ ಒತ್ತು ನೀಡಿದರು. ಶೈಕ್ಷಣಿಕ ಸಂಸ್ಥೆಗಳಿಗೆ ನಿರ್ದಿಷ್ಟ ಉಲ್ಲೇಖವನ್ನು ಹೊಂದಿರುವ ವಿಶಾಕಾ ಕಾಯ್ದೆ, ಕೌಟುಂಬಿಕ ಹಿಂಸಾಚಾರ ಕಾಯ್ದೆ 2005ರ ಕಾನೂನು ನಿಬಂಧನೆಗಳು ಮತ್ತು ಕುಟುಂಬಗಳಲ್ಲಿನ ಹಿಂಸಾಚಾರದ ವಿರುದ್ಧ ಮಹಿಳೆಯರನ್ನು ರಕ್ಷಿಸುವಲ್ಲಿ ಅದರ ಪಾತ್ರವನ್ನು ಸಹ ನಿರ್ವಹಿಸಲಾಗಿದೆ. ಭಾಗವಹಿಸುವವರನ್ನು ಗುಂಪುಗಳಾಗಿ ಇರಿಸಲಾಯಿತು ಮತ್ತು ಗುಂಪು ಚರ್ಚೆಗಳ ನಂತರ ಅವರು ತಮ್ಮ ಅಂತಿಮ ಪ್ರಸ್ತುತಿಗಳನ್ನು ಮಾಡಿದರು.



ಲಿಂಗ ಮತ್ತು ಕಾನೂನು ಕುರಿತ ಕಾರ್ಯಾಗಾರದ ಉದ್ಘಾಟನೆಯಲ್ಲಿ ಕೇಂದ್ರದ ನಿರ್ದೇಶಕರಾದ ಡಾ. ಅನಿತಾ ರವಿಶಂಕರ್ ಮತ್ತು ಸಂಪನ್ಮೂಲ ವ್ಯಕ್ತಿಗಳನ್ನು ಕಾಣಬಹುದು.



ಕಾರ್ಯಾಗಾರದಲ್ಲಿ ಭಾಗವಹಿಸಿದ ಪ್ರೇಕ್ಷಕರು



ಕಾರ್ಯಾಗಾರದಲ್ಲಿ ಪ್ರಸ್ತುತಿ ನೀಡುತ್ತಿರುವ ಕೇಂದ್ರದ ನಿರ್ದೇಶಕರಾದ ಡಾ. ಅನಿತಾ ರವಿಶಂಕರ್

ಸಿ. ಸ್ವರಕ್ಷಣೆ ಕಾರ್ಯಾಗಾರದ ಮೂಲಕ ಹುಡುಗಿಯರನ್ನು ಸಶಕ್ತಗೊಳಿಸುವುದು:

ಮಹಿಳಾ ಅಧ್ಯಯನ ಕೇಂದ್ರವು ದಿನಾಂಕ 24.01.2020ರಂದು ಸರಕಾರಿ ಪ್ರೌಡಶಾಲೆ ಕೊಣಾಜೆ ಪದವು ಇಲ್ಲಿನ ಗ್ರಾಮೀಣ ವಿದ್ಯಾರ್ಥಿಗಳಿಗೆ ಸ್ವರಕ್ಷಣೆಯ ಮೂಲಕ ಬಾಲಕಿಯರನ್ನು ಸಬಲೀಕರಣಗೊಳಿಸುವ ಕಾರ್ಯಗಾರವನ್ನು ಆಯೋಜಿಸಿತ್ತು. ಕಾರ್ಯಾಗಾರದಲ್ಲಿ ಒಟ್ಟು 79 ವಿದ್ಯಾರ್ಥಿಗಳು, ಬಾಲಕ, ಬಾಲಕಿಯರು ಮತ್ತು ದುಡಿಯುವ ಪುರುಷರು ಮತ್ತು ಮಹಿಳೆಯರು ಅತ್ಯಂತ ಸಕ್ರೀಯವಾಗಿ ಭಾಗವಹಿಸಿದರು. ಕಾಲೇಜಿನ ಸಿಬ್ಬಂದಿಗಳ ಉತ್ತಮ ಪಾಲ್ಗೊಳ್ಳುವಿಕೆ ಇತ್ತು. ಕಾರ್ಯಾಗಾರವು ಸ್ವಾಗತದೊಂದಿಗೆ ಪ್ರಾರಂಭವಾಯಿತು. ಕೇಂದ್ರದ ನಿರ್ದೇಶಕರಾದ ಡಾ. ಅನಿತಾ ರವಿಶಂಕರ್ ಅವರು ಕಾರ್ಯಾಗಾರದ ಉದ್ದೇಶಗಳನ್ನು ವಿವರಿಸಿದರು. ಹೆಣ್ಣುಮಕ್ಕಳಿಗೆ ವಿಶೇಷವಾಗಿ ಸ್ವರಕ್ಷಣೆಗಾಗಿ ಕೌಶಲ್ಯಗಳನ್ನು ಕಲಿಯುವುದು ಬಹಳ ಮುಖ್ಯವಾದ ಕಾರಣ ಈ ಕಾರ್ಯಕ್ರಮಕ್ಕೆ ಸ್ವರಕ್ಷಾ ಎಂದು ಹೆಸರಿಡಲಾಗಿದೆ ಎಂದು ಅವರು ಹೇಳಿದ್ದಾರೆ. ಹುಡುಗಿಯರು ತಮ್ಮನ್ನು ಹೇಗೆ ರಕ್ಷಿಸಿಕೊಳ್ಳಬೇಕೆಂದು ತಿಳಿದ ನಂತರ ಅವರು ಮಾನಸಿಕವಾಗಿ ಅಧಿಕಾರ ಹೊಂದಿದ್ದಾರೆಂದು ಭಾವಿಸಬಹುದು. ಸಂಪನ್ಮೂಲ ವ್ಯಕ್ತಿ ಶ್ರೀ ಕಾರ್ತಿಕ್ ಕಟೀಲ್, ಮತ್ತು ಅವರ ತಾಯಿ ಶ್ರೀಮತಿ ಶೋಭಲತಾ ಹಾಗೂ ಸ್ಥಳೀಯ ರೊಟ್ರಾಕ್ಟ್ ಕ್ಲಬ್ ಆಫ್ ದೇರಳಕಟ್ಟೆಯಿಂದ ಸಂಪನ್ಮೂಲ ವ್ಯಕ್ತಿಗಳು ಬಂದಿದ್ದರು. ಈ ಸಂದರ್ಭದಲ್ಲಿ ಮಾತಾನಾಡಿದ ರೊಟರ್ಯಾಕ್ಟ್ ಕ್ಲಬ್ ಅಧ್ಯಕ್ಷ ತಪಸ್ಯ ಅವರು, ಯುವಜನರನ್ನು ಸಬಲೀಕರಣಗೊಳಿಸುವುದು ಅವರ ಚಟುವಟಿಕೆಗಳ ಭಾಗವಾಗಿದೆ. ಮತ್ತು ಗ್ರಾಮೀಣ ಪ್ರದೇಶದ ಯುವಕರಿಗೆ ಈ ಚಟುವಟಿಕೆಗಳ ಭಾಗವಾಗಲು ಇದು ಅಪಾರ ಸಂತೋಷವನ್ನು ನೀಡಿದೆ ಎಂದು ಹೇಳಿದರು.



ಶ್ರೀ ಕಾರ್ತಿಕ್ ಕಟೀಲ್ ಮತ್ತು ಶ್ರೀಮತಿ ಶೋಭಲತಾ ವಿದ್ಯಾರ್ಥಿಗಳೊಂದಿಗೆ ಸಂವಹನ ನಡೆಸಿದರು. ರೊಟರ್ಯಾಕ್ಟ್ ಕ್ಲಬ್ ಆಫ್ ದೇರಳಕಟ್ಟೆಯ ಅಧ್ಯಕ್ಷರಾದ ತಪಸ್ಯಾ ಸಹ ಕಾಣಿಸಿಕೊಂಡಿದ್ದಾರೆ.



ಶ್ರೀ ಕಾರ್ತಿಕ್ ಕಟೀಲ್ ಮತ್ತು ಶ್ರೀಮತಿ ಶೋಭಲತಾ ವಿದ್ಯಾರ್ಥಿಗಳೊಂದಿಗೆ ಸಂವಹನ ನಡೆಸಿದರು.

ಡಿ. ಕುಸಿಯುತ್ತಿರುವ ಮಕ್ಕಳ ಲಿಂಗ ಅನುಪಾತ ಕುರಿತು ಸಮಾಲೋಚನಾ ಸಭೆ ಮತ್ತು ಕಾರ್ಯಾಗಾರ:

ಬಾಲಕಿಯರ ಅನುಪಾತ ಕುಸಿಯುವುದರಿಂದ ದಕ್ಷಿಣ ಕನ್ನಡ ಜಿಲ್ಲೆಯು ತೊಂದರೆ ಅನುಭವಿಸಿದೆ. 2011ರ ಜನಗಣತಿಯ ಪ್ರಕಾರ ದಕ್ಷಿಣ ಕನ್ನಡದಲ್ಲಿ ಮಕ್ಕಳ ಲಿಂಗ ಅನುಪಾತ 947 ಆಗಿದ್ದರೆ 2001ರಲ್ಲಿ ಅದು 952 ಆಗಿತ್ತು. 2011ರ ಜನಗಣತಿಯ ಪ್ರಕಾರ ಕರ್ನಾಟಕದಲ್ಲಿ ಮಕ್ಕಳ ಲಿಂಗ ಅನುಪಾತ 948 ಆಗಿತ್ತು. ಇದರರ್ಥ ದಕ್ಷಿಣ ಕನ್ನಡದಲ್ಲಿ ಮಕ್ಕಳ ಲಿಂಗ ಅನುಪಾತವು ಕರ್ನಾಟಕದ ಬೇರೆ ಜಿಲ್ಲೆಗಳಿಗಿಂತ ಕಡಿಮೆಯಿತ್ತು. ಆದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬರುವ ಮಂಗಳೂರು ವಿಶ್ವವಿದ್ಯಾಲಯದಲ್ಲಿ ಯಾವಾಗಲೂ ಹೆಚ್ಚಿನ ಮಾನವ ಅಭಿವೃದ್ಧಿ ಸೂಚ್ಯಂಕವನ್ನು ಹೊಂದಿತ್ತು. ಹೀಗಾಗಿ ಮಕ್ಕಳ ಲಿಂಗಾನುಪಾತವು ನಮಗೆಲ್ಲರಿಗೂ ಆತಂಕಕ್ಕೆ ಕಾರಣವಾಗಿದೆ. ಏಕೆಂದರೆ ಇದು ಮಹಿಳೆಯರ ಸ್ಥಿತಿಯ ಮೇಲೆ ಸಾಕಷ್ಟು ಪರಿಣಾಮ ಬೀರುತ್ತದೆ. ಮಹಿಳಾ ಅಧ್ಯಯನ ಕೇಂದ್ರವು ಸಂಬಂಧಪಟ್ಟ ಹಳ್ಳಿಗಳಲ್ಲಿ ಸಮಾಲೋಚನಾ ಸಭೆಗಳ ಸರಣಿಯನ್ನು ಕೈಗೊಳ್ಳಲು ಯೋಜಿಸಿತ್ತು ಮತ್ತು ಇದಕ್ಕೆ ಕಾರಣಗಳನ್ನು ತಜ್ಞರಿಂದ ಕಂಡುಹಿಡಿಯಲು ಮತ್ತು ಮಕ್ಕಳ ಲಿಂಗ ಅನುಪಾತವನ್ನು ಹೆಚ್ಚಿಸಲು ಜಾಗೃತಿ ಕಾರ್ಯಕ್ರಮಗಳನ್ನು ಸಹ ಹೊಂದಿದೆ. ಇದಕ್ಕಾಗಿ ಜಿಲ್ಲಾಡಳಿತದೊಂದಿಗೆ ವಿಶೇಷವಾಗಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯೊಂದಿಗೆ ನಿಕಟವಾಗಿ ಕೆಲಸ ಮಾಡಲು ಉದ್ದೇಶಿಸಲಾಗಿದೆ. ಮಹಿಳಾ ಮತ್ತು ಮಕ್ಕಳ ಇಲಾಖೆ, ಜಿಲ್ಲಾ ಪಂಚಾಯತ್ ಸಿಬ್ಬಂದಿ, ಆರೋಗ್ಯ ಕಾರ್ಯಕರ್ತರು, ಪೋಲಿಸ್ ಸಿಬ್ಬಂದಿ, ಸ್ಕ್ಯಾನಿಂಗ್ ಕೇಂದ್ರಗಳ ಮಾಲಿಕರು, ಎನ್‌ಜಿಒ ಸದಸ್ಯರು ಮತ್ತು ಕಾರ್ಯನಿರತ ಪತ್ರಕರ್ತರೊಂದಿಗೆ ಹಲವಾರು ಸಮಾಲೋಚನಾ ಸಭೆಗಳು ನಡೆದವು. ಮಕ್ಕಳ ಲಿಂಗ ಅನುಪಾತವನ್ನು ಹೆಚ್ಚಿಸುವುದರ ಜೊತೆಗೆ ಕಾರಣಗಳನ್ನು ಕಂಡುಹಿಡಿಯಲು ಒಟ್ಟಾಗಿ ಕೆಲಸ ಮಾಡುವ ಪ್ರಯತ್ನದಿಂದ ಮಾಡಲಾಗಿದೆ.

ಈ ಕಾರ್ಯಾಗಾರವು ಫೆಬ್ರವರಿ 5, 2020ರಂದು ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದ್ರೆ ತಾಲೂಕಿನ ನೆಲ್ಲಿಕಾರ್ ಗ್ರಾಮ ಪಂಚಾಯತ್‌ನಲ್ಲಿ ನಡೆಯಿತು. ಈ ಕಾರ್ಯಾಗಾರದಲ್ಲಿ ನೆಲ್ಲಿಕಾರ್ ಗ್ರಾಮ ಪಂಚಾಯತ್ ಸದಸ್ಯರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಿಬ್ಬಂದಿ ಜಿಲ್ಲಾ ಪಂಚಾಯತ್, ಆಶಾ ಕಾರ್ಯಕರ್ತೆಯರು, ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯರು ಮತ್ತು ಗ್ರಾಮಸ್ಥರು ಚರ್ಚೆಯಲ್ಲಿ ಭಾಗವಹಿಸಿದರು ಮತ್ತು ನಂತರ ಕಾರ್ಯಾಗಾರದಲ್ಲಿಯೂ ಭಾಗವಹಿಸಿದರು. ಒಟ್ಟು 70 ಜನರು ಬಹಳ ಗಂಭೀರವಾದ ಚರ್ಚೆಗಳಲ್ಲಿ ಪಾಲ್ಗೊಂಡಿದ್ದರು.

ಹಳ್ಳಿಯಲ್ಲಿ ಹೆಣ್ಣು ಶಿಶುಹತ್ಯೆ ಅಥವಾ ಭ್ರೂಣ ಹತ್ಯೆಯ ಯಾವುದೇ ಪ್ರಕರಣಗಳು ನಡೆದಿಲ್ಲ ಮತ್ತು ಎಲ್ಲರೂ ಹೆಣ್ಣು ಶಿಶುಗಳನ್ನು ಪ್ರೀತಿಸುತ್ತಿದ್ದರು ಮತ್ತು ಬಯಸಿದ್ದರು ಎಂಬುದು ಚರ್ಚೆಗಳು ಮತ್ತು ನಂತರದ ಕಾರ್ಯಾಗಾರದಿಂದ ಸ್ಪಷ್ಟವಾಯಿತು. ಹಳ್ಳಿಯಲ್ಲಿ ವಾಸಿಸುವ ಹೆಚ್ಚಿನ ಸಮುದಾಯಗಳು ಮಾತೃಭಾಷಾ ಕುಟುಂಬಗಳಿಗೆ ಸೇರಿದವರಾಗಿರುವುದರಿಂದ, ಹೆಣ್ಣು ಶಿಶುಗಳು ಕುಟುಂಬ ಮಾರ್ಗವನ್ನು ಮುಂದುವರಿಸಲು ಬಯಸಿದ್ದರು. ಅನೇಕ ಕುಟುಂಬಗಳು ಒಂದೇ ಮಗುವನ್ನು ಆರಿಸಿಕೊಳ್ಳುತ್ತಿದ್ದವು ಮತ್ತು ಮೊದಲ ಜನನ ಗಂಡು ಮತ್ತು ಹೆಣ್ಣು ಆಗಿದ್ದರೂ ಒಂದೇ ಮಗುವಿನೊಂದಿಗೆ ನಿಲ್ಲಿಸಿದ್ದರು ಎಂದು ಅವರು ಹೇಳಿದ್ದಾರೆ. ಇದೂ ಕೂಡ ಲಿಂಗ ಅನುಪಾತಕ್ಕೆ ಕಾರಣವಾಗಿದೆ.



ಕೇಂದ್ರದ ನಿರ್ದೇಶಕರಾದ ಡಾ. ಅನಿತಾ ರವಿಶಂಕರ್ ಅವರೊಂದಿಗೆ ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾ ಪಂಚಾಯತ್‌ನ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಉಪನಿರ್ದೇಶಕ ಶ್ರೀ ಉಸ್ಮಾನ್, ಸಂಪನ್ಮೂಲ ವ್ಯಕ್ತಿಗಳು ಮತ್ತು ಭಾಗವಹಿಸಿದವರು



ನೆಲ್ಲಿಕಾರ್‌ನಲ್ಲಿ ನಡೆದ ಕಾರ್ಯಗಾರದಲ್ಲಿ ಭಾಗವಹಿಸಿದ ಪ್ರೇಕ್ಷಕರು

ಇ. ಕೆಲಸದ ಸ್ಥಳಗಳಲ್ಲಿ ಲೈಂಗಿಕ ಕಿರುಕುಳ ತಡೆಗಟ್ಟುವ ಕಾರ್ಯಾಗಾರ (POSH):

ಮಹಿಳಾ ಅಧ್ಯಯನ ಕೇಂದ್ರವು 13.02.2020ರಂದು ಮಂಗಳೂರು ವಿಶ್ವವಿದ್ಯಾನಿಲಯದ ಕ್ಯಾಂಪಸ್‌ನಲ್ಲಿ ಕಾಲೇಜಿನ ಮಹಿಳಾ ಘಟಕದ ಸಂಯೋಜಕರಿಗೆ ಲೈಂಗಿಕ ಕಿರುಕುಳ ತಡೆಗಟ್ಟುವಿಕೆ (POSH): ಕಾರ್ಯಾಗಾರವನ್ನು ಆಯೋಜಿಸಿತ್ತು. ಮಹಿಳಾ ಘಟಕದ ಸಂಯೋಜಕರು, ವಿಶ್ವವಿದ್ಯಾಲಯ ಮತ್ತು ಕಾಲೇಜುಗಳ ಸ್ಥಳೀಯ ವಿಚಾರಣಾ ಸಮಿತಿಗಳ ಸದಸ್ಯರು, ಸಂಶೋಧನಾ ವಿದ್ವಾಂಸರು ಮತ್ತು ವಿದ್ಯಾರ್ಥಿಗಳು ಸೇರಿದಂತೆ 168 ಮಂದಿ ಭಾಗವಹಿಸಿದ್ದರು. ಕಾರ್ಯಗಾರವನ್ನು ನವದೆಹಲಿಯ ರಾಷ್ಟ್ರೀಯ ಮಹಿಳಾ ಅಯೋಗದ ಸದಸ್ಯರಾದ ಶ್ಯಾಮಲ ಕುಂದರ್ ಉದ್ಘಾಟಿಸಿದರು. ತನ್ನ ಉದ್ಘಾಟನಾ ಭಾಷಣದಲ್ಲಿ, ಕಾನೂನುಗಳು ಜಾರಿಯಲ್ಲಿದ್ದರೂ ಲೈಂಗಿಕ ಕಿರುಕುಳ ನಡೆಯುತ್ತಿರುವುದರಿಂದ ಈ ರೀತಿಯ ಕಾರ್ಯಾಗಾರಗಳನ್ನು ನಡೆಸುವುದು ಎಷ್ಟು ಮುಖ್ಯ ಎಂದು ಅವರು ಹೇಳಿದರು. ಇಂತಹ ಕಾರ್ಯಾಗಾರಗಳು ಪುರುಷರ ಮತ್ತು ಮಹಿಳೆಯರಿಗೆ ಇಂತಹ ಅಪರಾಧಗಳಲ್ಲಿ ಭಾಗಿಯಾಗುವುದರಿಂದ ಆಗುವ ಪರಿಣಾಮಗಳ ಬಗ್ಗೆ ಅರಿವು ಮೂಡಿಸಲು ಸಹಾಯವಾಗುತ್ತದೆ. ಈಗ ನಡೆಯುತ್ತಿರುವ ಗಂಭೀರ ಅಪರಾಧಗಳಲ್ಲಿ ಲೈಂಗಿಕ ಕಿರುಕುಳವೂ ಒಂದು ಎಂದು ಕೇಂದ್ರದ ನಿರ್ದೇಶಕರಾದ ಡಾ. ಅನಿತಾ ರವಿಶಂಕರ್ ತಮ್ಮ ಪರಿಕಲ್ಪನಾ ಭಾಷಣದಲ್ಲಿ ಹೇಳಿದರು. ಕಿರುಕುಳದ ಸ್ವರೂಪ ಮತ್ತು ವ್ಯಾಖ್ಯಾನದ ಬಗ್ಗೆ ಒಂದು ಅಸ್ಪಷ್ಟತೆಯಿದೆ. ಆದ್ದರಿಂದ ಅಂತಹ ಕಾರ್ಯಗಾರಗಳನ್ನು ಕಾನೂನು ತಜ್ಞರೊಂದಿಗೆ ನಡೆಸುವುದು ಅವಶ್ಯಕವಾಗಿದೆ. ಏಕೆಂದರೆ ಅದು ಅಂತಹ ಪರಿಕಲ್ಪನೆಗಳನ್ನು ಸ್ಪಷ್ಟಪಡಿಸುತ್ತದೆ. ಆದರೆ ಸ್ಥಳೀಯ ವಿಚಾರಣಾ ಸಮಿತಿಗಳನ್ನು ಸ್ಥಾಪಿಸುವಲ್ಲಿ ಸಂಸ್ಥೆಗಳಿಗೆ ಸಹಾಯ ಮಾಡುತ್ತದೆ. ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಪಿ. ಎಸ್. ಯಡಪಡಿತ್ತಾಯ ಅವರು ಇಂದಿನ ಜಗತ್ತಿನಲ್ಲಿ ಇಂತಹ ಕಾರ್ಯಗಾರವನ್ನು ಆಯೋಜಿಸಿದ್ದಕ್ಕಾಗಿ ಕೇಂದ್ರದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಉನ್ನತ ಶಿಕ್ಷಣದ ಹೆಚ್ಚಿನ ಕ್ಯಾಂಪಸ್‌ಗಳು ಹೆಚ್ಚು ಮಹಿಳೆಯರನ್ನು ಹೊಂದಿದೆ ಮತ್ತು ಆದ್ದರಿಂದ ಲೈಂಗಿಕ ಕಿರುಕುಳದ ಸಮಸ್ಯೆಗಳು ಬಹಳ ಮುಖ್ಯವಾಗಿದೆ ಎಂದು ಅವರು ಹೇಳಿದ್ದಾರೆ.

ಉದ್ಘಾಟನೆಯ ನಂತರದ ಅಧಿವೇಶನವು ಬಹಳ ತಿಳುವಳಿಕೆಯನ್ನು ನೀಡಿತು ಮತ್ತು ಜನರು ಹೊಂದಿದ್ದ ಅನೇಕ ಅನುಮಾನಗಳನ್ನು ಬಗೆಹರಿಸಲಾಯಿತು. ಭಾಗವಹಿಸಿದವರನ್ನು ಗುಂಪುಗಳಾಗಿ ಇರಿಸಲಾಯಿತು ಮತ್ತು ಅವರಿಗೆ ವಿಭಿನ್ನ ಕೇಸ್ ಸ್ಟಡಿಗಳನ್ನು ನೀಡಲಾಯಿತು. ಈ ಅಧಿವೇಶನಗಳನ್ನು ಶ್ರೀಮತಿ ಮರ್ಲಿನ್ ಮಾರ್ಟಿಸ್, ಶ್ರೀಮತಿ ಅರುಣಾ ಮತ್ತು ಶ್ರೀ ತುಕಾರಾಮ್ ನಿರ್ವಹಿಸಿದ್ದಾರೆ. ಕಾರ್ಯಾಗಾರದ ಕೊನೆಯಲ್ಲಿ ಭಾಗವಹಿಸಿದವರಿಗೆ ರೋಲ್ ಪ್ಲೇಯನ್ನು ಮಾಡಿಸಿದರು. ಕಾರ್ಯಾಗಾರದಲ್ಲಿ ಜನರು ಬಹಳ ಸಕ್ರೀಯವಾಗಿ ಭಾಗವಹಿಸಿದರು.



ಕಾರ್ಯಾಗಾರದ ಉದ್ಘಾಟನೆಯಲ್ಲಿ ಮಾತನಾಡುತ್ತಿರುವ ರಾಷ್ಟ್ರೀಯ ಮಹಿಳಾ ಆಯೋಗದ ಸದಸ್ಯರಾದ ಶ್ಯಾಮಲ ಕುಂದರ್. (ಎಡದಿಂದ ಬಲಕ್ಕೆ) ಡಾ. ಅನಿತಾ ರವಿಶಂಕರ್, ಪ್ರೊ. ಪಿ. ಎಸ್. ಯಡಪಡಿತ್ತಾಯ, ಶ್ರೀಮತಿ ಮರ್ಲಿನ್ ಮಾರ್ಟಿಸ್ ಮತ್ತು ಡಾ. ಪ್ರೀತಿ ಕೀರ್ತಿ ಡಿ'ಸೋಜ.



ಪರಿಕಲ್ಪನಾ ಟಿಪ್ಪಣಿ ನೀಡುತ್ತಿರುವ ಕೇಂದ್ರದ ನಿರ್ದೇಶಕರಾದ ಡಾ. ಅನಿತಾ ರವಿಶಂಕರ್



POSH ಕಾರ್ಯಾಗಾರವನ್ನು ಉದ್ಘಾಟನೆ ಮಾಡಿ ಅಧ್ಯಕ್ಷೀಯ ಭಾಷಣ ಮಾಡುತ್ತಿರುವ ಕುಲಪತಿಯಾದ ಪ್ರೊ. ಪಿ. ಎಸ್. ಯಡಪಡಿತ್ತಾಯ



POSH ಕಾರ್ಯಾಗಾರದಲ್ಲಿ ಭಾಗವಹಿಸಿದ ಪೇಕ್ಷಕರು

ಎಫ್. ಲಿಂಗ ಸಂವೇದನೆ ಕಾರ್ಯಾಗಾರ:

ಮಹಿಳಾ ಅಧ್ಯಯನ ಕೇಂದ್ರವು ದಿನಾಂಕ 11.03.2020ರಂದು ಮಹಿಳೆಯರಿಗಾಗಿ ಯುವತಿ ಮತ್ತು ಮಹಿಳಾ ಮಂಡಳಿ, ಹಳೆಯಂಗಡಿ ಇಲ್ಲಿ ಲಿಂಗ ಸಂವೇದನೆ ಕಾರ್ಯಾಗಾರವನ್ನು ಆಯೋಜಿಸಿತು. ಕಾರ್ಯಾಗಾರದಲ್ಲಿ ಪುರುಷರು ಮತ್ತು ಮಹಿಳೆಯರು ಒಟ್ಟು 75 ಜನರು ಅತ್ಯಂತ ಸಕ್ರಿಯವಾಗಿ ಭಾಗವಹಿಸಿದ್ದರು. ಪ್ರೇಕ್ಷಕರು ತಾಯಂದಿರು, ಹೆಂಡತಿಯರು, ದುಡಿಯುವ ಮಹಿಳೆಯರು ಮತ್ತು ಹುಡುಗಿಯರು ಈ ವೈವಿಧ್ಯಮಯ ಪ್ರೇಕ್ಷಕರನ್ನು ಗಮನದಲ್ಲಿಟ್ಟುಕೊಂಡು, ಮಹಿಳೆಯರ ಸಂಸ್ಕೃತಿಯ ಪ್ರಭಾವ, ಕೌಟುಂಬಿಕ ಹಿಂಸಾಚಾರ ಕಾಯ್ದೆಯಡಿ ಕಾನೂನು ನಿಬಂಧನೆಗಳು, ಸಮಾಜದಲ್ಲಿ ವಿಶೇಷವಾಗಿ ಕುಟುಂಬದಲ್ಲಿ ಹಿಂಸಾಚಾರದಿಂದ ಮಹಿಳೆಯರನ್ನು ರಕ್ಷಿಸುವುದು ಎಂಬುದನ್ನು ತಿಳಿಸಿಕೊಟ್ಟರು. ಕಾರ್ಯಾಗಾರದಲ್ಲಿ ಭಾಗವಹಿಸಿದ ಎಲ್ಲ ಜನರು ತಮ್ಮ ಕುಟುಂಬಗಳಲ್ಲಿ ಮತ್ತು ಅವರ ಸಮುದಾಯದ ಮಹಿಳೆಯರನ್ನು ರಕ್ಷಿಸುವ ಪ್ರತಿಜ್ಞೆ ಮಾಡಿದರು.



ಕೇಂದ್ರದ ನಿರ್ದೇಶಕರಾದ ಡಾ. ಅನಿತಾ ರವಿಶಂಕರ್ ಅವರು ಹಳೆಯಂಗಡಿಯಲ್ಲಿ ಕಾರ್ಯಾಗಾರದ ಮಹತ್ವದ ಬಗ್ಗೆ ಮಾತಾನಾಡುತ್ತಿರುವುದು.



ಹಳೆಯಂಗಡಿ ಕಾರ್ಯಾಗಾರದ ಒಂದು ನೋಟ

ಜಿ. ಲಿಂಗ ಸಂವೇದನೆ ಕಾರ್ಯಾಗಾರ:

ಮಹಿಳಾ ಅಧ್ಯಯನ ಕೇಂದ್ರವು ದಿನಾಂಕ 13.03.2020ರಂದು ಕುಕ್ಕೆ ಶ್ರೀ ಸುಬ್ರಹ್ಮಣ್ಯೇಶ್ವರ ಕಾಲೇಜು, ಸುಬ್ರಹ್ಮಣ್ಯ ಕಾಲೇಜಿನ ವಿದ್ಯಾರ್ಥಿಗಳಿಗಾಗಿ ಲಿಂಗ ಸಂವೇದನೆ ಕಾರ್ಯಾಗಾರವನ್ನು ಆಯೋಜಿಸಿತು. ಕಾರ್ಯಾಗಾರದಲ್ಲಿ ಒಟ್ಟು 73 ವಿದ್ಯಾರ್ಥಿಗಳು ಸಕ್ರೀಯವಾಗಿ ಭಾಗವಹಿಸಿದ್ದರು. ಕಾರ್ಯಾಗಾರದಲ್ಲಿ ಸಮಾಜದಲ್ಲಿ ಲಿಂಗ ಆಧಾರಿತ ಹಿಂಸಾಚಾರ, ಮಹಿಳೆಯರ ಜೀವನದ ಮೇಲೆ ಧಾರ್ಮಿಕ ಮತ್ತು ಸಾಂಸ್ಕೃತಿಕ ಆಚರಣೆಗಳ ಪ್ರಭಾವ ಮತ್ತು ಅವರ ಹಕ್ಕುಗಳ ಕೊಡುಗೆ ನೀಡುವ ಸಾಂಸ್ಕೃತಿಕ ಮತ್ತು ಅಭ್ಯಾಸಗಳ ವಿಷಯಗಳು ಸೇರಿವೆ. ಸಾಮಾಜೀಕರಣ ಅಭ್ಯಾಸಗಳು ಮತ್ತು ಅವರು ಲಿಂಗ ಗುರುತಿಸುವಿಕೆಯ ಮೇಲೆ ಬೀರಿದ ಪರಿಣಾಮವನ್ನು ಸಹ ನಿರ್ವಹಿಸಲಾಯಿತು. ಉತ್ತರಗಳನ್ನು ಹುಡುಕುವಲ್ಲಿ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲಾಯಿತು. ಅವರನ್ನು ಇಂತಹ ಕಾರ್ಯಕ್ರಮಗಳಿಗೆ ಒಳಪಡಿಸುವುದು ಇದೇ ಮೊದಲು ಎಂದು ಅವರು ವ್ಯಕ್ತಪಡಿಸಿದರು ಮತ್ತು ಭವಿಷ್ಯದಲ್ಲಿ ಇಂತಹ ಕಾರ್ಯಕ್ರಮಗಳನ್ನು ಮಾಡಬೇಕೆಂದು ಹೇಳಿದರು.



ಸುಬ್ರಹ್ಮಣ್ಯೇಶ್ವರ ಕಾಲೇಜಿನಲ್ಲಿ ನಡೆದ ಕಾರ್ಯಾಗಾರದ ಉದ್ಘಾಟನೆಯಲ್ಲಿ ಸಂಪನ್ಮೂಲ ವ್ಯಕ್ತಿಗಳೊಂದಿಗೆ ನಿರ್ದೇಶಕರು



ಸುಬ್ರಹ್ಮಣ್ಯ ಕಾರ್ಯಾಗಾರದ ಒಂದು ನೋಟ



ಕಾರ್ಯಗಾರದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳು

ವಿಶೇಷ ಉಪನ್ಯಾಸಗಳು :

ಎ. ವಿಜ್ಞಾನದಲ್ಲಿ ಮಹಿಳೆಯರು:

ಮಂಗಳೂರು ವಿಶ್ವವಿದ್ಯಾನಿಲಯದ ಮಹಿಳಾ ಅಧ್ಯಯನ ಕೇಂದ್ರವು ದಿನಾಂಕ ಜುಲೈ 5, 2019ರಲ್ಲಿ ವಿಶ್ವವಿದ್ಯಾನಿಲಯ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳಿಗೆ, ಸಂಶೋಧನಾ ವಿದ್ಯಾರ್ಥಿಗಳಿಗೆ ಮತ್ತು ಅಧ್ಯಾಪಕರಿಗೆ ವಿಜ್ಞಾನದಲ್ಲಿ ಮಹಿಳೆಯರು ಎಂಬ ವಿಷಯದ ಕುರಿತು ವಿಶೇಷ ಕಾರ್ಯಕ್ರಮವನ್ನು ಆಯೋಜಿಸಿತು. 117 ಮಂದಿ ಭಾಗವಹಿಸಿದ್ದರು. ಇದರಲ್ಲಿ ವಿದ್ಯಾರ್ಥಿಗಳು, ಸಿಬ್ಬಂದಿ ಮತ್ತು ಸಂಶೋಧನಾ ವಿದ್ಯಾರ್ಥಿಗಳು ಸೇರಿದ್ದಾರೆ. ರೆಜೆನ್‌ಬರಿ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಾದ ಡಾ. ಇಂಗ್ರಾ ನ್ಯೂಮನ್‌ರವರು ಈ ವಿಶೇಷ ಉಪನ್ಯಾಸ ನೀಡಿದರು. ವಿಶೇಷವಾಗಿ ವಿಜ್ಞಾನ ಪ್ರವಾಹದಲ್ಲಿ ಉನ್ನತ ಹುದ್ದೆಗಳಲ್ಲಿ ಕೆಲವೇ ಮಹಿಳೆಯರು ಇದ್ದಾರೆ ಎಂದು ಅವರು ಹೇಳಿದರು. ಅವರು ಜರ್ಮನಿಯಲ್ಲಿನ ಸಂಶೋಧನೆಯಿಂದ ತಮ್ಮ ಒಳನೋಟಗಳನ್ನು ತಂದರು ಮತ್ತು ಮುಂದುವರಿದ ಮತ್ತು ಅಭಿವೃದ್ಧಿ ಹೊಂದಿದ ದೇಶವಾಗಿದ್ದರೂ ಸಹ, ಮಹಿಳೆಯರು ಕುಟುಂಬವನ್ನು ನೋಡಿಕೊಳ್ಳುವುದಕ್ಕಾಗಿ ತಮ್ಮ ವೃತ್ತಿಪರ ಜೀವನವನ್ನು ತ್ಯಾಗ ಮಾಡಬೇಕಾಗಿರುವುದರಿಂದ ವಿಜ್ಞಾನದಲ್ಲಿ ಸಂಶೋಧನಾ ಮಟ್ಟದಲ್ಲಿ ಇನ್ನೂ ಅಂಗವಿಕಲರಿದ್ದಾರೆ ಎಂದು ಹೇಳಿದ್ದಾರೆ. ಕೊನೆವರೆಗೂ ಉತ್ಸಾಹಭರಿತ ಚರ್ಚೆ ನಡೆಸಿದ ಈ ಭಾಷಣಕ್ಕೆ ನಿರ್ದೇಶಕರಾದ ಡಾ. ಅನಿತಾ ರವಿಶಂಕರ್ ಅವರು ಅಧ್ಯಕ್ಷತೆ ವಹಿಸಿದ್ದರು. ಮಂಗಳೂರು ವಿಶ್ವವಿದ್ಯಾನಿಲಯದ ಜೈವಿಕ ವಿಜ್ಞಾನದ ಪ್ರಾಧ್ಯಾಪಕರಾದ ಮೋನಿಕ ಸದಾನಂದ ಅವರು ಗೌರವ ಅತಿಥಿಗಳಾಗಿದ್ದರು.



ಉಪನ್ಯಾಸದಲ್ಲಿ ಪ್ರೊ. ಮೋನಿಕಾ ಸದಾನಂದ, ಡಾ. ಇಂಗ್ರಾ ನ್ಯೂಮನ್ ಮತ್ತು ಡಾ. ಅನಿತಾ ರವಿಶಂಕರ್.



ಡಾ. ಇಂಗ್ರಾ ನ್ಯೂಮನ್ ತಮ್ಮ ಉಪನ್ಯಾಸ ನೀಡುತ್ತಿರುವುದು.



ಉಪನ್ಯಾಸದಲ್ಲಿ ಭಾಗವಹಿಸಿದ ಪೇಕ್ಷಕರು

ಬಿ. ಲಿಂಗ ಚಾಂಪಿಯನ್‌ಗಳ ತಯಾರಿಕೆ– ಲಿಂಗ ಕುರಿತು ಸಂವಾದ:

ಮಂಗಳೂರು ವಿಶ್ವವಿದ್ಯಾನಿಲಯದ ಮಹಿಳಾ ಅಧ್ಯಯನ ಕೇಂದ್ರವು ದಿನಾಂಕ 20.11.2019ರಂದು ವಿಶ್ವಾವಿದ್ಯಾನಿಲಯದ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಲಿಂಗ ಚಾಂಪಿಯನ್‌ಗಳ ತಯಾರಿಕೆ–ಲಿಂಗ ಕುರಿತು ಸಂವಾದ ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಿತು. ಕೇಂದ್ರದ ನಿರ್ದೇಶಕರಾದ ಡಾ. ಅನಿತಾ ರವಿಶಂಕರ್ ಅವರು ಉಪನ್ಯಾಸವನ್ನು ನೀಡಿದರು. ರಾಜ್ಯಶಾಸ್ತ್ರ ವಿಭಾಗದ ವಿದ್ಯಾರ್ಥಿಗಳು ಹಾಗೂ ಸಂಶೋಧನಾ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ರಾಜ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಪ್ರೊ. ಜಯರಾಜ್ ಅಮೀನ್‌ರವರು ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದರು. ಉಪನ್ಯಾಸವು ಲಿಂಗ ಗುರುತಿಸುವಿಕೆ, ಲಿಂಗ ಸಾಮಾಜೀಕರಣ ಮತ್ತು ಶಿಕ್ಷಣ ಸಂಸ್ಥೆಗಳಲ್ಲಿ ಲಿಂಗ ಚಾಂಪಿಯನ್‌ಗಳ ಅವಶ್ಯಕತೆ ಲಿಂಗಕ್ಕೆ ಸಂಬಂಧಿಸಿದ ಮೂಲ ಪರಿಕಲ್ಪನೆಗಳನ್ನು ಒಳಗೊಂಡಿತ್ತು. ಕಾರ್ಯಕ್ರಮದ ಕೊನೆಗೆ ನಡೆದ ಚರ್ಚೆಗಳು ಉತ್ತಮ ಮತ್ತು ಅರ್ಥಪೂರ್ಣವಾಗಿದ್ದವು.



ಡಾ. ಅನಿತಾ ರವಿಶಂಕರ್ ಅವರು ಲಿಂಗ ಚಾಂಪಿಯನ್ಸ್ ಕುರಿತು ಪ್ರಸ್ತುತಿ ನೀಡುತ್ತಿರುವುದು.



ಉಪನ್ಯಾಸದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳು, ಮತ್ತು ಸಂಶೋಧನಾ ವಿದ್ಯಾರ್ಥಿಗಳು.

III. ಶೈಕ್ಷಣಿಕ ಕೋರ್ಸ್‌ಗಳು

2019–20ರ ಶೈಕ್ಷಣಿಕ ವರ್ಷದಲ್ಲಿ 2 ಮತ್ತು 3ನೇ ಸೆಮಿಸ್ಟರ್ ಪಿ.ಜಿ ವಿದ್ಯಾರ್ಥಿಗಳಿಗೆ ಮಹಿಳಾ ಅಧ್ಯಯನ ಕೇಂದ್ರದಿಂದ ನೀಡುವ ಚುನಾಯಿತ ಪತ್ರಿಕೆಗಳು

ಪ್ರಸ್ತುತ ಶೈಕ್ಷಣಿಕ ವರ್ಷದಿಂದ ಮಹಿಳಾ ಅಧ್ಯಯನ ಕೇಂದ್ರವು ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಚಾಯ್ಸ್ ಬೇಸ್ಡ್ ಕ್ರೆಡಿಟ್ ಸಿಸ್ಟಮ್(ಸಿಬಿಸಿಎಸ್) ಅಡಿಯಲ್ಲಿ ಎರಡು ಚುನಾಯಿತ ಪತ್ರಿಕೆಗಳನ್ನು ನೀಡಿದ ಪತ್ರಿಕೆಗಳು ಹೀಗಿವೆ.

1. ಪೇಪರ್ 12001 –2ನೇ ಸೆಮಿಸ್ಟರ್ –ಲಿಂಗ ಮತ್ತು ಅಭಿವೃದ್ಧಿ

2. ಪೇಪರ್ WSE501 –3ನೇ ಸೆಮಿಸ್ಟರ್ –ಮಹಿಳೆಯರು ಮತ್ತು ಉದ್ಯಮಶೀಲತೆ ಅಭಿವೃದ್ಧಿ

ಈ ಪತ್ರಿಕೆಗಳನ್ನು ಕಲಿಸುವ ಅಧ್ಯಾಪಕರನ್ನು ವಿಶ್ವವಿದ್ಯಾನಿಲಯದ ಸಂಬಂಧಿತ ಇಲಾಖೆಗಳಿಂದ ಮತ್ತು ಎನ್‌ಜಿಒ ಸದಸ್ಯರಿಂದ ಆಯ್ಕೆ ಮಾಡಲಾಗುತ್ತದೆ.

ಈ ವರ್ಷ ಮೂರನೇ ಸೆಮಿಸ್ಟರ್ ಮಹಿಳಾ ಮತ್ತು ಉದ್ಯಮಶೀಲತೆ ಅಭಿವೃದ್ಧಿ ಪ್ರಬಂಧವು ಜುಲೈ 27, 2019ರಂದು ತರಗತಿಗಳನ್ನು ಪ್ರಾರಂಭಿಸಿತು. ಈ ಕೋರ್ಸಿಗೆ ಮಂಗಳೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಕಾಲೇಜುಗಳಿಂದ 6 ವಿದ್ಯಾರ್ಥಿಗಳು ಸೇರಿದ್ದಾರೆ. ಎಲ್ಲಾ ವಿದ್ಯಾರ್ಥಿಗಳು ತಮ್ಮ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ.

ಎರಡನೇ ಸೆಮಿಸ್ಟರ್ ಲಿಂಗ ಮತ್ತು ಅಭಿವೃದ್ಧಿ ಪ್ರಬಂಧವು ಡಿಸೆಂಬರ್ 28, 2019ರಂದು ತನ್ನ ತರಗತಿಗಳನ್ನು ಪ್ರಾರಂಭಿಸಿತು. ಈ ಕೋರ್ಸಿಗೆ 25 ವಿದ್ಯಾರ್ಥಿಗಳು ಸೇರಿದ್ದಾರೆ. ಈ ಕೋರ್ಸಿಗೆ ಮಂಗಳೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ವಿವಿಧ ಕಾಲೇಜುಗಳಿಂದ ಬಂದವರು. ಕೊರೊನದ ಕಾರಣದಿಂದ ಈಗ ಆನ್‌ಲೈನ್ ಮೂಲಕ ತರಗತಿಗಳು ನಡೆಯುತ್ತಿದೆ.

IV. ನಿರ್ದೇಶಕರಾದ ಅನಿತಾ ರವಿಶಂಕರ್ ಮಹಿಳಾ ಅಧ್ಯಯನ ಕೇಂದ್ರದಿಂದ ಮಾಡಿದ ಪ್ರಬಂಧ ಮಂಡನೆಗಳು

1. ಕೇರಳ ವಿಶ್ವವಿದ್ಯಾನಿಲಯದಲ್ಲಿ ದಿನಾಂಕ 04.09.2019ರಂದು ನಡೆದ ಮಹಿಳಾ ಸಬಲೀಕರಣದ ಕೋರ್ಸ್‌ಗಳಿಗೆ 'ಶೈಕ್ಷಣಿಕ ಸಂಸ್ಥೆಗಳಲ್ಲಿ ಮಹಿಳೆಯರನ್ನು ಸಬಲೀಕರಣಗೊಳಿಸುವುದು–ಸಮಸ್ಯೆಗಳು ಮತ್ತು ಸವಾಲುಗಳು' ಎಂಬ ವಿಷಯದ ಕುರಿತು ಕರಿಯವಟ್ಟಂ ಕ್ಯಾಂಪಸ್, ತಿರುವನಂತಪುರಂನ ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರವು ಉಪನ್ಯಾಸವನ್ನು ನೀಡಲು ಆಹ್ವಾನಿಸಿದೆ.

2. ದಿನಾಂಕ 31.01.2020ರಂದು ನವದೆಹಲಿಯ ರಾಷ್ಟ್ರೀಯ ಮಹಿಳಾ ಆಯೋಗದಲ್ಲಿ ಯುಎನ್ ಮಹಿಳೆಯರೊಂದಿಗೆ ಜಂಟಿಯಾಗಿ ಆಯೋಜಿಸಲಾದ ರಾಷ್ಟ್ರೀಯ ಸಮಾಲೋಚನೆಯಲ್ಲಿ ಭಾಗವಹಿಸಲು ನವದೆಹಲಿಯ ಮಹಿಳಾ ಆಯೋಗ ಆಹ್ವಾನಿಸಿದೆ.

ದಿನಾಂಕ 17–19, ಪೆಬ್ರವರಿ, 2020ರಂದು ಇನ್ಸ್ಟಿಟ್ಯೂಟ್ ಆಫ್ ಇಂಗ್ಲಿಷ್, ಕೇರಳ ವಿಶ್ವವಿದ್ಯಾನಿಲಯ, ತಿರುವನಂತಪುರಂನಲ್ಲಿ 'ಪರಿಸರ ವಿಜ್ಞಾನ ಸಾಹಿತ್ಯ ಮತ್ತು ಸಂಸ್ಕೃತಿ : ಕೇರಳದ ಅನುಭವ' ಯುಜಿಸಿ ಡಿಆರ್‌ಎಸ್ ಖಖರ ಅಡಿಯಲ್ಲಿ ಆಯೋಜಿಸಲಾದ ದಿನಗಳ ರಾಷ್ಟ್ರೀಯ ಸಮ್ಮೇಳನದಲ್ಲಿ ಉಪನ್ಯಾಸ ನೀಡಲು ಆಹ್ವಾನಿಸಲಾಗಿದೆ.

ಕನಕದಾಸ ಅಧ್ಯಯನ ಪೀಠ

ಕನಕದಾಸ ಸಂಶೋಧನ ಕೇಂದ್ರ

ಸಂಯೋಜಕರು	:	ಡಾ. ಧನಂಜಯ ಕುಂಬ್ಳೆ (31.08.2019 ರಿಂದ)
ಸಂಶೋಧನ ಸಹಾಯಕರು	:	ಆನಂದ ಎಂ. (02.01.2017 ರಿಂದ)
ಕಚೇರಿ ಸಹಾಯಕರು	:	ಸರಿತ (28.12.2016 ರಿಂದ)
		ಕಿರಣ್ (01.01.2013ರಿಂದ)

ಪೀಠಿಕೆ:

- ಕರ್ನಾಟಕದ ಸಾಂಸ್ಕೃತಿಕ ಮತ್ತು ಸಾಮಾಜಿಕ ಚರಿತ್ರೆಯಲ್ಲಿ ಕನಕದಾಸರದು ಅನನ್ಯವಾದ ಸ್ಥಾನ. ದಾರ್ಶನಿಕರಾಗಿ ಮತ್ತು ಸಾಮಾಜಿಕ ಚಿಂತಕರಾಗಿ ಸಮಕಾಲೀನ ಕರ್ನಾಟಕದ ಚರಿತ್ರೆಯಲ್ಲಿ ಕನಕದಾಸರು ಮಹತ್ವಪೂರ್ಣವಾದ ಪ್ರಭಾವವನ್ನು ಬೀರಿರುತ್ತಾರೆ. ಹದಿನಾರನೇ ಶತಮಾನದವರಾದರೂ ಕನಕದಾಸರ ಸಾಹಿತ್ಯಿಕ ಅಭಿವ್ಯಕ್ತಿ ಮತ್ತು ಸಾಮಾಜಿಕ ಕಾಳಜಿಗಳು ನಮ್ಮ ಕಾಲದ ಈ ಹೊತ್ತಿನಲ್ಲೂ ಹೊಸ ಅರ್ಥಗಳನ್ನು ಪಡೆಯುತ್ತಿರುತ್ತವೆ. ಕನಕದಾಸರ ಚಿಂತನೆಗಳು ಈ ಕಾಲಕ್ಕೂ ಸಂಗತವಾದ ಕಾರಣದಿಂದ ಕನಕದಾಸರ ಬದುಕು ಮತ್ತು ಬರೆಹಗಳ ಅಧ್ಯಯನ ಮತ್ತು ಪ್ರಸರಣದ ಉದ್ದೇಶದಿಂದ ಕರ್ನಾಟಕ ಸರಕಾರ ಕನಕದಾಸ ಅಧ್ಯಯನ ಪೀಠ ಹಾಗೂ ಕನಕದಾಸ ಸಂಶೋಧನ ಕೇಂದ್ರವನ್ನು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸಿದೆ.
- ಕಳೆದ ಕೆಲವು ವರ್ಷಗಳಿಂದೀಚೆಗೆ ಕನಕದಾಸ ಅಧ್ಯಯನ ಪೀಠ ಮತ್ತು ಕನಕದಾಸ ಸಂಶೋಧನ ಕೇಂದ್ರ ಕನಕದಾಸರು ಪ್ರತಿನಿಧಿಸುತ್ತಿದ್ದ ಸಾಮಾಜಿಕ ಚಿಂತನೆ ಮತ್ತು ಕಾಳಜಿಗಳನ್ನು ಪಸರಿಸುವ ಮತ್ತು ಜನಪ್ರಿಯಗೊಳಿಸುವ ಉದ್ದೇಶದಿಂದ ವೈವಿಧ್ಯಮಯವಾಗಿರುವ ಹಲವಾರು ಚಟುವಟಿಕೆಗಳನ್ನು ವಿಭಿನ್ನ ನೆಲೆಗಳಲ್ಲಿ ನಡೆಸಿಕೊಂಡು ಬರುತ್ತಿದೆ. ಇದು ಕನಕನಿಗೆ ಸಂಬಂಧಿಸಿದ ಸಂಶೋಧನಾ ಬರಹಗಳು ಮತ್ತು ಪುಸ್ತಕಗಳ ಪ್ರಕಟಣೆ ಮತ್ತು ಕನಕ ಮತ್ತು ಭಕ್ತಿ ಪರಂಪರೆಗೆ ಸಂಬಂಧಿಸಿದ ವಿಚಾರ ಸಂಕಿರಣ, ಸಮ್ಮೇಳನ ಮತ್ತು ಕಾರ್ಯಾಗಾರಗಳನ್ನು ಹಮ್ಮಿಕೊಳ್ಳುವುದನ್ನು ಒಳಗೊಂಡಿದೆ. ಕನಕದಾಸ ಅಧ್ಯಯನ ಪೀಠ ಮತ್ತು ಕನಕದಾಸ ಸಂಶೋಧನ ಕೇಂದ್ರ ಜೊತೆಯಾಗಿ ಎರಡು ರಾಷ್ಟ್ರೀಯ ವಿಚಾರ ಸಂಕಿರಣಗಳು, ಒಂದು ಅಂತಾರಾಷ್ಟ್ರೀಯ ಸಮ್ಮೇಳನಗಳನ್ನು ನಡೆಸಿದೆ. ಅಲ್ಲದೆ ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ಸಂಯೋಜಿತ ಕಾಲೇಜುಗಳಲ್ಲಿ, ಬೇರೆ ವಿಶ್ವವಿದ್ಯಾನಿಲಯಗಳಾದ ಕಣ್ಣೂರು ವಿಶ್ವವಿದ್ಯಾನಿಲಯ, ಮೈಸೂರು ವಿಶ್ವವಿದ್ಯಾನಿಲಯ, ಧಾರವಾಡ ವಿಶ್ವವಿದ್ಯಾನಿಲಯ, ಬೆಂಗಳೂರು ವಿಶ್ವವಿದ್ಯಾನಿಲಯ, ಕುವೆಂಪು ವಿಶ್ವವಿದ್ಯಾನಿಲಯ, ತುಮಕೂರು ವಿಶ್ವವಿದ್ಯಾನಿಲಯ, ದಾವಣಗೆರೆ ವಿಶ್ವವಿದ್ಯಾನಿಲಯ, ಬಿಜಾಪುರ ವಿಶ್ವವಿದ್ಯಾನಿಲಯ ಮತ್ತು ಹೊರ ರಾಜ್ಯದ ವಿಶ್ವವಿದ್ಯಾನಿಲಯಗಳಾದ ಮುಂಬೈ ವಿಶ್ವವಿದ್ಯಾನಿಲಯ, ಮದ್ರಾಸ್ ವಿಶ್ವವಿದ್ಯಾನಿಲಯ. ಕುಪ್ಪಂ ವಿಶ್ವವಿದ್ಯಾನಿಲಯ ಮತ್ತು ಒಸ್ಮಾನಿಯಾ ವಿಶ್ವವಿದ್ಯಾನಿಲಯಗಳಲ್ಲಿ ಹಲವಾರು ಉಪನ್ಯಾಸಗಳನ್ನು ಹಮ್ಮಿಕೊಂಡಿತ್ತು. ಉಪನ್ಯಾಸಗಳನ್ನು ಖಾಸಗಿ ಸಂಸ್ಥೆಗಳಲ್ಲೂ ಹಮ್ಮಿಕೊಳ್ಳಲಾಗಿತ್ತು. 'ಕನಕ ಕೀರ್ತನ' ಮತ್ತು 'ಕನಕ ಗಂಗೋತ್ರಿ' ಎಂಬ ಕಾರ್ಯಕ್ರಮಗಳನ್ನು ಕನಕದಾಸರ ತತ್ತ್ವಚಿಂತನೆಗಳನ್ನು ಸಮುದಾಯಕ್ಕೆ ತಲುಪಿಸುವ ಆಶಯದಿಂದ ಹಮ್ಮಿಕೊಳ್ಳಲಾಗುತ್ತಿದೆ. ಈ ಕಾರ್ಯಕ್ರಮಗಳಲ್ಲಿ ವಿದ್ಯಾರ್ಥಿಗಳು, ಅಧ್ಯಾಪಕರು, ಆಡಳಿತವರ್ಗ ಹಾಗೂ ಸಾರ್ವಜನಿಕರು ಯಾವುದೇ ಭೇದಭಾವವಿಲ್ಲದೆ ಪಾಲ್ಗೊಳ್ಳುವಂತೆ ಅವಕಾಶವನ್ನು ಕಲ್ಪಿಸುವ ಉದ್ದೇಶದಿಂದ ಈ ಕಾರ್ಯಕ್ರಮಗಳನ್ನು ನಿರಂತರವಾಗಿ ಏರ್ಪಡಿಸಲಾಗುತ್ತಿದೆ.

ಉದ್ದೇಶಗಳು:

- ಕನಕದಾಸರ ಬದುಕು, ಬರಹ ಮತ್ತು ಸಂದೇಶಗಳನ್ನು ಪ್ರಸರಣ ಮಾಡುವ ಮತ್ತು ಕರ್ನಾಟಕ ಮತ್ತು ಭಾರತದ ಸಮಾಜೋ–ಸಾಂಸ್ಕೃತಿಕ ಇತಿಹಾಸಕ್ಕೆ ಸಂಬಂಧಿಸಿದ ಸಾಹಿತ್ಯಿಕ, ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸುವುದು.
- ಕನಕದಾಸರ ಸಂದೇಶ, ಕನಕನಿಗೆ ಸಂವಾದಿಯಾದ ವಿಚಾರಗಳು ಮತ್ತು ಕನಕನ ವಿಚಾರಗಳ ಕಾಳಜಿಗಳ ಕುರಿತಾಗಿ ವಿಚಾರ ಸಂಕಿರಣ, ಕಾರ್ಯಾಗಾರ ಮತ್ತು ಉಪನ್ಯಾಸಗಳನ್ನು ಏರ್ಪಡಿಸುವುದು.
- ಕನಕದಾಸರ ಬದುಕು ಮತ್ತು ಬರಹಗಳ ಕುರಿತ ಸಂಶೋಧನೆಗಳಿಗೆ ಉತ್ತೇಜನ ನೀಡುವುದು.
- ಕನಕದಾಸರ ಬದುಕು, ಸಾಹಿತ್ಯ ಮತ್ತು ಧೋರಣೆಗಳನ್ನು ವಿಶ್ಲೇಷಿಸುವ ಕೃತಿಗಳನ್ನು ಪ್ರಕಟಿಸುವುದು.
- ಕನಕದಾಸರು ಮತ್ತು ಭಕ್ತಿ ಪರಂಪರೆಗೆ ಸಂಬಂಧಿಸಿದ ಸಂಗ್ರಹಗಳನ್ನು ಪ್ರಕಟಿಸುವುದು.
- ಕನಕದಾಸರ ಬರಹಗಳನ್ನು ಆಂಗ್ಲ ಮತ್ತು ಇತರ ಭಾರತೀಯ ಭಾಷೆಗಳಿಗೆ ಅನುವಾದಿಸುವುದು.
- ಕನಕದಾಸರ ಸಮಗ್ರ ವಾಙ್ಮಯದ ಗ್ರಂಥಾಲಯವನ್ನು ಸ್ಥಾಪಿಸುವುದು. ಈ ಗ್ರಂಥಾಲಯದಲ್ಲಿ ಕನಕದಾಸರ ಕೃತಿಗಳು, ಅವರ ಕೃತಿಗಳ

ಕುರಿತು ಅಧ್ಯಯನ ಗ್ರಂಥಗಳು, ನಿಯತಕಾಲಿಕೆಗಳು, ದಾಸ ಪರಂಪರೆಯ ಕೃತಿಗಳು, ಕರ್ನಾಟಕದ ಭಕ್ತಿ ಪರಂಪರೆಯ ವಾಙ್ಮಯ ಮತ್ತು ದಕ್ಷಿಣ ಭಾರತದ ಭಕ್ತಿ ಮತ್ತು ಆಧ್ಯಾತ್ಮ ಪರಂಪರೆಯ ಕೃತಿಗಳನ್ನು ಖರೀದಿಸಿ ಸಂರಕ್ಷಿಸುವುದು.

– ಕನಕದಾಸರ ಕೃತಿಗಳನ್ನು ಆಧರಿಸಿ ಶ್ರವ್ಯ ಮತ್ತು ದೃಶ್ಯ ಮಾಧ್ಯಮಗಳಾದ ನಾಟಕ, ರೂಪಕ, ಚಿತ್ರಕಲೆ, ಸಂಗೀತ ಕಾರ್ಯಕ್ರಮ ಮೊದಲಾದ ಪ್ರದರ್ಶನಗಳನ್ನು ಏರ್ಪಡಿಸುವುದು ಮತ್ತು ಈ ಬಗೆಯ ಚಟುವಟಿಕೆಗಳಿಗೆ ಉತ್ತೇಜನ ನೀಡುವುದು.

ಕನಕ ತತ್ತ್ವಚಿಂತನ: ಪ್ರಚಾರೋಪನ್ಯಾಸ ಕಾರ್ಯಕ್ರಮ:

ಅಕ್ಟೋಬರ್–ಮಾರ್ಚ್, 2019–2020

'ಭಕ್ತಿ ಪರಂಪರೆಯ ಲೋಕಯಾನ ಮತ್ತು ಕನಕದಾಸರು : ಸಮಕಾಲೀನ ಸಂವಾದ'

ರಾಜ್ಯದ ಹಾಗೂ ಹೊರ ರಾಜ್ಯಗಳ ವಿವಿಧ ವಿಶ್ವವಿದ್ಯಾನಿಲಯಗಳ ಸಂಯೋಜಿತ ಕಾಲೇಜು, ಪದವಿಪೂರ್ವ ಕಾಲೇಜು ಹಾಗೂ ಇತರ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಕನಕದಾಸರ ತತ್ತ್ವಚಿಂತನೆಯನ್ನು ಪ್ರಸರಣಗೊಳಿಸುವ 'ಕನಕ ಚಿಂತನ' ಪ್ರಚಾರೋಪನ್ಯಾಸ ಕಾರ್ಯಕ್ರಮವನ್ನು ಪ್ರತಿ ವರ್ಷ ಹಮ್ಮಿಕೊಂಡು ಬಂದಿದೆ. ಈವರೆಗೆ ರಾಜ್ಯದ ಇತರ ವಿಶ್ವವಿದ್ಯಾನಿಲಯಗಳಾದ ಮೈಸೂರು. ಧಾರವಾಡ, ಬೆಂಗಳೂರು, ಕುವೆಂಪು, ತುಮಕೂರು, ಬಿಜಾಪುರ, ದಾವಣಗೆರೆ, ಅಲ್ಲದೆಯೇ ಹೊರರಾಜ್ಯಗಳ ಕಣ್ಣೂರು, ಚೆನ್ನೈ, ಮುಂಬೈ, ಕುಪ್ಪಂ, ಹೈದರಾಬಾದ್ ಮುಂತಾದ ವಿಶ್ವವಿದ್ಯಾನಿಲಯಗಳು ಮತ್ತು ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಒಟ್ಟು 206 ಪ್ರಚಾರೋಪನ್ಯಾಸವನ್ನು ಏರ್ಪಡಿಸಲಾಗಿದೆ.

ರಾಷ್ಟ್ರೀಯ ವಿಚಾರ ಸಂಕಿರಣಗಳು : ಒಟ್ಟು 2

ರಾಷ್ಟ್ರೀಯ ವಿಚಾರಸಂಕಿರಣ : 1

2019–2020ರ ಶೈಕ್ಷಣಿಕ ವರ್ಷದಲ್ಲಿ 'ಭಕ್ತಿ ಪರಂಪರೆಯ ಲೋಕಯಾನ ಮತ್ತು ಕನಕದಾಸರು : ಸಮಕಾಲೀನ ಸಂವಾದ' ಎಂಬ ವಿಷಯದ ಕುರಿತಾಗಿ ಮೊದಲನೆಯ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಕಣ್ಣೂರು ವಿಶ್ವವಿದ್ಯಾನಿಲಯ, ಕನ್ನಡ ವಿಭಾಗ, ಭಾರತೀಯ ಭಾಷಾ ಅಧ್ಯಯನಾಂಗ, ಕಾಸರಗೋಡು ಇವರ ಸಹಯೋಗದೊಂದಿಗೆ ದಿನಾಂಕ: 01.10.2019 ರಂದು ನೆರವೇರಿತು. ತಮಿಳುನಾಡು ಮಧುರೈ ಕಾಮರಾಜ ವಿಶ್ವವಿದ್ಯಾನಿಲಯದ ವಿಶ್ರಾಂತ ಪ್ರಾಧ್ಯಾಪಕರಾದದ ಪ್ರೊ. ಹರಿಕೃಷ್ಣ ಭರಣ್ಯ ಅಧ್ಯಕ್ಷತೆಯನ್ನು ವಹಿಸಿದ್ದರು. ಸರಕಾರಿ ಕಾಲೇಜು ಕಾಸರಗೋಡು ಕನ್ನಡ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಸುಜಾತ ಅತಿಥಿಗಳಾಗಿ ಆಗಮಿಸಿದ್ದರು. 'ಕನಕ ದರ್ಶನ' ವಿಚಾರಗೋಷ್ಠಿ 1ರಲ್ಲಿ ಬೆಳ್ತಂಗಡಿ ಮುಂಡಾಜೆ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಅಧ್ಯಾಪಕರಾದ ಅರವಿಂದ ಚೊಕ್ಕಾಡಿ ಇವರು 'ಕನಕ : ತಾತ್ವಿಕತೆ' ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು ಹಾಗೂ ತುಮಕೂರು ವಿಶ್ವವಿದ್ಯಾನಿಲಯ ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ಗೀತಾ ವಸಂತ್ ಇವರು ' ಕನಕ : ಲೋಕದೃಷ್ಟಿ' ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು.

ಅಪರಾಹ್ನ 'ಕನಕ ಚಿಂತನ : ಅಧ್ಯಯನ ಹೊಳಹುಗಳು' ವಿಚಾರಗೋಷ್ಠಿ 2 ರಲ್ಲಿ ಕನ್ನಡ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನ ವಿಭಾಗ, ಸರಕಾರಿ ಕಾಲೇಜು, ಕಾಸರಗೋಡು ಇಲ್ಲಿನ ಸಂಶೋಧನ ವಿದ್ಯಾರ್ಥಿಯಾದ ರವಿಶಂಕರ ಜಿ. ಕೆ. ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ, ಮಂಗಳೂರು ವಿಶ್ವವಿದ್ಯಾನಿಲಯದ ಸಂಶೋಧನ ವಿದ್ಯಾರ್ಥಿಯಾದ ನಮಿರಾಜ್ ಮತ್ತು ಮುಸ್ತಾಫ ಕೆ.ಎಚ್. ಕನಕದಾಸ ಸಂಶೋಧನ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯದ ಸಂಶೋಧನ ಸಹಾಯಕರಾದ ಆನಂದ ಎಂ. ಕಿದೂರು ಪ್ರಬಂಧ ಮಂಡನೆ ಮಾಡಿದರು. ಕನ್ನಡ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನ ವಿಭಾಗ, ಸರಕಾರಿ ಕಾಲೇಜು, ಕಾಸರಗೋಡು ಇಲ್ಲಿನ ಸಹಾಯಕ ಪ್ರಾಧ್ಯಾಪಕರಾದ ಡಾ. ರತ್ನಾಕರ ಮಲ್ಲಮೂಲೆ ಕಾರ್ಯಕ್ರಮದ ಅಧ್ಯಕ್ಷತೆಯವನ್ನು ವಹಿಸಿ ಮಾತನಾಡಿದರು.

ನಂತರ ನಡೆದ ಕನಕ : ಕೃತಿ–ಪ್ರಸ್ತುತಿ ಕಾರ್ಯಕ್ರಮದಲ್ಲಿ ಸೈಂಟ್ ಆಗ್ನೆಸ್ ಕಾಲೇಜು, ಮಂಗಳೂರು ಇಲ್ಲಿನ ಉಪನ್ಯಾಸಕರಾದ ಶ್ರೀವಾಣಿ ಕಾಕುಂಜೆ ಕನಕದಾಸರ ಕೀರ್ತನೆಗಳನ್ನು ಪ್ರಸ್ತುತಪಡಿಸಿದರು, ಕನ್ನಡ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನ ವಿಭಾಗ, ಸರಕಾರಿ ಕಾಲೇಜು, ಕಾಸರಗೋಡಿನ ವಿದ್ಯಾರ್ಥಿನಿಯಾದ ಶ್ರದ್ಧಾ ಭಟ್ ನಾಯರ್ಪಳ್ಳ ಇವರು 'ಮೋಹನ ತರಂಗಿಣಿ' ಕೃತಿಯ ಕುರಿತು ಮತ್ತು ಚಿನ್ಮಯ ವಿದ್ಯಾಲಯ, ಕಾಸರಗೋಡಿನ ವಿದ್ಯಾರ್ಥಿನಿ ಸನ್ನಿಧಿ ಟಿ. ರೈ ಪೆರ್ಲ 'ನಳಚರಿತ್ರೆ' ಕೃತಿಯ ಕುರಿತು ಕೃತಿ ಪ್ರಸ್ತುತಿಯನ್ನು ನಡೆಸಿಕೊಟ್ಟರು.

ಸಮಾರೋಪ ಸಮಾರಂಭದಲ್ಲಿ ಕನ್ನಡ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನ ವಿಭಾಗ, ಕಾಸರಗೋಡು, ಸಹಾಯಕ ಪ್ರಾಧ್ಯಾಪಕರಾದ ಡಾ. ರಾಧಾಕೃಷ್ಣ ಬೆಳ್ಳೂರು ಸಮಾರೋಪ ಭಾಷಣ ಮಾಡಿದರು. ಕವಿಗಳು, ಹಿರಿಯ ಪತ್ರಕರ್ತರಾದ ಶ್ರೀ ರಾಧಾಕೃಷ್ಣ ಉಳಿಯತ್ತಡ್ಕ ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು.

ರಾಷ್ಟ್ರೀಯ ವಿಚಾರಸಂಕಿರಣ : 2

'ಕನಕದಾಸರ ಸಾಹಿತ್ಯ : ಪರಂಪರೆ ಮತ್ತು ವರ್ತಮಾನ' ಎಂಬ ವಿಷಯದ ಕುರಿತಾಗಿ ಎರಡನೆಯ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಕನ್ನಡ ಸ್ನಾತಕೋತ್ತರ ಅಧ್ಯಯನ ವಿಭಾಗ, ಸರಕಾರಿ ಪ್ರಥಮ ದರ್ಜೆ ಕಾಲೇಜು, ಬೆಳ್ತಂಗಡಿ ಇವರ ಸಹಯೋಗದೊಂದಿಗೆ ದಿನಾಂಕ:

28.01.2020 ರಂದು ಏರ್ಪಡಿಸಲಾಗಿದ್ದು, ಕಣ್ಣೂರು ವಿಶ್ವವಿದ್ಯಾನಿಲಯ ಭಾರತೀಯ ಭಾಷಾ ಅಧ್ಯಯನಾಂಗದ ವಿಶ್ರಾಂತ ನಿರ್ದೇಶಕರಾದ ಡಾ. ಪಿ. ಶ್ರೀಕೃಷ್ಣ ಭಟ್ ಉದ್ಘಾಟನೆ ಮಾಡಿ ಉಪನ್ಯಾಸ ನೀಡಿದರು. ಬೆಳ್ತಂಗಡಿ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ. ಟಿ. ಪಿ. ಆ್ಯಂಟನಿ ಅಧ್ಯಕ್ಷತೆಯನ್ನು ವಹಿಸಿದ್ದರು. ಕನ್ನಡ ಸ್ನಾತಕೋತ್ತರ ಅಧ್ಯಯನ ವಿಭಾಗ, ಸರಕಾರಿ ಪ್ರಥಮ ದರ್ಜೆ ಕಾಲೇಜಿನ ವಿಭಾಗ ಮುಖ್ಯಸ್ಥರಾದ ಡಾ. ಸುಬ್ರಹ್ಮಣ್ಯ ಕೆ. ಮತ್ತು ಕೇಂದ್ರದ ಸಂಯೋಜಕರಾದ ಡಾ. ಧನಂಜಯ ಕುಂಬ್ಳೆ ಉಪಸ್ಥಿತರಿದ್ದರು.

'ಕನಕದಾಸರ ಸಾಹಿತ್ಯ : ಪರಂಪರೆ ಮತ್ತು ವರ್ತಮಾನ' ವಿಚಾರಗೋಷ್ಠಿ 1ರಲ್ಲಿ ಪುತ್ತೂರು ವಿವೇಕಾನಂದ ಕಾಲೇಜಿನ ಸಂಸ್ಕೃತ ಪ್ರಾಧ್ಯಾಪಕರಾದ, ಡಾ. ಶ್ರೀಶ ಕುಮಾರ್ ಎಂ. ಕೆ. ಇವರು 'ಭಾರತೀಯ ಪರಂಪರೆ ಮತ್ತು ಕನಕದಾಸರು' ಎಂಬ ವಿಷಯದ ಕುರಿತು ಹಾಗೂ ಬೆಂಗಳೂರು ಶೇಷಾದ್ರಿಪುರಂ ಕಾಲೇಜಿನ ಸಹಪ್ರಾಧ್ಯಾಪಕರಾದ ಡಾ. ಸತ್ಯಮಂಗಲ ಮಹಾದೇವ ಇವರು ಕನಕದಾಸರು ಮತ್ತು 'ವರ್ತಮಾನದ ಅನುಸಂಧಾನ' ಎಂಬ ವಿಷಯದ ಕುರಿತು ಉಪನ್ಯಾಸವನ್ನು ನೀಡಿದರು.

ಅಪರಾಹ್ನ **'ಕನಕ ಚಿಂತನ : ಅಧ್ಯಯನದ ಹೊಳಹುಗಳು'** ವಿಚಾರಗೋಷ್ಠಿ 2ರಲ್ಲಿ ಬೆಳ್ತಂಗಡಿ ಸರಕಾರಿ ಪ್ರಥಮ ದರ್ಜೆ ಕಾಲೇಜು ಇಲ್ಲಿನ ಸಹಪ್ರಾಧ್ಯಾಪಕರಾದ ಡಾ. ಚೇತನ್ ಸೋಮೇಶ್ವರ ಕಾರ್ಯಕ್ರಮದ ಅಧ್ಯಕ್ಷತೆಯವನ್ನು ವಹಿಸಿ ಮಾತನಾಡಿದರು. ತೆಂಕನಿಡಿಯೂರು, ಸರಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರ ಇಲ್ಲಿನ ಸಹಾಯಕ ಪ್ರಾಧ್ಯಾಪಕರಾದ ಡಾ. ಹೆಚ್.ಕೆ. ವೆಂಕಟೇಶ್ ಇವರು ' ಕನಕ ಮತ್ತು ದಲಿತ ಸಾಹಿತ್ಯ' ಎಂಬ ವಿಷಯದ ಕುರಿತು, ಕಾವೂರು ಬಿ. ಜಿ. ಎಸ್. ಪ್ರಥಮ ದರ್ಜೆ ಕಾಲೇಜು ಇಲ್ಲಿ ಉಪಪ್ರಾಂಶುಪಾಲರಾದ ಸುಬ್ರಹ್ಮಣ್ಯ ಸಿ. ಇವರು 'ಕನಕದಾಸರ ಕೀರ್ತನೆ : ಸಾಮಾಜಿಕ ವಾಸ್ತವ' ಎಂಬ ವಿಷಯದ ಕುರಿತು, ಕುಪ್ಪಂ ದ್ರಾವಿಡ ವಿಶ್ವವಿದ್ಯಾನಿಲಯ ಇಲ್ಲಿ ಸಂಶೋಧಕರಾದ ಜಯಣ್ಣ ಸಿ. ಇವರು 'ಮೋಹನ ತರಂಗಿಣಿಯಲ್ಲಿ ಶಬ್ದಾಲಂಕಾರದ ಸ್ವರೂಪ' ಎಂಬ ವಿಷಯದ ಕುರಿತು ಮತ್ತು ಮಂಗಳೂರು ವಿಶ್ವವಿದ್ಯಾನಿಲಯದ ಎಸ್.ವಿ.ಪಿ.ಕನ್ನಡ ಅಧ್ಯಯನ ಸಂಸ್ಥೆ ಇಲ್ಲಿನ ಸಂಶೋಧಕರಾದ ಶ್ರೀಮತಿ ಮೈತ್ರಿ ಭಟ್ ಇವರು 'ಕನಕದಾಸ : ಮನೋವಿಜ್ಞಾನದ ಬೆಳಕಿನಲ್ಲಿ' ಎಂಬ ವಿಷಯದ ಕುರಿತು ಪ್ರಬಂಧ ಮಂಡನೆ ಮಾಡಿದರು.

ನಂತರ ನಡೆದ ಕನಕ : ಕೃತಿ–ಪ್ರಸ್ತುತಿ ಕಾರ್ಯಕ್ರಮದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಅಖಿಲ ಕರ್ನಾಟಕ ಗಮಕ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಪ್ರೊ. ಮೋಹನ ಕಲ್ಲೂರಾಯ ಇವರು ಗಮಕ ಪ್ರಸ್ತುತಿಯನ್ನು ನಡೆಸಿಕೊಟ್ಟರು. ಬೆಳ್ತಂಗಡಿ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ದ್ವಿತೀಯ ಎಂ.ಕಾಂ. ವಿದ್ಯಾರ್ಥಿಯಾದ ಕು. ರಾಧಿಕಾ ಕನಕದಾಸರ ಕೀರ್ತನಗಳನ್ನು ಹಾಡಿದರು.

ಸಮಾರೋಪ ಸಮಾರಂಭದಲ್ಲಿ ಉಜಿರೆ ಶ್ರೀಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜಿನ ಸಹಪ್ರಾಧ್ಯಾಪಕರಾದ ಡಾ. ರಾಜಶೇಖರ ಹಳೆಮನೆ ಸಮಾರೋಪ ಭಾಷಣವನ್ನು ಮಾಡಿದರು. ಬೆಳ್ತಂಗಡಿ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಪ್ರಾಧ್ಯಾಪಕರಾದ ಡಾ. ಶರತ್ ಕುಮಾರ್ ಟಿ. ಕೆ. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು.

ಪ್ರಚಾರೋಪನ್ಯಾಸಗಳು : ಒಟ್ಟು 5

1. ದಿನಾಂಕ 08.01.2020ರಂದು ಶಾರದಾ ಪದವಿ ಕಾಲೇಜು, ದೇವಿನಗರ, ತಲಪಾಡಿ ಇವರ ಸಹಯೋಗದೊಂದಿಗೆ ನಡೆದ "ಭಕ್ತಿ ಪರಂಪರೆಯ ಲೋಕಯಾನ ಮತ್ತು ಕನಕದಾಸರು : ಸಮಕಾಲೀನ ಸಂವಾದ" ಎಂಬ ವಿಚಾರದ ಕುರಿತ ಕನಕ ಚಿಂತನ ಪ್ರಚಾರೋಪನ್ಯಾಸ ಕಾರ್ಯಕ್ರಮದಲ್ಲಿ 'ಕನಕನ ಕೀರ್ತನೆಗಳ ಭಾವಾಭಿವ್ಯಕ್ತಿಯ ನೆಲೆಗಳು' ಎಂಬ ವಿಷಯದ ಕುರಿತು ಪುತ್ತೂರು ನಾಟ್ಯರಂಗದ ನಿರ್ದೇಶಕರಾದ ಮಂಜುಳಾ ಸುಬ್ರಹ್ಮಣ್ಯ ಇವರು ಉಪನ್ಯಾಸ ನೀಡಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾರದಾ ಪದವಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಕಬ್ಬಿನಾಲೆ ಬಾಲಕೃಷ್ಣ ಭಾರದ್ವಾಜ ಇವರು ವಹಿಸಿದ್ದರು.
2. ದಿನಾಂಕ 13.01.2020ರಂದು ವಿವೇಕಾನಂದ ಶಿಕ್ಷಣ ಮಹಾವಿದ್ಯಾಲಯ, ತೆಂಕಿಲ, ಪುತ್ತೂರು ಇವರ ಸಹಯೋಗದೊಂದಿಗೆ ನಡೆದ "ಭಕ್ತಿ ಪರಂಪರೆಯ ಲೋಕಯಾನ ಮತ್ತು ಕನಕದಾಸರು : ಸಮಕಾಲೀನ ಸಂವಾದ" ಎಂಬ ವಿಚಾರದ ಕುರಿತ ಕನಕ ಚಿಂತನ ಪ್ರಚಾರೋಪನ್ಯಾಸ ಕಾರ್ಯಕ್ರಮದಲ್ಲಿ 'ಕನಕದಾಸರ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು' ಎಂಬ ವಿಷಯದ ಕುರಿತು ಮೂಡಬಿದ್ರೆಯ ಪ್ರಸಿದ್ಧ ವಾಗ್ಮಿಗಳಾದ ಶ್ರೀ ಮುನಿರಾಜ ರೆಂಜಾಳ ಇವರು ಉಪನ್ಯಾಸ ನೀಡಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿವೇಕಾನಂದ ಶಿಕ್ಷಣ ಮಹಾವಿದ್ಯಾಲಯದ ಅಧ್ಯಕ್ಷರಾದ ಪ್ರೊ. ಎ. ವಿ. ನಾರಾಯಣ ಇವರು ವಹಿಸಿದ್ದರು. ಗೌರವ ಅತಿಥಿಗಳಾಗಿ ವಿವೇಕಾನಂದ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ಶೋಭಿತಾ ಸತೀಶ್ ಇವರು ವಹಿಸಿದ್ದರು.
3. ದಿನಾಂಕ 22.01.2020ರಂದು ಎಲ್.ಸಿ.ಆರ್. ವಿದ್ಯಾಸಂಸ್ಥೆ, ಕಕ್ಯಪದವು, ಬಂಟ್ವಾಳ ಇವರ ಸಹಯೋಗದೊಂದಿಗೆ ನಡೆದ "ಭಕ್ತಿ ಪರಂಪರೆಯ ಲೋಕಯಾನ ಮತ್ತು ಕನಕದಾಸರು : ಸಮಕಾಲೀನ ಸಂವಾದ" ಎಂಬ ವಿಚಾರದ ಕುರಿತ ಕನಕ ಚಿಂತನ ಪ್ರಚಾರೋಪನ್ಯಾಸ ಕಾರ್ಯಕ್ರಮದಲ್ಲಿ ' ಕನಕದಾಸರ ಸಾಮಾಜಿಕ ಚಿಂತನೆಗಳು' ಎಂಬ ವಿಷಯದ ಕುರಿತು ಹಿರಿಯ ಸಾಹಿತಿಗಳಾದ ಡಾ. ವಸಂತಕುಮಾರ ಪೆರ್ಲ ಇವರು ಉಪನ್ಯಾಸ ನೀಡಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಲ್.ಸಿ.ಆರ್. ವಿದ್ಯಾಸಂಸ್ಥೆ, ಕಕ್ಯಪದವು ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಪ್ರವೀಣ್ ಎ.ಇವರು ವಹಿಸಿದ್ದರು.

4. ದಿನಾಂಕ 04.02.2020ರಂದು ಶೇಷಾದ್ರಿಪುರಂ ಕಾಲೇಜು, ನಾಗಪ್ಪ ಬೀದಿ, ಶೇಷಾದ್ರಿಪುರಂ, ಬೆಂಗಳೂರು ಇವರ ಸಹಯೋಗದೊಂದಿಗೆ ನಡೆದ "ಭಕ್ತಿ ಪರಂಪರೆಯ ಲೋಕಯಾನ ಮತ್ತು ಕನಕದಾಸರು : ಸಮಕಾಲೀನ ಸಂವಾದ" ಎಂಬ ವಿಚಾರದ ಕುರಿತ ಕನಕ ಚಿಂತನ ಪ್ರಚಾರೋಪನ್ಯಾಸ ಕಾರ್ಯಕ್ರಮದಲ್ಲಿ 'ಸತ್ಯಶೋಧನೆಯ ಹಾದಿ : ಕನಕ ಮತ್ತು ಗಾಂಧಿ' ಎಂಬ ವಿಷಯದ ಕುರಿತು ಡಿ.ವಿ.ಜಿ. ಕನ್ನಡ ಅಧ್ಯಯನ ಸಂಸ್ಥೆ, ತುಮಕೂರು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಾದ ಪ್ರೊ. ನಿತ್ಯಾನಂದ ಬಿ. ಶೆಟ್ಟಿ ಇವರು ಉಪನ್ಯಾಸ ನೀಡಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶೇಷಾದ್ರಿಪುರಂ ಕಾಲೇಜಿನ ಪ್ರಾಂಶುಪಾಲರಾದ ಡಾ. ಮೀರಾ ಎಚ್. ಎನ್ . ವಹಿಸಿದ್ದರು. ಗೌರವ ಉಪಸ್ಥಿತರಾಗಿ ಶೇಷಾದ್ರಿಪುರಂ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರಾದ ಪ್ರೊ. ಗೀತಾ ಎಚ್. ಎಂ. ಇವರು ವಹಿಸಿದ್ದರು.

5. ದಿನಾಂಕ 04.02.2020ರಂದು ಶೇಷಾದ್ರಿಪುರಂ ಕಾಲೇಜು, ನಾಗಪ್ಪ ಬೀದಿ, ಶೇಷಾದ್ರಿಪುರಂ, ಬೆಂಗಳೂರು ಇವರ ಸಹಯೋಗದೊಂದಿಗೆ ನಡೆದ "ಭಕ್ತಿ ಪರಂಪರೆಯ ಲೋಕಯಾನ ಮತ್ತು ಕನಕದಾಸರು : ಸಮಕಾಲೀನ ಸಂವಾದ" ಎಂಬ ವಿಚಾರದ ಕುರಿತ ಕನಕ ಚಿಂತನ ಪ್ರಚಾರೋಪನ್ಯಾಸ ಕಾರ್ಯಕ್ರಮದಲ್ಲಿ 'ಕನಕದಾಸರ ಭಕ್ತಿ ಸಾಹಿತ್ಯ : ಪ್ರಸ್ತುತತೆ' ಎಂಬ ವಿಷಯದ ಕುರಿತು ಕನಕಶ್ರೀ ಪ್ರಶಸ್ತಿ ಪುರಸ್ಕೃತರು, ಬೆಂಗಳೂರಿನ ಶಕುಂತಲಾ ದೇವಿ ಇಂಟರ್‌ನ್ಯಾಷನಲ್ ಇನ್‌ಸ್ಟಿಟ್ಯೂಟ್‌ನ ನಿರ್ದೇಶಕರಾದ ಡಾ. ಕೆ. ಗೋಕುಲನಾಥ್ ಇವರು ಉಪನ್ಯಾಸ ನೀಡಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬಿ.ಎಂ.ಎಸ್. ಮಹಿಳಾ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ನಂದ ಎನ್. ವಹಿಸಿದ್ದರು. ಗೌರವ ಉಪಸ್ಥಿತರಾಗಿ ಬಿ.ಎಂ.ಎಸ್. ಮಹಿಳಾ ಮಹಾವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ರಾಧಾ ನಾಡಿಗ ಎಸ್. ಆರ್. ಇವರು ವಹಿಸಿದ್ದರು.

ಕನಕ ಕೀರ್ತನ: 09 ಫೆಬ್ರವರಿ 2019

ಪ್ರೌಢ ಶಾಲೆ, ಪದವಿ ಪೂರ್ವ, ಪದವಿ ಕಾಲೇಜು, ಅಧ್ಯಾಪಕ/ ಆಡಳಿತ ವರ್ಗದವರು ಹಾಗೂ ಸಾರ್ವಜನಿಕ ಮಟ್ಟದ ಕೀರ್ತನ ಗಾಯನ ಕಾರ್ಯಕ್ರಮ

'ಸಾಮುದಾಯಿಕ ಪಾಲ್ಗೊಳ್ಳುವಿಕೆ'ಯ ಆಶಯದ ಹಿನ್ನೆಲೆಯಲ್ಲಿ ಕನಕದಾಸರ ಕೀರ್ತನ ಗಾಯನ ಕಾರ್ಯಕ್ರಮವನ್ನು ಶ್ರೀ ರಾಮಕೃಷ್ಣ ಕಾಲೇಜು, ಬಂಟ್ಸ್ ಹಾಸ್ಟೆಲ್ ಸರ್ಕಲ್, ಮಂಗಳೂರು ಇದರ ಆಶ್ರಯದಲ್ಲಿ ಕಾಲೇಜಿನ ಸಭಾಂಗಣದಲ್ಲಿ ನೆರವೇರಿಸಲಾಯಿತು.

ಪ್ರಸಿದ್ಧ ಕವಿಗಳಾದ ಶ್ರೀ ಬಿ. ಆರ್. ಲಕ್ಷ್ಮಣ ರಾವ್ ಅವರು ಈ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಮಂಗಳೂರು ವಿಶ್ವವಿದ್ಯಾನಿಲಯದ ಕುಲಸಚಿವರಾದ ಪ್ರೊ. ಎ. ಎಂ. ಖಾನ್ ಅವರು ವಹಿಸಿದ್ದರು. ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರಾದ ಕೆ. ರಮೇಶ್, ಬಂಟರ ಯಾನೆ ನಾಡವರ ಮಾತೃ ಸಂಘದ ಪ್ರಧಾನ ಕಾರ್ಯದರ್ಶಿ ಗೋಪಾಲಕೃಷ್ಣ ಶೆಟ್ಟಿ, ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಬಾಲಕೃಷ್ಣ ಶೆಟ್ಟಿ ಕಟೀಲು, ಉಪನ್ಯಾಸಕರಾದ ನಟೇಶ್ ಆಳ್ವ, ಕನಕದಾಸ ಸಂಶೋಧನ ಕೇಂದ್ರದ ಸಂಯೋಜಕರಾದ ಡಾ. ಧನಂಜಯ ಕುಂಬ್ಳೆ, ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರಾದ ನಟೇಶ್ ಆಳ್ವ, ಪ್ರೊ. ಪ್ರತಿಮಾ ಶೆಟ್ಟಿ ಉಪಸ್ಥಿತರಿದ್ದರು.

ಮಂಗಳೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಸಂಯೋಜಿತ ಹಾಗೂ ಘಟಕ ಕಾಲೇಜು, ಮಂಗಳೂರು ತಾಲೂಕು ವ್ಯಾಪ್ತಿಯ ಪ್ರೌಢಶಾಲೆ, ಪದವಿಪೂರ್ವ ಕಾಲೇಜುಗಳ ವಿದ್ಯಾರ್ಥಿ, ಅಧ್ಯಾಪಕ/ ಆಡಳಿತ ವರ್ಗದವರು ಅಲ್ಲದೆ ದಕ್ಷಿಣ ಕನ್ನಡ ಮತ್ತು ಉಡುಪಿ ತಾಲೂಕು ವ್ಯಾಪ್ತಿಯ ಸಾರ್ವಜನಿಕ ವಲಯದ ಅಭ್ಯರ್ಥಿಗಳು ಅಲ್ಲದೆ, ದಕ್ಷಿಣ ಕನ್ನಡ, ಉಡುಪಿ ಹಾಗೂ ಕೊಡಗು ಜಿಲ್ಲಾ ವ್ಯಾಪ್ತಿಯ ರಾಜೀವ ಗಾಂಧಿ ವೈದ್ಯಕೀಯ ಶಿಕ್ಷಣ ಹಾಗೂ ವಿಶ್ವೇಶ್ವರಯ್ಯ ತಾಂತ್ರಿಕ ಶಿಕ್ಷಣ ವಿಶ್ವವಿದ್ಯಾನಿಲಯಗಳ ವಿದ್ಯಾರ್ಥಿ, ಅಧ್ಯಾಪಕ, ಆಡಳಿತ ವರ್ಗದವರ ಸಾಮುದಾಯಿಕ ಪಾಲ್ಗೊಳ್ಳುವಿಕೆಯ ಆಶಯದಲ್ಲಿ ಏರ್ಪಡಿಸಿದ **'ಕನಕ ಕೀರ್ತನ'** ಕೀರ್ತನ ಗಾಯನ ಕಾರ್ಯಕ್ರಮದಲ್ಲಿ ಒಟ್ಟು 64 ಅಭ್ಯರ್ಥಿಗಳು ಹೆಸರು ನೋಂದಾಯಿಸಿದ್ದು 47 ಅಭ್ಯರ್ಥಿಗಳು ಭಾಗವಹಿಸಿ ಕನಕ ಕೀರ್ತನೆಗಳನ್ನು ಹಾಡಿದರು.

'ಕನಕ ಕೀರ್ತನ' ಗಾಯನ ಕಾರ್ಯಕ್ರಮದಿಂದ 'ಕನಕ ಸ್ಮೃತಿ' ಕಾರ್ಯಕ್ರಮಕ್ಕೆ ಆಯ್ಕೆಯಾದ ಅಭ್ಯರ್ಥಿಗಳು:–

ಪ್ರೌಢಶಾಲಾ ವಿಭಾಗ	:	ಶೋಭಿತಾ ಭಟ್, ಮೇರಿವೆಲ್ ಇಂಗ್ಲೀಷ್ ಮೀಡಿಯಂ ಹೈಸ್ಕೂಲ್, ಕಿನ್ನಿಗೋಳಿ, ಭೂಮಿಕ ಬಿ.ಎಸ್, ಶಾರದಾ ವಿದ್ಯಾಲಯ, ಕೊಡಿಯಾಲ್ ಬೈಲ್, ಕೆ. ಆಶ್ವೀಜ ಉಡುಪ, ಮೇರಿವಾಲ್ ಇಂಗ್ಲೀಷ್ ಮೀಡಿಯಂ ಹೈಸ್ಕೂಲ್, ಕಿನ್ನಿಗೋಳಿ
ಪದವಿ ಪೂರ್ವ ವಿಭಾಗ	:	ಆರ್. ಸುದೀಕ್ಷಾ, ಕೆನರಾ ಕಾಲೇಜು, ಮಂಗಳೂರು
ಪದವಿ ವಿಭಾಗ	:	ಸ್ವಾತಿ ಎಮ್, ವಿವೇಕಾನಂದ ಕಾಲೇಜು, ಪುತ್ತೂರು, ನಾಗರಾಜ, ಶ್ರೀ ಕಾಳಾವರ ವರದರಾಜ ಎಂ. ಶೆಟ್ಟಿ ಸ.ಪ್ರ.ದ. ಕಾಲೇಜು, ಕೋಟೇಶ್ವರ, ಉಡುಪಿ, ಪ್ರಭಾಕರ ಎಸ್. ಶ್ರೀನಿವಾಸ ವಿಶ್ವವಿದ್ಯಾನಿಲಯ ಕಾಲೇಜು, ಜಿ.ಎಚ್.ಎಸ್. ರಸ್ತೆ, ಮಂಗಳೂರು
ಅಧ್ಯಾಪಕ ಮತ್ತು ಸಿಬ್ಬಂದಿ ವರ್ಗ	:	ರಜನೀ ಶೆಣೈ, ಶಾರದಾ ವಿದ್ಯಾಲಯ, ಕೊಡಿಯಾಲ್ ಬೈಲ್,

		ರಾಘವೇಂದ್ರ ಉಪಾಧ್ಯಾಯ, ಆಳ್ವಾಸ್ ಆಂಗ್ಲ ಮಾಧ್ಯಮ ಪ್ರೌಢಶಾಲೆ, ಮೂಡಬಿದಿರೆ, ದುರ್ಗೇಶ ನಿಲುಗಲ್ಲ, ಆಳ್ವಾಸ್ ಆಂಗ್ಲ ಮಾಧ್ಯಮ ಪ್ರೌಢಶಾಲೆ, ಮೂಡಬಿದಿರೆ
ಸಾರ್ವಜನಿಕ ವಿಭಾಗ	:	ಶ್ರೀದೇವಿ, ಕಲ್ಲಡ್ಕ, ಬಂಟ್ವಾಳ, ಈಶ್ವರಿ ಪ್ರಕಾಶ್, ಕಾವೂರು
		ಕೃಷ್ಣಪ್ರಭ ಎಂ. ಕಪಿತಾನಿಯೋ, ಮಂಗಳೂರು

ಕನಕ ಗಂಗೋತ್ರಿ: ಸ್ನಾತಕೋತ್ತರ ಮಟ್ಟದ ಕೀರ್ತನ ಗಾಯನ ಕಾರ್ಯಕ್ರಮ :

'ಕನಕ ಜಯಂತಿ' ಪ್ರಯುಕ್ತ ವಿಶ್ವವಿದ್ಯಾನಿಲಯದ ಆವರಣದಲ್ಲಿ ವಿವಿಧ ಸ್ನಾತಕೋತ್ತರ ವಿಭಾಗಗಳ ವಿದ್ಯಾರ್ಥಿ, ಅಧ್ಯಾಪಕ ಹಾಗೂ ಆಡಳಿತವರ್ಗದವರು ಸಾಮುದಾಯಿಕವಾಗಿ ಪಾಲ್ಗೊಳ್ಳುವ ಆಶಯದಲ್ಲಿ 'ಕನಕ ಗಂಗೋತ್ರಿ' ಕೀರ್ತನ ಗಾಯನ ಕಾರ್ಯಕ್ರಮವನ್ನು ದಿನಾಂಕ 13 ನವೆಂಬರ್ 2019 ರಂದು ಪೂರ್ವಾಹ್ನ 11.00 ಗಂಟೆಗೆ ಮಂಗಳಗಂಗೋತ್ರಿಯ ಡಾ. ಯು.ಆರ್. ರಾವ್ ಸಭಾಂಗಣ (ಹಳೆಯ ಸೆನೆಟ್ ಸಭಾಂಗಣ) ದಲ್ಲಿ ಏರ್ಪಡಿಸಲಾಗಿತ್ತು.

ಕಾರ್ಯಕ್ರಮದ ಉದ್ಘಾಟನೆಯನ್ನು ಮತ್ತು ಅಧ್ಯಕ್ಷತೆಯನ್ನು ಮಂಗಳೂರು ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳಾದ ಪ್ರೊ. ಪಿ. ಸುಬ್ರಹ್ಮಣ್ಯ ಯಡಪಡಿತ್ತಾಯ ವಹಿಸಿದ್ದರು. ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಸರಕಾರದ ಸದಸ್ಯರಾದ ಡಾ. ಕಬ್ಬಿನಾಲೆ ವಸಂತ ಭಾರದ್ವಾಜ ಇವರು 'ಕನಕನ ಕಾವ್ಯಭಾಷೆ' ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸವನ್ನು ನೀಡಿದರು. ಮುಖ್ಯ ಅತಿಥಿಗಳಾಗಿ ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ, ಮಂಗಳೂರು ವಿಶ್ವವಿದ್ಯಾನಿಲಯದ ಅಧ್ಯಕ್ಷರಾದ ಪ್ರೊ. ಕೆ. ಅಭಯ ಕುಮಾರ, ಸಂಗೀತ ನಿರ್ದೇಶಕರಾದ ಎ. ಮಾಣಿಕ್ಯ ರಾಜ್ ಕೇಂದ್ರದ ಸಂಯೋಜಕರಾದ ಡಾ. ಧನಂಜಯ ಕುಂಬ್ಳೆ ಉಪಸ್ಥಿತರಿದ್ದರು.

ಈ ಕಾರ್ಯಕ್ರಮದಲ್ಲಿ ಮಂಗಳೂರು ವಿಶ್ವವಿದ್ಯಾನಿಲಯ ಮತ್ತು ವಿಶ್ವೇಶ್ವರಯ್ಯ ತಾಂತ್ರಿಕ ಶಿಕ್ಷಣ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗಗಳ ವಿದ್ಯಾರ್ಥಿಗಳು, ಎಂ.ಐ.ಟಿ. ಮಣಿಪಾಲ ವಿಶ್ವವಿದ್ಯಾನಿಲಯ ಹಾಗೂ ಎಂ.ಜಿ.ಎಂ. ಕಾಲೇಜು, ಉಡುಪಿ ಸ್ನಾತಕೋತ್ತರ ವಿಭಾಗಗಳ ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ಆಡಳಿತ ವರ್ಗದ ಸಿಬ್ಬಂದಿಗಳು ಸೇರಿ ಒಟ್ಟು 35 ಮಂದಿ ಅಭ್ಯರ್ಥಿಗಳು ಭಾಗವಹಿಸಿ ಕನಕ ಕೀರ್ತನೆಗಳನ್ನು ಹಾಡಿದರು.

'ಕನಕ ಗಂಗೋತ್ರಿ' : ಕೀರ್ತನ ಗಾಯನ ಕಾರ್ಯಕ್ರಮದಿಂದ 'ಕನಕ ಸೃಷ್ಟಿ' ಕಾರ್ಯಕ್ರಮಕ್ಕೆ ಆಯೆಯಾದ ಅಭ್ಯರ್ಥಿಗಳು:–

ವಿದ್ಯಾರ್ಥಿ ವಿಭಾಗ	:	ರಶ್ಮಿ ಬಿ. ವಿವೇಕಾನಂದ ಕಾಲೇಜು, ಪುತ್ತೂರು,
		ಚಿನ್ಮಯಿ ಭಟ್, ಮಂಗಳೂರು ವಿಶ್ವವಿದ್ಯಾನಿಲಯ
ಪೋತ್ಸಾಹಕ		ಅನುಷಾ ಸಿ.ಎಚ್. ವಿವೇಕಾನಂದ ಕಾಲೇಜು, ಪುತ್ತೂರು
ಅಧ್ಯಾಪಕ ವಿಭಾಗ		
ಪೋತ್ಸಾಹಕ	:	ಶ್ರೀವಾಣಿ, ಸೈಂಟ್ ಆಗ್ನೇಸ್ ಕಾಲೇಜು, ಮಂಗಳೂರು
		ಪೃಥ್ವಿ ಶೆಣೈ ಎಂ.ಐ.ಟಿ. ಮಣಿಪಾಲ
		ಚೈತ್ರಾ ಎಂ. ಎಂ.ಐ.ಟಿ. ಮಣಿಪಾಲ
ಸಿಬ್ಬಂದಿ ವಿಭಾಗ		
ಪೋತ್ಸಾಹಕ	:	ರೇಖಾ ರಾವ್, ಎಂ.ಐ.ಸಿ. ಮಣಿಪಾಲ
		ಶಶಿಪ್ರಭ ಕಾರಂತ್, ಮಾಹೆ ಮಣಿಪಾಲ
		ವಿನೀಶ್, ಇತಿಹಾಸ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ

ನೃತ್ಯ ನಾಟಕ – 'ಗೋಕುಲ ನಿರ್ಗಮನ'

ರಚನೆ : ಪು.ತಿ.ನ

ಸಂಜೆ 5–00 ಗಂಟೆಗೆ ಮಂಗಳೂರು ವಿಶ್ವವಿದ್ಯಾನಿಲಯದ ಮಂಗಳ ಸಭಾಂಗಣದಲ್ಲಿ ಶ್ವೇತಾ ಅರೆಹೊಳೆ ನಿರ್ದೇಶನದ, ಅರೆಹೊಳೆ ಪ್ರತಿಷ್ಠಾನದ ನಂದಗೋಕುಲ ಕಲಾವಿದರಿಂದ 'ಗೋಕುಲ ನಿರ್ಗಮನ' ಎಂಬ ನೃತ್ಯ ನಾಟಕ ಕಾರ್ಯಕ್ರಮವು ನಡೆಯಿತು.

ಕನಕ ಪ್ರಸರಣ

ಪ್ರಗತಿಯಲ್ಲಿರುವ ಯೋಜನೆಗಳು: ಪ್ರಕಟಣೆಗಳು:

ಕನಕ ಸಂಶೋಧನ ಮಾಲಿಕೆ:

ಕನಕದಾಸರ ಅಧ್ಯಯನ : ಸಮಗ್ರ ಸಂಪುಟ

ಕನಕದಾಸ ಅಧ್ಯಯನ ಸಮಗ್ರ ಸಂಪುಟ–2ರಲ್ಲಿ ಕನಕದಾಸರ ಸಾಹಿತ್ಯ ಕೃತಿಗಳಾದ 'ನಳಚರಿತೆ', 'ರಾಮಧಾನ್ಯ ಚರಿತೆ', ಕುರಿತ 87 ವಿಮರ್ಶಾ ಲೇಖನಗಳನ್ನು, ಕನಕದಾಸ ಅಧ್ಯಯನ ಸಮಗ್ರ ಸಂಪುಟ–3ರಲ್ಲಿ 'ಹರಿಭಕ್ತಿಸಾರ' ಮತ್ತು 'ಮೋಹನತರಂಗಿಣಿ' ಕೃತಿಗಳಿಗೆ ಸಂಬಂಧಿಸಿದ 84 ಲೇಖನಗಳನ್ನು ಸಂಪಾದಿಸಿ ಈಗಾಗಲೇ ಸಂಗ್ರಹಿಸಲಾಗಿದ್ದು, ಪ್ರಕಟಣೆಗೆ ಸಿದ್ದಪಡಿಸಲಾಗಿದೆ.

ಕನಕ ಚಿಂತನ ಪ್ರಚಾರೋಪನ್ಯಾಸ ಮಾಲಿಕೆ : 4, 5, 6,7,8,9,10,11

ಕನಕ ಚಿಂತನ– 2012–2013(ಪ್ರಚಾರೋಪನ್ಯಾಸಗಳ ಪ್ರಬಂಧ) ಮಾಲಿಕೆ : 4

2012–13ರ ಶೈಕ್ಷಣಿಕ ವರ್ಷದಲ್ಲಿ 'ಕನಕದಾಸರ ಕೀರ್ತನೆಗಳು –ಸಮಕಾಲೀನ ಸಂವಾದ' ಎಂಬ ವಿಷಯದ ಕುರಿತು ಏರ್ಪಡಿಸಿದ 15 ಪ್ರಚಾರೋಪನ್ಯಾಸ ಪ್ರಬಂಧಗಳನ್ನು ಸಂಪಾದಿಸಿ ಗ್ರಂಥರೂಪದಲ್ಲಿ ಪ್ರಕಟಿಸಲಾಗುವುದು. ಈವರೆಗೆ 'ಕನಕದಾಸರ ಕೀರ್ತನೆಗಳು – ಸಮಕಾಲೀನ ಸಂವಾದ' ಪ್ರಚಾರೋಪನ್ಯಾಸದ 10 ಪ್ರಬಂಧಗಳನ್ನು ಸಂಗ್ರಹಿಸಲಾಗಿದೆ. ಉಳಿದ ಪ್ರಬಂಧಗಳನ್ನು ಸಂಗ್ರಹಿಸಲಾಗುತ್ತಿದೆ.

ಕನಕ ಚಿಂತನ– 2013–2014 (ಪ್ರಚಾರೋಪನ್ಯಾಸಗಳ ಪ್ರಬಂಧ) ಮಾಲಿಕೆ : 5

2013–2014ರಲ್ಲಿ 'ಕುಲ ಕುಲವೆಂದು ಹೊಡೆದಾಡದಿರಿ – ಸಮಕಾಲೀನ ಸಂವಾದ' ಎಂಬ ವಿಷಯದ ಕುರಿತು ಏರ್ಪಡಿಸಿದ 25 ಪ್ರಚಾರೋಪನ್ಯಾಸ ಪ್ರಬಂಧಗಳನ್ನು ಸಂಪಾದಿಸಿ ಗ್ರಂಥರೂಪದಲ್ಲಿ ಪ್ರಕಟಿಸಲಾಗುವುದು. ಈವರೆಗೆ 'ಕುಲ ಕುಲವೆಂದು ಹೊಡೆದಾಡದಿರಿ – ಸಮಕಾಲೀನ ಸಂವಾದ ಪ್ರಚಾರೋಪನ್ಯಾಸದ 18 ಪ್ರಬಂಧಗಳನ್ನು ಸಂಗ್ರಹಿಸಲಾಗಿದೆ. ಉಳಿದ ಪ್ರಬಂಧಗಳನ್ನು ಸಂಗ್ರಹಿಸಲಾಗುತ್ತಿದೆ.

ಕನಕ ಚಿಂತನ– 2014–2015 (ಪ್ರಚಾರೋಪನ್ಯಾಸಗಳ ಪ್ರಬಂಧ) ಮಾಲಿಕೆ : 6

2014–15ರಲ್ಲಿ 'ಬಾಗಿಲನು ತೆರೆದು... ದೇಗುಲ ಪ್ರವೇಶ ಸಮಕಾಲೀನ ಸಂವಾದ' ಎಂಬ ವಿಷಯದ ಕುರಿತು ಏರ್ಪಡಿಸಿದ 24 ಪ್ರಚಾರೋಪನ್ಯಾಸ ಪ್ರಬಂಧಗಳನ್ನು ಸಂಪಾದಿಸಿ ಗ್ರಂಥರೂಪದಲ್ಲಿ ಪ್ರಕಟಿಸಲಾಗುವುದು. ಈವರೆಗೆ 'ಬಾಗಿಲನು ತೆರೆದು... ದೇಗುಲ ಪ್ರವೇಶ ಸಮಕಾಲೀನ ಸಂವಾದ' ಪ್ರಚಾರೋಪನ್ಯಾಸದ 10 ಪ್ರಬಂಧಗಳನ್ನು ಸಂಗ್ರಹಿಸಲಾಗಿದೆ. ಉಳಿದ ಪ್ರಬಂಧಗಳನ್ನು ಸಂಗ್ರಹಿಸಲಾಗುತ್ತಿದೆ.

ಕನಕ ಚಿಂತನ– 2015– 2016 (ಪ್ರಚಾರೋಪನ್ಯಾಸಗಳ ಪ್ರಬಂಧ) ಮಾಲಿಕೆ: 7

2015–16ರಲ್ಲಿ 'ಹೀನಗಳೆದವರಲ್ಲನಿನ್ನನು ನಾವು ಸಭೆಯೊಳಗೆ' ಆಹಾರ ರಾಜಕಾರಣ– ಸಮಕಾಲೀನ ಸಂವಾದ' ಎಂಬ ವಿಷಯದ ಕುರಿತು ಏರ್ಪಡಿಸಿದ 31 ಪ್ರಚಾರೋಪನ್ಯಾಸ ಪ್ರಬಂಧಗಳನ್ನು ಸಂಪಾದಿಸಿ ಗ್ರಂಥರೂಪದಲ್ಲಿ ಪ್ರಕಟಿಸಲಾಗುವುದು. ಈವರೆಗೆ 'ಹೀನಗಳೆದವರಲ್ಲನಿನ್ನನು ನಾವು ಸಭೆಯೊಳಗೆ'ಆಹಾರ ರಾಜಕಾರಣ– ಸಮಕಾಲೀನ ಸಂವಾದ' ಪ್ರಚಾರೋಪನ್ಯಾಸದ 26 ಪ್ರಬಂಧಗಳನ್ನು ಸಂಗ್ರಹಿಸಲಾಗಿದೆ. ಉಳಿದ ಪ್ರಬಂಧಗಳನ್ನು ಸಂಗ್ರಹಿಸಲಾಗುತ್ತಿದೆ.

ಕನಕ ಚಿಂತನ– 2016–17 (ಪ್ರಚಾರೋಪನ್ಯಾಸಗಳ ಪ್ರಬಂಧ) ಮಾಲಿಕೆ: 8

2016–17ರಲ್ಲಿ 'ಭಕ್ತಿ ಪರಂಪರೆಗಳು : ಅಧಾತ್ಮ–ಲೌಕಿಕ : ಮರು ಪರಿಶೀಲನೆ' ಎಂಬ ವಿಷಯದ ಕುರಿತು ಏರ್ಪಡಿಸಿದ 28 ಪ್ರಚಾರೋಪನ್ಯಾಸ ಪ್ರಬಂಧಗಳನ್ನು ಸಂಪಾದಿಸಿ ಗ್ರಂಥರೂಪದಲ್ಲಿ ಪ್ರಕಟಿಸಲಾಗುವುದು. ಈವರೆಗೆ 'ಭಕ್ತಿ ಪರಂಪರೆಗಳು : ಅಧಾತ್ಮ–ಲೌಕಿಕ : ಮರು ಪರಿಶೀಲನೆ' ಪ್ರಚಾರೋಪನ್ಯಾಸದ 19 ಪ್ರಬಂಧಗಳನ್ನು ಸಂಗ್ರಹಿಸಲಾಗಿದೆ. ಉಳಿದ ಪ್ರಬಂಧಗಳನ್ನು ಸಂಗ್ರಹಿಸಲಾಗುತ್ತಿದೆ.

ಕನಕ ಚಿಂತನ– 2017–18 (ಪ್ರಚಾರೋಪನ್ಯಾಸಗಳ ಪ್ರಬಂಧ) ಮಾಲಿಕೆ: 9

20017–18ರಲ್ಲಿ 'ಭಕ್ತಿ ಪರಂಪರೆಯ ಲೋಕಯಾನ ಮತ್ತು ಕನಕದಾಸರು : ಸಮಕಾಲೀನ ಸಂವಾದ' ಎಂಬ ವಿಷಯದ ಕುರಿತು ಏರ್ಪಡಿಸಿದ 02 ಪ್ರಚಾರೋಪನ್ಯಾಸ ಪ್ರಬಂಧಗಳನ್ನು ಸಂಪಾದಿಸಿ ಗ್ರಂಥರೂಪದಲ್ಲಿ ಪ್ರಕಟಿಸಲು ಪ್ರಬಂಧಗಳನ್ನು ಸಂಗ್ರಹಿಸಲಾಗುವುದು.

ಕನಕ ಚಿಂತನ– 2018–19 (ಪ್ರಚಾರೋಪನ್ಯಾಸಗಳ ಪ್ರಬಂಧ) ಮಾಲಿಕೆ: 10

2018–19ರಲ್ಲಿ 'ಭಕ್ತಿ ಪರಂಪರೆಯ ಲೋಕಯಾನ ಮತ್ತು ಕನಕದಾಸರು : ಸಮಕಾಲೀನ ಸಂವಾದ' ಎಂಬ ವಿಷಯದ ಕುರಿತು ಏರ್ಪಡಿಸಿದ 01 ಪ್ರಚಾರೋಪನ್ಯಾಸದ ಪ್ರಬಂಧವನ್ನು ಸಂಗ್ರಹಿಸಲಾಗುವುದು.

ಕನಕ ಚಿಂತನ– 2019–20 (ಪ್ರಚಾರೋಪನ್ಯಾಸಗಳ ಪ್ರಬಂಧ) ಮಾಲಿಕೆ: 11

2019–20ರಲ್ಲಿ 'ಭಕ್ತಿ ಪರಂಪರೆಯ ಲೋಕಯಾನ ಮತ್ತು ಕನಕದಾಸರು : ಸಮಕಾಲೀನ ಸಂವಾದ' ಎಂಬ ವಿಷಯದ ಕುರಿತು ಏರ್ಪಡಿಸಿದ ರಾಷ್ಟ್ರೀಯ ವಿಚಾರಸಂಕಿರಣದಲ್ಲಿ ಮಂಡಿಸಿದ 9 ಪ್ರಬಂಧಗಳು ಮತ್ತು 5 ಪ್ರಚಾರೋಪನ್ಯಾಸದ ಪ್ರಬಂಧಗಳನ್ನು ಸಂಪಾದಿಸಿ ಗ್ರಂಥರೂಪದಲ್ಲಿ ಪ್ರಕಟಿಸಲು ಪ್ರಬಂಧಗಳನ್ನು ಸಂಗ್ರಹಿಸಲಾಗುವುದು.

ಕನಕ ಮರುಮುದ್ರಣ ಮಾಲಿಕೆ : 2

ಕನಕದಾಸ: ಸಮಗ್ರ ನಾಟಕ ಸಂಪುಟ

1927ರಿಂದ ಈವರೆಗೂ ಪ್ರಕಟಗೊಂಡಿರುವ ಕನಕದಾಸರಿಗೆ ಸಂಬಂಧಿಸಿದ ನಾಟಕಗಳನ್ನು ಸಂಗ್ರಹಿಸಿ, ಸಂಪಾದಿಸಿ ಪ್ರಕಟಿಸಲಾಗುವುದು. ಈ ಹಿಂದೆ ಕನಕದಾಸರ ಜೀವನ ಚರಿತ್ರೆಗೆ ಸಂಬಂಧಿಸಿದಂತೆ ರಾಜ್ಯದ ವಿವಿಧ ವಿಶ್ವವಿದ್ಯಾನಿಲಯಗಳು ಹಾಗೂ ಸಂಘ ಸಂಸ್ಥೆಗಳ ಗ್ರಂಥಾಲಯಗಳಿಂದ ಈವರೆಗೆ ಒಟ್ಟು 16 ನಾಟಕ ಕೃತಿಗಳನ್ನು ಸಂಗ್ರಹಿಸಲಾಗಿದೆ. ಒಟ್ಟು 16 ನಾಟಕ ಕೃತಿಗಳನ್ನು ಸಮಗ್ರ ಸಂಪುಟ ರೂಪದಲ್ಲಿ ಪ್ರಕಟಿಸಲು ಸಿದ್ಧಪಡಿಸಲಾಗುತ್ತಿದೆ.

ಕನಕ ಕವನ ಸಂಪುಟ

ಕನಕದಾಸರ ಕುರಿತು ಈವರೆಗೆ ಪ್ರಕಟಗೊಂಡಿರುವ ಕವನಗಳನ್ನು ಸಂಗ್ರಹಿಸಿ, ಸಂಪಾದಿಸುವ ಯೋಜನೆಯನ್ನು ಕೈಗೊಂಡಿದ್ದು, ಈವರೆಗೆ ಒಟ್ಟು 132 ಕವನಗಳನ್ನು ಸಂಗ್ರಹಿಸಿದ್ದು ಸಮಗ್ರ ಸಂಪುಟ ರೂಪದಲ್ಲಿ ಪ್ರಕಟಿಸಲು ಸಿದ್ಧಪಡಿಸಲಾಗುತ್ತಿದೆ.

ಕನಕ ವಾಙ್ಮಯ ಕೇಂದ್ರದ ವಿಸ್ತರಣೆ

ಗ್ರಂಥಾಲಯ

ಪುಸ್ತಕ ಖರೀದಿ:

ಕನಕದಾಸ, ದಾಸ ಪರಂಪರೆ, ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಗೆ ಸಂಬಂಧಿಸಿದ, ಭಕ್ತಿ ಪರಂಪರೆಗೆ ಸಂಬಂಧಿಸಿದ, ತತ್ತ್ವಶಾಸ್ತ್ರ, ಧರ್ಮ, ದಾಸ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಗ್ರಂಥಗಳನ್ನು ಖರೀದಿಸಲಾಗುವುದು. ಕೇಂದ್ರದ ಗ್ರಂಥಾಲಯದಲ್ಲಿ ಒಟ್ಟು 1132 ಪುಸ್ತಕಗಳಿವೆ.

ನೆರಳು ಪ್ರತಿ:

ಕನಕದಾಸರ ಕೃತಿ, ದಾಸಸಾಹಿತ್ಯದ ಪಠ್ಯ ಮತ್ತು ಅಧ್ಯಯನ ಗ್ರಂಥಗಳ ಮತ್ತು ಅಪೂರ್ವ ಅಲಭ್ಯ ಕೃತಿಗಳ ನೆರಳು ಪ್ರತಿಗಳನ್ನು ಕನಕ ಗ್ರಂಥಾಲಯದಲ್ಲಿ ಸಂಗ್ರಹಿಸಿಡಲಾಗುತ್ತಿದೆ.

ಕನಕ ಕಡತ:

ಕನಕದಾಸ ಹಾಗೂ ದಾಸವಾಙ್ಮಯದ ಕುರಿತಾಗಿ ವಿವಿಧ ಮಾಹಿತಿ ಕಡತಗಳನ್ನು ಈ ಕೆಳಗೆ ಸೂಚಿಸಿರುವ ಮಾದರಿ ವಿಷಯಗಳಿಗೆ ಸಂಬಂಧಿಸಿದಂತೆ ಸಿದ್ಧಪಡಿಸಲಾಗುತ್ತಿದೆ.

1) ಕನಕದಾಸ ಮತ್ತು ದಾಸವಾಙ್ಮಯದ ಕುರಿತು ನಡೆದಿರುವ ಅಧ್ಯಯನಗಳ ಮಾಹಿತಿ
   (ಪಿಹೆಚ್.ಡಿ ಮಹಾಪ್ರಬಂಧ, ಪುಸ್ತಕ, ಲೇಖನ, ಇತ್ಯಾದಿ ಬಗೆಯವು)
2) ನಾಡಿನ ವಿವಿಧ ಕಡೆಗಳಲ್ಲಿ ಕಾರ್ಯಾಚರಿಸುತ್ತಿರುವ ಕನಕದಾಸ ಹಾಗೂ ದಾಸವಾಙ್ಮಯ ಅಧ್ಯಯನ ಕೇಂದ್ರಗಳ ಕುರಿತಂತೆ ಮಾಹಿತಿ.
3) ಕನಕದಾಸರು ಪ್ರಸ್ತಾವಿಸಿರುವ ಈಗಲೂ ಪ್ರಚಲಿತದಲ್ಲಿರುವ ಹಲವಾರು ಸಾಮಾಜಿಕ, ಸಾಂಸ್ಕೃತಿಕ ಸಮಸ್ಯೆಗಳ, ಸಂಗತಿಗಳ ಕುರಿತಂತೆ ನಡೆಯುತ್ತಿರುವ ವಾಗ್ವಾದಗಳ ಕುರಿತ ಮಾಹಿತಿ.

ಪ್ರಸರಣ– ಮಾರಾಟ

ಪುಸ್ತಕ, ಧ್ವನಿಸುರುಳಿ ಪ್ರದರ್ಶನ ಮತ್ತು ಮಾರಾಟ

1. ದಿನಾಂಕ 01.10.2019ರಂದು ಕನಕದಾಸ ಸಂಶೋಧನ ಕೇಂದ್ರವು ಕಣ್ಣೂರು ವಿಶ್ವವಿದ್ಯಾನಿಲಯ, ಕನ್ನಡ ವಿಭಾಗ, ಭಾರತೀಯ ಭಾಷಾ ಅಧ್ಯಯನಾಂಗ, ಕಾಸರಗೋಡು ಇವರ ಸಹಯೋಗದೊಂದಿಗೆ ಏರ್ಪಡಿಸಿದ 'ಕನಕ ತತ್ತ್ವಚಿಂತನ ಪ್ರಚಾರೋಪನ್ಯಾಸ' ಮಾಲಿಕೆಯಡಿ ನಡೆದ ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣ ಕಾರ್ಯಕ್ರಮದಲ್ಲಿ ಕೇಂದ್ರದ ಪ್ರಕಟಣೆಗಳ ಪ್ರದರ್ಶನ ಮತ್ತು ಮಾರಾಟವನ್ನು ಮಾಡಲಾಯಿತು.
2. 'ಕನಕ ಜಯಂತಿ' ಪ್ರಯುಕ್ತ ಕನಕದಾಸ ಸಂಶೋಧನ ಕೇಂದ್ರದ ವತಿಯಿಂದ ದಿನಾಂಕ 13.11.2019ರಂದು ಮಂಗಳಗಂಗೋತ್ರಿಯ ಡಾ. ಯು.ಆರ್. ರಾವ್ ಸಭಾಂಗಣ (ಹಳೆಯ ಸೆನೆಟ್ ಸಭಾಂಗಣ)ದಲ್ಲಿ ಹಮ್ಮಿಕೊಂಡಿದ್ದ ಸ್ನಾತಕೋತ್ತರ ಅಂತರ್ ವಿಭಾಗೀಯ ಮತ್ತು ಬೋಧಕ/ಬೋಧಕೇತರ ಮಟ್ಟದಲ್ಲಿ ಏರ್ಪಡಿಸಿದ 'ಕನಕ ಗಂಗೋತ್ರಿ' ಕನಕದಾಸರ ಕೀರ್ತನ ಗಾಯನ ಕಾರ್ಯಕ್ರಮದಲ್ಲಿ ಕೇಂದ್ರದ ಪ್ರಕಟಣೆಗಳ ಪ್ರದರ್ಶನ ಮತ್ತು ಮಾರಾಟವನ್ನು ಮಾಡಲಾಯಿತು.
3. ದಿನಾಂಕ 08.01.2020ರಂದು ಕನಕದಾಸ ಸಂಶೋಧನ ಕೇಂದ್ರವು ಶಾರದಾ ಪದವಿ ಕಾಲೇಜು, ದೇವಿನಗರ, ತಲಪಾಡಿ ಇವರ ಸಹಯೋಗದೊಂದಿಗೆ ಏರ್ಪಡಿಸಿದ 'ಕನಕ ತತ್ತ್ವಚಿಂತನ ಪ್ರಚಾರೋಪನ್ಯಾಸ' ಮಾಲಿಕೆಯಡಿ ನಡೆದ ಉಪನ್ಯಾಸ ಕಾರ್ಯಕ್ರಮದಲ್ಲಿ ಕೇಂದ್ರದ ಪ್ರಕಟಣೆಗಳ ಪ್ರದರ್ಶನ ಮತ್ತು ಮಾರಾಟವನ್ನು ಮಾಡಲಾಯಿತು.

4. ದಿನಾಂಕ 13.01.2020ರಂದು ಕನಕದಾಸ ಸಂಶೋಧನ ಕೇಂದ್ರವು ವಿವೇಕಾನಂದ ಶಿಕ್ಷಣ ಮಹಾವಿದ್ಯಾಲಯ, ತೆಂಕಿಲ, ಪುತ್ತೂರು ಇವರ ಸಹಯೋಗದೊಂದಿಗೆ ಏರ್ಪಡಿಸಿದ 'ಕನಕ ತತ್ತ್ವಚಿಂತನ ಪ್ರಚಾರೋಪನ್ಯಾಸ' ಮಾಲಿಕೆಯಡಿ ನಡೆದ ಉಪನ್ಯಾಸ ಕಾರ್ಯಕ್ರಮದಲ್ಲಿ ಕೇಂದ್ರದ ಪ್ರಕಟಣೆಗಳ ಪ್ರದರ್ಶನ ಮತ್ತು ಮಾರಾಟವನ್ನು ಮಾಡಲಾಯಿತು.

5. ದಿನಾಂಕ 22.01.2020ರಂದು ಕನಕದಾಸ ಸಂಶೋಧನ ಕೇಂದ್ರವು ಎಲ್.ಸಿ.ಆರ್. ವಿದ್ಯಾಸಂಸ್ಥೆ, ಕಕ್ಯಪದವು, ಬಂಟ್ವಾಳ ಇವರ ಸಹಯೋಗದೊಂದಿಗೆ ಏರ್ಪಡಿಸಿದ 'ಕನಕ ತತ್ತ್ವಚಿಂತನ ಪ್ರಚಾರೋಪನ್ಯಾಸ' ಮಾಲಿಕೆಯಡಿ ನಡೆದ ಉಪನ್ಯಾಸ ಕಾರ್ಯಕ್ರಮದಲ್ಲಿ ಕೇಂದ್ರದ ಪ್ರಕಟಣೆಗಳ ಪ್ರದರ್ಶನ ಮತ್ತು ಮಾರಾಟವನ್ನು ಮಾಡಲಾಯಿತು.

6. ದಿನಾಂಕ 28.01.2020ರಂದು ಕನಕದಾಸ ಸಂಶೋಧನ ಕನ್ನಡ ಸ್ನಾತಕೋತ್ತರ ಅಧ್ಯಯನ ವಿಭಾಗ, ಸರಕಾರಿ ಪ್ರಥಮ ದರ್ಜೆ ಕಾಲೇಜು, ಬೆಳ್ತಂಗಡಿ ಇವರ ಸಹಯೋಗದೊಂದಿಗೆ ಏರ್ಪಡಿಸಿದ 'ಕನಕ ತತ್ತ್ವಚಿಂತನ ಪ್ರಚಾರೋಪನ್ಯಾಸ' ಮಾಲಿಕೆಯಡಿ ನಡೆದ ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣ ಕಾರ್ಯಕ್ರಮದಲ್ಲಿ ಕೇಂದ್ರದ ಪ್ರಕಟಣೆಗಳ ಪ್ರದರ್ಶನ ಮತ್ತು ಮಾರಾಟವನ್ನು ಮಾಡಲಾಯಿತು.

7. ದಿನಾಂಕ 01.02.2020ರಂದು ಕನಕದಾಸ ಸಂಶೋಧನ ಕೇಂದ್ರವು ಶ್ರೀ ರಾಮಕೃಷ್ಣ ಕಾಲೇಜು, ಬಂಟ್ಸ್ ಹಾಸ್ಟೆಲ್ ಸರ್ಕಲ್, ಮಂಗಳೂರು ಇವರ ಸಹಯೋಗದೊಂದಿಗೆ ಏರ್ಪಡಿಸಿದ ಅಂತರ್ ಕಾಲೇಜು ಮತ್ತು ಸಾರ್ವಜನಿಕ ಮಟ್ಟದ 'ಕನಕ ಕೀರ್ತನ' ಗಾಯನ ಕಾರ್ಯಕ್ರಮದಲ್ಲಿ ಕೇಂದ್ರದ ಪ್ರಕಟಣೆಗಳ ಪ್ರದರ್ಶನ ಮತ್ತು ಮಾರಾಟವನ್ನು ಮಾಡಲಾಯಿತು.

8. ದಿನಾಂಕ 04.02.2020ರಂದು ಕನಕದಾಸ ಸಂಶೋಧನ ಕೇಂದ್ರವು ಶೇಷಾದ್ರಿಪುರಂ ಕಾಲೇಜು, ನಾಗಪ್ಪ ಬೀದಿ, ಶೇಷಾದ್ರಿಪುರಂ, ಬೆಂಗಳೂರು ಇವರ ಸಹಯೋಗದೊಂದಿಗೆ ಏರ್ಪಡಿಸಿದ 'ಕನಕ ತತ್ತ್ವಚಿಂತನ ಪ್ರಚಾರೋಪನ್ಯಾಸ' ಮಾಲಿಕೆಯಡಿ ನಡೆದ ಉಪನ್ಯಾಸ ಕಾರ್ಯಕ್ರಮದಲ್ಲಿ ಕೇಂದ್ರದ ಪ್ರಕಟಣೆಗಳ ಪ್ರದರ್ಶನ ಮತ್ತು ಮಾರಾಟವನ್ನು ಮಾಡಲಾಯಿತು.

9. ದಿನಾಂಕ 04.02.2020ರಂದು ಕನಕದಾಸ ಸಂಶೋಧನ ಬಿ.ಎಂ.ಎಸ್. ಮಹಿಳಾ ಮಹಾವಿದ್ಯಾಲಯ, ಬಸವನಗುಡಿ, ಬೆಂಗಳೂರು ಇವರ ಸಹಯೋಗದೊಂದಿಗೆ ಏರ್ಪಡಿಸಿದ 'ಕನಕ ತತ್ತ್ವಚಿಂತನ ಪ್ರಚಾರೋಪನ್ಯಾಸ' ಮಾಲಿಕೆಯಡಿ ನಡೆದ ಉಪನ್ಯಾಸ ಕಾರ್ಯಕ್ರಮದಲ್ಲಿ ಕೇಂದ್ರದ ಪ್ರಕಟಣೆಗಳ ಪ್ರದರ್ಶನ ಮತ್ತು ಮಾರಾಟವನ್ನು ಮಾಡಲಾಯಿತು.

ಕನಕದಾಸ ಸಂಶೋಧನ ಕೇಂದ್ರವು ಒಟ್ಟು 7 ಕೃತಿಗಳನ್ನು, ಒಂದು ಧ್ವನಿಸುರಳಿಯನ್ನು ಪ್ರಕಟಿಸಿದ್ದು, ಇವುಗಳ ಮಾರಾಟದ ವ್ಯವಸ್ಥೆಯನ್ನು ಕೂಡಾ ಕೇಂದ್ರವು ಮಾಡುತ್ತಿದೆ.

ಕನಕದಾಸ ಸಂಶೋಧನ ಕೇಂದ್ರದ ಪ್ರಕಟಣೆಗಳು

1. ಕನಕದಾಸರ ಕೀರ್ತನೆಗಳ ಶಬ್ದ ಪ್ರಯೋಗ ಕೋಶ, 2010
2. ಕನಕ ಚಿಂತನ 2007–2008 (ಪ್ರಚಾರೋಪನ್ಯಾಸ ಪ್ರಬಂಧಗಳು), 2010,
   (ಮರುಮುದ್ರಣ) 2018–19
3. ಕನಕ ಚಿಂತನ 2009–2010 (ಪ್ರಚಾರೋಪನ್ಯಾಸ ಪ್ರಬಂಧಗಳು), 2010
   (ಮರುಮುದ್ರಣ) 2018–19
4. ಕನಕದಾಸರ ಕೀರ್ತನೆ (ಮರುಮುದ್ರಿತ ಆವೃತ್ತಿ), 2011
5. ಕನಕ ಚಿಂತನ 2011–12 (ಪ್ರಚಾರೋಪನ್ಯಾಸ ಪ್ರಬಂಧಗಳು), 2013
6. ಕನಕನ ಸುತ್ತಮುತ್ತ: ಸಂಕಥನಗಳ ಜಿಜ್ಞಾಸೆ (ವಿಚಾರ ಸಂಕಿರಣ ಪ್ರಬಂಧಗಳು), 2013
7. ನೀ ಮಾಯೆಯೊಳಗೊ ನಿನ್ನೊಳು ಮಾಯೆಯೊ (ಕನಕದಾಸ ಅಧ್ಯಯನ ಸಮಗ್ರ ಸಂಪುಟ ಭಾಗ–1), 2013

ಧ್ವನಿ ಸುರುಳಿ :

1. ಕೀರ್ತನ ಗಂಗೋತ್ರಿ ಧ್ವನಿ ಸುರುಳಿ

ಕೇಂದ್ರದ ವತಿಯಿಂದ ಮಾರಾಟವಾದ ಪ್ರತಿಗಳ ವಿವರ : 2019–2020

1) ಕನಕದಾಸರ ಕೀರ್ತನೆಗಳ ಶಬ್ದ ಪ್ರಯೋಗ ಕೋಶ: : (ಸಂ. ಪ್ರೊ. ಶ್ರೀನಿವಾಸ ಹಾವನೂರ ಮತ್ತು ವಿ. ಕೃಷ್ಣ)
   ಮಾರಾಟವಾದ ಒಟ್ಟು ಪ್ರತಿಗಳು: 43

2) ಕನಕ ಚಿಂತನ 2007–2008 (ಪ್ರಚಾರೋಪನ್ಯಾಸ ಪ್ರಬಂಧಗಳು):
   ಮಾರಾಟವಾದ ಒಟ್ಟು ಪ್ರತಿಗಳು: 48

3) ಕನಕ ಚಿಂತನ 2009–2010 (ಪ್ರಚಾರೋಪನ್ಯಾಸ ಪ್ರಬಂಧಗಳು):

ಮಾರಾಟವಾದ ಒಟ್ಟು ಪ್ರತಿಗಳು: 48

4) ಕನಕದಾಸರ ಕೀರ್ತನೆ–ಸಂ. ಪಾವಂಜೆ ಗುರುರಾವ್ (ಮರುಮುದ್ರಿತ ಆವೃತ್ತಿ):

ಮಾರಾಟವಾದ ಒಟ್ಟು ಪ್ರತಿಗಳು: 68

5) ಕನಕ ಚಿಂತನ 2011–12 (ಪ್ರಚಾರೋಪನ್ಯಾಸ ಪ್ರಬಂಧಗಳು)

ಮಾರಾಟವಾದ ಒಟ್ಟು ಪ್ರತಿಗಳು: 51

6) ಕನಕನ ಸುತ್ತಮುತ್ತ: ಸಂಕಥನಗಳ ಜಿಜ್ಞಾಸೆ (ವಿಚಾರ ಸಂಕಿರಣ ಪ್ರಬಂಧಗಳು)

ಮಾರಾಟವಾದ ಒಟ್ಟು ಪ್ರತಿಗಳು: 49

7) ನೀ ಮಾಯೆಯೊಳಗೊ ನಿನ್ನೊಳು ಮಾಯೆಯೊ (ಕನಕದಾಸ ಅಧ್ಯಯನ ಸಮಗ್ರ ಸಂಪುಟ ಭಾಗ–1)

ಮಾರಾಟವಾದ ಒಟ್ಟು ಪ್ರತಿಗಳು: 44

8) ಕೀರ್ತನ ಗಂಗೋತ್ರಿ ಧ್ವನಿ ಸುರುಳಿ

ಮಾರಾಟವಾದ ಒಟ್ಟು ಪ್ರತಿಗಳು : 35

ಕೊಡವ ಸಾಂಸ್ಕೃತಿಕ ಅಧ್ಯಯನ ಪೀಠ

- ಅಧ್ಯಯನ ಪೀಠದ ಹೆಸರು: ಕೊಡವ ಸಾಂಸ್ಕೃತಿಕ ಅಧ್ಯಯನ ಪೀಠ
- ಅನುದಾನದ ಮೂಲ: ಕರ್ನಾಟಕ ಸರ್ಕಾರ
- ಹಣಕಾಸಿನ ನಿರ್ವಹಣೆ: ದೇರಳಕಟ್ಟೆಯ ಯೂನಿಯನ್ ಬ್ಯಾಂಕಿನಲ್ಲಿ ಫಿಕ್ಸೆಡ್ ಡೆಪಾಸಿಟ್ ರೂ. 25,00,000/–

  ಮಂಗಳಗಂಗೋತ್ರಿಯ ಎಸ್‌ಬಿಐ ಬ್ಯಾಂಕಿನಲ್ಲಿ ಫಿಕ್ಸೆಡ್ ಡೆಪಾಸಿಟ್ ರೂ. 7,50,000/–
- ಅವಧಿ: ನಿರ್ದಿಷ್ಟ ಕಾಲಾವಧಿಯಿಲ್ಲ. ಆದರೆ ಬ್ಯಾಂಕಿನಲ್ಲಿರುವ ಎಫ್‌ಡಿಯಿಂದ ಬರುವ ಬಡ್ಡಿಯ ಆಧಾರದಲ್ಲಿ ಪೀಠದ ಸಂಶೋಧನಾ ಕಾರ್ಯಗಳು ನಡೆಯುತ್ತಿವೆ.
- ಕೊಡವ ಸಾಂಸ್ಕೃತಿಕ ಅಧ್ಯಯನ ಪೀಠವು ಅದೇ ಉದ್ದೇಶಕ್ಕಾಗಿ ಏರ್ಪಡಿಸಿದ ಸಭೆಯ ಪರಿಣಾಮವಾಗಿ ದಿನಾಂಕ 27/03/2008ರಂದು ಸ್ಥಾಪನೆಯಾಯಿತು. ಕೊಡಗಿನ ಭೌಗೋಳಿಕ ಪರಿಸರ, ಕೊಡವ ಮಾತೃಭಾಷೆ ಹೊಂದಿರುವ ಜನರ ಅಧ್ಯಯನ ಮತ್ತು ಸಂಶೋಧನೆ ನಡೆಸಲು ಈ ಪೀಠವನ್ನು ಸ್ಥಾಪಿಸಲಾಗಿದೆ. ಕೊಡವರ ಸಮುದಾಯಗಳು, ಅವರ ಸಮಾಜದ ಇತಿಹಾಸ, ಸಂಸ್ಕೃತಿ ಮುಂತಾದ ಅಂಶಗಳ ವಿಕಾಸವನ್ನು ಕೇಂದ್ರವಾಗಿಸಿಕೊಂಡಿದೆ. ಕೊಡವ ಸಮುದಾಯಗಳು ಈ ಅಧ್ಯಯನ ಮತ್ತು ಸಂಶೋಧನೆಗೆ ಸಹಕರಿಸುತ್ತವೆ.
- ಪ್ರಸ್ತುತ ಸ್ಥಿತಿಗತಿ: ಕಾರ್ಯ ನಿರ್ವಹಿಸುತ್ತಿದೆ.

  ಪೀಠವು ಉದ್ದೇಶಗಳು ಈ ಕೆಳಕಂಡಂತಿವೆ:
- ಕೊಡವ ಜನರ ಇತಿಹಾಸ ಅಧ್ಯಯನದ ಮೂಲಕ ಶ್ರೀಮಂತ ಪುರಾತತ್ವವನ್ನು ಪರಿಚಯಿಸುತ್ತದೆ.
- ಕೊಡಗಿನಲ್ಲಿರುವ ವೈವಿಧ್ಯಮಯ ಜನಾಂಗೀಯ ಮತ್ತು ಸಾಮಾಜಿಕ ಅಂಶಗಳನ್ನು ಅನ್ವೇಷಿಸುವುದು.
- ಕೊಡಗು ಪ್ರದೇಶದ ಧಾರ್ಮಿಕ ನಂಬಿಕೆಗಳು, ಆಚರಣೆಗಳು, ಜಾನಪದ ಪ್ರದರ್ಶನ ಕಲೆಗಳನ್ನು ಅಧ್ಯಯನ ಮಾಡುವುದು.
- ಜನಪ್ರಿಯ ಧಾರ್ಮಿಕ ಮತ್ತು ಜಾತ್ಯತೀತ ಸ್ಮಾರಕಗಳನ್ನು ಅಧ್ಯಯನ ಮಾಡುವುದು ಮತ್ತು ಅದರ ರಕ್ಷಣೆಯ ಕುರಿತು ಜಾಗೃತಿ ಮೂಡಿಸುವುದು.
- ಮೌಖಿಕ ಮತ್ತು ಲಿಖಿತ ರೂಪದ ಕೊಡವ ಭಾಷೆ ಮತ್ತು ಸಾಹಿತ್ಯವನ್ನು ಅಧ್ಯಯನ ಮಾಡಿ ಕೊಡವ ಸಂಸ್ಕೃತಿಯನ್ನು ಉನ್ನತ ಸ್ತರಕ್ಕೇರಿಸುವುದು.
- ಕೊಡವರ ಸಾಧನೆಗಳನ್ನು ಅಧ್ಯಯನ ಮಾಡುವುದು.
- ಕೊಡವರ ಪರಿಸರದ ಅಧ್ಯಯನ ಮಾಡುವುದು.
- ವಿಚಾರ ಸಂಕಿರಣಗಳು, ಕಾರ್ಯಾಗಾರಗಳು ಮತ್ತು ವಿಶೇಷ ಉಪನ್ಯಾಸಗಳನ್ನು ಆಯೋಜಿಸುವುದು.
- ಅನುವಾದಗಳು ಸೇರಿದಂತೆ ಕೊಡಗಿನ ಕುರಿತ ವಿವಿಧ ವಿಷಯಗಳ ಅಧ್ಯಯನಗಳ ಬಗ್ಗೆ ಮೋನೋಗ್ರಾಫ್ ಹೊರತರುವುದು.

– ಕೊಡವ ಇತಿಹಾಸ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ದಾಖಲೆಗಳನ್ನು ಸಂರಕ್ಷಿಸಲು ಆರ್ಕೈವ್ ರಚಿಸುವುದು.

ಇತ್ಯಾದಿ ಉದ್ದೇಶಗಳ ಅನುಷ್ಠಾನ ಮತ್ತು ಕಾರ್ಯನಿರ್ವಹಣೆಗಾಗಿ ಪೀಠವು ಕಾರ್ಯನಿರ್ವಹಿಸುತ್ತಿದೆ. ಸ್ವಲ್ಪ ಮಾಹಿತಿಗಳ ಸಂಗ್ರಹವಾಗಿದೆ. ಚಿಕ್ಕ ಪ್ರಾಂತವಾದ ಕೊಡಗು ನಾಯಕನ ಸ್ವತಂತ್ರ ಆಳ್ವಿಕೆಯಿಂದ ಹಿಡಿದು ಬ್ರಿಟೀಷರ ದಬ್ಬಾಳಿಕೆಯವರೆಗೆ ಹಲವು ಏರಿಳಿತಗಳನ್ನು ಕಂಡಿದೆ. ಸಮುದಾಯದ ಸಾಮಾಜಿಕ ನೆನಪುಗಳಿಗೆ ಸಂಬಂಧಿಸಿದ ಗ್ರಂಥಾಲಯ ಮತು ಆರ್ಕೈವ್ ಅನ್ನು ಪೀಠವು ಸ್ಥಾಪಿಸಿದೆ.

ರಾಷ್ಟ್ರೀಯ ವಿಚಾರ ಸಂಕಿರಣ

ಕೊಡವ ಸಾಂಸ್ಕೃತಿಕ ಅಧ್ಯಯನ ಪೀಠವು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಬೆಟ್ಟಂಪಾಡಿ ಕಾಲೇಜಿನಲ್ಲಿ ದಕ್ಷಿಣ ಕನ್ನಡ ಮತ್ತು ಕೊಡಗು: ಐತಿಹಾಸಿಕ ಮತ್ತು ಸಾಂಸ್ಕೃತಿಕ ಸಂಬಂಧಗಳು ಎಂಬ ವಿಷಯದ ಕುರಿತು ಒಂದು ದಿನದ ರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣವನ್ನು ದಿನಾಂಕ 07.03.2020ರಂದು ಏರ್ಪಡಿಸಿತ್ತು. ವಿಚಾರ ಸಂಕಿರಣವನ್ನು ಗೋವಾ ವಿಶ್ವವಿದ್ಯಾನಿಲಯದ ವಿಶ್ರಾಂತ ಪ್ರಾಧ್ಯಪಕರಾದ ಡಾ. ಶ್ಯಾಮ್ ಭಟ್ ಉದ್ಘಾಟಿಸಿ, ದಿಕ್ಸೂಚಿ ಮಾತುಗಳನ್ನು ಆಡಿದರು.

ವಿಚಾರ ಸಂಕಿರಣದಲ್ಲಿ ಮಂಡಿಸಿದ ವಿಷಯಗಳು

* ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಗಳ ಸಾಂಸ್ಕೃತಿಕ ಸಂಬಂಧಗಳು – ಡಾ. ರತ್ನಾಕರ ಮಲ್ಲಮೂಲೆ,
  ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಕಾಲೇಜು ಕಾಸರಗೋಡು, ಕಣ್ಣೂರು ವಿಶ್ವವಿದ್ಯಾನಿಲಯ
* ದಕ್ಷಿಣ ಕನ್ನಡ ಮತ್ತು ಕೊಡಗು : ಐತಿಹಾಸಿಕ ಸಂಬಂಧಗಳ ವಿಶ್ಲೇಷಣೆ – ಡಾ. ಮೀನಾಕ್ಷಿ ಎಂ.ಎಂ.
  ಸಹಾಯಕ ಪ್ರಾಧ್ಯಾಪಕರು, ಇತಿಹಾಸ ಅಧ್ಯಯನ ವಿಭಾಗ, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು
* ವಸಾಹತುಷಾಹಿ ಕಾಲದಲ್ಲಿ ದಕ್ಷಿಣ ಕನ್ನಡ ಹಾಗೂ ಕೊಡಗಿನ ಸಂಬಂಧಗಳು–ಒಂದು ವಿಶ್ಲೇಷನೆ– ಡಾ. ಕೆ.ಎಂ. ಲೋಕೇಶ್, ಪ್ರಾಧ್ಯಾಪಕರು, ಇತಿಹಾಸ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ
* ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಯ ಆಚರಣೆಗಳ ಜನಪದೀಯತೆ – ಡಾ. ಸುಂದರ ಕೇನಾಜೆ
  ಶಿಕ್ಷಣ ಸಂಯೋಜಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಸುಳ್ಯ
* 1837ರ ದಂಗೆ ಒಂದು ಮರು ನೋಟ – ಡಾ. ಸತೀಶ್ ಗಟ್ಟಿ, ವಿಭಾಗ ಮುಖ್ಯಸ್ಥರು, ಇತಿಹಾಸ ವಿಭಾಗ, ಸ.ಪ್ರ.ದ.ಕಾಲೇಜು, ಬಂಟ್ವಾಳ
* ಕೆನರಾ ಮತ್ತು ಕೊಡಗಿನ ಇತಿಹಾಸ ಕಥನ – ಡಾ. ಅವಿನಾಶ್, ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಆರ್.ಬಿ.ಎ.ಎನ್.ಎಮ್.ಎಸ್. ಕಾಲೇಜು, ಬೆಂಗಳೂರು
* ದಕ್ಷಿಣ ಕನ್ನಡ ಮತ್ತು ಕೊಡಗಿನ ಸಾಂಸ್ಕೃತಿಕತೆ ಒಂದು ಅವಲೋಕನ – ಶ್ರೀಮತಿ ವಿದ್ಯಾ ಎಸ್., ವಿಭಾಗ ಮುಖ್ಯಸ್ಥರು, ಸಮಾಜಶಾಸ್ತ್ರ ವಿಭಾಗ, ವಿವೇಕಾನಂದ ಕಾಲೇಜು, ಪುತ್ತೂರು
* ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಯ ಬುಡಕಟ್ಟು ಸಮುದಾಯಗಳ ಸಾಂಸ್ಕೃತಿಕತೆ – ಶ್ರೀ ವೆಂಕಟೇಶ್, ಸಂಶೋಧನಾ ವಿದ್ಯಾರ್ಥಿ, ಕನ್ನಡ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ
* ದಕ್ಷಿಣ ಕನ್ನಡ ಮತ್ತು ಕೊಡಗಿನ ಆರ್ಥಿಕ ಸಂಬಂಧಗಳು; ಒಂದು ಅಧ್ಯಯನ – ಶ್ರೀ ಎಂ.ಜಿ. ಪ್ರಮೋದ್, ಉಪನ್ಯಾಸಕರು, ಸ.ಪ್ರ.ದ.ಕಾಲೇಜು, ಬೆಟ್ಟಂಪಾಡಿ

ಚಿನ್ನತಪ್ಪ ಹಬ್ಬದ ಸಾಕ್ಷ್ಯಚಿತ್ರ

ಕೊಡಗಿನ ಬುಡಕಟ್ಟು/ಪಂಗಡಗಳ ಸಾಂಸ್ಕೃತಿಕ ಬದುಕಿನ ದಾಖಲೀಕರಣ ಯೋಜನೆಯನ್ನು ಕೈಗೆತ್ತಿಕೊಂಡಿದೆ. ಕೊಡಗಿನ ಭಾಗಮಂಡಲದ ಅಯ್ಯಂಗೇರಿ ಗ್ರಾಮದಲ್ಲಿ ಚಿನ್ನತಪ್ಪ ಎಂಬ ಜಾನಪದೀಯ ಹಬ್ಬವನ್ನು ಆಚರಿಸಲಾಗುತ್ತಿದೆ. ಜೋಗಿ ವೇಷಧಾರಿಯು ಗ್ರಾಮಗಳ ಸುತ್ತ ಪ್ರಯಾಣಿಸುತ್ತ ಆಚರಿಸುವ ವಿಶಿಷ್ಠ ಹಬ್ಬ ಇದಾಗಿದ್ದು ಕೊಡವ ಭಾಷಿಕ ಗೊಲ್ಲ ಸಮುದಾಯವು ಪ್ರಮುಖವಾಗಿ ಈ ಹಬ್ಬವನ್ನು ಆಚರಿಸುತ್ತಿದೆ. ದಿನಾಂಕ 15.02.2020 ರಿಂದ 18.02.2020ರವರೆಗೆ ನಡೆದ ಸಂಪೂರ್ಣ ವಿಡಿಯೋ ಚಿತ್ರಿಕರಣ ನಡೆಸಿ ಸಾಕ್ಷ್ಯಚಿತ್ರ ನಿರ್ಮಾಣವನ್ನು ಪೀಠವು ಮಾಡಿದೆ.

ಕೊಡವ ಪೀಠದಲ್ಲಿ ಪತ್ರಾಗಾರ

ಕೊಡವ ಸಾಂಸ್ಕೃತಿಕ ಅಧ್ಯಯನ ಪೀಠವು ಕೊಡಗಿನ ಚರಿತ್ರೆ, ಸಾಹಿತ್ಯ, ಸಂಸ್ಕೃತಿ, ಭಾಷೆ, ಜಾನಪದ ಅರ್ಥವ್ಯವಸ್ಥೆ, ರಾಜಕೀಯ ವಿಕಾಸ, ಸ್ವಾತಂತ್ರ್ಯ ಹೋರಾಟ, ಶಿಕ್ಷಣದ ವಿವಿಧ ಅಂಶಗಳಿಗೆ ಸಂಬಂಧಪಟ್ಟಂತೆ ಐತಿಹಾಸಿಕ ದಾಖಲೆಗಳನ್ನು ಸಂಗ್ರಹಿಸುವುದರ ಮೂಲಕ ಪತ್ರಾಗಾರವನ್ನು ತೆರೆದಿದ್ದು, ಆ ಮೂಲಕ ಕೊಡಗು ಸಂಬಂಧಿ ಅಧ್ಯಯನ ಹಾಗೂ ಸಂಶೋಧನೆಗೆ ಉತ್ತೇಜನ ನೀಡಲು ಪ್ರಯತ್ನಿಸಲಾಗುತ್ತಿದೆ. ಪತ್ರಾಗಾರದಲ್ಲಿ ಕೊಡಗಿಗೆ ಸಂಬಂಧಿಸಿದ ಅಪರೂಪದ ಬ್ರಿಟಿಷ್ ದಾಖಲೆಗಳು, ಪುಸ್ತಕಗಳು ಹಾಗೂ ಇತರ ಸಾಹಿತ್ಯದ ನಕಲುಪ್ರತಿಗಳನ್ನು ಸಂಗ್ರಹಿಸಲಾಗಿದೆ.

ಜೈನಕವಿ ರತ್ನಾಕರವರ್ಣಿ ಅಧ್ಯಯನ ಪೀಠ

ಸಂಯೋಜಕರು: ಪ್ರೊ. ಸೋಮಣ್ಣ

ಸಂಶೋಧನಾ ಸಹಾಯಕರು: ಪ್ರಸಾದ್. ಎಸ್.

ಕಛೇರಿ ಸಹಾಯಕರು: ಲತಾ ಶೆಣೈ

ಸಿಬ್ಬಂದಿ: ಮಂಜುನಾಥ

ಪೀಠದ ಉದ್ದೇಶ ಹೀಗಿದೆ :

- ರತ್ನಾಕರವರ್ಣಿಯ ಕುರಿತು ಪೂರ್ಣ ಮಾಹಿತಿಯನ್ನು ಕಲೆ ಹಾಕುವುದು ಮತ್ತು ಅವನ ಜನಪ್ರಿಯ ಕೃತಿಗಳನ್ನು ಕಡಿಮೆ ಬೆಲೆಗೆ ಪ್ರಕಟಿಸುವುದು.
- ರತ್ನಾಕರವರ್ಣಿಯ ಸಾಹಿತ್ಯ ಕೃತಿಗಳ ಬಗ್ಗೆ ಸಂಶೋಧನೆ ಮಾಡುವುದು.
- ರಾಜ್ಯ ಮಟ್ಟ ಮತ್ತುರಾಷ್ಟ್ರ ಮಟ್ಟದ ಕಾರ್ಯಗಾರಗಳು ಮತ್ತು ವಿಚಾರ ಸಂಕಿರಣಗಳನ್ನು ಆಯೋಜಿಸುವುದು ಮತ್ತು ಆ ಮೂಲಕ ಯುವಜನತೆ ಹಾಗೂ ವಿದ್ಯಾರ್ಥಿಗಳಲ್ಲಿ ರತ್ನಾಕರವರ್ಣಿ ಮತ್ತು ಅವನ ಸಾಹಿತ್ಯದ ಕುರಿತು ಪ್ರೀತಿ ಮೂಡಿಸುವುದು.
- ಜೈನಧರ್ಮ ಮತ್ತು ರತ್ನಾಕರವರ್ಣಿಯ ಕೃತಿಗಳಿಗೆ ಸಂಬಂಧಿಸಿದ ಉಪನ್ಯಾಸ ಸರಣಿಗಳನ್ನು ಏರ್ಪಡಿಸುವುದು. ಮತ್ತು ಅದಕ್ಕೆ ಸಂಬಂಧಿಸಿದ ಗ್ರಂಥಾಲಯ ಮತ್ತು ಮ್ಯೂಸಿಯಂನ ಸ್ಥಾಪನೆ ಮಾಡುವುದು.

ಸ್ಥಾಪನ ದಿನಾಂಕ : 2015

ಹಣ ಕಾಸು ಮೂಲ : ಕರ್ನಾಟಕ ಸರಕಾರ

ಮಂಜೂರಾದ ಮೊತ್ತ : ರೂ. 1,00,00,000

ಎಸ್.ಬಿ.ಐ. ಮಂಗಳಗಂಗೋತ್ರಿ ಬ್ಯಾಂಕಿನಲ್ಲಿ 1,00,00,000 ರೂ. ಗಳ ಫಿಕ್ಸೆಡ್ ಡೆಪೂಸಿಟ್ ರೂಪದಲ್ಲಿದೆ. ಬಡ್ಡಿಯ ಮೂಲಕ ವಿಚಾರ ಸಂಕೀರ್ಣಗಳು/ಸಮ್ಮೇಳನಗಳು, ಕಾರ್ಯಗಾರಗಳು ಮಹಾಕವಿ ರತ್ನಾಕರವರ್ಣಿ ಅಧ್ಯಯನ ಪೀಠದಿಂದ ನಡೆಸಲಾಗುತ್ತದೆ.

ಮಹಾಕವಿ ರತ್ನಾಕರವರ್ಣಿ ಅಧ್ಯಯನ ಪೀಠ ಮಂಗಳೂರು ವಿಶ್ವವಿದ್ಯಾನಿಲಯ

ರಾಜ್ಯ ಮಟ್ಟದ ವಿಚಾರ ಸಂಕಿರಣದ ವರದಿ

ವಿಷಯ: ರತ್ನಾಕರವರ್ಣಿಯ ಭರತೇಶ ವೈಭವ ಮರು ಓದು

ದಿನಾಂಕ: 11/04/2019

ಮಹಾಕವಿ ರತ್ನಾಕರವರ್ಣಿ ಅಧ್ಯಯನ ಪೀಠ ಮತ್ತು ಕನ್ನಡ ವಿಭಾಗ, ಐಕ್ಯೂಎಸಿ ಡಾ. ಪಿ. ದಯಾನಂದ ಪೈ – ಪಿ. ಸತೀಶ್ ಪೈ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮಂಗಳೂರು ಇದರ ಸಹಯೋಗದಲ್ಲಿ ಎಪ್ರಿಲ್ 11, 2019 ರಂದು 'ರತ್ನಾಕರವರ್ಣಿಯ ಭರತೇಶ ವೈಭವದ ಮರು ಓದು' ಎಂಬ ವಿಷಯದ ಕುರಿತು ಒಂದು ದಿನದ ರಾಜ್ಯ ಮಟ್ಟದ ವಿಚಾರ ಸಂಕಿರಣ ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ವಿಶ್ವವಿದ್ಯಾನಿಲಯದ ಪ್ರಭಾರ ಕುಲಪತಿಗಳಾದ ಪ್ರೊ. ಕಿಶೋರಿ ನಾಯಕ್ ಕೆ. ಉದ್ಘಾಟಿಸಿದರು. ಮೈಸೂರು ವಿಶ್ವವಿದ್ಯಾನಿಲಯ ವಿಶ್ರಾಂತ ಪ್ರಾಧ್ಯಾಪಕರು ಮತ್ತು ಖ್ಯಾತ ಸಂಶೋಧಕರು ಡಾ. ಎನ್. ಎಸ್. ತಾರನಾಥ ಅವರು ಆಶಯ ಭಾಷಣ ನೆರವೇರಿಸಿದರು. ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ರಾಜಶೇಖರ ಹೆಬ್ಬಾರ್ ಸಿ. ವಹಿಸಿದರು.

ಎರಡು ವಿಚಾರಗೋಷ್ಠಿಯಲ್ಲಿ 6 ಮಂದಿ ಸಂಪನ್ಮೂಲ ವ್ಯಕ್ತಿಗಳು ತಮ್ಮ ವಿಚಾರವನ್ನು ಮಂಡಿಸಿದರು. ಮೊದಲ ಗೋಷ್ಠಿಯಲ್ಲಿ 'ಭರತೇಶ ವೈಭವದಲ್ಲಿ ಯುದ್ಧ ವಿರೋಧಿ ನಿಲುವು' ಎಂಬ ವಿಷಯವನ್ನು ಮೈಸೂರು ಮಹಾರಾಜ ಕಾಲೇಜಿನ ಸಹ ಪ್ರಾಧ್ಯಾಪಕರು ಡಾ. ಕೆ. ತಿಮ್ಮಯ್ಯ ಅವರು ವಿಚಾರ ಮಂಡಿಸಿದರು. 'ರತ್ನಾಕರವರ್ಣಿಯ ಭರತೇಶ ವೈಭವದ ವೈಶಿಷ್ಟ್ಯತೆ' ಎಂಬ ವಿಷಯದ ಕುರಿತು ಮದರಾಸು ವಿಶ್ವವಿದ್ಯಾನಿಲಯ ಸಹಾಯಕ ಪ್ರಾಧ್ಯಾಪಕರಾದ ಡಾ. ಎಂ. ರಂಗಸ್ವಾಮಿ ಅವರು, 'ಭರತೇಶ ವೈಭವದ ಪ್ರಮುಖ ಸ್ತ್ರೀ ಪಾತ್ರಗಳು' ಎಂಬ ವಿಷಯದ ಕುರಿತು ರಾಣಿ ಚೆನ್ನಮ್ಮ ವಿಶ್ವವಿದ್ಯಾನಿಲಯ ಡಾ. ಪಿ. ನಾಗರಾಜ ಅವರು ವಿಚಾರಗಳನ್ನು ತಿಳಿಸಿದರು. ಎರಡನೇ ಗೋಷ್ಠಿಯಲ್ಲಿ 'ಭರತೇಶ ವೈಭವದಲ್ಲಿ ವೀರಶೈವ ತಾತ್ವಿಕ ನಿಲುವು' ಎಂಬ ವಿಷಯದ ಕುರಿತು ಸಹ್ಯಾದ್ರಿ ಕಾಲೇಜಿನ ಸಹ ಪ್ರಾಧ್ಯಾಪಕರಾದ ಡಾ. ನಾಗಾರ್ಜುನ ಎಚ್. ಎಂ., 'ಭರತೇಶ ವೈಭವದಲ್ಲಿ ಸಾಮಾಜಿಕ ಸಂದೇಶ' ಎಂಬ ವಿಚಾರದ ಕುರಿತು ಮೂಡಬಿದಿರೆಯ ವಿದ್ವಾಂಸರಾದ ಶ್ರೀ ಮುನಿರಾಜ ರೆಂಜಾಳ, 'ಭರತೇಶ ವೈಭವದಲ್ಲಿ ಜೈನ ತಾತ್ವಿಕತೆ' ಎಂಬ ವಿಷಯದಲ್ಲಿ ವಿಶ್ವವಿದ್ಯಾನಿಲಯ ಸಂಧ್ಯಾ ಕಾಲೇಜಿನ ಪ್ರಾಧ್ಯಾಪಕರಾದ ಡಾ. ಮಾಧವ ಎಂ. ಕೆ. ಅವರು ತಮ್ಮ ವಿಚಾರವನ್ನು ಮಂಡಿಸಿದರು. ಕಾರ್ಯಕ್ರಮದ ಸಮಾರೋಪವನ್ನು ಬೆಂಗಳೂರು ವಿಶ್ವವಿದ್ಯಾನಿಲಯದ ಡಾ. ರಾಜಪ್ಪ ದಳವಾಯಿಯವರು ಸಮಾರೋಪಿಸಿದರು.

ಮಹಾಕವಿ ರತ್ನಾಕರವರ್ಣಿ ಅಧ್ಯಯನ ಪೀಠ, ಮಂಗಳೂರು ವಿಶ್ವವಿದ್ಯಾನಿಲಯ

ಪ್ರಚಾರೋಪನ್ಯಾಸದ ವರದಿ

ವಿಷಯ: ರತ್ನಾಕರವರ್ಣಿಯ ಭರತೇಶ ವೈಭವ: ಸಾಂಸ್ಕೃತಿಕ ಒಳನೋಟ

ದಿನಾಂಕ: 25/09/2019

ಮಂಗಳೂರು ವಿಶ್ವವಿದ್ಯಾನಿಲಯ ಮಹಾಕವಿ ರತ್ನಾಕರವರ್ಣಿ ಅಧ್ಯಯನ ಪೀಠ ಮತ್ತು ಕನ್ನಡ ವಿಭಾಗ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಬಲ್ಮಠ ಇದರ ಸಹಯೋಗದಲ್ಲಿ ದಿನಾಂಕ 05.09.2019ನೇ ಬುಧವಾರದಂದು "ರತ್ನಾಕರವರ್ಣಿಯ ಭರತೇಶ ವೈಭವ: ಸಾಂಸ್ಕೃತಿಕ ಒಳನೋಟಗಳು" ಎಂಬ ವಿಷಯದ ಕುರಿತು ಒಂದು ದಿನದ ಪ್ರಚಾರೋಪನ್ಯಾಸ ಕಾರ್ಯಕ್ರಮವನ್ನು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿತ್ತು.

